ಸೋಮವಾರ, ಅಕ್ಟೋಬರ್ 23, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವರಾತ್ರಿ ಸಂಭ್ರಮ
ನವರಾತ್ರಿ ಅಂಗವಾಗಿ ಅಹಮದಾಬಾದ್‌ನಲ್ಲಿ ನಡೆದ ಗಾರ್ಬಾ ನೃತ್ಯದಲ್ಲಿ ಪಾಲ್ಗೊಂಡಿದ್ದವರು ಸೆಲ್ಫಿ ತೆಗೆದುಕೊಂಡರು

ಶಿವಮೊಗ್ಗ ಏರ್‌ಪೋರ್ಟ್
ರೈಲ್ವೆ ಯೋಜನೆಗಳು
ಜೋಗ ಅಭಿವೃದ್ಧಿ
ಮರವಂತೆ ಬೀಚ್ ಅಭಿವೃದ್ಧಿ
ಅಕ್ಕಮಹಾದೇವಿ ಜನ್ಮಸ್ಥಳ ಅಭಿವೃದ್ಧಿ
ಶ್ರೀ ಬಿ.ವೈ. ವಿಜಯೇಂದ್ರ
ಶಾಸಕರು, ಶಿಕಾರಿಪುರ
ಶ್ರೀ ಬಿ.ಎಸ್. ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀ ಬಿ.ವೈ. ರಾಘವೇಂದ್ರ
ಲೋಕಸಭಾ ಸದಸ್ಯರು, ಶಿವಮೊಗ್ಗ ಕ್ಷೇತ್ರ
ಪ್ರಜಾವಾಣಿ ಪತ್ರಿಕೆಯ 75ನೇ ಅಮೃತ ಮಹೋತ್ಸವಕ್ಕೆ ಹಾರ್ದಿಕ ಶುಭಾಶಯಗಳು
ನಾಡಿನ ಸಮಸ್ತ ಜನತೆಯ ಜೀವನವು ಸಮೃದ್ಧಿಯಾಗಲಿ, ಎಲ್ಲ ಸಂಕಷ್ಟಗಳು ಕಳೆದು
ಶಾಂತಿ-ಸೌಹಾರ್ದತೆಯ ಬದುಕು ನಾಡಿನಾದ್ಯಂತ ಎಲ್ಲರಿಗೂ ಲಭಿಸಲಿ.
ಕನ್ನಡಿಗರೆಲ್ಲರೂ ಸಂತೋಷದಿಂದ ದಸರಾ ಹಬ್ಬವನ್ನು ಆಚರಿಸಿ,
ಸದಾ ಸಂತೃಪ್ತಿಯ ಭಾವದೊಂದಿಗೆ ನೆಲೆಸುವಂತಾಗಲಿ.
ನಾಡಿನ ಸಮಸ್ತ ಜನತೆಗೆ
ಆಯುಧ ಪೂಜೆ
ಮತ್ತು
ವಿಜಯ ದಶಮಿ
ಶುಭಾಶಯಗಳು
ಕೊಡಚಾದ್ರಿ ಕೇಬಲ್ ಕಾರ್ ಅಭಿವೃದ್ಧಿ
ಪ್ರಸಿದ್ಧ ಸಿಗಂಧೂರು ಸೇತುವೆ ಕಾಮಗಾರಿ

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶ್ವಾನ ಪ್ರದರ್ಶನ
ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನಲ್ಲಿ ಭಾನುವಾರ ನಡೆದ ಶ್ವಾನ ಪ್ರದರ್ಶನದಲ್ಲಿ ಸಾಕು ನಾಯಿಗಳೊಂದಿಗೆ ಗಮನ ಸೆಳೆದ ಯುವತಿ

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು

ಆಯುಧಪೂಜೆ ನಿಮಿತ್ತ ಸೋಮವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಮಂಗಳವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ವಿಶ್ವಕಪ್ ಭಾರತಕ್ಕೆ 5ನೇ ಜಯ

ವಿರಾಟ್ ಕೊಹ್ಲಿ ಮತ್ತು ಮೊಹಮ್ಮದ್ ಶಮಿ ಸಂಭ್ರಮಿಸಿದ ಕ್ಷಣ

ಧರ್ಮಶಾಲಾ: ಮೊಹಮ್ಮದ್ ಶಮಿ (54ಕ್ಕೆ5) ಉತ್ತಮ ಬೌಲಿಂಗ್ ಮತ್ತು ವಿರಾಟ್ ಕೊಹ್ಲಿ (95; 104ಎ, 4X8, 6X2) ಅವರ ಸುಂದರ ಬ್ಯಾಟಿಂಗ್ ಬಲದಿಂದ ಭಾರತವು ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ನಾಲ್ಕು ವಿಕೆಟ್‌ಗಳಿಂದ ಜಯಿಸಿತು.

ಎಚ್‌ಪಿಸಿಎ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕಿವೀಸ್ ತಂಡವು 50 ಓವರ್‌ಗಳಲ್ಲಿ 273 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 48 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 274 ರನ್ ಗಳಿಸಿ ಜಯಿಸಿತು. ಒಟ್ಟು ಹತ್ತು ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಸೆಮಿಫೈನಲ್ ಹೊಸ್ತಿಲಲ್ಲಿ ಬಂದು ನಿಂತಿತು. 10

ಒಳ ಪುಟಗಳು

ಮಧ್ಯಪ್ರಾಚ್ಯದಲ್ಲಿ ಮಿಲಿಟರಿ ಬಲ ಹೆಚ್ಚಿಸಿದ ಅಮೆರಿಕ 7

ನವವರ್ಣ
7ಬಿ ಮತ್ತು 7ಡಿ ಪುಟಗಳನ್ನು ನೋಡಿ

‘ಪ್ರತಿಮೆ ರಾಜಕೀಯ’ ಕೈ, ಕಮಲ ಸಂಘರ್ಷ

ಉಡುಪಿ: ಕಾರ್ಕಳ ತಾಲ್ಲೂಕು ಉಮ್ಮಿಕಲ್ ಬೆಟ್ಟದ ಮೇಲೆ ₹2 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ 33 ಅಡಿ ಎತ್ತರದ ಪರಶುರಾಮನ ಪ್ರತಿಮೆ ಕಂಚಿನದ್ದೇ, ಅಲ್ಲವೇ ಎಂಬ ಚರ್ಚೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯಪಾಲರ ಖಡಕ್ ನಿರ್ದೇಶನ • ಕೆಕೆಆರ್‌ಡಿಬಿಗೆ ₹3 ಸಾವಿರ ಕೋಟಿ ಹಂಚಿಕೆ ಕಡತ ವಾಪಸ್

‘ಕಲ್ಯಾಣ’ ವಿ.ವಿಗಳಿಗೆ ಶೇ 10 ನಿಧಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಉದ್ದೇಶದಿಂದ ‘ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ’ಗೆ (ಕೆಕೆಆರ್‌ಡಿಬಿ) ನೀಡುವ ಅನುದಾನದಲ್ಲಿ ಕನಿಷ್ಠ ಶೇ 10ರಷ್ಟನ್ನು ಈ ಭಾಗದ ವಿಶ್ವವಿದ್ಯಾಲಯಗಳ ಬಳಕೆಗೆ (ಉನ್ನತ ಶಿಕ್ಷಣ ವಲಯ) ಮೀಸಲಿಡಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ನಿರ್ದೇಶನ ನೀಡಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಕೆಕೆಆರ್‌ಡಿಬಿಗೆ ನೀಡಿದ್ದ ₹3 ಸಾವಿರ ಕೋಟಿಯನ್ನು ಕಲ್ಯಾಣ ಕರ್ನಾಟಕ ಭಾಗದ ವಿವಿಧ ವಲಯಗಳಿಗೆ ಹಂಚಿಕೆ ಮಾಡಿ ಅನುಮೋದನೆಗಾಗಿ ಕಡತವನ್ನು ರಾಜ್ಯಪಾಲರಿಗೆ ರಾಜ್ಯ ಸರ್ಕಾರ ಕಳುಹಿಸಿತ್ತು. ಈ ಕಡತವನ್ನು ತಮ್ಮ ಅಭಿಪ್ರಾಯ ಮತ್ತು ನಿರ್ದೇಶನದ ಸಹಿತ ರಾಜ್ಯಪಾಲರು ವಾಪಸ್ ಕಳುಹಿಸಿದ್ದಾರೆ.

ಕಡತದಲ್ಲಿ ರಾಜ್ಯಪಾಲರು ಉಲ್ಲೇಖಿಸಿದ ಅಂಶಗಳು ‘ಪ್ರಜಾವಾಣಿ’ ಗೆ ಲಭ್ಯವಾಗಿವೆ. ಹೈದರಾಬಾದ್– ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಆದೇಶ–2023ರ ಸೆಕ್ಷನ್ 22(1) ಮತ್ತು 25ರಡಿ ರಾಜ್ಯಪಾಲರು ಈ ನಿರ್ದೇಶನ ನೀಡಿದ್ದಾರೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿಗೆ ತಿಳಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಅನುದಾನ ಬಿಡುಗಡೆ ಮಾಡುವ ಈ ಹಿಂದಿನ ಮತ್ತು ಇನ್ನು ಮುಂದಿನ ಪ್ರಸ್ತಾವಗಳನ್ನು ಕೈಬಿಡಬೇಕು. ಅದರ ಬದಲು ನೇರವಾಗಿ ವಿಶ್ವವಿದ್ಯಾಲಯಗಳಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದೂ ರಾಜ್ಯಪಾಲರು ನಿರ್ದೇಶನ ನೀಡಿದ್ದಾರೆ.

ಪ್ರಜಾವಾಣಿ ವಿಶೇಷ

‘ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಶಾಸನಸಭೆ ರೂಪಿಸಿದ ಕಾಯ್ದೆಯಡಿ ಅಲ್ಲಿ ಯೋಜನೆಗಳು, ಅಭಿವೃದ್ಧಿ, ಸಂಶೋಧನೆ, ಶೈಕ್ಷಣಿಕ ಚಟುವಟಿಕೆ ನಡೆಯುತ್ತವೆ. ಈ ಚಟುವಟಿಕೆಯ ಮೇಲುಸ್ತುವಾರಿ ಮತ್ತು ಅಗತ್ಯ ಬಿದ್ದಾಗ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ಮತ್ತು ಕುಲಾಧಿಪತಿ (ರಾಜ್ಯಪಾಲ) ಕಾರ್ಯಾಲಯಕ್ಕೆ ಅಧಿಕಾರ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಮೂಲಕ ಅನುದಾನ ಹಂಚಿಕೆ ಪ್ರಸ್ತಾವ ಸರಿಯಲ್ಲ. ಅಲ್ಲದೆ, ವಿಶ್ವವಿದ್ಯಾಲಯಗಳ ಕಾಯ್ದೆ ಪ್ರಕಾರ ವಿಶ್ವವಿದ್ಯಾಲಯಗಳ ಸಿಂಡಿಕೇಟ್‌ಗೆ ಇರುವ ಅಧಿಕಾರದ ಮೇಲೆ ಜಿಲ್ಲಾಧಿಕಾರಿ ಅತಿಕ್ರಮಿಸುವುದು ವಿವೇಕಯುತ ಅಲ್ಲ. ಸಿಂಡಿಕೇಟ್ ಮೇಲುಸ್ತುವಾರಿ ನೋಡಿಕೊಳ್ಳುವ ಸಂಸ್ಥೆಯಾಗಿದ್ದು, ಅದು ಕುಲಾಧಿಪತಿ ಮತ್ತು ಉನ್ನತ ಶಿಕ್ಷಣ ಇಲಾಖೆಗೆ ವರದಿ ನೀಡುತ್ತದೆ. ಹೀಗಾಗಿ, ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಬದಲು ನೇರವಾಗಿ ವಿಶ್ವವಿದ್ಯಾಲಯಗಳಿಗೆ ಬಿಡುಗಡೆ ಮಾಡಬೇಕು’ ಎಂದು ರಾಜ್ಯಪಾಲರು ಸಮರ್ಥನೆ ನೀಡಿದ್ದಾರೆ.

ಬಜೆಟ್‌ನಲ್ಲಿ ಉನ್ನತ ಶಿಕ್ಷಣ ವಲಯಕ್ಕೆ ಅನುದಾನ ಹಂಚಿಕೆ ಪ್ರಮಾಣ ನಿರಂತರವಾಗಿ ಕಡಿಮೆಯಾಗುತ್ತಿದ್ದು, ಕುಲಪತಿಗಳು ಮತ್ತು ಸಂಬಂಧಿಸಿದ ಇಲಾಖೆಗಳ ಜೊತೆ ನಡೆಸಿದ ಹಲವು ಸಭೆಗಳಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ವಿಶ್ವವಿದ್ಯಾಲಯಗಳು ಕೆಕೆಆರ್‌ಡಿಬಿಯಂಥ ಸಂಸ್ಥೆ, ಮಂಡಳಿ, ನಿಗಮಗಳಿಂದ ಅನುದಾನ ಪಡೆಯುವಂತೆ ಸಲಹೆಗಳನ್ನು ನೀಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ವಲಯಕ್ಕೆ ಹೆಚ್ಚಿನ ನೆರವು ನೀಡಬೇಕಿದ್ದು, ಈ ಭಾಗದ ಜನರಿಗೆ ಸುಲಭವಾಗಿ ಉನ್ನತ ಶಿಕ್ಷಣ ಲಭ್ಯವಾಗಬೇಕೆಂಬ ಉದ್ದೇಶದಿಂದ ಸರ್ಕಾರ ಹಲವು ವಿಶ್ವವಿದ್ಯಾಲಯಗಳನ್ನು ಆರಂಭಿಸಿದೆ. ಆದರೆ, ಈ ಭಾಗದ ವಿಶ್ವವಿದ್ಯಾಲಯಗಳಿಗೆ ತೀರಾ ಕಡಿಮೆ ಅಥವಾ ಇಲ್ಲವೆನ್ನುವಷ್ಟು ಅನುದಾನದ ನೆರವು ಸಿಗುತ್ತಿದೆ. ಈ ಕಾರಣಕ್ಕೆ ಕೆಕೆಆರ್‌ಡಿಬಿ ಅನುದಾನದಲ್ಲಿ ಶೇ 10ರಷ್ಟನ್ನು ಉನ್ನತ ಶಿಕ್ಷಣ ವಲಯಕ್ಕೆ ನೀಡಬೇಕು ಎಂದು ರಾಜ್ಯಪಾಲರು ತಾಕೀತು ಮಾಡಿದ್ದಾರೆ.

8ನೇ ಪುಟ ನೋಡಿ

ಮೊದಲ ಬಾರಿಗೆ ಇಂಥ ನಿರ್ದೇಶನ!

ಕೆಕೆಆರ್‌ಡಿಬಿ ಅನುದಾನದಲ್ಲಿ ವಿಶ್ವವಿದ್ಯಾಲಯಗಳಿಗೆ ಕನಿಷ್ಠ ಶೇ 10ರಷ್ಟು ಮೀಸಲಿಡುವಂತೆ ಇದೇ ಮೊದಲ ಬಾರಿಗೆ ರಾಜ್ಯಪಾಲರು ನಿರ್ದೇಶನ ನೀಡಿದ್ದಾರೆ. ರಾಜ್ಯಪಾಲರ ನಿರ್ದೇಶನದಂತೆ ಅನುದಾನ ಮರು ಹಂಚಿಕೆ ಮಾಡಿದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ವಿಶ್ವವಿದ್ಯಾಲಯಗಳಿಗೆ ₹300 ಕೋಟಿ (ಶೇ 10) ಹಂಚಿಕೆ ಮಾಡಬೇಕಿದೆ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿದ ಬಳಿಕ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

2022–23ನೇ ಸಾಲಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಹಗರಿ ಕೃಷಿ ಕಾಲೇಜಿಗೆ ಸಿ.ಸಿ.ಟಿ.ವಿ ಕ್ಯಾಮೆರಾ, ಗ್ರಂಥಾಲಯ ಸೇರಿದಂತೆ ಮೂಲಸೌಲಭ್ಯ ಕಲ್ಪಿಸಲು ಸರ್ಕಾರದ ವಿವೇಚನಾ ಕೋಟಾದಡಿ (ಯೋಜನೆ ಮತ್ತು ಸಾಂಖ್ಯಿಕ ಸಚಿವರ ಕೋಟಾ) ₹30 ಕೋಟಿ ನೀಡಲಾಗಿತ್ತು. ಆದರೆ, ಖರೀದಿಯಲ್ಲಿ ಅವ್ಯವಹಾರ ನಡೆದಿದ್ದು, ಉಪಕರಣಗಳನ್ನು ದುಬಾರಿ ದರದಲ್ಲಿ ಖರೀದಿಸಲಾಗಿದೆ ಎಂಬ ಆರೋಪ ಕೇಳಿಬಂದ ಕಾರಣ ರಾಯಚೂರು ಜಿಲ್ಲಾಧಿಕಾರಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ರಾಜ್ಯಪಾಲರ ನಿರ್ದೇಶನಗಳೇನು?

- ಕೆಕೆಆರ್‌ಡಿಬಿ ಅನುದಾನದಲ್ಲಿ ಕನಿಷ್ಠ ಶೇ 10 ಉನ್ನತ ಶಿಕ್ಷಣ ವಲಯಕ್ಕೆ (ವಿ.ವಿ) ಮೀಸಲಿಡಬೇಕು
- ವಿ.ವಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಹಣ ಬಿಡುಗಡೆ ಪ್ರಸ್ತಾವ ಕೈಬಿಡಬೇಕು
- ಅನುದಾನವನ್ನು ನೇರವಾಗಿ ವಿ.ವಿಗಳಿಗೇ ಬಿಡುಗಡೆ ಮಾಡಬೇಕು
- ವಿ.ವಿಗಳಲ್ಲಿ ರದ್ದುಪಡಿಸಿದ ಯೋಜನೆಗಳನ್ನು ಮತ್ತೆ ಆರಂಭಿಸಬೇಕು
- ಮಂಜೂರಾತಿ ನೀಡಲು ವಿವರವಾದ ಕ್ರಿಯಾ ಯೋಜನೆಯನ್ನು ಕಳುಹಿಸಬೇಕು

ಕಲ್ಲಿದ್ದಲು ಕೊರತೆ ವಿದ್ಯುತ್ ಅಭಾವ ಸೃಷ್ಟಿ?

ನವದೆಹಲಿ (ಪಿಟಿಐ): ದೇಶದ 86 ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ನಿಗದಿತ ಪ್ರಮಾಣಕ್ಕಿಂತಲೂ ಶೇ 25ರಷ್ಟು ಕಲ್ಲಿದ್ದಲು ದಾಸ್ತಾನು ಕೊರತೆ ತಲೆದೋರಿದ್ದು, ವಿದ್ಯುತ್ ಪೂರೈಕೆ ಮೇಲೆ ಗಂಭೀರ ಪರಿಣಾಮ ಬೀರಬಹುದು.

ಕೇಂದ್ರ ವಿದ್ಯುತ್ ಪ್ರಾಧಿಕಾರದ (ಸಿಇಎ) ಅಕ್ಟೋಬರ್ 18ರ ದೈನಂದಿನ ವರದಿ ಪ್ರಕಾರ ಕಲ್ಲಿದ್ದಲು ಕೊರತೆ ತಲೆದೋರಿರುವ ಸಂಗತಿ ಬಹಿರಂಗಗೊಂಡಿದೆ. ಪ್ರಾಧಿಕಾರವು ದೇಶದಲ್ಲಿ ಒಟ್ಟು 181 ಶಾಖೋತ್ಪನ್ನ ಸ್ಥಾವರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 206 ಗಿಗಾ ವಾಟ್ ಆಗಿದೆ.

ದಾಸ್ತಾನು ಅಭಾವ ಎದುರಿಸುತ್ತಿರುವ 86 ಸ್ಥಾವರಗಳ ಪೈಕಿ ಆಮದು ಕಲ್ಲಿದ್ದಲನ್ನು ಅವಲಂಬಿಸಿರುವ ಆರು ಸ್ಥಾವರಗಳೂ ಇವೆ.

ದೇಶದ ಕಲ್ಲಿದ್ದಲು ಗಣಿ ಪ್ರದೇಶಗಳಿಂದ 148 ಸ್ಥಾವರಗಳು ದೂರದಲ್ಲಿವೆ. ಇವುಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 149 ಗಿಗಾ ವಾಟ್ ಆಗಿದೆ. ಇವುಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಶೇ 29ರಷ್ಟು ಕಲ್ಲಿದ್ದಲು ಕೊರತೆ ತಲೆದೋರಿದೆ ಎಂದು ವರದಿ ವಿವರಿಸಿದೆ.

ಈ ನಡುವೆಯೂ ದೇಶೀಯ ಕಲ್ಲಿದ್ದಲು ಗಣಿಗಳನ್ನು ಅವಲಂಬಿಸಿರುವ 18 ಸ್ಥಾವರಗಳಲ್ಲಿ ದಾಸ್ತಾನು ಉತ್ತಮವಾಗಿದೆ. ಇವುಗಳಲ್ಲಿ ನಿಗದಿತ ಪ್ರಮಾಣಕ್ಕೆ ಹೋಲಿಸಿದರೆ ಶೇ 81ರಷ್ಟು ಸಂಗ್ರಹ ಇರುವುದು ಸಮಾಧಾನ ತಂದಿದೆ. ಇವುಗಳ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 40 ಗಿಗಾ ವಾಟ್ ಆಗಿದೆ ಎಂದು ಹೇಳಿದೆ.

ಈ ಸ್ಥಾವರಗಳು ಗಣಿ ಪ್ರದೇಶಗಳ ಹತ್ತಿರದಲ್ಲಿಯೇ ಇವೆ. ಹಾಗಾಗಿ, ಈ ಸ್ಥಾವರಗಳಿಗೆ ಕಲ್ಲಿದ್ದಲು ಕೊರತೆ ಬಾಧಿಸುತ್ತಿಲ್ಲ ಎಂದು ಪರಿಣತರು ಹೇಳಿದ್ದಾರೆ.

ಆಮದು ಕಲ್ಲಿದ್ದಲು: ದೇಶದಲ್ಲಿರುವ ಆಮದು ಕಲ್ಲಿದ್ದಲು ಅವಲಂಬಿಸಿರುವ 15 ಸ್ಥಾವರಗಳಲ್ಲಿ ನಿಗದಿಪಡಿಸಿರುವ ಪ್ರಮಾಣಕ್ಕಿಂತಲೂ ಶೇ 52ರಷ್ಟು ದಾಸ್ತಾನು ಇದೆ. ಇವುಗಳ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 17 ಗಿಗಾ ವಾಟ್ ಆಗಿದೆ.

206 ಗಿಗಾವಾಟ್ ಸಾಮರ್ಥ್ಯದ 181 ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಸಾಮಾನ್ಯವಾಗಿ ಇರಬೇಕಾದ ಕಲ್ಲಿದ್ದಲು ದಾಸ್ತಾನು 5.4 ಕೋಟಿ ಟನ್. ಆದರೆ ಅದರ ಶೇ 38ರಷ್ಟು ಅಂದರೆ, 2.04 ಕೋಟಿ ಟನ್ ಮಾತ್ರ ಇದೆ.

ಜಂಬೂಸವಾರಿಗೆ ತಯಾರಿ

• ಎಂ. ಮಹೇಶ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ವಿಜಯದಶಮಿ ಮೆರವಣಿಗೆಯು ಮಂಗಳವಾರ (ಅ.24) ನಡೆಯಲಿದ್ದು, ಜಿಲ್ಲಾಡಳಿತದಿಂದ ಅಂತಿಮ ಹಂತದ ತಯಾರಿಗಳನ್ನು ಮಾಡಿಕೊಳ್ಳಲಾಗುತ್ತಿದೆ.

ತೀವ್ರ ಬರ ಹಾಗೂ ಕಾವೇರಿ ನದಿ ನೀರು ಹಂಚಿಕೆಯ ವಿಷಯದಲ್ಲಿ ಉಂಟಾಗಿರುವ ಸಮಸ್ಯೆಯ ನಡುವೆಯೂ ಸಂಭ್ರಮ– ವೈಭವದಿಂದ ನಡೆಯುವ ದಸರಾ ಉತ್ಸವದ ಮುಖ್ಯ ಘಟ್ಟವಾದ ಜಂಬೂ ಸವಾರಿಯನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಪ್ರದರ್ಶಿಸುತ್ತಾ ‘ರಾಜಪಥ’ದಲ್ಲಿ ಸಾಗಲು ಕಲಾತಂಡಗಳು, ಸ್ತಬ್ಧಚಿತ್ರಗಳು ಸಜ್ಜಾಗಿವೆ. ಅರಮನೆ ಆವರಣದಲ್ಲಿ ಜಂಬೂಸವಾರಿ ವೀಕ್ಷಣೆಗೆ 25 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ.

8ನೇ ಪುಟ ನೋಡಿ

ಬಾಲಕಿ ಕೊಲೆ: ಅಪರಾಧಿಗೆ ಮರಣದಂಡನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿದ್ದ ಅಪರಾಧಿಗೆ ಮರಣ ದಂಡನೆ ಮತ್ತು ₹1.50 ಲಕ್ಷ ದಂಡ ವಿಧಿಸಿ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಎಫ್‌.ಟಿ.ಎಸ್‌.ಸಿ ನ್ಯಾಯಾಧೀಶರಾದ ನಿಂಗೌಡ ಪಾಟೀಲ ಆದೇಶಿಸಿದ್ದಾರೆ. ಹುಬ್ಬಳ್ಳಿ ತಾಲ್ಲೂಕು ಕುರಡಿಕೇರಿ ಗ್ರಾಮದ ಶೆಟ್ಟೆಪ್ಪ ಬಸಪ್ಪ ವಡ್ಡರ ಮರಣ ದಂಡನೆಗೆ ಗುರಿಯಾದ ಅಪರಾಧಿ.

ಶಿಗ್ಗಾವಿ ತಾಲ್ಲೂಕು ಗ್ರಾಮವೊಂದರಲ್ಲಿ 2019ರ ಮೇ 6ರಂದು ಮದುವೆ ಸಮಾರಂಭಕ್ಕೆಂದು ಸಂತ್ರಸ್ತೆಯ ಕುಟುಂಬವು ಬಂದಿತ್ತು. ಮದುವೆ ಮನೆಯವರು ಸಮೀಪದ ಸಂಬಂಧಿಕರ ಮನೆಯಲ್ಲಿ ಉಳಿದುಕೊಳ್ಳಲು ಹೇಳಿದ್ದರು. ತನ್ನ 7 ವರ್ಷದ ಮಗಳನ್ನು ಅಲ್ಲಿಯೇ ಮಲಗಿಸಿ ತಾಯಿ ಹಾಗೂ ಕುಟುಂಬದವರು ಮದುವೆ ಸಮಾರಂಭದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಅಪರಾಧಿಯು ಬಾಲಕಿಯನ್ನು ಅಪಹರಿಸಿಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ನಂತರ ಬಾಲಕಿಯನ್ನು ಕೊಲೆ ಮಾಡಿ ಶೌಚಾಲಯದಲ್ಲಿಯೇ ಎಸೆದು ಹೋಗಿದ್ದ.

ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿ ಆರ್.ಎಫ್ ದೇಸಾಯಿ ತನಿಖೆ ನಡೆಸಿ ಜಿಲ್ಲಾ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದರು. ಮೃತಳ ಪಾಲಕರಿಗೆ ₹75 ಸಾವಿರ ಪರಿಹಾರ ಹಾಗೂ ರಾಜ್ಯ ಸರ್ಕಾರದ ನೊಂದವರ ಪರಿಹಾರ ನಿಧಿ ಯೋಜನೆಯ ಪರಿಹಾರ ನಿಧಿಯಿಂದ ಸರ್ಕಾರವು ಮೃತಳ ಪಾಲಕರಿಗೆ ₹10 ಲಕ್ಷ ಪರಿಹಾರವನ್ನು ನೀಡಬೇಕೆಂದು ಆದೇಶಿಸಿದ್ದಾರೆ.

ಸರ್ಕಾರದ ಪರವಾಗಿ ವಿಜಯಕುಮಾರ ಶಂಕರಗೌಡ ಪಾಟೀಲ್ ವಾದ ಮಂಡಿಸಿದ್ದರು.

‘ತೇಜ್’ ಚಂಡಮಾರುತದಿಂದ ಅಪಾಯವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಬ್ಬಿ ಸಮುದ್ರದಲ್ಲಿ ಕಾಣಿಸಿಕೊಂಡಿರುವ ‘ತೇಜ್’ ಚಂಡಮಾರುತದಿಂದ ರಾಜ್ಯಕ್ಕೆ ಯಾವುದೇ ಅಪಾಯವಿಲ್ಲ ಎಂದು ರಾಜ್ಯ ಹವಾಮಾನ ಇಲಾಖೆ ತಿಳಿಸಿದೆ.

ಸೋಮವಾರ ಮತ್ತು ಮಂಗಳವಾರ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನಲ್ಲಿ ಒಣ ಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ಕರಾವಳಿಯ ಉತ್ತರ ಕನ್ನಡ ಜಿಲ್ಲೆಯ ಒಂದೆರಡು ಕಡೆ, ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ವಿಜಯಪುರ, ಕಲಬುರಗಿ, ದಕ್ಷಿಣ ಒಳನಾಡಿನ ಚಿತ್ರದುರ್ಗ, ದಾವಣಗೆರೆ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಯ ಒಂದೆರಡು ಕಡೆ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಕೆಲವು ಕಡೆಗಳಲ್ಲಿ ಮುಂಜಾನೆ ಮಂಜು ಕವಿದ ವಾತಾವರಣ ಇರಬಹುದು ಎಂದು ಹೇಳಿದೆ.

‘ಮಹಿಷ ದಸರೆಗೆ ಸರ್ಕಾರದಿಂದಲೇ ಕುಮ್ಮಕ್ಕು’

ಮೈಸೂರು: ‘ರಾಜ್ಯ ಸರ್ಕಾರವು ಟಿಪ್ಪು ಜಯಂತಿ ಮಾದರಿಯಲ್ಲಿಯೇ ಮಹಿಷ ದಸರಾ ಆಚರಣೆಗೆ ಕುಮ್ಮಕ್ಕು ನೀಡುತ್ತಿದೆ’ ಎಂದು ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಇಲ್ಲಿ ಭಾನುವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಈ ಹಿಂದೆ ಅಧಿಕಾರದಲ್ಲಿ ಇದ್ದಾಗ ಟಿಪ್ಪು ಜಯಂತಿ ಆಚರಣೆ ಮೂಲಕ ಧರ್ಮಗಳ ನಡುವೆ ಸಂಘರ್ಷ ತಂದಿಟ್ಟಿತ್ತು. ಈಗ ವಿವಿಧೆಡೆ ಮಹಿಷ ದಸರಾಕ್ಕೆ ಅನುಮತಿ ನೀಡುವ ಮೂಲಕ ಜಾತಿಗಳ ನಡುವೆ ತಂದಿಡುವ ಕೆಲಸ ಮಾಡುತ್ತಿದೆ. ಇದನ್ನು ಆರಂಭದಲ್ಲಿಯೇ ಚಿವುಟಿ ಹಾಕುವುದನ್ನು ಬಿಟ್ಟು ಅನುಮತಿ ಮತ್ತು ಭದ್ರತೆ ನೀಡುತ್ತಿದೆ. ವಿಕೃತ ಮನಸ್ಸುಗಳು ಹುಟ್ಟಲು ಸರ್ಕಾರವೇ ಪ್ರಚೋದನೆ ನೀಡುತ್ತಿದೆ’ ಎಂದು ದೂರಿದರು.

ಪ್ರಜಾವಾಣಿ DH DECCAN HERALD

ಭೂಮಿಕಾ ಕ್ಲಬ್
presented by manipal hospitals LIFE'S ON

ಮಹಿಳೆಯರಿಗೆಂದೇ ಸ್ಥಾಪಿತಗೊಂಡ ವಿಶಿಷ್ಟವಾದ ವೇದಿಕೆ

ಹೊಸ ಸ್ನೇಹ, ಹೊಸ ವಿಷಯಗಳ ಕಲಿಕೆ, ಮತ್ತು ವಿನೋದದ ಸಂಜೆಯ ಅನುಭವ...
ಭೂಮಿಕಾ ಕ್ಲಬ್‌ನ ಹಬ್ಬದ ಆವೃತ್ತಿಯಲ್ಲಿ ಇಂದೇ ನೋಂದಾಯಿಸಿ!

ಉದ್ಘಾಟನೆ: ಪ್ರಿಯಾಂಕ ಉಪೇಂದ್ರ

ದಿನಾಂಕ: ಅಕ್ಟೋಬರ್ 28
ಸಮಯ: ಮಧ್ಯಾಹ್ನ 2 ಗಂಟೆಯಿಂದ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಾ ಮಹಾಕವಿ ರಸ್ತೆ, 5ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು 560018

ಕಾರ್ಯಕ್ರಮದ ಮುಖ್ಯಾಂಶಗಳು

ಒರಿಗಮಿ ದೀಪಾವಳಿ ಅಲಂಕಾರ DIY ಕಾರ್ಯಾಗಾರ ಚಿಂದರ್ ಸ್ಪೇಸ್

ಸೆಷನ್–1: ಮಹಿಳೆಯರ ಹೃದಯ ಆರೋಗ್ಯ
ಡಾ. ಸುನಿಲ್ ದ್ವಿವೇದಿ, ಕನ್ಸಲ್ಟೆಂಟ್ – ಹೃದ್ರೋಗ ವಿಭಾಗ
ಮಣಿಪಾಲ್ ಆಸ್ಪತ್ರೆ, ಮಿಲ್ಲರ್ಸ್ ರಸ್ತೆ

ಮನಮೋಹಕ ಸಂಗೀತ ಕಾರ್ಯಕ್ರಮ

ಸೆಷನ್–2: ಹಬ್ಬದ ಋತುವಿನಲ್ಲಿ ಉತ್ತಮ ಆಹಾರ ಪದ್ಧತಿ
ಶ್ರೀಮತಿ ವಾಣಿ ಕೃಷ್ಣ – ಮುಖ್ಯ ಪೌಷ್ಟಿಕತಜ್ಞೆ
ಮಣಿಪಾಲ್ ಆಸ್ಪತ್ರೆ, ವರ್ತೂರು ರಸ್ತೆ

ಗೇಮ್ಸ್ | ಹೈ-ಟೀ | ನೆಟ್‌ವರ್ಕಿಂಗ್

ನೋಂದಾಯಿಸಲು QR ಕೋಡ್ ಸ್ಕ್ಯಾನ್ ಮಾಡಿ

ನೋಂದಾಯಿತರಿಗೆ ಮಾತ್ರ ಪ್ರವೇಶ | ಉಚಿತ ಪ್ರವೇಶ, ಈಗಲೇ ನೋಂದಾಯಿಸಿಕೊಳ್ಳಿ

ಹುಕ್ಕಾ ಬಾರ್‌ನಲ್ಲಿ ಗಾಂಜಾ ಮಾರಾಟ: ಕ್ರಮಕ್ಕೆ ಎಎಪಿ ಆಗ್ರಹ

ಬೆಂಗಳೂರು: ‘ನಗರದಲ್ಲಿ ಹುಕ್ಕಾ ಬಾರ್ ಹೆಸರಿನಲ್ಲಿ ಗಾಂಜಾ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಯುವಜನತೆ ಗಾಂಜಾ ವ್ಯಸನಿಗಳಾಗಿ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ತಕ್ಷಣವೇ ಹುಕ್ಕಾ ಬಾರ್‌ಗಳನ್ನು ಮುಚ್ಚಿಸಬೇಕು’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ, ವಕೀಲ ಲೋಹಿತ್ ಒತ್ತಾಯಿಸಿದರು.

‘ನಗರ ಸೇರಿದಂತೆ ರಾಜ್ಯದಲ್ಲಿರುವ ಹುಕ್ಕಾಬಾರ್‌ಗಳನ್ನು ಬಂದ್ ಮಾಡಿಸುತ್ತೇವೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ ನೀಡಿದ್ದರು. ಆದರೆ, ಕಾರ್ಯ ಪ್ರವೃತ್ತವಾಗಿಲ್ಲ. ನಗರದ ಕೋರಮಂಗಲದ ಹೊಸೂರು ಮುಖ್ಯರಸ್ತೆಯ ಹುಕ್ಕಾಬಾರ್‌ನಲ್ಲಿ ಬೆಂಕಿ ದುರಂತ ಸಂಭವಿಸಿದೆ. ಇನ್ನು ಮುಂದೆ ಬರೀ ಹೇಳಿಕೆಗೆ ಸೀಮಿತವಾಗದೇ ಕ್ರಮ ಕೈಗೊಳ್ಳಬೇಕು’ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಗುರುವಾರ ಪ್ರತಿಕ್ರಿಯಿಸಿದರು.

‘ರಾಜ್ಯದಲ್ಲಿ ಪ್ರತಿದಿನ 100ರಿಂದ 150 ಗಾಂಜಾ ಮಾರಾಟ ಪ್ರಕರಣಗಳು ದಾಖಲಾಗುತ್ತಿವೆ. ಈ ಗಾಂಜಾ ಸೇವನೆಗೆ ಹುಕ್ಕಾ ಬಾರ್‌ಗಳು ಸುರಕ್ಷಿತ ಪ್ರದೇಶವಾಗಿವೆ. ಗಾಂಜಾ ಮಿಶ್ರಣ ಮಾಡಿ ಹುಕ್ಕಾ ಸೇವನೆ ಮಾಡಲಾಗುತ್ತಿದೆ. ಮಧ್ಯರಾತ್ರಿ 2 ಗಂಟೆವರೆಗೂ ಈ ಹುಕ್ಕಾ ಬಾರ್‌ಗಳು ತೆರೆದಿರುತ್ತವೆ. ಇದಕ್ಕೆ ಪೊಲೀಸರು ಸಹ ಕೈಜೋಡಿಸಿದ್ದಾರೆ’ ಎಂದು ಆಪಾದಿಸಿದರು. ‘ಹುಕ್ಕಾ ಬಾರ್‌ಗಳನ್ನು ಮುಚ್ಚದಿದ್ದರೆ ಆಮ್ ಆದ್ಮಿ ಪಕ್ಷದಿಂದ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದರು.

‘ಎಎಪಿ ಬೆಂಗಳೂರು ಮಾಧ್ಯಮ ಉಸ್ತುವಾರಿ ಅನಿಲ್ ನಾಚಪ್ಪ ಮಾತನಾಡಿ, ‘ಬೆಂಗಳೂರಿನ ಅಶೋಕನಗರ ವ್ಯಾಪ್ತಿಯ ಎಂ.ಜಿ.ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ 24 ಹುಕ್ಕಾ ಬಾರ್‌ಗಳಿವೆ. ಪ್ರತಿಯೊಂದು ಹುಕ್ಕಾ ಬಾರ್‌ನಿಂದ ಹಫ್ತಾ ನೀಡಲಾಗುತ್ತಿದೆ’ ಎಂದು ಆರೋಪಿಸಿದರು. ‘ಬಹುತೇಕ ಹುಕ್ಕಾ ಬಾರ್‌ಗಳು ಪ್ರತಿಷ್ಠಿತ ವ್ಯಕ್ತಿಗಳು, ಶಾಸಕರು ಅವರ ಬೇನಾಮಿಗಳು ನಡೆಸುತ್ತಿರುವುದರಿಂದ ಪೊಲೀಸರು ಕೂಡ ಇವುಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿಲ್ಲ’ ಎಂದು ದೂರಿದರು.

ಹ್ಯಾಮರ್ ಎಸೆತ: ಹೇಮಂತ್‌ಗೆ ಬೆಳ್ಳಿ

ದಾಬಸ್ ಪೇಟೆ: ತೆಲಂಗಾಣದ ವಾರಂಗಲ್‌ನಲ್ಲಿ ನಡೆದ 34ನೇ ದಕ್ಷಿಣ ವಲಯ ಕಿರಿಯರ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ಹ್ಯಾಮರ್ ಎಸೆತ ವಿಭಾಗದಲ್ಲಿ ತಾಲ್ಲೂಕಿನ ನರಸೀಪುರ ಗ್ರಾಮದ ಹೇಮಂತ್ ಕುಮಾರ್ ಎಂ. ಬೆಳ್ಳಿ ಪದಕ ಪಡೆದಿದ್ದಾರೆ.

ನವೆಂಬರ್‌ನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಕಾಳು ಬಲಿಯುವ ಸಮಯಕ್ಕೆ ಬರದ ಛಾಯೆ– ರೈತರ ಅಳಲು

ಕೈ ಕೊಟ್ಟ ಮಳೆ: ಆತಂಕ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಮುಂಗಾರು ತುಸು ಹದವಾಗಿದ್ದ ಕಾರಣ, ಬಿತ್ತಿದ್ದ ರಾಗಿ ಪೈರುಗಳಲ್ಲಿ ಕಾಳು ಕಟ್ಟಿ, ಅವು ಬಲಿಯುವ ಹೊತ್ತಲ್ಲಿ ಮಳೆ ಕೈಗೊಟ್ಟು, 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಅನ್ನುವಂತಾಗಿದೆ ಸೋಂಪುರ ಹೋಬಳಿಯ ರಾಗಿ ಬೆಳೆಯುವ ರೈತರ ಸ್ಥಿತಿ.

ಆರಂಭದಲ್ಲಿ ಸಕಾಲಕ್ಕೆ ಮುಂಗಾರು ಮಳೆ ಹದವಾಗಿಯೇ ಬಿತ್ತು. ಬಿತ್ತಿದ ರಾಗಿ ಬೀಜಗಳು ಮೊಳೆತು, ಪೈರು ಬೆಳೆದು ಕಾಳು ಕಟ್ಟಿದ್ದವು. ಕಾಳು ಬಲಿಯುವ ಸಮಯದಲ್ಲಿ ಮಳೆ ಬೇಕು. ಆದರೆ, ಈ ಸಮಯದಲ್ಲಿ ಬರಬೇಕಾದ್ದ ಮಳೆ ಬರಲಿಲ್ಲ. ಇನ್ನೊಂದೆಡೆ ಬಿಸಿಲು ಹೆಚ್ಚಾಯಿತು, ತೇವಾಂಶದ ಕೊರತೆಯಿಂದಾಗಿ ಈಗ ಇಳುವರಿ ಕುಸಿಯುವ ಆತಂಕ ಮೂಡಿದೆ ಎಂದು ರೈತರು ಹೇಳುತ್ತಿದ್ದಾರೆ.

ರಾಗಿ ಜೊತೆಗೆ ಅಕ್ಕಡಿ ಸಾಲಿನಲ್ಲಿ ತೊಗರಿ, ಅವರೆ, ಅಲಸಂದೆ, ಹುರುಳಿ ಬೆಳೆಗಳನ್ನೂ ಬಿತ್ತಿದ್ದರು. ಈಗ ತೇವಾಂಶದ ಕೊರತೆಯಿಂದಾಗಿ ಆ ಬೆಳೆಗಳಲ್ಲೂ ಫಸಲು ಕಾಣುವುದು ಕಷ್ಟವಾಗಿದೆ.

ಹಿಂದೆ ತಾಲ್ಲೂಕಿನಲ್ಲಿ ಮಳೆ ಇಲ್ಲದೇ ಬರ ಆವರಿಸಿಕೊಳ್ಳುವ ಮುನ್ಸೂಚನೆ ಇತ್ತು, ಅದರ ಮಧ್ಯೆ ಹದವಾದ ಮಳೆ ಸುರಿದು, ಬೆಳೆ ಹಸಿರಾಗಿ, ಫಸಲು ಕೈಗೆ ಸಿಗಬಹುದೆಂಬ ಆಸೆ ಚಿಗುರಿತ್ತು. ಈ ಹಂತದಲ್ಲಿ ಮಳೆ ಇಲ್ಲದಿರುವುದರಿಂದ, ಎಷ್ಟು ಫಸಲು ಕೈಗೆ ಸಿಗುತ್ತೋ ತಿಳಿಯದಾಗಿದೆ ಎನ್ನುತ್ತಾರೆ ಹೋಬಳಿಯ ರೈತರು.

ತೇವಾಂಶ ಕೊರತೆಯಿಂದ ಈಗ ಬೆಳೆದಿರುವ ರಾಗಿ ಪೈರುಗಳು ನಡು ಸೊರಗಿ ನೆಲಕ್ಕೆ ಬೀಳುತ್ತವೆ. ಕೊಯ್ಲು ಮಾಡುವಾಗ ತೊಂದರೆ ಆಗುತ್ತದೆ. ಅಕಾಲಿಕ ಮಳೆ ಬಂದರೆ ಹುಲ್ಲು ಕೊಳೆಯುತ್ತದೆ.

ರಾಗಿ ಕಾಳುಗಳು ಬಲಿಯುವ ಹಂತದಲ್ಲಿ ಸೊರಗುತ್ತಿರುವುದು

ಒಂದೂವರೆ ಎಕರೆ ರಾಗಿ ಬಿತ್ತನೆ ಮಾಡಿದ್ದೆ. ಈಗಲೇ ಸುಮಾರು ₹18 ಸಾವಿರದಷ್ಟು ಖರ್ಚಾಗಿದೆ. ಇನ್ನು ಕೊಯ್ಲು, ಒಕ್ಕಣೆ ಇದೆ. ಮಳೆ ಇಲ್ಲದೆ ಇಳುವರಿ ಕಡಿಮೆಯಾದರೆ ಖರ್ಚು ಮಾಡಿದ ಬಂಡವಾಳವೂ ಸಿಗುವುದಿಲ್ಲ.
ಗಂಗರಾಜಪ್ಪ, ದೇವಗಾನಹಳ್ಳಿ ರೈತ

ಮೇವಿಗಾಗಿ ₹2 ಲಕ್ಷ ಖರ್ಚು ಮಾಡಿ ಏಳು ಎಕರೆಯಲ್ಲಿ ರಾಗಿ ಬಿತ್ತಿದ್ದೆ. ಈಗ ಪೈರು ಗೆದ್ದಲು ಹಿಡಿಯುತ್ತಿದೆ. ತೆನೆಗೆ ಹಿಲುಕು ರೋಗ ಬಂದು ರಾಗಿ ಹಾಗೂ ಹುಲ್ಲು ಎರಡೂ ಸಿಗುವುದು ಕಷ್ಟವಾಗಿದೆ
ಆನಂದ್, ಹಾಲೇನಹಳ್ಳಿ ರೈತ

ಆಗ, ಜಾನುವಾರುಗಳ ಮೇವಿಗೂ ಕೊರತೆ ಉಂಟಾಗುತ್ತದೆ ಎಂಬ ಆತಂಕವನ್ನೂ ವ್ಯಕ್ತಪಡಿಸುತ್ತಿದ್ದಾರೆ.

ಸಾವಿರಾರು ರೂಪಾಯಿ ಖರ್ಚು ಮಾಡಿ ಬೇಸಾಯ ಮಾಡಿರುವ ರೈತರಿಗೆ ನಷ್ಟ ಉಂಟಾಗುವುದರ ಜೊತೆಗೆ ಪ್ರಮುಖವಾಗಿ ಹೈನುಗಾರಿಕೆಗೆ ಮೇವಿನ ಕೊರತೆ ಉಂಟಾಗುವ ಭಯ ರೈತರನ್ನು ಕಾಡುತ್ತಿದೆ.

ನೆಲಮಂಗಲ ತಾಲ್ಲೂಕಿನಲ್ಲಿ ಈ ವರ್ಷ ಒಟ್ಟು 12,155 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆಯಾಗಿರುವುದು ಶೇ 65ರಷ್ಟು ಮಾತ್ರ. ಕಳೆದ ಸಲಿಗೆ ಹೋಲಿಸಿದರೆ ಈ ವರ್ಷ ಶೇ 33ರಷ್ಟು ಬಿತ್ತನೆಯ ಕೊರತೆಯಾಗಿದೆ ಎಂದು ಕೃಷಿ ಇಲಾಖೆ ಮೂಲಗಳು ಹೇಳುತ್ತವೆ.

ಸಂಸದ ಡಿ.ಕೆ.ಸುರೇಶ್ ಅವರು ಲಕ್ಷ್ಮೀದೇವಿನಗರ ವಾರ್ಡ್‌ಗೆ ಭೇಟಿ ನೀಡಿ ನಾಗರಿಕರ ಕುಂದು ಕೊರತೆಗಳನ್ನು ಆಲಿಸಿದರು

ಸರ್ವೀಸ್ ರಸ್ತೆ ಕಾಮಗಾರಿ ಬೇಗ ಪೂರ್ಣಗೊಳಿಸಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸಂಸದ ಡಿ.ಕೆ. ಸುರೇಶ್ ಅವರು ಲಕ್ಷ್ಮೀದೇವಿನಗರ, ಲಗ್ಗೆರೆ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳಿಗೆ ಭೇಟಿ ನೀಡಿ ನಾಗರಿಕರ ಕುಂದುಕೊರತೆಗಳನ್ನು ಆಲಿಸಿದರು.

‘ಗೊರಗುಂಟೆಪಾಳ್ಯದಲ್ಲಿ ಮಹಿಳೆಯರಿಗಾಗಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಪ್ರತ್ಯೇಕವಾಗಿ ನಿರ್ಮಿಸಿರುವ ಸುಸಜ್ಜಿತ ಉದ್ಯಾನವನ್ನು ಶಾಸಕ ಮುನಿರತ್ನ ಅವರು ಕಿತ್ತು ಹಾಕಿ, ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕು‘ ಎಂದು ಮಹಿಳೆಯರು ಸಂಸದರನ್ನು ಆಗ್ರಹಿಸಿದರು.

ಕಂಠೀರವ ಸ್ಟುಡಿಯೊ ಬಳಿಯ ಸೇತುವೆಯ ಅಂಡರ್‌ಪಾಸ್ ರಸ್ತೆ ಕಾಮಗಾರಿ ಆರು ವರ್ಷಗಳಿಂದ ಸ್ಥಗಿತಗೊಂಡಿದೆ. ಹೊರವರ್ತುಲ ರಸ್ತೆ ಲಗ್ಗೆರೆ ಸೇತುವೆ ಕೆಳಗೆ ಲಾರಿಗಟ್ಟಲೆ ಕಸ ಸುರಿಯಲಾಗುತ್ತದೆ. ಕಾನೂನು ಉಲ್ಲಂಘಿಸಿ ರಾಕ್ಷಿಸಿ ಹಳ್ಳದ ಮೇಲೆ ಈಜುಕೊಳ, ಸರ್ಕಾರಿ ಶಾಲಾ ಕಟ್ಟಡ ಕಟ್ಟಲಾಗುತ್ತಿದೆ ಎಂದು ಅವರು ದೂರಿದರು.

‘ಶಾಸಕರು, ಕ್ಷೇತ್ರ ಅಭಿವೃದ್ಧಿಯಾಗಿದೆ ಎಂದು ಹೇಳುತ್ತಾರೆ. ಆದರೆ, ನಮ್ಮ ಕ್ಷೇತ್ರದಲ್ಲಿ ರಸ್ತೆಗಳೇ ಸರಿಯಿಲ್ಲ. ಚರಂಡಿ ಕಿತ್ತು ಹೋಗಿವೆ. ಕೆಲವು ಬಡಾವಣೆಗಳಲ್ಲಿ ರಸ್ತೆಗಳಿಗೆ ಡಾಂಬರೀಕರಣ, ಚರಂಡಿ ವ್ಯವಸ್ಥೆ ಇಲ್ಲ‘ ಎಂದು ಸಂಸದರ ಎದುರು ನಾಗರಿಕರು ಅವಲತ್ತುಕೊಂಡರು.

ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದ ಸಂಸದ ಡಿ.ಕೆ.ಸುರೇಶ್ ಅವರು, ಬಿಡಿಎ ಆಯುಕ್ತರನ್ನು ಸ್ಥಳಕ್ಕೆ ಕರೆಸಿ, ಸರ್ವೀಸ್ ರಸ್ತೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿದರು. ‘ಒಂದು ಕಾಮಗಾರಿಯನ್ನು ಪ್ರಾರಂಭ ಮಾಡಿ, ನಂತರ ಎರಡು ವರ್ಷಕ್ಕೆ ಅದೇ ಭಾಗದಲ್ಲಿ ಅವಶ್ಯಕತೆಯಿಲ್ಲದಿದ್ದರೂ ಬೇರೊಂದು ಕಾಮಗಾರಿ ಮಾಡಿ ಹಣ ಲೂಟಿ ಮಾಡಲಾಗುತ್ತಿದೆ. ಎಲ್ಲವನ್ನು ಕಾನೂನು ಅಡಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. ಅವಶ್ಯಕತೆಯಿರುವ ಕಡೆ ತುರ್ತಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು’ ಎಂದು ಅವರು ಭರವಸೆ ನೀಡಿದರು.

ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ಬಿಬಿಎಪಿ ಮಾಜಿ ಸದಸ್ಯರಾದ ವೇಲುನಾಯಕರ್, ಮಂಜುಳ ನಾರಾಯಣಸ್ವಾಮಿ, ಸಿದ್ದೇಗೌಡ, ಬಿಬಿಎಂಪಿ ಜಂಟಿ ಆಯುಕ್ತ ಡಾ.ಅಜಯ್, ಉಪ ಆಯುಕ್ತ ಅಬ್ದುಲ್ ರಬ್, ಮುಖ್ಯ ಎಂಜಿನಿಯರ್ ರಾಘವೇಂದ್ರಪ್ರಸಾದ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಶ್ರೀ ಶ್ರೀ ಶ್ರೀ ಸಿದ್ದೇಶ್ವರ ದೇವಾಲಯ ಟ್ರಸ್ಟ್
SRI SRI SRI SIDESHWAR TEMPLE TRUST

ನಂ. 181, 80 ಅಡಿ ರಸ್ತೆ, ಟಿವಿಎಸ್ ರಸ್ತೆ, ಅತ್ತಿಬೆಲೆ ಗ್ರಾಮ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.
ದೂರವಾಣಿ : 080-25714070, ಮೊ : 94488 44679, ವಾಟ್ಸ್ : 96864 79293

ದೇವಾಲಯದ ಸಂಕ್ಷಿಪ್ತ ಇತಿಹಾಸ

ಆನೇಕಲ್ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಬೆಂಗಳೂರು ಗ್ರಾ. ಜಿಲ್ಲೆ, ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ನಿವೃತ್ತ ತೆರಿಗೆ ಅಧಿಕಾರಿ ಶ್ರೀ ಎಂ. ರಾಜಶೇಖರ್ ಬಿ.ಕಾಂ., ಅವರ ಧರ್ಮಪತ್ನಿ ಶ್ರೀಮತಿ ಎಸ್. ರಂಜನಿಯಮ್ಮಾಳ್ ದಂಪತಿ ಶ್ರೀ ಶ್ರೀ ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನ ನಿರ್ಮಾಣ ಮಾಡಿದ್ದಾರೆ. ರಂಜನಿಯಮ್ಮಾಳ್ ಟ್ರಸ್ಟಿನ ಅಧ್ಯಕ್ಷರಾಗಿ ಮತ್ತು ನಿವೃತ್ತ ತೆರಿಗೆ ಅಧಿಕಾರಿ ಶ್ರೀ ಎಂ. ರಾಜಶೇಖರ್ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದಾರೆ.

ಮೂಲತಃ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿಯ ಕೃಷಿ ಕುಟುಂಬದಲ್ಲಿ ಜನಿಸಿರುವ ರಾಜಶೇಖರ್ ಕುಟುಂಬ ಶಿವನ ಪರಮಭಕ್ತರು. ಒಮ್ಮೆ ರಾಜಶೇಖರ್ ಅವರು ಪತ್ನಿ ರಂಜನಿಯಮ್ಮಾಳ್ ಅವರೊಂದಿಗೆ ತಮಿಳುನಾಡಿನ ತಂಜಾವೂರಿನಲ್ಲಿರುವ ಶ್ರೀ ಪ್ರಗದೀಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಆ ದೇವಸ್ಥಾನವೇ ರಾಜಶೇಖರ್ ದಂಪತಿಗೆ ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಸ್ಫೂರ್ತಿಯಾಯಿತು.

ಕೂಡಲೇ ಅತ್ತಿಬೆಲೆ ಬಳಿ 6 ½ ಎಕರೆ ಜಮೀನಿನಲ್ಲಿ ಶ್ರೀ ಸಿದ್ಧೇಶ್ವರಸ್ವಾಮಿ ದೇವಾಲಯ ನಿರ್ಮಿಸಲು ಮುಂದಾದರು. ಈ ಸ್ಥಳ ಹಿಂದೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬದ ಒಡೆತನದಲ್ಲಿತ್ತು. ಸನ್ಮಾನ್ಯ ಶ್ರೀ ದೇವೇಗೌಡರು ಸಹ ಶ್ರೀ ಸಿದ್ಧೇಶ್ವರಸ್ವಾಮಿಯ ಪರಮ ಭಕ್ತರಾಗಿದ್ದಾರೆ.

ಅಂದಾಜು 30 ಕೋಟಿ ರೂ. ವೆಚ್ಚದಲ್ಲಿ ದೇವಾಲಯ ನಿರ್ಮಾಣಕ್ಕೆ ಫೆಬ್ರವರಿ 27, 2014ರಂದು ಶ್ರೀ ಎಂ. ರಾಜಶೇಖರ್ ಮತ್ತು ಶ್ರೀಮತಿ ಎಸ್. ರಂಜನಿಯಮ್ಮಾಳ್ ದಂಪತಿ ಭೂಮಿಪೂಜೆ ನೆರವೇರಿಸಿದರು. ಅಂದಿನಿಂದಲೂ ನಿರಂತರವಾಗಿ ನಡೆದ ನಿರ್ಮಾಣ ಕಾರ್ಯ ಇದೀಗ ಮುಕ್ತಾಯದ ಹಂತದಲ್ಲಿದೆ. ದೇವಸ್ಥಾನದ ಕಟ್ಟಡವನ್ನು ಅತ್ಯುತ್ತಮ ಶಿಲೆಗಳಿಂದ ನಿರ್ಮಿಸಲಾಗಿದೆ. ದೇವಾಲಯ ಆಧ್ಯಾತ್ಮಿಕ ಹಿನ್ನೆಲೆ ಮತ್ತು ಸಂಸ್ಕೃತಿ ಹೊಂದಿದೆ.

ಇದರ ಜೊತೆಯಲ್ಲಿ ನಾವು ಶೀಘ್ರದಲ್ಲೇ ಶ್ರೀ ಶ್ರೀ ಶ್ರೀ ಸಿದ್ಧೇಶ್ವರಸ್ವಾಮಿ ಕನ್ವೆನ್ಷನ್ ಹಾಲ್ ತೆರೆಯಲಿದ್ದೇವೆ. ಆರ್ಥಿಕವಾಗಿ ಹಿಂದುಳಿದ ವರ್ಗದ ಅರ್ಹರಿಗೆ ಸಭಾಂಗಣ ವ್ಯವಸ್ಥೆ, ವಿವಾಹ ವೆಚ್ಚ ಹಾಗೂ ಊಟವನ್ನು ಉಚಿತವಾಗಿ ನೀಡಲಾಗುವುದು. ಇತರರಿಗೆ ವಿಶೇಷ ದರಗಳಲ್ಲಿ ಒದಗಿಸಲಾಗುವುದು. ಶ್ರೀ ಧರ್ಮಸ್ಥಳ ಮಂಜುನಾಥ ದೇವಸ್ಥಾನದಂತೆ ಇಲ್ಲಿ ಪ್ರತಿ ಸೋಮವಾರದಂದು ಮಧ್ಯಾಹ್ನ 1–00 ಗಂಟೆಯಿಂದ ರಾತ್ರಿ 10–00 ಗಂಟೆವರೆಗೆ ಅನ್ನದಾನವನ್ನು ಏರ್ಪಡಿಸಲಾಗುವುದು.

ದೇವಸ್ಥಾನದ ರಾಜಗೋಪುರ ನಿರ್ಮಿಸುವಾಗ 63 ಅಡಿಗಳುಳ್ಳ ಕ್ರೇನ್ ಒಂದು ಭೂಮಿಯಲ್ಲಿ ಸಿಕ್ಕಿತ್ತು. ಇದರಿಂದ ಕೆಲಕಾಲ ಕಾಮಗಾರಿ ಸ್ಥಗಿತಗೊಂಡಿತ್ತು. ಮತ್ತೊಂದು 65 ಅಡಿಗಳುಳ್ಳ ಕ್ರೇನ್ ತಂದು ಶಿವರಾತ್ರಿ ದಿನದಂದು 12.05ಕ್ಕೆ ದುರಸ್ತಿ ಕೆಲಸ ಮಾಡಿ ರಾಜಗೋಪುರ ಪುನಃ ಸ್ಥಾಪನೆ ಮಾಡಲಾಯಿತು. ಮಹಾ ಶಿವರಾತ್ರಿಯಂದು ಈ ಕೆಲಸವಾಗಿದ್ದಕ್ಕೆ ಇದು ದೇವರ ಪವಾಡವೇ ಇರಬೇಕೆಂಬುದು ಭಕ್ತರ ಅಭಿಪ್ರಾಯ. ಸುಮಾರು 9 ಲಕ್ಷ ರೂ. ಮೌಲ್ಯದ ನವರತ್ನಗಳನ್ನು ರಾಜಗೋಪುರದಲ್ಲಿ ಹುದುಗಿಸಲಾಗಿದೆ. ದೇಗುಲ ನಿರ್ಮಾಣಕ್ಕೆ ಅನೇಕ ಭಕ್ತಾದಿಗಳು ಚಿನ್ನ, ಬೆಳ್ಳಿ ಹಾಗೂ ನಗದು ರೂಪದಲ್ಲಿ ತಮ್ಮ ಕಾಣಿಕೆಗಳನ್ನು ಅರ್ಪಿಸಿದ್ದಾರೆ.

ಶ್ರೀ ಸಿದ್ಧೇಶ್ವರಸ್ವಾಮಿ ದರ್ಶನಕ್ಕೆ ಪ್ರತಿನಿತ್ಯ 10 ಸಾವಿರ ಭಕ್ತರು ಭೇಟಿ ನೀಡಿ ದೇವರ ದರ್ಶನ ಪಡೆಯಲಿದ್ದಾರೆ. ಮಹಾ ಶಿವರಾತ್ರಿ ಹಬ್ಬದಂದು ಸುಮಾರು 50 ಸಾವಿರದಿಂದ 60 ಸಾವಿರ ಭಕ್ತರು ಭೇಟಿ ನೀಡಿ ಭಗವಂತನ ದರ್ಶನ ಪಡೆಯುವ ಸಾಧ್ಯತೆಗಳಿವೆ. ಅಂದು ರಾಜಶೇಖರ್ ದಂಪತಿ ಭಕ್ತರಿಗೆಲ್ಲ ಪ್ರಸಾದ ವ್ಯವಸ್ಥೆ ಮಾಡಲಿದ್ದಾರೆ. ಭಗವದ್ ಭಕ್ತರು ದೇವಾಲಯಕ್ಕೆ ಬಂದು ಶ್ರೀಗಳನ್ನು ಭೇಟಿ ಮಾಡಿದ ಬಳಿಕ ಆಸ್ತಿಕರ ಮನಸ್ಸಿಗೆ ನೆಮ್ಮದಿ, ಶಾಂತಿ, ಸಂತೋಷ ದೊರೆಯಲಿದೆ ಎಂಬುದು ಅವರ ನಂಬಿಕೆ.

ನಾವು ಆ ಶಿವನಲ್ಲಿ ನಂಬಿಕೆಯಿಟ್ಟು ಒಳ್ಳೆಯ ಮನಸ್ಸಿನಿಂದ 30 ಕೋಟಿ ವೆಚ್ಚದಲ್ಲಿ ಉತ್ತಮ ಕಾರ್ಯಕ್ಕೆ ಅಂದರೆ ದೇಗುಲ ನಿರ್ಮಾಣಕ್ಕೆ ಕೈಹಾಕಿದ್ದೀವಿ. ಅದು ಒಂದು ಚಿಕ್ಕ ಕೆಲಸವಲ್ಲ ಹಾಗೂ ಅಷ್ಟು ಸುಲಭವೂ ಅಲ್ಲ. ಆದರೆ, ಅದು ಸಂಪೂರ್ಣವಾಗಿ ನೆರವೇರಿತು ಅಂದರೆ, ಅದಕ್ಕೆಲ್ಲಾ ಶ್ರೀ ಸಿದ್ಧೇಶ್ವರಸ್ವಾಮಿಯ ಅನುಗ್ರಹ ಮತ್ತು ಆಶೀರ್ವಾದವಲ್ಲದೆ ಬೇರೇನೂ ಅಲ್ಲ ಎನ್ನುತ್ತಾರೆ ರಾಜಶೇಖರ್ ಮತ್ತು ರಂಜನಿಯಮ್ಮಾಳ್ ದಂಪತಿ.

ಶ್ರೀ ಸಿದ್ಧೇಶ್ವರಸ್ವಾಮಿ ದೇವಾಲಯದ ಕೆಲಸಗಳೆಲ್ಲವೂ ಅತಿ ಶೀಘ್ರದಲ್ಲೇ ಸಂಪೂರ್ಣವಾಗಲಿದ್ದು, ಇನ್ನು ಕೆಲವೇ ದಿನಗಳಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳ ಉಪಸ್ಥಿತಿಯಲ್ಲಿ ದೇವಸ್ಥಾನದಲ್ಲಿ ಕುಂಭಾಭಿಷೇಕ ಹಾಗೂ ದೇವಾಲಯ ಲೋಕಾರ್ಪಣೆ ಕಾರ್ಯ ನೆರವೇರಲಿದೆ.

ಶ್ರೀಮತಿ ಎಸ್. ರಂಜನಿಯಮ್ಮಾಳ್
ಅಧ್ಯಕ್ಷರು



ಶ್ರೀ ಎಂ. ರಾಜಶೇಖರ್
ವ್ಯವಸ್ಥಾಪಕ ಟ್ರಸ್ಟಿ, ನಿವೃತ್ತ ಆದಾಯ ತೆರಿಗೆ ಇಲಾಖೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

I,VANESSA JUANNA STANDEN,changed my-son's name_from JOSHUA PRABHAS A to JOSHUA HENRY STANDEN dtd:25.09.2023. Sworn_before notary H.S.Sakalesh Aradhya, Bengaluru

REAL ESTATE SELLING

Sites

Kanakapura Road

SITES FOR Sale BMRDA/DC Conversion Kaggalipura Kanakapura Main Road Ph: 9606996666

RENTAL PROPERTIES

Accommodation Available

Industrial And Factory

AVAILABLE INDUSTRIAL Shed for Rent 95000 sqft at Soukya Road, Whitefield. Commercial 1750sqft x3 Floors, K.R.Road, Banashankari. Contact: 9341234288/ 9663224353/ 9845417487.

REAL ESTATE BUYING

Sites

Anjanapura

WANTED BDA sites Anjanapura, Banshabkari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118: 9449060605: 7338328728.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

‘ಚಂದ್ರಯಾನ ಉತ್ಸವ’ ಮಾಡ್ಯೂಲ್‌ಗೆ ಖಂಡನೆ

ಬೆಂಗಳೂರು: ಚಂದ್ರಯಾನ ಉಡಾವಣೆಯ ಸ್ಮರಣಾರ್ಥವಾಗಿ ಎನ್‌ಸಿಆರ್‌ಟಿಯು ಚಂದ್ರಯಾನ ಉತ್ಸವ ಎಂಬ ಮಾಡ್ಯೂಲ್ ಬಿಡುಗಡೆಗೊಳಿಸಿ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವುದಕ್ಕೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಖಂಡಿಸಿದೆ.

ಚಂದ್ರಯಾನ–2ರ ಯಶಸ್ವಿಯಲ್ಲಿ ವಿಜ್ಞಾನಿಗಳ ಪಾತ್ರವನ್ನು ಎಐಡಿಎಸ್‌ಒ ಶ್ಲಾಘಿಸುತ್ತದೆ. ಆದರೆ, ಖಗೋಳ ವಿಜ್ಞಾನವು ಭಾರತಕ್ಕೆ ಹೊಸತೇನಲ್ಲ. ಅದು ವೇದಗಳ ಕಾಲದಲ್ಲೇ ನಮ್ಮಲ್ಲಿತ್ತು ಎಂಬ ಎನ್‌ಸಿಆರ್‌ಟಿಯು ಪ್ರತಿಪಾದನೆ ಸರಿಯಲ್ಲ. ಪುಷ್ಪಕ ವಿಮಾನದ ಉದಾಹರಣೆ ನೀಡಲಾಗಿದ್ದು, ವೈಮಾನಿಕ ಶಾಸ್ತ್ರವೆಂಬ ಪುಸ್ತಕವಿತ್ತೆಂದು ಸಮರ್ಥನೆ ಮಾಡಿಕೊಳ್ಳುತ್ತಿದೆ ಎಂದು ಆರ್ಗನೈಸೇಷನ್‌ನ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ದೂರಿದ್ದಾರೆ.

‘ಪುಷ್ಪಕ ವಿಮಾನವು ಒಂದು ಸುಂದರವಾದ ಪೌರಾಣಿಕ ಪರಿಕಲ್ಪನೆಯಾಗಿದೆ. ವೇದಗಳ ಕಾಲದಲ್ಲಿ ರಚಿಸಲ್ಪಟ್ಟಿದ್ದು ಎಂದು ಹೇಳಲಾಗುವ ವೈಮಾನಿಕ ಶಾಸ್ತ್ರವು 1923ರಲ್ಲಿ ಬರೆದದ್ದು ಎಂದು ಈಗಾಗಲೇ ಐ. ಐ. ಎಸ್. ಸಿ. ಯು ನಡೆಸಿದ ವೈಜ್ಞಾನಿಕ ಪರೀಕ್ಷೆಯಲ್ಲಿ ಸಾಬೀತಾಗಿದೆ. ಈ ರೀತಿಯ ಅವೈಜ್ಞಾನಿಕ ವಾದಗಳು ನಮ್ಮ ದೇಶದಲ್ಲಿ ವಾಸ್ತವವಾಗಿ ನಡೆಯುತ್ತಿರುವ ವೈಜ್ಞಾನಿಕ ಅಧ್ಯಯನಗಳ ತೇಜೋವಧೆ ಮಾಡುತ್ತವೆ. ಮುಖ್ಯವಾಗಿ ವಿದ್ಯಾರ್ಥಿಗಳ ವೈಜ್ಞಾನಿಕ ಮನೋಭಾವ ಹಾಗೂ ತಾರ್ಕಿಕ ಚಿಂತನೆಗೆ ಧಕ್ಕೆ ತರುತ್ತದೆ. ಆದ್ದರಿಂದ ಎನ್‌ಸಿಆರ್‌ಟಿಯು ಕೂಡಲೇ ಈ ಮಾಡ್ಯೂಲ್ ಅನ್ನು ಹಿಂಪಡೆದುಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

Reliance
Growth is Life
ಈ ದಸರಾ
#UnlimitedCelebrations
ಫೆಸ್ಟಿವಲ್ ಆಫ್ ಎಲೆಕ್ಟ್ರಾನಿಕ್ಸ್
ಪ್ರಸ್ತುತ ಪಡಿಸುತ್ತಿದ್ದಾರೆ
intel evo | ONEPLUS
₹10000 ತನಕ ಇನ್‌ಸ್ಟೆಂಟ್ ಡಿಸ್ಕೌಂಟ್*
ICICI Bank ಕ್ರೆಡಿಟ್ ಕಾರ್ಡ್ ಡೆಬಿಟ್ ಕಾರ್ಡ್ ಮತ್ತು ಇಎಮ್ಐ ಮೇಲೆ ಮಾನ್ಯವಾಗಿರುತ್ತದೆ
ಅಜಿಯೋ & ರಿಲಯನ್ಸ್ ಟ್ರೆಂಡ್ ಮೇಲೆ ₹4000* ಮೌಲ್ಯದ ವೋಚರ್ ಪಡೆಯಿರಿ
Reliance digital
PERSONALISING TECHNOLOGY
#MakeFriendsWithTechnology
MATCH DAY DEALS
TCL 4K UHD TV 2 Year Warranty
216cm (85) UHD TV
₹149990*
146CM (58) ₹31990*
165CM (65) ₹42990*
189CM (75) ₹65990*
*Price after Cashback
SAMSUNG Neo QLED 3 Year Warranty
Starting from ₹99990*
BENEFITS FREEBIES WORTH UPTO ₹124990/-
*Price after Cashback
LG NanoCell ULTRA BRIGHT PANEL 3 Year Warranty
139CM (55) 55NANO83 ₹99990 ₹59990*
165CM (65) 65NANO83 ₹159990 ₹89990*
SONY X90L Series XR Full Array LED 3 Year Warranty
139CM (55) EMIs OFF ₹5500*
165CM (65) EMIs OFF ₹6500*
189CM (75) EMIs OFF ₹7500*
SAMSUNG Q-Series DOLBY ATMOS SOUNDBAR
Starting from ₹24990*
ADDITIONAL MAX 20% CASHBACK UP TO ₹20000* ON LEADING BANK
Intel® Core™ i5
Multi-Tasking Laptop Starting at ₹39999*
Gaming Laptop Starting at ₹40999*
AMD R5
Multi-Tasking Laptop Starting at ₹39999*
Gaming Laptop Starting at ₹40999*
PRICE AFTER PROMO, CASHBACK & EXCHANGE BONUS AS APPLICABLE*
OnePlus Open
Open for Everything
Pre-book Now
Exclusively with Reliance Digital
Reliance digital SELECT
NEW LAUNCH
OPPO FIND N3 FLIP
₹99999
Starting from ₹82999*
*Price post instant discount on select cards
NEW LAUNCH
VIVO V29 5G
Starting from ₹32999*
BENEFIT 10% CASHBACK ON SELECT CREDIT CARDS
SIDE BY SIDE
HAIER 630L ₹57990* EMIs of ₹4833
LG 655L DISPENSER ₹90990* EMIs of ₹7583
SAMSUNG 653L ₹97990* EMIs of ₹8166
FREE** 10 KG TOP LOAD WASHING MACHINE WORTH ₹32500 (ON SELECT SAMSUNG SBS*)
FRONT LOAD
SAMSUNG 9 Kg ₹34490* EMIs of ₹2874
LG 9 Kg ₹36490* EMIs of ₹3041
IFB 8 Kg ₹36990* EMIs of ₹3083
*PRICE AFTER BANK CASHBACK
BREAKFAST COMBO
HAVELLS HOT AND COLD BOTTLE & SANDWICH MAKER
WONDERCHEF ELECTRIC KETTLE
COMBO OFFER ₹1999*
AIRPODS PRO 1st Gen
₹26300 ₹15990*
WATCH S9
EMIs OF ₹1359*
*Bank Cashback Applicable
HDFC BANK FESTIVE TREATS ₹10000 ತನಕ ಕ್ಯಾಶ್‌ಬ್ಯಾಕ್* ಗ್ರಾಹಕರ ಫೈನಾನ್ಸ್ ಮೇಲೆ
Paytm Cashback Get up to ₹1000* Cashback on minimum payment of ₹7499
Reliance resQ ವೈಯಕ್ತಿಕ ಮಾರ್ಗದರ್ಶನ | ಸೇವೆ | ನಿರ್ವಹಣೆ ✆1800 889 1044
ಇಲ್ಲಿ ಕೂಡ ಶಾಪಿಂಗ್ ಮಾಡಿ
reliancedigital.in
SHOP ANY ELECTRONICS AT MY JIO STORE
Jio DIGITAL LIFE
NOW OPEN AT HSR LAYOUT, SECTOR 6, 17TH CROSS
ENHANCED SHOPPING EXPERIENCE AT CUNNINGHAM ROAD
VISIT US AT BANGALORE: • HENNUR ROAD, KOTHANUR • KENGERI SATELLITE TOWN •GT WORLD MALL, MAGADI MAIN ROAD •KR PURAM • BANASWADI • MARATHALLI • MANTRI SQUARE MALL • KORAMANGALA • PHOENIX MARKET CITY • NEXUS SHANTINIKETAN MALL • BROOKEFIELD • KAMMANAHALLI • SAHAKARA NAGAR • OPP. R T NAGAR POLICE STATION • NELAMANGALA • NAGARBHAVI • NEW BEL ROAD • BADAMI HOUSE, JP NAGAR 2ND PHASE • VIJAYANAGAR, TTMC • VIDYARANYAPURA MAIN ROAD • RAJARAJESHWARI NAGAR • MSR ELEMENTS MALL • ORION MALL (RAJAJINAGAR) • BASAWESHWARNAGAR • JAYANAGAR • JP NAGAR • BANNERGHATTA ROAD • BULL TEMPLE ROAD • HOSUR ROAD • KANAKAPURA ROAD • UTTHARAHALLI MAIN ROAD- HOBLI • T DASARAHALLI • NEELADRI ROAD- BEGUR HOBLI • YELAHANKA NEW TOWN • BOMMANAHALLI • INDIRANAGAR (12TH MAIN RD SIGNAL) • SARJAPUR ROAD • ORION UPTOWN- KATAMMNALLUR GATE •BANNERGHATTA ROAD •BELATHUR • CUNNINGHAM ROAD- • FORUM FALCON MALL • KATHRIGUPPE CIRCLE , BANASHANKARI 3RD STAGE • HSR LAYOUT SECTOR 6 DEVANAHALLI MAIN ROAD •DODDABALLAPURA: COLLEGE ROAD • TUMKUR: B H ROAD, OPP BATA SHOWROOM ALSO AT : MYSORE • MANGALORE •SHIVAMOGGA•CHIKKAMAGALURU•KUSHALNAGARA• UDUPI •PUTTUR•DAVANAGERE•HUBLI• DHARWAD•GADAG•HOSPETE• BELLARY • GULBARGA •BIDAR•RAICHUR•BIJAPUR•BELAGAVI | TO LOCATE YOUR NEAREST MYJIO STORE, SMS LOCATE <PINCODE> TO 561611
Unless specified, the retail prices shown are for 1 unit of the product.
Terms & Conditions Apply: General: Offers are on select brands & models only. Product visuals are for representational purpose only. Offers valid till stocks last. MRP of all products is inclusive of all taxes. *Up to Rs 10,000 Instant Discount- ICICI Bank - Up to Rs 10,000 Discount with ICICI Bank Credit & Debit Cards. For purchase of Rs 10,000 & above, Flat Rs 750 discount for Debit Card Full swipe transactions, 10% discount up to Rs 1,500 for Credit Card Full swipe transactions & 10% discount up to Rs 2,000 for EMI transactions. For purchase of Rs 40,000 & above, Flat Rs 1,500 discount for Debit Card Full swipe transactions, Flat Rs 3,000 discount for Credit Card Full swipe transactions & Flat 4,000 discount for EMI transactions. For purchase of Rs 70,000 & above, Flat Rs 2,000 discount for Debit Card Full swipe transactions, Flat Rs 5,000 discount for Credit Card Full swipe transactions & Flat 7,000 discount for EMI transactions. For purchase of Rs 1,00,000 & above, Flat Rs 3,000 discount for Debit Card Full swipe transactions, Flat Rs 7,000 discount for Credit Card Full swipe transactions & Flat 10,000 discount for EMI transactions. Offer is applicable at Reliance Digital, My Jio Stores and reliancedigital.in from 19th October 2023 to 24th October 2023. *Up to Rs 10,000 Cashback - HDFC Bank Consumer Loans- Up to Rs 10,000 Cashback with HDFC Bank Consumer Loans on purchase of Rs 20,000 & above. Offer applicable at Reliance Digital & My Jio Stores from 13th October 2023 to 15th November 2023. *Up to Rs 1,000 Cashback - Paytm Wallet- Up to Rs 1,000 Cashback on purchase of Rs 7,499 & above. Minimum assured Cashback of Rs 350. Offer is applicable at Reliance Digital & My Jio Stores from 14th October 2023 to 24th October 2023. *Ajio voucher worth Rs.2000: Shop on Ajio till 31st December 2023 and use this coupon to get Flat Rs 1000 off on min transaction of Rs 4999. Offer cannot be clubbed with any other promotion. Offers valid on purchase of select brands / products only. Please visit the website/store and read the detailed T&Cs. Reliance Retail reserves its right to amend, withdraw/modify the offers at any point of time without any notice. Finance: Offer wherever applicable is at the sole discretion of the financing company. Brand Offers: Offers applicable on brands are sole discretion of the respective brands. *GST will be applicable on all the FREE products. All disputes are subject to the exclusive jurisdiction of the courts in Mumbai only.

HONDA
THIS SEASON WANNA HAVE FUN?
With H-Smart Technology
Average Mileage
Real-Time Mileage
Distance to Empty
Intelligent Meter
Dio 110
Smart Key with H-Smart Technology | Sporty Look | Alloy Wheels
Dio 125
Powerful Muffler Sound | Sporty Look | Alloy Wheels and Wave Disc Brake
BOOK ONLINE NOW!
www.honda2wheelersindia.com
SUPER 6 OFFERS*
Low ROI @ 6.99%
No Cost EMI
Cashback Upto ₹5000
Down Payment ₹0
100 Pe100
No Hypothecation
1. Connect earphones
2. Scan QR code
3. Enjoy the video
To Know More, WhatsApp or missed call on 7230032200 or scan the QR Code
CLICK BOOK RELAX
Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; Website: www.honda2wheelersindia.com; Customer Care: customercare@honda2wheelersindia.com
*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.
Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 08025139199, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397, 080-43333330; Haiku Honda - DOMLUR: 49656565, 9342432156; INDIRANAGAR: 9844478636; Dhruvdesh Honda - MEKHRI CIRCLE: 40500700, 9343968413; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 9844502222, 9844726973; BANSHANKARI: 9844502444, 8722279009; R.R. NAGAR: 9964388333, 9071175200; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BG ROAD: 8553004004; KKP ROAD: 8553004002; PUTTENHALLI: 7353251007; GOTTIGERE: 8553004009; BTM: 7353252007; VFM Honda - KR PURAM: 9071858885, 9071858881; HENNUR ROAD: 9108989817, 9108989818; Tansi Honda - HOODI: 7259030091, 9741410101; MARTHAHALLI: 7259030100, 7259030093; VARTHUR RD: 8105597877, 9686573013; GUNJUR: 9606450642, 9606450643; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 9900092115; MULBAGAL: 9008941044; SRINIVASAPUR: 8495956515; BANGARPET - 9980607661; Namma Honda - CHIKKABALLAPUR: 9606060610, 9611996114; CHINTAMANI: 9606060620, 9611996115; BAGEPALLI: 9611596112, 9611596110; Shankar Honda - GOWRIBIDANUR: 9900007422/33; SIDLAGHATTA: 9611596113; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030, 9606036040; KANAKAPURA: 9606036053, 9606036054; CHANNAPATNA: 9606490034, 9035717953; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 7899870207.
For Bulk/Institutional enquiries, please write us at: institutionalsales@honda2wheelersindia.com

ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ • ಬ್ಲ್ಯಾಂಕ್ ಚೆಕ್ ನೀಡಿ ಸಿ.ಎಂ ಆದವರು ಎಂದು ವ್ಯಂಗ್ಯ

ಡಿಕೆಶಿ ಬೆಂಬಲಕ್ಕೆ 70 ಶಾಸಕರು, ಸಿ.ಎಂ ಪರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಕ್ಕೆ 70 ಶಾಸಕರಿದ್ದರೆ ನಿಮ್ಮ ಬೆಂಬಲಕ್ಕೆ ಎಷ್ಟು ಶಾಸಕರಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬಿಜೆಪಿ ಪ್ರಶ್ನಿಸಿದೆ.

'ಇದನ್ನು ಹೇಳುತ್ತಿರುವುದು ನಾವಲ್ಲ. ನಿಮ್ಮದೇ ಪಕ್ಷದ ಶಾಸಕ ಚನ್ನಗಿರಿಯ ಶಿವಗಂಗಾ' ಎಂದು ಬಿಜೆಪಿ 'ಎಕ್ಸ್' (ಟ್ವೀಟ್) ಮಾಡಿದೆ.

'135 ರಲ್ಲಿ 70 ಜನ ಡಿ.ಕೆ ಬೆಂಬಲಿಗರಾದರೆ ನಿಮ್ಮ ಬೆಂಬಲಿಗರ ಸಂಖ್ಯೆ ಎಷ್ಟು? ಇದನ್ನೆಲ್ಲಾ ಗಮನಿಸಿದರೆ, ನೀವು ಶಾಸಕರ ಆಯ್ಕೆಯಿಂದ ಆದ ಸಿಎಂ ಅಲ್ಲ. ಬದಲಿಗೆ ಹೈಕಮಾಂಡ್‌ಗೆ ಬ್ಲ್ಯಾಕ್ ಮೇಲ್ ಮಾಡಿ ಅಥವಾ ಬ್ಲ್ಯಾಂಕ್ ಚೆಕ್ ನೀಡಿ ಸಿಎಂ ಆದವರು ಎಂಬುದಂತು ಸ್ಪಷ್ಟ' ಎಂದು ವ್ಯಂಗ್ಯವಾಡಿದೆ.

ಡಿಕೆಶಿಗೆ ಐಟಿ ಕುಣಿಕೆ: ಡಿ.ಕೆ. ಶಿವಕುಮಾರ್ ಅವರು ತೆಲಂಗಾಣ ಚುನಾವಣೆಗೆ ಹಣ ಕಳುಹಿಸಿ ಹೊರ ರಾಜ್ಯದಲ್ಲಿ ಮತ್ತೊಮ್ಮೆ ತೆರಿಗೆ ಇಲಾಖೆಯ ಕುಣಿಕೆಗೆ ಬಿದ್ದಿದ್ದಾರೆ ಬಿಜೆಪಿ ಕುಟುಕಿದೆ.

ತೆಲಂಗಾಣದಲ್ಲಿ ಡಿ.ಕೆ.ಶಿವಕುಮಾರ್ ಆಪ್ತರ ಮನೆಯ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿ ನಗದು ವಶಪಡಿಸಿಕೊಂಡ ಬೆನ್ನಲ್ಲೇ ಎಕ್ಸ್ (ಟ್ವೀಟ್) ಮಾಡಿರುವ ರಾಜ್ಯ ಬಿಜೆಪಿ, ತೆಲಂಗಾಣ ಚುನಾವಣೆ ಉಸ್ತುವಾರಿ ಹೊತ್ತಿರುವ ಡಿ.ಕೆ.ಸಾಹೇಬರು ಕಳೆದ ಒಂದು ವಾರದಿಂದ ತಲೆಬಿಸಿ ಮಾಡಿಕೊಂಡು ಓಡಾಡುತ್ತಿದ್ದಾರೆ. ಈಗ ಮತ್ತೊಂದು ಆಘಾತ ಎಂದು ವ್ಯಂಗ್ಯವಾಡಿದೆ.

'ಕಲೆಕ್ಷನ್ ಮಾಸ್ಟರ್‌ಗಳಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಹೊರ ರಾಜ್ಯಗಳಿಗೆ ಹಣ ಕಳುಹಿಸಲು ಸ್ಪರ್ಧೆಗೆ ಬಿದ್ದು ಜನರ ಮುಂದೆ ಬೆತ್ತಲಾಗಿದ್ದಾರೆ. ಸಿದ್ದರಾಮಯ್ಯ ಅವರು ಆಪ್ತ ಗುತ್ತಿಗೆದಾರ ಅಂಬಿಕಾಪತಿ ಮನೆಯ ಮಂಚದ ಕೆಳಗೆ ರಾಶಿ ರಾಶಿ ಹಣವಿಟ್ಟು ಸಿಕ್ಕಿಬಿದ್ದಿದ್ದರು' ಎಂದು ಹೇಳಿದೆ.

ಸಚಿವೆ ಲಕ್ಷ್ಮಿ ಅವರನ್ನು ಹುಡುಕಿಕೊಡಿ



'ಗೃಹಲಕ್ಷ್ಮಿ ಗ್ಯಾರಂಟಿ ಯೋಜನೆಯಡಿ ಮಹಿಳೆಯರಿಗೆ ಹಣ ಕೊಡದೇ ವಂಚಿಸಿ, ಗೃಹಲಕ್ಷ್ಮಿಯರ ಕಿವಿ ಮೇಲೆ ಹೂವಿಟ್ಟು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಕಾಣೆಯಾಗಿದ್ದಾರೆ. ದಯವಿಟ್ಟು ಅವರನ್ನು ಹುಡುಕಿಕೊಡಿ' ಎಂದು ಬಿಜೆಪಿ ಪೋಸ್ಟರ್‌ವೊಂದನ್ನು ಬಿಡುಗಡೆ ಮಾಡಿದೆ.

ಮನೆಯೊಂದು ನಾಲ್ಕು ಬಾಗಿಲು

'ಕಾಂಗ್ರೆಸ್‌ನಲ್ಲಿ ಮನೆಯೊಂದು ನಾಲ್ಕು ಬಾಗಿಲು ಆಗಿದೆ. ಮರ್ಯಾದೆ–ಮುಜುಗರ ಇವುಗಳನ್ನು ಮೂಟೆ ಕಟ್ಟಿಟ್ಟ ನಂತರವೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೆಳಗಾವಿ ರಾಜಕಾರಣಕ್ಕೆ ಕೈ ಹಾಕಿದ್ದಾರೆ. ಇದು ನಮ್ಮ ಆರೋಪವಲ್ಲ. ಕಾಂಗ್ರೆಸಿಗರೇ ಒಪ್ಪಿಕೊಂಡಿರುವ ಸತ್ಯ' ಎಂದು ಬಿಜೆಪಿ ಹೇಳಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ನೇಮಕ ಶೀಘ್ರ

ಬೆಂಗಳೂರು: ಬಿಜೆಪಿ ರಾಜ್ಯ ಘಟಕಕ್ಕೆ ಇನ್ನು ಕೆಲವೇ ದಿನಗಳಲ್ಲಿ ಅಧ್ಯಕ್ಷರು ನೇಮಕಗೊಳ್ಳುವ ಸಾಧ್ಯತೆ ಇದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೆಸರು ಮುನ್ನೆಲೆಗೆ ಬಂದಿದೆ.

'ನೂತನ ಅಧ್ಯಕ್ಷರ ನೇಮಕ ಆಗದ ಕಾರಣ ಪಕ್ಷದ ಸಂಘಟನೆಯೂ ಬಹುತೇಕ ನಿಷ್ಕ್ರಿಯವಾಗಿದೆ. ಹಲವು ಹಿರಿಯ ನಾಯಕರು, ಕಾರ್ಯಕರ್ತರು ಈ ಬಗ್ಗೆ ಬಹಿರಂಗವಾಗಿ ಪ್ರಶ್ನಿಸಲಾರಂಭಿಸಿದ್ದಾರೆ. ಅಲ್ಲದೇ, ಕೆಲವು ಮಾಜಿ ಶಾಸಕರು ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಸೇರುತ್ತಿದ್ದಾರೆ. ಇವೆಲ್ಲ ವಿದ್ಯಮಾನಗಳನ್ನು ಬಿಜೆಪಿ ವರಿಷ್ಠರು ಗಂಭೀರವಾಗಿ ತೆಗೆದುಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ವಿಧಾನಸಭೆ ಮತ್ತು ಪರಿಷತ್‌ಗೂ ವಿರೋಧ ಪಕ್ಷದ ನಾಯಕರ ಆಯ್ಕೆಯೂ ಆಗಬೇಕಾಗಿದೆ. ಮೊದಲಿಗೆ ಪಕ್ಷದ ಅಧ್ಯಕ್ಷರ ನೇಮಕ ಆಗಲಿದ್ದು, ಆ ಬಳಿಕ ವಿರೋಧ ಪಕ್ಷದ ನಾಯಕರ ನೇಮಕದ ಕಸರತ್ತಿಗೆ ಕೈಹಾಕಬಹುದು. ಶಾಸಕ ಬಸವರಾಜ ಬೊಮ್ಮಾಯಿ ಅವರು ಬೈಪಾಸ್ ಸರ್ಜರಿಗೆ ಒಳಗಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಬೊಮ್ಮಾಯಿ ಅವರನ್ನೇ ಮಾಡುವುದಾದರೆ ನೇಮಕ ಮುಂದೂಡಬಹುದು' ಎಂದು ಮೂಲಗಳು ತಿಳಿಸಿವೆ.

'ಯಡಿಯೂರಪ್ಪ ತಮ್ಮ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು ಅಧ್ಯಕ್ಷ ಮಾಡುವ ಬಗ್ಗೆ ಒತ್ತಡ ಹೇರಿದ್ದರು. ಆದರೆ, ಅದು ಸಾಧ್ಯವಿಲ್ಲದ ಮಾತು ಎಂದು ವರಿಷ್ಠರು ಖಚಿತವಾಗಿ ಹೇಳಿದ್ದೂ ಅಲ್ಲದೇ, ಸ್ವತಃ ವಿಜಯೇಂದ್ರ ಅವರಿಗೂ ಹೈಕಮಾಂಡ್ ತಿಳಿಸಿದೆ. ಆದರೆ, ಬಿಎಸ್‌ವೈ ವಿಶ್ವಾಸ ಗಳಿಸದೇ ಲೋಕಸಭೆಯಲ್ಲೂ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವುದು ಕಷ್ಟವಾಗಬಹುದು ಎಂಬ ಕಾರಣಕ್ಕೆ ಶೋಭಾ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸುವ ಬಗ್ಗೆ ವರಿಷ್ಠರು ಚಿಂತನೆ ನಡೆಸಿದ್ದಾರೆ.

ಶೋಭಾ ಕರಂದ್ಲಾಜೆ

ಇದನ್ನು ಯಡಿಯೂರಪ್ಪ ವಿರೋಧಿಸುವುದಿಲ್ಲ' ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಈ ಮಧ್ಯೆ ಸಂಸದ ಡಿ.ವಿ.ಸದಾನಂದಗೌಡ ಅವರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ದೆಹಲಿಗೆ ಬರುವಂತೆ ಸೂಚಿಸಿದ್ದಾರೆ. ಪಕ್ಷದ ರಾಜ್ಯ ಘಟಕದ ವಿದ್ಯಮಾನಗಳ ಬಗ್ಗೆ ಸದಾನಂದಗೌಡ ನೀಡಿದ್ದ ಮೊನಚಾದ ಹೇಳಿಕೆಗಳು ಪಕ್ಷವನ್ನು ಇಕ್ಕಟಿಗೆ ಸಿಲುಕಿಸಿದೆ.

ಟಗರು ಕಾಳಗ

ಹುಬ್ಬಳ್ಳಿ ದಸರಾ ಉತ್ಸವ ಸಮಿತಿ ನವರಾತ್ರಿ ಪ್ರಯುಕ್ತ ಹುಬ್ಬಳ್ಳಿಯ ಕಮರಿಪೇಟೆಯಲ್ಲಿ ಭಾನುವಾರ ಏರ್ಪಡಿಸಿದ್ದ 'ಟಗರು ಕಾಳಗ'ದ ದೃಶ್ಯ

–ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಬಿಜೆಪಿ ಟಿಕೆಟ್ ಭರವಸೆ ₹2 ಕೋಟಿ ವಂಚನೆ?

ಪ್ರಜಾವಾಣಿ ವಾರ್ತೆ

ಕೊಟ್ಟೂರು (ವಿಜಯನಗರ ಜಿಲ್ಲೆ): ವಿಧಾನಸಭೆ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿ ಮೀಸಲು ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆಕಾಂಕ್ಷಿಯಿಂದ ಅದೇ ಪಕ್ಷದ ಮುಖಂಡರೊಬ್ಬರು ₹ 2.03 ಕೋಟಿ ಹಣ ಪಡೆದು ವಂಚಿಸಿರುವ ಬಗ್ಗೆ ಇಲ್ಲಿಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಬಿಜೆಪಿ ಮುಖಂಡ ರೇವಣಸಿದ್ದಪ್ಪ ತಮಗೆ ಮೋಸ ಮಾಡಿದ್ದಾರೆ' ಎಂದು ಲೋಕೋಪಯೋಗಿ ಇಲಾಖೆ ನಿವೃತ್ತ ಸಹಾಯಕ ಎಂಜಿನಿಯರ್ ಸಿ. ಶಿವಮೂರ್ತಿ ದೂರು ನೀಡಿದ್ದಾರೆ.

'ಬಿಜೆಪಿ ಮುಖಂಡರ ಪರಿಚಯವಿದೆ ಎಂದು ಫೋಟೊ ತೋರಿಸಿದ್ದರು. ಬಳಿಕ 2023ರ ಚುನಾವಣೆಗೆ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುತ್ತೇನೆ ಎಂದು ನಂಬಿಸಿದ್ದರು. ನಂತರ ಬೆಂಗಳೂರಿಗೆ ಕರೆದೊಯ್ದು ಹೋಟೆಲ್ ಒಂದರಲ್ಲಿ ಇನ್ನೊಬ್ಬ ಬಿಜೆಪಿ ಮುಖಂಡ ಎನ್.ಪಿ.ಶೇಖರ್ ಅವರನ್ನು ಪರಿಚಯಿಸಿದರು. ಬಳಿಕ ಇಬ್ಬರೂ ಹಂತ ಹಂತವಾಗಿ ₹ 2.03 ಕೋಟಿ ಪಡೆದು ವಂಚಿಸಿದ್ದಾರೆ. ಹಣ ಮರಳಿಸುವಂತೆ ಕೇಳಿದರೆ ನಿನ್ನನ್ನು ಉಳಿಸುವುದಿಲ್ಲ ಎಂದು ಜೀವಬೆದರಿಕೆ ಒಡ್ಡಿದ್ದಾರೆ' ಎಂದು ಶಿವಮೂರ್ತಿ ದೂರಿದ್ದಾರೆ.

ಆರೋಪ ನಿರಾಕರಣೆ: 'ಶಿವಮೂರ್ತಿ ತೇಜೋವಧೆ ಮಾಡುತ್ತಿದ್ದಾರೆ. ಈ ವಿಚಾರ ಕುರಿತಂತೆ ಈಗಾಗಲೇ ಅವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿರುವೆ. ಯಾವುದೇ ಬಗೆಯ ವಂಚನೆ ಶಿವಮೂರ್ತಿಗೆ ನಮ್ಮಿಂದ ಆಗಿಲ್ಲ' ಎಂದು ರೇವಣಸಿದ್ದಪ್ಪ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ತನಿಖೆ ಆರಂಭವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ಶ್ರೀಹರಿಬಾಬು ಬಿ.ಎಲ್. ತಿಳಿಸಿದ್ದಾರೆ.

ಬಿಜೆಪಿಗೆ ಮತ್ತೆ ಮುಜುಗರ: ಈಚೆಗಷ್ಟೆ ಹೂವಿನಹಡಗಲಿ ತಾಲ್ಲೂಕಿನ ಹಿರೇಹಡಗಲಿಯ ಅಭಿನವಶ್ರೀ ಹಾಲ ವೀರಪ್ಪ ಸ್ವಾಮೀಜಿ ಅವರು ಉದ್ಯಮಿಯೊಬ್ಬರಿಗೆ ಟಿಕೆಟ್ ಕೊಡಿಸುವುದಾಗಿ ಹಣ ಪಡೆದು ವಂಚನೆ ಮಾಡಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

5 ತಿಂಗಳ ಬಳಿಕ ದೂರು

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ವಿಧಾನಸಭೆ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರದಿಂದ 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ'ದಿಂದ ಸ್ಪರ್ಧಿಸಿದ್ದ ಸಿ.ಶಿವಮೂರ್ತಿ, ಐದು ತಿಂಗಳ ಬಳಿಕ ಬಿಜೆಪಿ ವಿರುದ್ಧ ದೂರು ನೀಡಿದ್ದಾರೆ.

ತಾಲ್ಲೂಕಿನ ಹನಸಿ ಗ್ರಾಮದವರಾದ ಶಿವಮೂರ್ತಿ ಹೂವಿನಹಡಗಲಿಯ ಪಿಡಬ್ಲ್ಯುಡಿ ಇಇ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದರು. ನಾಮಪತ್ರ ಸಲ್ಲಿಸಿದ್ದಾಗ ಶಿವಮೂರ್ತಿ ಅವರು ₹22 ಲಕ್ಷ ನಗದು, ₹ 6.50 ಲಕ್ಷದ ಕಾರು, ₹12.50 ಲಕ್ಷದ ಆಭರಣ, ಕೊಟ್ಟೂರಿನಲ್ಲಿ ₹2.50 ಕೋಟಿ ಮೌಲ್ಯದ ನಿವೇಶನ, ₹25 ಲಕ್ಷ ಸಾಲ, ಪಿಂಚಣಿ, ವಾರ್ಷಿಕ ₹5.50 ಲಕ್ಷ ಕೃಷಿ ಆದಾಯ ಘೋಷಿಸಿಕೊಂಡಿದ್ದರು.

ವೀರೇಂದ್ರ ಹೆಗ್ಗಡೆ ಪಟ್ಟಾಭಿಷೇಕ ವರ್ಧಂತಿ ನಾಳೆ

ಪ್ರಜಾವಾಣಿ ವಾರ್ತೆ

ಉಜಿರೆ: ಧರ್ಮಸ್ಥಳದ 21ನೇ ಧರ್ಮಾಧಿಕಾರಿಯಾಗಿ ಡಿ.ವೀರೇಂದ್ರ ಹೆಗ್ಗಡೆ ಅವರು ಪಟ್ಟಾಭಿಷಿಕ್ತರಾದ 56ನೇ ವರ್ಧಂತಿ ಉತ್ಸವ ಮಂಗಳವಾರ (ಅ. 24) ನಡೆಯಲಿದೆ.

1968ರ ಅ.24ರಂದು ಧರ್ಮಸ್ಥಳದ ನೆಲ್ಯಾಡಿ ಬೀಡಿನಲ್ಲಿ (ಹೆಗ್ಗಡೆಯವರ ಮೂಲ ನಿವಾಸ) 21ನೇ ವಯಸ್ಸಿನಲ್ಲಿ ಅವರ ಪಟ್ಟಾಭಿಷೇಕ ನಡೆದಿತ್ತು. ಧರ್ಮಸ್ಥಳದಲ್ಲಿ ಪೂಜೆ, ಉತ್ಸವ ಕಾರ್ಯಗಳ ಜತೆಗೆ ಹಲವು ಸಮಾಜಮುಖಿ ಕಾರ್ಯಗಳನ್ನೂ ಹೆಗ್ಗಡೆ ಪ್ರಾರಂಭಿಸಿದ್ದರು.

ಅ. 24ರಂದು ಹೆಗ್ಗಡೆ ಅವರು ಮಂಜುನಾಥ ಸ್ವಾಮಿ ದೇವಸ್ಥಾನ ಹಾಗೂ ಭಗವಾನ್ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ದೇವರ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸುವರು. ಬಳಿಕ ಅವರ ನಿವಾಸದಲ್ಲಿ ನಾಗರಿಕರು, ಭಕ್ತರಿಂದ ಗೌರವಾರ್ಪಣೆ ನಡೆಯಲಿದೆ. ಸಂಜೆ 5ಕ್ಕೆ ಮಹೋತ್ಸವ ಸಭಾಭವನದಲ್ಲಿ ಅಭಿನಂದನಾ ಸಮಾರಂಭ ನಡೆಯಲಿದೆ.

ಮಗಳ ಕೊಂದ ತಂದೆ ಮರ್ಯಾದೆಗೇಡು ಹತ್ಯೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಬಳಿಯ ನಾಗನಾಥಪುರದಲ್ಲಿ 17 ವರ್ಷದ ಮಗಳನ್ನು ತಂದೆಯೇ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದು, ಮರ್ಯಾದೆಗೇಡು ಹತ್ಯೆ ಶಂಕೆ ವ್ಯಕ್ತವಾಗಿದೆ.

'ಮೈಸೂರು ಜಿಲ್ಲೆಯ ಎಚ್‌.ಡಿ. ಕೋಟೆ ತಾಲ್ಲೂಕಿನ ನಿವಾಸಿಯಾಗಿದ್ದ ಬಾಲಕಿಯನ್ನು ಶನಿವಾರ ಕೊಲೆ ಮಾಡಲಾಗಿದೆ. ಕೃತ್ಯ ಎಸಗಿದ್ದ ಆರೋಪದಡಿ ತಂದೆಯನ್ನು ಬಂಧಿಸಲಾಗಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸುವ ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸಂಬಂಧಿ ಮನೆಯಲ್ಲಿದ್ದ ಬಾಲಕಿ: 'ಎಚ್‌.ಡಿ. ಕೋಟೆ ತಾಲ್ಲೂಕಿನ ಶಾಲೆಯೊಂದರಲ್ಲಿ ಓದುತ್ತಿದ್ದ ಬಾಲಕಿಯನ್ನು ಸ್ಥಳೀಯ ಅನ್ಯ ಜಾತಿಯ ಯುವಕನೊಬ್ಬ ಪರಿಚಯ ಮಾಡಿಕೊಂಡಿದ್ದ. ನಂತರ, ಇಬ್ಬರೂ ಪರಸ್ಪರ ಪ್ರೀತಿಸಲಾರಂಭಿಸಿದ್ದರು. ಈ ಸಂಗತಿ ತಿಳಿದ ಪೋಷಕರು, ಇಬ್ಬರಿಗೂ ಎಚ್ಚರಿಕೆ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಲಕಿ ಪದೇ ಪದೇ ಯುವಕನನ್ನು ಭೇಟಿಯಾಗಲು ಹೋಗುತ್ತಿದ್ದಳು. ಇದರಿಂದ ಬೇಸತ್ತ ತಂದೆ, ಪರಪ್ಪನ ಅಗ್ರಹಾರ ಬಳಿಯ ನಾಗನಾಥಪುರದ ಡಾಕ್ಟರ್ ಬಡಾವಣೆಯಲ್ಲಿರುವ ಸಂಬಂಧಿಯೊಬ್ಬರ ಮನೆಯಲ್ಲಿ ಮಗಳನ್ನು ಬಿಟ್ಟು ಹೋಗಿದ್ದರು. ಸಂಬಂಧಿ ಮನೆಯಲ್ಲಿದ್ದಾಗಲೂ ಬಾಲಕಿ, ಯುವಕನಿಗೆ ಕರೆ ಮಾಡುತ್ತಿದ್ದಳು' ಎಂದು ಮೂಲಗಳು ತಿಳಿಸಿವೆ.

ಯುವಕನ ಜೊತೆ ನಾಪತ್ತೆ: 'ಸಂಬಂಧಿ ಮನೆಯಲ್ಲಿ ಉಳಿದುಕೊಂಡಿದ್ದ ಬಾಲಕಿಯನ್ನು ಸಂಪರ್ಕಿಸಿದ್ದ ಯುವಕ, ಮನೆ ಬಿಟ್ಟು ಹೋಗೋಣವೆಂದು ಹೇಳಿದ್ದ. ಅದರಂತೆ ಅ. 14ರಂದು ಬೆಂಗಳೂರಿಗೆ ಬಂದಿದ್ದ ಯುವಕ, ಬಾಲಕಿ ಕರೆದುಕೊಂಡು ಹೋಗಿದ್ದ. ಬಾಲಕಿ ನಾಪತ್ತೆಯಾದ ಬಗ್ಗೆ ಸಂಬಂಧಿಕರು, ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೊಲೀಸರು, ಅ. 20 ರಂದು ಬಾಲಕಿಯನ್ನು ಪತ್ತೆ ಮಾಡಿ ಠಾಣೆಗೆ ಕರೆತಂದಿದ್ದರು. ನಂತರ ಸಂಬಂಧಿಕರ ಸುಪರ್ದಿಗೆ ವಹಿಸಿದ್ದರು. ಬಾಲಕಿಯನ್ನು ಮನೆಗೆ ಕರೆದೊಯ್ದಿದ್ದ ಸಂಬಂಧಿಕರು, ತಂದೆಗೆ ವಿಷಯ ತಿಳಿಸಿದ್ದರು' ಎಂದು ಮೂಲಗಳು ವಿವರಿಸಿವೆ.

ಮಚ್ಚಿನಿಂದ ಹೊಡೆದು ಹತ್ಯೆ: 'ಬಾಲಕಿಯ ತಂದೆ ಹಾಗೂ ತಾಯಿ, ಎಚ್‌.ಡಿ. ಕೋಟೆಯಿಂದ ಶನಿವಾರ (ಅ. 21) ಬೆಳಿಗ್ಗೆ ಸಂಬಂಧಿಕರ ಮನೆಗೆ ಬಂದಿದ್ದರು. ಯುವಕನ ಜೊತೆ ಹೋಗಿದ್ದಕ್ಕೆ ಮಗಳನ್ನು ತರಾಟೆಗೆ ತೆಗೆದುಕೊಂಡಿದ್ದ ತಂದೆ, 'ಅನ್ಯ ಜಾತಿಯ ಯುವಕನ ಜೊತೆ ಹೋಗಿ ಬಂದಿದ್ದಿಯಾ. ನನ್ನ ಮರ್ಯಾದೆ ತೆಗೆಯುತ್ತಿದ್ದಿಯಾ' ಎಂದು ಬೈದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಂದೆ ಮಗಳ ನಡುವಿನ ಜಗಳ ವಿಕೋಪಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ ತಂದೆ, ಮಚ್ಚಿನಿಂದ ಮಗಳ ದೇಹದ ಹಲವೆಡೆ ಹೊಡೆದಿದ್ದ. ರಕ್ಷಣೆಗೆ ಹೋದ ತಾಯಿ ಹಾಗೂ ಸಂಬಂಧಿಕರ ಮೇಲೂ ಮಚ್ಚು ಬೀಸಿದ್ದ. ತೀವ್ರ ರಕ್ತಸ್ರಾವದಿಂದ ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ತಾಯಿ ಹಾಗೂ ಸಂಬಂಧಿಕರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ತಿಳಿಸಿವೆ.

'ಕಾವೇರಿ: ಪ್ರಧಾನಿ ಮಧ್ಯಪ್ರವೇಶಿಸಲಿ'

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): 'ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸಂಕಷ್ಟ ಸನ್ನಿವೇಶ ಎದುರಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಮಧ್ಯಪ್ರವೇಶಿಸಿ ಎರಡು ರಾಜ್ಯಗಳ ನಡುವೆ ಮಾತುಕತೆ ನಡೆಸಬೇಕು' ಎಂದು ನಟ ಶಿವರಾಜಕುಮಾರ್ ಮನವಿ ಮಾಡಿದರು.

ತಾಲ್ಲೂಕಿನ ವಳೆಗೆರೆಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿದರೆ ಮಾತ್ರ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದು ಅಭಿಪ್ರಾಯಪಟ್ಟರು.

'ಕಾವೇರಿ ವಿಚಾರದಲ್ಲಿ ರೈತರ ಪರ ಸದಾ ಕಾಲ ನಿಲ್ಲುತ್ತೇವೆ. ಹೋರಾಟದ ಮೂಲಕ ಆಳುವ ಸರ್ಕಾರದ ಮೇಲೆ ಒತ್ತಡ ತರಬೇಕು. ಯಾವ ರೀತಿ ಒತ್ತಡ ತರಬೇಕು ಎಂಬ ಬಗ್ಗೆ ಎಲ್ಲರೂ ಚರ್ಚಿಸಿ ತೀರ್ಮಾನಿಸಿದರೆ ಒಳ್ಳೆಯದು. ಕನ್ನಡಿಗರ ಹೋರಾಟ ದೊಡ್ಡ ಮಟ್ಟದಾಗಿರಬೇಕು. ಬೆಂಕಿ ಹಚ್ಚಿ ಆಕ್ರೋಶ ಮಾಡುವುದಲ್ಲ. ಎಲ್ಲರಿಗೂ ಕಿಚ್ಚು ಇರುತ್ತದೆ; ತಾಳ್ಮೆಯಿಂದ ಹೋರಾಟ ಮಾಡಬೇಕು' ಎಂದು ಹೇಳಿದರು.

ಶಿವರಾಜ್ ಕುಮಾರ್

'ನಾನೊಬ್ಬ ಕಲಾವಿದ. ಹಿರಿಯರೆಲ್ಲ ಒಗ್ಗೂಡಿ ರೈತರ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು' ಎಂದರು.

'ನಾನು ರಾಜಕೀಯಕ್ಕೆ ಬರುವುದಿಲ್ಲ. ಸಿನಿಮಾ ಕ್ಷೇತ್ರದಲ್ಲಿ ಸಂತೃಪ್ತಿ ಇದೆ. ಪತ್ನಿ ಗೀತಾ ಶಿವರಾಜ್ ಕುಮಾರ್ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದಾರೆ. ಅವರೊಂದಿಗೆ ನಾನಿರುತ್ತೇನೆ' ಎಂದು ಪ್ರತಿಕ್ರಿಯಿಸಿದರು.

SAD DEMISE

With profound grief and sorrow,
We announce the
sad demise of

SHRI DODDABALLAPURA
NARAYANRAO
GOPALAKRISHNA

05.02.1934 - 22.10.2023

Deeply Mourned by:
Wife - Smt. Rathna Gopalakrishna
and Daughters
Son - Shri G. Prashanth Narayan
& Family and Loved Ones.
LAKSHMINARAYANA MINING COMPANY, Bangalore
LAKSHMINARAYANA ENTERPRISES, Bangalore
LAKSHMINARAYANA ASSOCIATES, Bangalore
SUCHITRA and PRABHAT THEATRES, Mangalore

ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ 'ರ್‍ಯಾಡ್‌ಸ್ವಾ' ತಂತ್ರಾಂಶ ಬಳಕೆ

ಸಿಟಿ ಸ್ಕ್ಯಾನ್, ಎಕ್ಸ್‌–ರೇಗೆ ಎಐ ತಂತ್ರಜ್ಞಾನ

• ವರುಣ ಹೆಗಡೆ

ಬೆಂಗಳೂರು: ಎಕ್ಸ್‌–ರೇ, ಸಿಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸ್ಕ್ಯಾನ್ ಮಾಡಿಸಿಕೊಂಡ ಬಳಿಕ ರೋಗಿಗಳು ವರದಿಗಾಗಿ ಕಾಯುವುದನ್ನು ತಪ್ಪಿಸಲು ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಾಂಶ ಅಳವಡಿಸಿಕೊಂಡಿದೆ. ಇದರಿಂದಾಗಿ ವೈದ್ಯರಿಗೆ ನೇರವಾಗಿ ಪರೀಕ್ಷಾ ವರದಿಗಳು ಲಭ್ಯವಾಗಲಿವೆ.

ಈ ವ್ಯವಸ್ಥೆಗೆ ಆಸ್ಪತ್ರೆಯು 'ರ್‍ಯಾಡ್‌ಸ್ವಾ' ಎನ್ನುವ ತಂತ್ರಾಂಶವನ್ನು ಬಳಸಿಕೊಂಡಿದೆ. ಟೆಲೆರಾಡ್ ಟೆಕ್ ಎಂಬ ಸಂಸ್ಥೆ ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಈ ತಂತ್ರಾಂಶವನ್ನು ನೀಡಿದೆ. ₹ 60 ಲಕ್ಷ ಮೌಲ್ಯದ ಈ ತಂತ್ರಾಂಶವನ್ನು ತಾಂತ್ರಿಕ ಬೆಂಬಲದೊಂದಿಗೆ 5 ವರ್ಷಗಳು ಸಂಸ್ಥೆಯೇ ನಿರ್ವಹಣೆ ಮಾಡಲಿದೆ. ತ್ವರಿತವಾಗಿ ಪರೀಕ್ಷೆ ವರದಿ ಪಡೆಯಲು ಈ ತಂತ್ರಾಂಶ ಸಹಕಾರಿಯಾಗಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವಿನಿಂದ

ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ

ಪ್ರಜಾವಾಣಿ ವಿಶೇಷ

ವರದಿಯ ವಿಶ್ಲೇಷಣೆಯೂ ನಡೆಯುತ್ತದೆ. ಇದರಿಂದ ನಿಖರ ಫಲಿತಾಂಶ ಸಾಧ್ಯವಾಗಿದೆ. ವೈದ್ಯರು ಕೂಡ ತಮ್ಮ ಲ್ಯಾಪ್‌ಟಾಪ್, ಕಂಪ್ಯೂಟರ್ ಗಳಲ್ಲಿಯೇ ವರದಿ ಪರಿಶೀಲಿಸಬಹುದಾಗಿದೆ.

ಈ ಮೊದಲಿನ ವ್ಯವಸ್ಥೆಯಲ್ಲಿ ಎಕ್ಸ್‌–ರೇ, ಸಿಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸ್ಕ್ಯಾನ್‌ಗೆ ಒಳಗಾದವರು ವಿಕಿರಣ ತಜ್ಞರು ವರದಿ ನೀಡುವವರೆಗೆ ಕಾದು, ಅದನ್ನು ಸಂಬಂಧಪಟ್ಟ ವೈದ್ಯರ ಬಳಿಗೆ ಕೊಂಡೊಯ್ಯಬೇಕಾಗಿತ್ತು. ಈ ಪ್ರಕ್ರಿಯೆಗೆ ಅರ್ಧ ದಿನ ಹಿಡಿಯುತ್ತಿತ್ತು. ವಿಕಿರಣ ತಜ್ಞರು ಹಾಗೂ ವೈದ್ಯರಿಗೂ ವರದಿಯನ್ನು ವಿಶ್ಲೇಷಣೆಗೆ ಒಳಪಡಿಸಲು ಸಮಯ ಹಿಡಿಯುತ್ತಿತ್ತು. ನೂತನ ತಂತ್ರಾಂಶದ ಅಳವಡಿಕೆಯಿಂದಾಗಿ ಈ ಪ್ರಕ್ರಿಯೆ ಸುಲಭವಾಗಿದೆ.

ಟೆಲಿ ರೇಡಿಯಾಲಜಿ ಸೇವೆ: ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ 500 ಹಾಸಿಗೆಗಳಿವೆ. ಇದರಲ್ಲಿ 300 ಹಾಸಿಗೆಗಳನ್ನು ಮಕ್ಕಳ ಚಿಕಿತ್ಸೆಗೆ, 150 ಹಾಸಿಗೆಗಳನ್ನು ಶಸ್ತ್ರಚಿಕಿತ್ಸೆಗೆ ಹಾಗೂ ಉಳಿದ ಹಾಸಿಗೆಗಳನ್ನು ತಾಯಂದಿರ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ನಿತ್ಯ 500ರಿಂದ 600 ಹೊರರೋಗಿಗಳು ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. 60ರಿಂದ 70 ಒಳರೋಗಿಗಳು, 15ರಿಂದ 20 ತುರ್ತು ಚಿಕಿತ್ಸಾ ಪ್ರಕರಣಗಳು ದಾಖಲಾಗುತ್ತಿವೆ. ಇದರಿಂದಾಗಿ ಈ ಮೊದಲು ಎಕ್ಸ್‌–ರೇ, ಸಿಟಿ ಸ್ಕ್ಯಾನ್ ನಂತಹ ಪರೀಕ್ಷೆಗಳಿಗೆ ಹೆಚ್ಚಿನ ಅವಧಿ ಕಾಯಬೇಕಾಗಿತ್ತು.

23 ದೇಶದ ಆಸ್ಪತ್ರೆಗಳಿಗೆ ಟೆಲೆರಾಡ್ ಟೆಕ್ ಸಂಸ್ಥೆಯು ಟೆಲಿ ರೇಡಿಯಾಲಜಿ ಸೇವೆ ನೀಡುತ್ತಿದೆ. ಎಕ್ಸ್‌–ರೇ, ಸಿಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸ್ಕ್ಯಾನ್ ವರದಿ ತಂತ್ರಾಂಶದಲ್ಲಿ ಅಪ್ಲೋಡ್ ಆದ ಬಳಿಕ ವಿಶ್ಲೇಷಣೆ ಪ್ರಕ್ರಿಯೆ ನಡೆಯಲಿದೆ. ವರದಿಗಳು ದೀರ್ಘಕಾಲ ಉಳಿಯಲಿವೆ. ಈ ವ್ಯವಸ್ಥೆ ರಾಜ್ಯದ ಬೇರೆ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಇಲ್ಲ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಮಕ್ಕಳಿಗೆ ಪ್ರತ್ಯೇಕ ಕಸಿ ಕೇಂದ್ರ

ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ಆವರಣದಲ್ಲಿ ಮಕ್ಕಳಿಗೆ ಅಂಗಾಂಗ ಕಸಿ ನಡೆಸಲು ಪ್ರತ್ಯೇಕ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. 11 ಮಹಡಿಯ ಕಟ್ಟಡವು 500 ಹಾಸಿಗೆಗಳನ್ನು ಒಳಗೊಂಡಿರಲಿದೆ. ಕಟ್ಟಡ ನಿರ್ಮಾಣ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಮುಂದಿನ ವರ್ಷ ಕಾರ್ಯಾರಂಭಿಸಲಿದೆ. ಕಸಿ ನಡೆಸಲು ಬೇಕಾದ ವೈದ್ಯಕೀಯ ಉಪಕರಣಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ಟೆಲಿ ರೇಡಿಯಾಲಜಿ ವ್ಯವಸ್ಥೆ ಅಳವಡಿಕೆಯಿಂದ ವೈದ್ಯರು ಎಲ್ಲಿಯಾದರೂ, ಯಾವಾಗ ಬೇಕಾದರೂ ವರದಿ ಪರಿಶೀಲಿಸಬಹುದು

ಡಾ. ಸಂಜಯ್ ಕೆ.ಎಸ್., ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ ನಿರ್ದೇಶಕ

ಕಾಮಗಾರಿ ಅಂದಾಜು ಅಧ್ಯಯನಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಕೈಗೆತ್ತಿಕೊಳ್ಳುವ ಕಾಮಗಾರಿಗಳ ಅಂದಾಜುಗಳು ಅನಗತ್ಯವಾಗಿ ಪರಿಷ್ಕೃತಗೊಳ್ಳುವುದನ್ನು ತಡೆಯುವ ಉದ್ದೇಶಕ್ಕಾಗಿ ಸಲಹೆ, ಸೂಚನೆಗಳನ್ನು ಒಳಗೊಂಡ ವರದಿ ಪಡೆಯಲು ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಎಂಜಿನಿಯರ್ ಬಿ. ಗುರುಪ್ರಸಾದ್ ಅಧ್ಯಕ್ಷತೆಯಲ್ಲಿ 'ಕಾಮಗಾರಿ ಅಂದಾಜುಗಳ ತಯಾರಿಕಾ ಅಧ್ಯಯನ ಸಮಿತಿ'ಯನ್ನು ರಾಜ್ಯ ಸರ್ಕಾರ ರಚಿಸಿದೆ.

ಲೋಕೋಪಯೋಗಿ ಇಲಾಖೆಯ ಅಧೀನ ಕಾರ್ಯದರ್ಶಿ (ನಬಾರ್ಡ್) ಕೆ.ಎಸ್. ಹರೀಶ್ ಮತ್ತು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಜಂಟಿ ನಿಯಂತ್ರಕರಾದ ಎಂ.ಎಸ್. ಪದ್ಮಿನಿ ಈ ಸಮಿತಿಯ ಸದಸ್ಯರು.

ಕಾಮಗಾರಿಗಳ ಪರಿಷ್ಕೃತಗೊಳ್ಳುತ್ತಿರುವ ಅಂದಾಜುಗಳಿಗೆ ಸಂಬಂಧಿಸಿದಂತೆ ಕಾಯ್ದೆ, ನಿಯಮಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು, ಇಲಾಖೆಯ ಸಂಹಿತೆಗಳನ್ನು ಸಮಗ್ರವಾಗಿ ಪರಾಮರ್ಶಿಸಿ ಮತ್ತು ಅಧ್ಯಯನ ನಡೆಸಿ ಒಂದು ತಿಂಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸಂಪಗಿರಾಮ ನಗರದಲ್ಲಿರುವ ತೊಗಟವೀರ ಕಲ್ಯಾಣ ಮಂಟಪದಲ್ಲಿ ನವರಾತ್ರಿ ಪ್ರಯುಕ್ತ ದುರ್ಗಾ ದೇವಿಗೆ ಭಾನುವಾರ ವಿಶೇಷ ಪೂಜೆ ಸಲ್ಲಿಸಲಾಯಿತು – ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸಪ್ತಾಹ ಪ್ರಯುಕ್ತ ಎಚ್‌ಸಿಜಿ ಆಸ್ಪತ್ರೆಯಿಂದ ಸೈಕ್ಲೋಥಾನ್

'ಸ್ತ್ರೀಯರಿಗೆ ಕಾಡುವ ಸ್ತನ ಕ್ಯಾನ್ಸರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ, ಧೂಮಪಾನದಂತಹ ವ್ಯಸನ, ವಾಯುಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ನಗರದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಳವಾಗುತ್ತಿದೆ' ಎಂದು ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ ವೈದ್ಯರು ಕಳವಳ ವ್ಯಕ್ತಪಡಿಸಿದರು.

ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಪ್ರಯುಕ್ತ ಆಸ್ಪತ್ರೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ರೈಡ್ ಟು ಬೀಟ್ ಬ್ರೆಸ್ಟ್ ಕ್ಯಾನ್ಸರ್' ಸೈಕ್ಲೋಥಾನ್‌ಗೆ ಚಲನಚಿತ್ರ ನಟಿಯರಾದ ಪ್ರೇಮಾ ಹಾಗೂ ರಂಜನಿ ರಾಘವನ್ ಚಾಲನೆ ನೀಡಿದರು. 400ಕ್ಕೂ ಅಧಿಕ ಸೈಕ್ಲಿಸ್ಟ್‌ಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯರು ಸ್ತನ ಕ್ಯಾನ್ಸರ್ ಬಗ್ಗೆ ಮಾತನಾಡಿದರು.

ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ಮಹೇಶ್ ಬಂಡಿಮೇಗಲ್, 'ಸ್ತನ ಕ್ಯಾನ್ಸರ್ ಭಾರತೀಯ ಮಹಿಳೆಯರಲ್ಲಿ ಅತ್ಯಂತ ಸಾಮಾನ್ಯವಾಗಿದೆ. ಬಹುತೇಕ ಮಹಿಳೆಯರು ಕಾಯಿಲೆ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ಆಸ್ಪತ್ರೆಗೆ ಬರುತ್ತಿದ್ದಾರೆ. ಇದರಿಂದಾಗಿ ಸಮಸ್ಯೆ ಮತ್ತಷ್ಟು ಸಂಕೀರ್ಣವಾಗುತ್ತಿದೆ. ಸ್ವಯಂಪ್ರೇರಿತರಾಗಿ ತಪಾಸಣೆಗೆ ಬರಬೇಕು. ದೈಹಿಕ, ಮಾನಸಿಕ ಮತ್ತು ಆರ್ಥಿಕವಾಗಿ ಈ ಕಾಯಿಲೆ ಘಾಸಿಗೊಳಿಸುತ್ತದೆ. ದೇಶದ ಬಹುತೇಕರಿಗೆ ಕ್ಯಾನ್ಸರ್ ಕಾಯಿಲೆಯ ಬಗ್ಗೆ ಸರಿಯಾದ ತಿಳಿವಳಿಕೆಯಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸ್ತನ ಕ್ಯಾನ್ಸರ್ ಜಾಗೃತಿ ಸೈಕ್ಲೋಥಾನ್‌ಗೆ ನಟಿ ರಂಜನಿ ರಾಘವನ್ ಚಾಲನೆ ನೀಡಿದರು

ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ. ಕೃತಿಕಾ ಮುರುಗನ್, 'ಸ್ತನ ಕ್ಯಾನ್ಸರ್ ವಯಸ್ಸಾದ ಮಹಿಳೆಯರಿಗೆ ಮಾತ್ರ ಸೀಮಿತವಾಗಿರದೆ, ಯುವ ಜನರಲ್ಲಿಯೂ ಕಂಡುಬರುತ್ತಿದೆ. ನಿರಂತರ ತಪಾಸಣೆ ಮತ್ತು ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಿಂದ ಮಾತ್ರ ಕ್ಯಾನ್ಸರ್ ತಡೆಗಟ್ಟಲು ಸಾಧ್ಯ. ಮೂರು ಮತ್ತು ನಾಲ್ಕನೇ ಹಂತದಲ್ಲಿ ಆಸ್ಪತ್ರೆಗಳಿಗೆ ಬಂದಲ್ಲಿ ರೋಗವನ್ನು ಗುಣಪಡಿಸುವುದು ಕಷ್ಟ. ಆದ್ದರಿಂದ ಮಹಿಳೆಯರು ತಮ್ಮನ್ನು ತಾವೇ ಆಗಾಗ ಪರೀಕ್ಷೆಗೆ ಒಳಪಡಿಸಿಕೊಂಡು, ಸಮಸ್ಯೆ ಇದ್ದಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು' ಎಂದು ಹೇಳಿದರು.

ಆಸ್ಪತ್ರೆಯ ಪ್ರಾದೇಶಿಕ ವ್ಯಾಪಾರ ಮುಖ್ಯಸ್ಥರಾದ ಮನೀಶಾ ಕುಮಾರ್, 'ಬಹುತೇಕ ಮಹಿಳೆಯರು ತಮ್ಮ ಆರೋಗ್ಯ ಕಡೆಗಣಿಸುತ್ತಾರೆ. ಇದರಿಂದ ಸಮಸ್ಯೆ ಉಲ್ಬಣವಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸ್ತನ ಕ್ಯಾನ್ಸರ್ ಗುರುತಿಸುವುದು ಚಿಕಿತ್ಸೆಗೂ ಮೀರಿದ ಕಾರ್ಯ' ಎಂದರು.

ಮೈತ್ರಿ ಮರುಪರಿಶೀಲಿಸಲು ಸಿ.ಎಂ.ಇಬ್ರಾಹಿಂ ಮನವಿ

ಪ್ರಜಾವಾಣಿ ವಾರ್ತೆ

ಇಬ್ರಾಹಿಂ

ಬೆಂಗಳೂರು: ‘ಬಿಜೆಪಿ ಜೊತೆಗಿನ ಮೈತ್ರಿ ವಿಚಾರವನ್ನು ಮರು ಪರಿಶೀಲಿಸುವಂತೆ ಎಚ್‌.ಡಿ. ದೇವೇಗೌಡರಿಗೆ ಮತ್ತೊಮ್ಮೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ’ ಎಂದು ಜೆಡಿಎಸ್‌ನ ಮಾಜಿ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜೆಡಿಎಸ್ ಜಿಲ್ಲಾ ಘಟಕಗಳ ಅಧ್ಯಕ್ಷರು, ಶಾಸಕರು ನನ್ನ ಸಂಪರ್ಕದಲ್ಲಿದ್ದಾರೆ. ಯಾರನ್ನೂ ನಾನು ಬಹಿರಂಗವಾಗಿ ಕರೆಯುತ್ತಿಲ್ಲ. ಲೋಕಸಭೆ ಚುನಾವಣೆಗೆ ಇನ್ನೂ ಸಮಯವಿದೆ, ಮಾತನಾಡೋಣ ಎಂದು ಅವರಿಗೆಲ್ಲ ಹೇಳಿದ್ದೇನೆ’ ಎಂದರು.

‘ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಅವರಿಗೆ ಗೌರವ ಕೊಡೋಣ. ಅವರ ಜೊತೆ ವ್ಯಕ್ತಿಗತವಾಗಿ ಯಾವುದೇ ಭಿನ್ನಮತವಿಲ್ಲ. ಸೈದ್ಧಾಂತಿಕವಾಗಿ ವಿರೋಧವಿದೆ’ ಎಂದರು.

‘ಕೇರಳ, ತಮಿಳುನಾಡು, ರಾಜಸ್ಥಾನ ಬಳಿಕ ಕಾರ್ಯಕ್ರಮದ ನಿಮಿತ್ತ ಉದಯಪುರಕ್ಕೆ ಹೋಗುತ್ತಿದ್ದೇನೆ. ಇದೇ 26 ರಂದು ಮುಂಬೈಗೆ ಹೋಗುತ್ತಿದ್ದೇನೆ. ಬೇರೆ ಪಕ್ಷದ ನಾಯಕರನ್ನು ಭೇಟಿ ಮಾಡುತ್ತೇನೆ. ಒಂದೇ ಕಡೆ ಕುಳಿತುಕೊಳ್ಳುವವ ನಾನಲ್ಲ. ನಾನು ತ್ರಿಲೋಕ ಸಂಚಾರಿ’ ಎಂದು ಹೇಳಿದರು.

‘ನೀವು ತಾಂತ್ರಿಕವಾಗಿ, ಮಾನಸಿಕವಾಗಿ ಇನ್ನೂ ಜೆಡಿಎಸ್‌ನಲ್ಲಿ ಇದ್ದೀರಾ’ ಎಂಬ ಪ್ರಶ್ನೆಗೆ, ‘ನೂರಕ್ಕೆ ನೂರರಷ್ಟು ನಾನು ಜೆಡಿಎಸ್‌ನಲ್ಲಿದ್ದೇನೆ. ನಾನೇ ಅದರ ಅಧ್ಯಕ್ಷ. ದೇವೇಗೌಡರು ತಪ್ಪು ಮಾಡಿದ್ದಾರೆ ಎಂದು ನೋವು ಆಗಿಲ್ಲ. ಅದನ್ನು ಸರಿಪಡಿಸಿಕೊಂಡು ಹೋಗಬೇಕಿದೆ. ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಹೋಗಬೇಕಿದೆ’ ಎಂದರು.

‘ರಾಜ್ಯ ಸಮಿತಿ ವಿಸರ್ಜಿಸಲು ಅದೇನು ಕೋಳಿ ಮೊಟ್ಟೆನಾ? ಒಡೆದು ಆಮ್ಲೆಟ್ ಮಾಡಲು. ಚುನಾವಣೆ ಮೂಲಕ ಆಯ್ಕೆ ಆಗಿರುವ ಸಮಿತಿ. ಚುನಾವಣಾ ಆಯೋಗದಲ್ಲಿ ನೋಂದಣಿ ಆಗಿರುವ ಪಕ್ಷ. ನಿಯಮ ಪ್ರಕಾರ ಪಕ್ಷವನ್ನು ನಡೆಸಬೇಕು. ನನ್ನಿಚ್ಛೆ ಪ್ರಕಾರ ಪಕ್ಷ ನಡೆಸಲು ಆಗಲ್ಲ. ಕೋರ್ ಕಮಿಟಿ ಎಚ್‌.ಡಿ ದೇವೇಗೌಡರು ಮಾಡಿದ್ದಲ್ಲ, ನಾನು ಮಾಡಿದ್ದು. ಪದಾಧಿಕಾರಿಗಳನ್ನು ಮಾಡಿದ್ದೂ ನಾನು. ರಾಜ್ಯದಲ್ಲಿ ಜೆಡಿಎಸ್ ಅಧ್ಯಕ್ಷರಿಗೆ ಅಧಿಕಾರ. ಸಂವಿಧಾನಕ್ಕೆ ವಿರುದ್ಧವಾಗಿ ಅಧ್ಯಕ್ಷರು ನಡೆದರೆ ಮೂರಲ್ಲಿ ಎರಡರಷ್ಟು ಬಹುಮತದ ಸದಸ್ಯರಿಂದ ನೋಟಿಸ್ ಕೊಡಬೇಕು. ಸಭೆ ಕರೆದು ಅಧ್ಯಕ್ಷರನ್ನು ತೆಗೆಯಬೇಕಾಗುತ್ತದೆ’ ಎಂದೂ ವಿವರಿಸಿದರು.

‘ಜೆಡಿಎಸ್ ವರಿಷ್ಠರ ವಿರುದ್ಧ ಕೋರ್ಟ್ ಮೊರೆ ಹೋಗುತ್ತೀರಾ’ ಎಂಬ ಪ್ರಶ್ನೆಗೆ, ‘ಇದೇ 26ರ ಬಳಿಕ ನೋಡೋಣ. ಅಲ್ಲಿಯವರೆಗೂ ವರಿಷ್ಠರು ಏನಾದರೂ ತೀರ್ಮಾನ ಮಾಡುತ್ತಾರಾ ನೋಡೋಣ. ದೇವೇಗೌಡರ ಮೇಲೆ ನನಗೆ ವಿಶ್ವಾಸವಿದೆ. ಆದರೆ, ಕುಮಾರಸ್ವಾಮಿ ತೀರ್ಮಾನ ಮಾಡಬೇಕು. ಅವರ ಮೇಲೆ ನನಗೆ ಭರವಸೆ ಇಲ್ಲ’ ಎಂದರು.

ಸುಧಾ, ಮಯೂರ ಓದಿರಿ...

ಬೊಮ್ಮಾಯಿ ಆರೋಗ್ಯ ವಿಚಾರಿಸಿದ ಮೋದಿ

ಬೆಂಗಳೂರು: ಶಸ್ತ್ರಚಿಕಿತ್ಸೆಗೆ ಒಳಗಾಗಿ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಶಾಸಕ ಬಸವರಾಜ ಬೊಮ್ಮಾಯಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ದೂರವಾಣಿ ಕರೆ ಮಾಡಿ ಆರೋಗ್ಯ ವಿಚಾರಿಸಿದರು.

ಈ ಕುರಿತು ‘ಎಕ್ಸ್’ (ಟ್ವೀಟ್) ಮಾಡಿರುವ ಬೊಮ್ಮಾಯಿ, ‘ಶುಭ ಅಷ್ಟಮಿಯ ದಿನ ನನಗೆ ಅಷ್ಟೈಶ್ವರ್ಯ ಒಲಿದ ಸಂಭ್ರಮ. ನನ್ನ ಆರೋಗ್ಯ ಕುಶಲೋಪರಿ ವಿಚಾರಿಸಿದ ದೇಶದ ನೆಚ್ಚಿನ ಪ್ರಧಾನಿಯವರಿಗೆ ತುಂಬು ಹೃದಯದ ಧನ್ಯವಾದಗಳು’ ಎಂದು ಹೇಳಿದ್ದಾರೆ.

ಕಾರ್ಕಳದಲ್ಲಿ ಸ್ಥಾಪಿಸಿದ್ದ ಪರಶುರಾಮನ ಪ್ರತಿಮೆ ಸ್ಥಳಾಂತರ: ಕಂಚಿನದ್ದೇ, ಅಲ್ಲವೇ ಎಂಬ ಚರ್ಚೆ ತಾರಕಕ್ಕೆ

‘ಪ್ರತಿಮೆ ರಾಜಕೀಯ’ ಕೈ, ಕಮಲ ಸಂಘರ್ಷ

● ಬಾಲಚಂದ್ರ ಎಚ್‌.

ಉಡುಪಿ: ಕಾರ್ಕಳ ತಾಲ್ಲೂಕು ಉಮ್ಮಿಕಲ್ ಬೆಟ್ಟದ ಮೇಲೆ ₹2 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ 33 ಅಡಿ ಎತ್ತರದ ಪರಶುರಾಮನ ಪ್ರತಿಮೆ ಕಂಚಿನದ್ದೇ, ಅಲ್ಲವೇ ಎಂಬ ಚರ್ಚೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ.

‘ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಾಗ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಪರಶುರಾಮನ ‘ನಕಲಿ’ ಪ್ರತಿಮೆ ನಿರ್ಮಾಣ ಮಾಡಿ, ಇದೀಗ ಅಪೂರ್ಣ ಕಾಮಗಾರಿ ಹೆಸರಿನಲ್ಲಿ ಪ್ರತಿಮೆಯನ್ನು ಸ್ಥಳಾಂತರಿಸಲಾಗಿದೆ. ಅಸಲಿಗೆ ಪರಶುರಾಮನ ಪ್ರತಿಮೆ ಪೂರ್ಣ ಪ್ರಮಾಣದಲ್ಲಿ ಕಂಚಿನದ್ದಲ್ಲ; ಸೊಂಟದ ಮೇಲ್ಭಾಗ ಫೈಬರ್ ಅಥವಾ ಇತರ ಸಾಮಗ್ರಿಗಳಿಂದ ನಿರ್ಮಾಣ ಮಾಡಲಾಗಿದೆ. ತುಳುನಾಡಿನ ಸೃಷ್ಟಿಕರ್ತನ ಹೆಸರಲ್ಲಿ ಬಿಜೆಪಿ ಧರ್ಮ ರಾಜಕಾರಣ ಮಾಡಿದೆ’ ಎಂಬುದು ಕಾಂಗ್ರೆಸ್ ನಾಯಕರ ಆರೋಪ.

ಗೋಮಾಳ ಜಾಗದಲ್ಲಿ ಪರಶುರಾಮ ಥೀಂ ಪಾರ್ಕ್ ನಿರ್ಮಾಣ ಮಾಡಲಾಗಿದೆ. ‘ಅನ್ಯ ಉದ್ದೇಶಕ್ಕೆ ಗೋಮಾಳ ಜಾಗವನ್ನು ನೀಡಲು ಸಾಧ್ಯವಿಲ್ಲ ಎಂದು ಸರ್ಕಾರ ಮಾರ್ಚ್‌ನಲ್ಲಿಯೇ ಸ್ಪಷ್ಟವಾಗಿ ಆದೇಶದಲ್ಲಿ ತಿಳಿಸಿದ್ದರೂ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ನಿರ್ಮಿತಿ ಕೇಂದ್ರದಿಂದ ತರಾತುರಿಯಲ್ಲಿ ಕಾಮಗಾರಿ ನಡೆಸಲಾಗಿದೆ. ಅನಧಿಕೃತ ಕಾಮಗಾರಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ಅನುದಾನವೂ ಬಿಡುಗಡೆಯಾಗಿದೆ. ಚುನಾವಣೆ ಮುಗಿದು ಫಲಿತಾಂಶ ಹೊರಬಿದ್ದ ಬಳಿಕ ಕಾಮಗಾರಿ ಅಪೂರ್ಣವಾಗಿದೆ ಎಂಬ ನೆಪವೊಡ್ಡಿ ಪ್ರತಿಮೆಯನ್ನು ಸ್ಥಳಾಂತರಿಸಲಾಗಿದೆ’ ಎಂದು ಆರೋಪಿಸುತ್ತಾರೆ ಕಾಂಗ್ರೆಸ್ ಮುಖಂಡ ಶುಭದ ರಾವ್.

ಪರಶುರಾಮನ ಪ್ರತಿಮೆ ನಿರ್ಮಾಣಕ್ಕೆ ಕಾಂಗ್ರೆಸ್‌ನ ಎಳ್ಳಷ್ಟೂ ವಿರೋಧವಿಲ್ಲ. ಆದರೆ, ಪ್ರತಿಮೆ ಕಂಚಿನದ್ದೇ, ಅಲ್ಲವೇ ಎಂಬುದು ಬಹಿರಂಗವಾಗಬೇಕು. ಪ್ರತಿಮೆ ಕಂಚಿನದ್ದು ಆಗಿಲ್ಲದಿದ್ದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸುತ್ತಾರೆ ಶುಭದ ರಾವ್.

ಹಳೆಯ ಪರಶುರಾಮನ ಪ್ರತಿಮೆ (ಮೇಲಿನ ಚಿತ್ರ), ವಿನ್ಯಾಸ ಬದಲಾವಣೆಯ ಬಳಿಕ ಪರಶುರಾಮನ ಪ್ರತಿಮೆ (ಕೆಳಚಿತ್ರ)

ಪ್ರಜಾವಾಣಿ ವಿಶೇಷ

ಸಿಬಿಐ ತನಿಖೆ ಮಾಡಿಸಿ: ಕಾಂಗ್ರೆಸ್ ನಾಯಕರ ಆರೋಪಗಳನ್ನು ಶಾಸಕ ವಿ. ಸುನಿಲ್ ಕುಮಾರ್ ತಳ್ಳಿ ಹಾಕಿದ್ದಾರೆ. ಪರಶುರಾಮನ ಪ್ರತಿಮೆ ನಕಲಿಯಲ್ಲ; ಸಂಪೂರ್ಣ ಕಂಚಿನಿಂದ ನಿರ್ಮಾಣ ಮಾಡಲಾಗಿದೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ತಜ್ಞರ ಸಲಹೆಯಂತೆ ಪ್ರತಿಮೆಯ ಕೆಲವು ಭಾಗಗಳನ್ನು ಬದಲಾವಣೆ ಮಾಡಬೇಕಿದೆ. ಪ್ರತಿಮೆಯನ್ನು ಮತ್ತಷ್ಟು ಬಲಗೊಳಿಸುವ ಉದ್ದೇಶದಿಂದ ಸ್ಥಳಾಂತರಿಸಲಾಗಿದೆ. ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಉದ್ದೇಶದಿಂದ ಹಾಗೂ ಜಿಲ್ಲೆಯ ಪ್ರವಾಸೋದ್ಯಮವನ್ನು ಹಾಳುಗೆಡವಲು ಕಾಂಗ್ರೆಸ್ ನಾಯಕರು ವಾಸ್ತವ ಮರೆಮಾಚಿ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

₹14.5 ಕೋಟಿ ವೆಚ್ಚದ ಪರಶುರಾಮ ಥೀಂ ಪಾರ್ಕ್ ಕಾಮಗಾರಿಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ₹6.5 ಕೋಟಿ ಮಾತ್ರ ಬಿಡುಗಡೆಯಾಗಿದೆ. ಉಳಿದ ₹8 ಕೋಟಿ ಬಿಡುಗಡೆ ಮಾಡಲು ಕಾಂಗ್ರೆಸ್ ಸರ್ಕಾರ ಅಡ್ಡಗಾಲು ಹಾಕಿದೆ. ಪರಶುರಾಮನ ಪ್ರತಿಮೆ ನಕಲಿ ಎಂದಾದರೆ ಸಿಬಿಐ ಸೇರಿದಂತೆ ಯಾವುದೇ ತನಿಖೆ ಎದುರಿಸಲು ಸಿದ್ಧ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಇದ್ದರೂ ತನಿಖೆಗೆ ಹಿಂದೇಟು ಹಾಕುತ್ತಿರುವುದು ಏಕೆ, ಯಾವುದೇ ಸಾಕ್ಷ್ಯಗಳನ್ನು ನೀಡದೆ ಆಧಾರ ರಹಿತ ಆರೋಪ ಮಾಡುತ್ತಿರುವ ಉದ್ದೇಶವಾದರೂ ಏನು ಎಂದು ಪ್ರಶ್ನಿಸುತ್ತಾರೆ ಸುನಿಲ್ ಕುಮಾರ್.

ಕಾರ್ಕಳ ತಾಲ್ಲೂಕಿನ ಉಮಿಲ್ ಬೆಟ್ಟದ ಮೇಲೆ ನಿರ್ಮಾಣ ಮಾಡಲಾಗಿದ್ದ ಪರಶುರಾಮನ ಕಂಚಿನ ಪ್ರತಿಮೆಯ ಅರ್ಧ ಭಾಗ ತೆರವುಗೊಳಿಸಿರುವುದು

ನಕಲಿ ಮೂರ್ತಿ: ಕಾಂಗ್ರೆಸ್ ಕಿಡಿ

ಪರಶುರಾಮನ ಪ್ರತಿಮೆ ಕಂಚಿನದ್ದಾಗಿದ್ದಾರೆ 10 ಟನ್ ತೂಕವಿರುವ ಪ್ರತಿಮೆಯ ಮೇಲ್ಭಾಗವನ್ನು ಕ್ರೇನ್ ಬಳಸದೆ ಸುಲಭವಾಗಿ ಕೆಳಗಿಳಿಸಿ ಕಂಟೇನರ್‌ನಲ್ಲಿ ಸಾಗಿಸಿದ್ದು ಹೇಗೆ? ಪ್ರತಿಮೆ ಸುತ್ತಲೂ ಹೊದಿಕೆ ಮುಚ್ಚಿದ್ದು ಏಕೆ? ಪ್ರತಿಮೆ ಕಂಚಿನದ್ದು ಎಂದಾರೆ ಸೊಂಟದ ಮೇಲ್ಭಾಗವನ್ನು ಮಾತ್ರ ಸಾಗಿಸಿ ಉಳಿದ ಭಾಗವನ್ನು ಬಿಟ್ಟಿದ್ದು ಏಕೆ? ಪರಶುರಾಮನ ಪ್ರತಿಮೆ ಕಂಚಿನದ್ದಲ್ಲ ಹಾಗೂ ಅಕ್ರಮಗಳು ನಡೆದಿರುವುದಕ್ಕೆ ಬಹಳಷ್ಟು ಪುರಾವೆಗಳು ಆರ್‌ಟಿಐನಡಿ ಸಿಕ್ಕಿವೆ ಎಂದು ಕಾಂಗ್ರೆಸ್ ಮುಖಂಡ ಶುಭದ ರಾವ್ ಕಿಡಿಕಾರಿದರು.

ಏನೆಲ್ಲ ಬದಲಾವಣೆ

ಪರಶುರಾಮ ಬಲಗೈನಲ್ಲಿ ಹಿಡಿದಿರುವ ಕೊಡಲಿ ತೀರಾ ಭಾರವಾಗಿರುವುದರಿಂದ ಅದನ್ನು ತಡೆದುಕೊಳ್ಳುವ ಸಾಮರ್ಥ್ಯ ಬಲಗೈಗೆ ಇಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಪರಶುರಾಮನ ಕೈನಲ್ಲಿರುವ ಕೊಡಲಿಯನ್ನು ಜುಟ್ಟಿಗೆ ಸೇರಿಸಿ ಸಾಮರ್ಥ್ಯ ಬಲಗೊಳಿಸಬೇಕಿದೆ ಎಂಬುದು ಅಧಿಕಾರಿಗಳ ವಿವರಣೆ.

ಎನ್‌ಐಟಿಕೆ ತಜ್ಞರಿಂದ ಪರಿಶೀಲನೆ

ಪರಶುರಾಮನ ಪ್ರತಿಮೆ ನಿರ್ಮಾಣ ಕಾಮಗಾರಿ ತುರ್ತಾಗಿ ನಡೆದಿರುವುದರಿಂದ ಕೆಲವು ಲೋಪದೋಷಗಳು ಇವೆ. ಪ್ರತಿಮೆಯ ಕೆಲವು ಭಾಗಗಳು ಭಾರ ಹೆಚ್ಚಾಗಿರುವುದರಿಂದ ಮಳೆ–ಗಾಳಿಗೆ ತುಂಡಾಗುವ ಆತಂಕ ಇತ್ತು. ಮುಖ್ಯವಾಗಿ ಪ್ರತಿಮೆಗೆ ಸಿಡಿಲು ನಿರೋಧಕ ವ್ಯವಸ್ಥೆ ಅಳವಡಿಕೆಯಾಗಿರಲಿಲ್ಲ. ಹಾಗಾಗಿ ತಜ್ಞರ ಸಲಹೆ ಹಿನ್ನೆಲೆಯಲ್ಲಿ ಪ್ರತಿಮೆ ಮರು ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಪ್ರತಿಮೆ ನಿರ್ಮಾಣದ ಪ್ರತಿ ಹಂತವನ್ನು ಎನ್‌ಐಟಿಕೆ ತಜ್ಞರ ತಂಡ ಪರಿಶೀಲಿಸಲಿದೆ. ಅದರನ್ವಯ ಪ್ರತಿಮೆ ನಿರ್ಮಾಣ ಕಾಮಗಾರಿ ನಡೆಯಲಿದೆ. ವಿಧಾನಸಭೆ ಚುನಾವಣೆಗೂ ಮೊದಲೇ ಕಾಮಗಾರಿ ಆರಂಭವಾಗಬೇಕಿತ್ತು. ನೀತಿ ಸಂಹಿತೆಯಿಂದ ತಡವಾಯಿತು. ಮಳೆಗಾಲ ಬಂದಿದ್ದರಿಂದ ಮತ್ತಷ್ಟು ವಿಳಂಬವಾಯಿತು. ಎರಡೂವರೆ ತಿಂಗಳಲ್ಲಿ ಥೀಂ ಪಾರ್ಕ್ ಕಾಮಗಾರಿ ಮುಕ್ತಾಯವಾಗುವ ನಿರೀಕ್ಷೆ ಇದೆ ಎಂದು ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಹೇಳಿದರು.

ವ್ಯವಸ್ಥಿತ ಸಂಚು: ಆರೋಪ

ಪರಶುರಾಮ ಥೀಂ ಪಾರ್ಕ್ ಇರುವ ಗೋಮಾಳ ಜಾಗವನ್ನು ವಿರಹಿತಗೊಳಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಸಾರ್ವಜನಿಕ ಉದ್ದೇಶಗಳಿಗೆ ಗೋಮಾಳ ಬಳಸಲು ಕಾನೂನಿನಲ್ಲಿ ಅವಕಾಶವಿರುವುದರಿಂದ ಸಂಪುಟ ಸಭೆ ಒಪ್ಪಿಗೆ ನೀಡಿದರೆ ಜಾಗದ ಸಮಸ್ಯೆ ಬಗೆಹರಿಯಲಿದೆ. ಆದರೆ, ಕಾರ್ಕಳ ಕ್ಷೇತ್ರದ ಪ್ರತಿಷ್ಠೆ ಹಾಗೂ ಜಿಲ್ಲೆಯ ಪ್ರವಾಸೋದ್ಯಮ ಕ್ಷೇತ್ರವನ್ನು ಹಾಳುಮಾಡುವ ಉದ್ದೇಶದಿಂದ ವ್ಯವಸ್ಥಿತ ಸಂಚು ರೂಪಿಸಿ ಅಪಪ್ರಚಾರ ನಡೆಸಲಾಗುತ್ತಿದೆ. ಈ ಷಡ್ಯಂತ್ರದ ಹಿಂದೆ ಬುದ್ಧಿಜೀವಿಗಳು, ನಗರ ನಕ್ಸಲರು, ಅನ್ಯ ಧರ್ಮೀಯರು ಸೇರಿಕೊಂಡಿದ್ದಾರೆ. ಲೋಕಸಭಾ ಚುನಾವಣೆಯ ಲಾಭ ಪಡೆಯುವ ದುರದ್ದೇಶವೂ ಅಡಗಿದೆ ಎನ್ನುತ್ತಾರೆ ಕಾರ್ಕಳದ ಶಾಸಕ ವಿ.ಸುನಿಲ್‌ಕುಮಾರ್.

ಥೀಂ ಪಾರ್ಕ್ ಕುರಿತ ಮಾಹಿತಿ..

- ₹14.5 ಕೋಟಿ ಪರಶುರಾಮ ಥೀಂ ಪಾರ್ಕ್ ನಿರ್ಮಾಣದ ವೆಚ್ಚ
- ₹6.5 ಕೋಟಿ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್
- ₹8 ಕೋಟಿ ಬಿಡುಗಡೆಗೆ ಬಾಕಿ ಇರುವ ಮೊತ್ತ
- 33 ಅಡಿ ಪರಶುರಾಮನ ಪ್ರತಿಮೆಯ ಎತ್ತರ
- 15 ಟನ್ ಕಂಚಿನ ಪ್ರತಿಮೆಯ ತೂಕ
- ಕಾಮಗಾರಿ ನಿರ್ಮಾಣ ಹೊಣೆ: ನಿರ್ಮಿತಿ ಕೇಂದ್ರ
- ನೆಲಮಟ್ಟದಿಂದ 400 ಅಡಿ ಮೇಲೆ ಪರಶುರಾಮ ವಿಗ್ರಹ ನಿರ್ಮಾಣ
- ಥೀಂ ಪಾರ್ಕ್‌ನಲ್ಲಿ ಪರಶುರಾಮನ ಜೀವನ ವೃತ್ತಾಂತ ಗ್ಯಾಲರಿ ನಿರ್ಮಾಣ

‘ಸಾಬೀತಾದರೆ ವೃತ್ತಿಯನ್ನೇ ಬಿಡುವೆ’

ಪ್ರತಿಮೆ ಪೂರ್ಣ ಕಂಚಿನಿಂದ ನಿರ್ಮಾಣವಾಗಿರುವುದು ಸತ್ಯ. ಎಲ್ಲಿಯೂ ಫೈಬರ್ ಬಳಕೆ ಮಾಡಿಲ್ಲ; ಪ್ರತಿಮೆಯ ವೆಲ್ಡಿಂಗ್ ಜಾಗದಲ್ಲಿ ಚೆಂದಗಾಣಿಸಲು ಪೇಸ್ಟ್ ಬಳಕೆ ಮಾಡಲಾಗಿದೆ. ಪ್ರತಿಮೆಗೆ 15 ಟನ್ ಕಂಚು ಬಳಕೆಯಾಗಿಲ್ಲ ಎಂದು ಸಾಬೀತುಪಡಿಸಿದರೆ ಕಲಾ ವೃತ್ತಿಯನ್ನೇ ಬಿಟ್ಟುಬಿಡುತ್ತೇನೆ. ಪ್ರತಿಮೆ ನಿರ್ಮಾಣದಲ್ಲಿ ಕೆಲವು ಲೋಪದೋಷಗಳಾಗಿದ್ದು ಮುಂದೆ ಸರಿಪಡಿಸಲಾಗುವುದು. ಸರ್ಕಾರದಿಂದ ಬಾಕಿ ಹಣ ಬಿಡುಗಡೆ ಮಾಡಿದರೆ ಐದಾರು ತಿಂಗಳಲ್ಲಿ ಪರಶುರಾಮನ ಅದ್ಭುತ ಕಲಾಕೃತಿಯನ್ನು ನಿರ್ಮಿಸಿ ಪ್ರತಿಷ್ಠಾಪಿಸುತ್ತೇನೆ ಎಂದು ಶಿಲ್ಪಿ ಕೃಷ್ಣಾ ನಾಯ್ಕ್ ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಪಿ.ವಿ. ಚಿಕ್ಕಕೃಷ್ಣಪ್ಪ
(ಲೇಟ್ ಪಟೇಲ್ ವೀರಪ್ಪನವರ ಮಗ ಅಮೃತಹಳ್ಳಿ, ಬೆಂಗಳೂರು–92)
(ನಿಧನ: 23–10–2018)
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ. ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ. ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಇಂತಿ ಪತ್ನಿ: ಶ್ರೀಮತಿ ಮುನಿರತ್ನಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ವೈಕುಂಠ ಸಮಾರಾಧನೆ

ಶ್ರೀ ನರಸೇಗೌಡ. ಹೆಚ್ (ಶಿಕ್ಷಕರು)
ಇವರ ತತ್ಸಂಬಂಧವಾದ ಉತ್ತರ ಕ್ರಿಯಾದಿಯನ್ನು ದಿನಾಂಕ 25.10.2023 ನೇ ಬುಧವಾರ ಬೆಳಗ್ಗೆ 6:00 ಗಂಟೆಗೆ ಹಾಗೂ ವೈಕುಂಠ ಸಮಾರಾಧನೆಯನ್ನು ಬೆಳಗ್ಗೆ 10:30 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಸ್ಥಳ : ನಂ.62ಇ, ಶ್ರೀ ಮಾರುತಿ ಕೃಪ, ತರಬನಹಳ್ಳಿ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು – 90
ಇಂತಿ ದುಃಖತಪ್ತರು : ತಂದೆ, ತಾಯಿ, ಮೃತರ ಪತ್ನಿ ಶ್ರೀಮತಿ ಜಯಮ್ಮ ಸಿ, ಮಗ ತೇಜಸ್ ಎನ್, ಹಾಗೂ ಕುಟುಂಬವರ್ಗದವರು

ಮೈತ್ರಿ: ಜೆಡಿಎಸ್ ಕೇರಳ ಘಟಕದ ವಿರೋಧ

ತಿರುವನಂತಪುರ (ಪಿಟಿಐ): ಬಿಜೆಪಿ ಜೊತೆಗೆ ಮೈತ್ರಿಗೆ ಜೆಡಿಎಸ್ ಪಕ್ಷದ ಕೇರಳ ಘಟಕ ವಿರೋಧ ವ್ಯಕ್ತಪಡಿಸಿದೆ. ಜೆಡಿಎಸ್‌ನ ರಾಜ್ಯ ಘಟಕವು ಸ್ವತಂತ್ರ ಅಸ್ತಿತ್ವ ಉಳಿಸಿಕೊಳ್ಳಲಿದೆ ಎಂದು ರಾಜ್ಯದ ವಿದ್ಯುತ್ ಸಚಿವ ಕೆ. ಕೃಷ್ಣನ್‌ಕುಟ್ಟಿ ಅವರು ಹೇಳಿಕೆ ನೀಡಿದ್ದಾರೆ.

‘ಬಿಜೆಪಿ ಜೊತೆಗಿನ ಮೈತ್ರಿ ಸ್ವೀಕಾರಾರ್ಹವಲ್ಲ. ಇದು, ಸರಿಯಾದ ನಿರ್ಧಾರವಲ್ಲ ಎಂದು ಕರ್ನಾಟಕದಲ್ಲಿರುವ ಪಕ್ಷದ ನಾಯಕತ್ವಕ್ಕೂ ನಾನು ಮತ್ತು ರಾಜ್ಯ ಘಟಕದ ಅಧ್ಯಕ್ಷ ಮ್ಯಾಥ್ಯೂ ತಿಳಿಸಿದ್ದೇವೆ’ ಎಂದು ಭಾನುವಾರ ತಿಳಿಸಿದರು.

‘ನಾವು ಬಾಂಧವ್ಯ ಕಡಿದುಕೊಳ್ಳುತ್ತಿದ್ದು, ಸ್ವತಂತ್ರವಾಗಿ ಇರುತ್ತೇವೆ ಎಂದು ತಿಳಿಸಿದೆವು. ರಾಜ್ಯ ಸಮಿತಿ ಸಭೆ ನಿರ್ಧಾರವು ಇದೇ ಆಗಿದೆ’ ಎಂದು ಹೇಳಿದರು.

ಜೆಡಿಎಸ್ ಜೊತೆಗಿನ ಮೈತ್ರಿ ಕಡಿದುಕೊಳ್ಳದಿರುವುದಕ್ಕೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ ಸಿಪಿಎಂ ವಿರುದ್ಧ ವಾಗ್ದಾಳಿ ನಡೆಸುತ್ತಿದೆ. ಎಲ್‌ಡಿಎಫ್ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್, ಬಿಜೆಪಿ ಜೊತೆಗೆ ಮೈತ್ರಿ ಹೊಂದಿರುವುದಕ್ಕೆ ತಮ್ಮ ಸಹಮತ ಇದೆ ಎಂಬುದನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೂ ಇತ್ತೀಚೆಗೆ ನಿರಾಕರಿಸಿದ್ದರು.

ಕರ್ನಾಟಕದ ನೀರೊ ಸಿ.ಎಂ. ಸಿದ್ದರಾಮಯ್ಯ: ಎಚ್‌.ಡಿ.ಕೆ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: ‘ಕರ್ನಾಟಕದ ‘ನೀರೊ’ ಮುಖ್ಯಮಂತ್ರಿ ಸಿದ್ದರಾಮಯ್ಯ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಕುಟುಕಿದ್ದಾರೆ.

‘ನಾವು ವೆಸ್ಟೆಂಡ್ ಹೋಟೆಲ್‌ನಲ್ಲಿ ಕುಳಿತು ಸರ್ಕಾರ ನಡೆಸುತ್ತಿಲ್ಲ, ಜನರ ನಡುವೆ ಇದ್ದು, ಅವರ ಕಷ್ಟಕ್ಕೆ ಹೆಗಲಾಗಿ ನಿಂತಿದ್ದೇವೆ’ ಎಂದು ತಮ್ಮ ವಿರುದ್ಧ ಟೀಕೆ ಮಾಡಿದ್ದ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿರುವ ಕುಮಾರಸ್ವಾಮಿ, ‘ರೋಮ್ ನಗರ ಹೊತ್ತಿ ಉರಿಯುತ್ತಿದ್ದರೆ ನೀರೊ ಪಿಟೀಲು ಬಾರಿಸುತ್ತಿದ್ದ. ಜನ ಸಂಕಷ್ಟದಲ್ಲಿದ್ದರೆ ಕರ್ನಾಟಕದ ನೀರೊ ಕ್ರಿಕೆಟ್ ಪಂದ್ಯ ನೋಡುತ್ತಿದ್ದ’ ಎಂದಿದ್ದಾರೆ.

‘ಸತ್ಯ ಹೇಳಿದರೆ ನನ್ನ ಕಡೆಗೇ ಬೊಟ್ಟು ಮಾಡುತ್ತೀರಿ. ನಿಮ್ಮ ಸಚಿವರನ್ನು ನನ್ನ ಮೇಲೆ ಛೂ ಬಿಡುತ್ತೀರಿ. ಎಷ್ಟು ದಿನ ನೆಪಗಳ ನಾಜೂಕುತನ? ವಿದ್ಯುತ್ ಕೃತಕ ಅಭಾವ ಸೃಷ್ಟಿ ನಿಮ್ಮದೇ ಷಡ್ಯಂತ್ರ. ಅದು ಉಲ್ಬಣಿಸಿದಷ್ಟೂ ನಿಮಗೆ ಕಲೆಕ್ಷನ್ ಹೆಚ್ಚು. ಖಾಸಗಿ ಕಂಪನಿಗಳಿಂದ ಖರೀದಿಸಿ ಕೈ ತುಂಬಾ ಕಮಿಷನ್ ಎತ್ತಲು ಹೊರಟಿದ್ದೀರಿ. ಇಲ್ಲ ಎಂದಾದರೆ ವಿದ್ಯುತ್ ಕ್ಷಾಮದ ವಾಸ್ತವದ ಬಗ್ಗೆ ‘ಶ್ವೇತಪತ್ರ’ ಹೊರಡಿಸಿ’ ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

‘ವೆಸ್ಟೆಂಡ್‌ನಲ್ಲಿ ಆಡಳಿತ ನಡೆಸಿಲ್ಲ ಎನ್ನುವ ಗಿಲೀಟು ಗಿರಾಕಿ. ಅವತ್ತು ಮುಖ್ಯಮಂತ್ರಿ ನಿವಾಸವನ್ನೇಕೆ ತೆರವು ಮಾಡಲಿಲ್ಲ? ಐದು ವರ್ಷ ಸರ್ಕಾರ ಕೊಟ್ಟ ಸಿದ್ದಪುರುಷ ಇನ್ನೊಬ್ಬರ ಹೆಸರಿನಲ್ಲಿ ಬಂಗಲೆ ಪಡೆದು ಸಾಸಿವೆ ಕಾಳಷ್ಟೂ ಸಂಕೋಚವಿಲ್ಲದೆ ಅದೇ ಜಾಗದಲ್ಲಿ ಹೆಗ್ಗಣವಾಗಿ ಮೈತ್ರಿ ಸರ್ಕಾರಕ್ಕೆ ಕನ್ನ ಕೊರೆದಿದ್ದನ್ನು ಕನ್ನಡಿಗರು ಮರೆತಿಲ್ಲ. ಹೇಳಿದ್ದೇ ಹೇಳುವ ಕಿಸುಬಾಯಿ ದಾಸನಿಗೆ ಗೊತ್ತಿರುವುದು ಎರಡೇ. ಒಂದು ವೆಸ್ಟೆಂಡ್, ಮತ್ತೊಂದು ಬಿಜೆಪಿಯ ಬಿ ಟೀಂ’ ಎಂದು ಕಿಡಿಕಾರಿದ್ದಾರೆ.

‘ಡೋಂಗಿ ಸಮಾಜವಾದಿ, ಫುಲ್ ಟೈಂ ಮೀರ್‌ಸಾದಿಕ್‌ವಾದಿಗೆ ವೆಸ್ಟೆಂಡ್ ಸೋಂಕು ಮತ್ತೆ ತಗುಲಿದೆ. ‘ಇಂಡಿಯಾ’ ಕೂಟದ ಸಭೆಯನ್ನು ಇದೇ ವೆಸ್ಟೆಂಡ್ ಬದಲಿಗೆ, ತಮ್ಮ ಸುತ್ತ ಕೆನೆಪದರ, ಒಳಪದರ, ತೆಳುಪದರದಂತೆ ತಲೆ ಎತ್ತಿರುವ ‘ಪರ್ಸಂಟೇಜ್ ಪಟಾಲಂ’ನ ಏಳುಸುತ್ತಿನ ಕೋಟೆಯ ವಠಾರದಲ್ಲಿಯೇ ನಡೆಸಬೇಕಿತ್ತು. ಏಕೆ ನಡೆಸಲಿಲ್ಲ’ ಎಂದೂ ಪ್ರಶ್ನಿಸಿದ್ದಾರೆ.

‘ಆಧುನಿಕ ಭಾರತದ ಈಸ್ಟ್ ಇಂಡಿಯಾ ಕಂಪನಿ ಕಾಂಗ್ರೆಸ್‌ಗೆ ಕರ್ನಾ ಟಕ ಪೊಗದಸ್ತು ಹುಲ್ಲುಗಾವಲು. ಸಿದ್ಧ ಪುರುಷ ಅಲಿಯಾಸ್ ಶೋಕಿಪುರುಷನೇ ಈ ಹುಲ್ಲುಗಾವಲಿನ ಮೇಟಿ. ವಿದ್ಯುತ್ ಕ್ಷಾಮ ಮತ್ತು ಬರದಲ್ಲಿ ಜನರು ಬೇಯುತ್ತಿದ್ದರೆ ದಿನಪೂರ್ತಿ ಕುಳಿತು ಕ್ರಿಕೆಟ್ ನೋಡುವಷ್ಟು ಶೋಕಿದಾರ!’ ಎಂದು ವ್ಯಂಗ್ಯವಾಡಿದ್ದಾರೆ.

‘ವಿದ್ಯುತ್ ಉತ್ಪಾದನೆ ಅಲಕ್ಷಿಸಿದ್ದೇಕೆ?’

‘ಐದು ತಿಂಗಳಿಂದ ವಿದ್ಯುತ್ ಉತ್ಪಾದನೆ ಅಲಕ್ಷಿಸಿದ್ದೇಕೆ? ಹಾಹಾಕಾರ ಎದ್ದ ಮೇಲೆ ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದರೆ ಲೋಡ್ ಶೆಡ್ಡಿಂಗ್ ಏಕೆ ಬಂತು? 2013-2018ರಲ್ಲಿ 12,000 ಮೆಗಾ ವಾಟ್ ಉತ್ಪಾದಿಸಿದ್ದೇವೆ ಎಂದು ನೀವೇ ಹೇಳಿದ್ದೀರಿ. ಈಗ ಮಳೆ ಕಡಿಮೆಯಾಗಿ ಜಲವಿದ್ಯುತ್ ಉತ್ಪಾದನೆ ಕುಸಿದಿದೆ ಎನ್ನುವುದು ನನಗೂ ಗೊತ್ತಿದೆ. ಅದರಲ್ಲಿ 3,000 ಮೆಗಾ ವಾಟ್ ಇಲ್ಲ ಎಂದರೂ ಸಾರ್ವಜನಿಕ ಮತ್ತು ಖಾಸಗಿ ವಲಯ ಸೇರಿ ಒಟ್ಟು 29 ಸಾವಿರ ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಆಗಲೇಬೇಕಿತ್ತು. ಆಗಿಲ್ಲವೇಕೆ? ಜಲವಿದ್ಯುತ್ ಕೈಕೊಡುತ್ತದೆ ಎಂದು ಗೊತ್ತಿದ್ದರೂ ಕಲ್ಲಿದ್ದಲು ಸಂಗ್ರಹ ಇಟ್ಟುಕೊಳ್ಳಲಿಲ್ಲವಲ್ಲ ಏಕೆ’ ಎಂದೂ ಕೇಳಿದ್ದಾರೆ.



ಆಯುಧ ಸ್ವಚ್ಛ...

ಬೆಂಗಳೂರು ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಶಸ್ತ್ರಾಗಾರದಲ್ಲಿ ಜೋಡಿಸಿಟ್ಟಿದ್ದ ಬಂದೂಕುಗಳನ್ನು ಆಯುಧ ಪೂಜೆ ನಿಮಿತ್ತ ಸಿಬ್ಬಂದಿ ಭಾನುವಾರ ಸ್ವಚ್ಛಗೊಳಿಸಿದರು

ಪ್ರಜಾವಾಣಿ ಚಿತ್ರ: ರಂಜು ಪಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಫೋಟೊ ತಿರುಚಿದ್ದವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಷಾಸುರ ಪ್ರತಿಮೆಯ ಚಿತ್ರವನ್ನು ತಿರುಚಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಚಿತ್ರ ಸೇರಿಸಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದಡಿ ಫೇಸ್‌ಬುಕ್‌ನಲ್ಲಿರುವ ‘ಸೀನಾ ಹಿಂದೂಸ್ತಾನಿ’ ಎಂಬ ಖಾತೆಯ ಪೇಜ್ ಅಡ್ಮಿನ್ ಹಾಗೂ ಇತರರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಪಿಸಿಸಿ ಕಾನೂನು ವಿಭಾಗದ ಸೂರ್ಯ ಮುಕುಂದರಾಜ್ ದೂರು ನೀಡಿದ್ದು, ‘ಸೀನಾ ಹಿಂದೂಸ್ತಾನಿ’ ಪೇಜ್ ನಿರ್ವಹಣೆ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಮಹಿಷಾಸುರ ಉತ್ಸವ ಆಚರಣೆ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಲಾಗಿತ್ತು. ಜತೆಗೆ ಮಹಿಷಾಸುರ ಪ್ರತಿಮೆಗೆ ಮುಖ್ಯಮಂತ್ರಿ ಚಿತ್ರವನ್ನು ಮಾರ್ಫಿಂಗ್ ಮಾಡಿ ಸೇರಿಸಲಾಗಿತ್ತು. ಈ ಮೂಲಕ ಮಹಿಷಾಸುರ ಪ್ರತಿಮೆಯನ್ನು ವಿರೂಪಗೊಳಿಸಿ, ಜನರ ಧಾರ್ಮಿಕ ನಂಬಿಕೆಗೆ ಧಕ್ಕೆ ತಂದಿದ್ದಾರೆಂದು ದೂರುದಾರರು ಆರೋಪಿಸಿದ್ದಾರೆ.

‘ದಸರಾ ಹಬ್ಬದ ಸಂದರ್ಭದಲ್ಲಿಯೇ ಈ ಅವಹೇಳನಕಾರಿ ಪೋಸ್ಟ್ ಪ್ರಕಟಿಸಲಾಗಿದೆ. ಈ ಮೂಲಕ ಸಮಾಜದ ಶಾಂತಿಗೆ ಧಕ್ಕೆ ತರಲು ಆರೋಪಿಗಳು ಯತ್ನಿಸಿದ್ದಾರೆ. ಪೇಜ್‌ನ ಅಡ್ಮಿನ್ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಈ ಸಂಬಂಧ ಫೇಸ್‌ಬುಕ್ ಕಂಪನಿಯವರಿಗೂ ಇ-ಮೇಲ್ ಕಳುಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel
★ಶ್ರೇಯಸ್ ಟೂರ್ಸ್★
ವಿ.ವಿ.ಪುರಂ 20.11.2023 8ದಿನಗಳು ಅಹೋಬಲಂ, ಮಹಾನಂದಿ,ಶ್ರೀಶೈಲಂ, ಹೈದರಾಬಾದ್,ಮಂತ್ರಾಲಯ. 27.11.2023 12ದಿನಗಳು ಗುಜರಾತ್ ಮಧ್ಯಪ್ರದೇಶ ರಾಜ್ಯ ಪ್ರವಾಸ. 01.12.2023 14/20ದಿನ ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ.ಅರುಣಾಚಲ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್ (ಹಾರ್ನ್‌ಬಿಲ್). 08.12.2023 14ದಿನಗಳು ಅಖಂಡ ಮಹಾರಾಷ್ಟ್ರ ರಾಜ್ಯ ಪ್ರವಾಸ ಚತುರ್ಥಜ್ಯೋರ್ತಿಲಿಂಗ, ಅಷ್ಟವಿನಾಯಕ,ಮುಂಬಯಿ, ಶಿರಡಿ,ಇತರೆ. 9743351212/ 9206979202/ 6366322639
16.11.2023 08.01.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 22.11.2023 08.12.2023 13.01.2024 ದುಬೈ,ಅಬುದಾಬಿ 5 ದಿನಗಳು. 06.12.2023 12.01.2024 ನೇಪಾಳ 9 ದಿನಗಳು. 23.12.2023 12.01.2024 ಭೂತಾನ್ 8 ದಿನಗಳು. 17.11.2023 11.12.2023 ಶ್ರೀಲಂಕಾ 6 ದಿನಗಳು. 22.11.2023 06.12.2023 13.01.2024 ರಾಜಸ್ಥಾನ್ 10 ದಿನಗಳು. 12.12.2023 13.01.2024 ಗುಜರಾತ್ 8 ದಿನಗಳು. 27.11.2023 05.01.2024 ಅಸ್ಸಾಂ,ಮೇಘಾಲಯ 9 ದಿನಗಳು. 11.12.2023 04.01.2024 ಕಾಶಿ,ಗಯಾ ಅಲಹಾಬಾದ್ 7 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
Kanakapura Road
ಸೈಟ್ಗಳು ಮಾರಾಟಕ್ಕೆ BMRDA/DC ಪರಿವರ್ತನೆ ಕಗ್ಗಲಿಪುರ-ಕನಕಪುರ ರಸ್ತೆ Ph: 95913 08822

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅರ್ಜಿ ಸಲ್ಲಿಕೆ ಅವಧಿ ಮುಗಿದರೂ ಸಚಿವರ ಶಿಫಾರಸು ● ಪದ ನಿಮಿತ್ತ ಸದಸ್ಯರೇ ಇಲ್ಲ

ರಾಜ್ಯೋತ್ಸವ ಪ್ರಶಸ್ತಿಗೆ ಮುಂದುವರಿದ ಲಾಬಿ

● ವರುಣ ಹೆಗಡೆ

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿಗೆ ನೀಡುವ ನಗದು ಬಹುಮಾನವನ್ನು ₹ 5 ಲಕ್ಷಕ್ಕೆ ಏರಿಸಿರುವುದರಿಂದ ಪ್ರಶಸ್ತಿಗೆ ಲಾಬಿ ಹೆಚ್ಚಿದ್ದು, ಅರ್ಜಿ ಸಲ್ಲಿಕೆ ಅವಧಿ ಮುಗಿದರೂ ವಿವಿಧ ಸಚಿವರು ಹಾಗೂ ಶಾಸಕರ ಕಡೆಯಿಂದ ಶಿಫಾರಸುಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಲ್ಲಿಕೆಯಾಗುತ್ತಿವೆ.

ಈ ಪ್ರಶಸ್ತಿಯು ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುವ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ. 25 ಗ್ರಾಂ ಚಿನ್ನದ ಪದಕ, ಸ್ಮರಣಿಕೆ ಜತೆಗೆ ನೀಡಲಾಗುತ್ತಿದ್ದ ₹ 1 ಲಕ್ಷ ನಗದನ್ನು, ಹಿಂದಿನ ಬಿಜೆಪಿ ಸರ್ಕಾರ ₹ 5 ಲಕ್ಷಕ್ಕೆ ಹೆಚ್ಚಿಸಿತ್ತು. ಇದರಿಂದಾಗಿ ಕಳೆದ ವರ್ಷ 67 ಸಾಧಕರಿಗೆ ತಲಾ ₹ 5 ಲಕ್ಷ ನಗದು ನೀಡಲಾಗಿತ್ತು. ಈ ವರ್ಷ 68 ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು ನಾಮನಿರ್ದೇಶನ ಮಾಡಲು ಸಾರ್ವಜನಿಕರಿಗೆ ಇದೇ 1ರಿಂದ ಅ.15ರವರೆಗೆ ಅವಕಾಶ ನೀಡಲಾಗಿತ್ತು. ಈ ಅವಧಿ ಮುಗಿದಿದ್ದರೂ ಕನ್ನಡ ಭವನಕ್ಕೆ ರಾಜಕೀಯ ಮುಖಂಡರ ಶಿಫಾರಸು ಸಹಿತ ಭೌತಿಕ ಅರ್ಜಿಗಳು ಬರುತ್ತಿವೆ. ಇನ್ನೊಂದೆಡೆ ವಿವಿಧ ಕ್ಷೇತ್ರಗಳ ಪ್ರಮುಖರು ಸಮಿತಿಯ ಸದಸ್ಯರನ್ನೂ ಸಂಪರ್ಕಿಸಿ, ಲಾಬಿ ನಡೆಸಿದ್ದಾರೆ.



ರಾಜ್ಯೋತ್ಸವ ಪ್ರಶಸ್ತಿಗೆ ಈ ಬಾರಿ ನಿರೀಕ್ಷೆಗೂ ಮೀರಿ ನಾಮನಿರ್ದೇಶನ ಸಲ್ಲಿಕೆಯಾಗಿವೆ. ಲಾಬಿಗಳಿಗೆ ಮಣಿಯದೆ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತದೆ

ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

ಈ ಸಾಲಿನ ‘ರಾಜ್ಯೋತ್ಸವ ಪ್ರಶಸ್ತಿ’ ಆಯ್ಕೆಗೆ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯಲ್ಲಿ 30 ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ಸೆ.30ರಂದು ಸರ್ಕಾರ ರಚಿಸಿದೆ. ಈಗಾಗಲೇ ಸಮಿತಿಯ ಸದಸ್ಯರು ಕನ್ನಡ ಭವನದಲ್ಲಿ ಶಿಫಾರಸು ಅರ್ಜಿಗಳನ್ನು ಪರಿಶೀಲಿಸುತ್ತಿದ್ದಾರೆ.

ಚಟುವಟಿಕೆಯ ತಾಣ: ಸಮಿತಿಯ ಸದಸ್ಯರ ಮೇಲೆ ಪ್ರಭಾವ ಬೀರಲು, ಆಯ್ಕೆಗೆ ಪರಿಗಣಿಸುವಂತೆ ಮನವಿ ಮಾಡಿಕೊಳ್ಳಲು ರಾಜ್ಯದ ವಿವಿಧೆಡೆಯಿಂದ ವಿವಿಧ ಕ್ಷೇತ್ರಗಳ ಪ್ರಮುಖರು ಹಾಗೂ ಅವರ ಆಪ್ತರು ಕನ್ನಡ ಭವನದತ್ತ ಮುಖ ಮಾಡಿದ್ದಾರೆ. ಇದರಿಂದಾಗಿ ಕನ್ನಡ ಭವನ ಚಟುವಟಿಕೆಯ ತಾಣವಾಗಿ ಮಾರ್ಪಟ್ಟಿದೆ.

‘ಆನ್‌ಲೈನ್‌ನಲ್ಲಿ ಶಿಫಾರಸು ಸಲ್ಲಿಸುವ ಅವಧಿ ಮುಗಿದಿದ್ದರೂ ಕೆಲ ಸಚಿವರು, ಶಾಸಕರ ಕಡೆಯಿಂದ ಪ್ರತಿನಿತ್ಯ ಭೌತಿಕ ಅರ್ಜಿಗಳು ಬರುತ್ತಿವೆ. ಅವರನ್ನೇ ಆಯ್ಕೆ ಮಾಡುವಂತೆ ಒತ್ತಡವನ್ನೂ ತರಲಾಗುತ್ತಿದೆ. ರಾಜ್ಯದಲ್ಲಿ ಸಾಧಕರು ಹಲವರಿದ್ದಾರೆ. ನಿಜವಾದ ಸಾಧಕರಲ್ಲಿ ಎಲ್ಲರೂ ಅರ್ಜಿ ಸಲ್ಲಿಸುವುದಿಲ್ಲ. ಇದರಿಂದಾಗಿ ಪ್ರತಿ ವಿಭಾಗದಿಂದ 5-6 ಮಂದಿ ನೈಜ ಸಾಧಕರನ್ನು ಆಯ್ಕೆ ಮಾಡುವುದು ಸವಾಲಾಗಿದೆ’ ಎಂದು ತಜ್ಞರ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

‘ಈ ಮೊದಲು ಸಾಹಿತ್ಯ, ಸಂಗೀತ ಸೇರಿ ವಿವಿಧ ಕ್ಷೇತ್ರಗಳಲ್ಲಿ ಜೀವಮಾನ ಸಾಧನೆಗೆ ವಾರ್ಷಿಕ ತಲಾ ಒಬ್ಬರಿಗೆ ಸರ್ಕಾರ ನೀಡುವ ಪ್ರಶಸ್ತಿಯು ₹ 5 ಲಕ್ಷ ನಗದು ಹೊಂದಿತ್ತು. ಈಗ ರಾಜ್ಯೋತ್ಸವ ಪ್ರಶಸ್ತಿಯ ನಗದನ್ನು ಅಷ್ಟೇ ಮೊತ್ತಕ್ಕೆ ಹೆಚ್ಚಿಸಿರುವುದರಿಂದ ಜೀವಮಾನ ಸಾಧನೆ ಪ್ರಶಸ್ತಿಗಳು ಮಹತ್ವ ಕಳೆದುಕೊಳ್ಳುವ ಸಾಧ್ಯತೆಯಿದೆ’ ಎಂದು ಸಮಿತಿಯ ಇನ್ನೋರ್ವ ಸದಸ್ಯ ಕಳವಳ ವ್ಯಕ್ತಪಡಿಸಿದರು.

25 ಸಾವಿರ ಅರ್ಜಿ ಸಲ್ಲಿಕೆ

ರಾಜ್ಯೋತ್ಸವ ಪ್ರಶಸ್ತಿಗೆ ಈ ಬಾರಿ ಸೇವಾ ಸಿಂಧು ಪೋರ್ಟಲ್ ಮೂಲಕ 25 ಸಾವಿರಕ್ಕೂ ಅಧಿಕ ಅರ್ಜಿಗಳು ಸಲ್ಲಿಕೆಯಾಗಿವೆ. ಒಬ್ಬಬ್ಬರ ಹೆಸರಿಗೂ 10 ರಿಂದ 15 ಮಂದಿ ನಾಮನಿರ್ದೇಶನ ಮಾಡಿದ್ದು, ಇದರ ಆಧಾರದಲ್ಲಿ 2 ಸಾವಿರಕ್ಕೂ ಅಧಿಕ ಹೆಸರು ಪ್ರಶಸ್ತಿಗೆ ಪರಿಗಣಿಸಲು ಸಲ್ಲಿಕೆಯಾಗಿದೆ ಎನ್ನುವುದು ಇಲಾಖೆ ಮೂಲಗಳಿಂದ ತಿಳಿದುಬಂದಿದೆ.

ಈವರೆಗೂ ವಿವಿಧ ಸಾಂಸ್ಕೃತಿಕ ಅಕಾಡೆಮಿಗಳಿಗೆ ಅಧ್ಯಕ್ಷರ ನೇಮಕಾತಿಯೇ ನಡೆದಿಲ್ಲ. ಇದರಿಂದಾಗಿ ಸಮಿತಿಯಲ್ಲಿ ಪದನಿಮಿತ್ತ ಸದಸ್ಯರು ಇಲ್ಲದಂತಾಗಿದೆ.

ವಿಧಾನಸಭಾ ಚುನಾವಣೆ: ಮೊದಲ ಪಟ್ಟಿ ಬಿಡುಗಡೆ, ಶಾಸಕ ರಾಜಾ ಸಿಂಗ್ ಅಮಾನತು ಹಿಂಪಡೆದ ಬಿಜೆಪಿ

ತೆಲಂಗಾಣ: ಮೂವರು ಸಂಸದರು ಕಣಕ್ಕೆ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ತೆಲಂಗಾಣ ವಿಧಾನಸಭೆ ಚುನಾವಣೆಗೆ ಮೂವರು ಸಂಸದರು, ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಬಂಡಿ ಸಂಜಯ್ ಕುಮಾರ್ ಸೇರಿದಂತೆ 52 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಭಾನುವಾರ ಬಿಡುಗಡೆ ಮಾಡಿದೆ.

ಕಟ್ಟಾ ಹಿಂದುತ್ವವಾದಿ ಟಿ. ರಾಜಾ ಸಿಂಗ್ ಅವರಿಗೆ ಗೋಶಾಮಹಲ್ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಪ್ರವಾದಿ ಮೊಹಮ್ಮದ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ ಆರೋಪದ ಮೇಲೆ ಇವರನ್ನು ಕಳೆದ ವರ್ಷ ಪಕ್ಷದಿಂದ ಅಮಾನತುಗೊಳಿಸಲಾಗಿತ್ತು. ಈಗ ಅಮಾನತು ರದ್ದು ಮಾಡಲಾಗಿದೆ.

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ವಿರುದ್ಧ ಗಜ್ವೆಲ್ ಕ್ಷೇತ್ರದಲ್ಲಿ ಶಾಸಕ ಈಟಲ ರಾಜೇಂದ್ರ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ರಾಜೇಂದ್ರ ಅವರು ಎರಡು ಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದು, ಸದ್ಯ ಅವರು ಪ್ರತಿನಿಧಿಸುತ್ತಿರುವ ಹುಜೂರಾಬಾದ್‌ನಿಂದಲೂ ಕಣಕ್ಕಿಳಿದಿದ್ದಾರೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಕುರಿತು ರಾಜೇಂದ್ರ ಅವರು ಈ ಹಿಂದೆಯೇ ಸುಳಿವು ನೀಡಿದ್ದರು.

ಕೆ.ಚಂದ್ರಶೇಖರ ರಾವ್ ಸಂಪುಟದಲ್ಲಿ ರಾಜೇಂದ್ರ ಅವರು ಆರೋಗ್ಯ ಸಚಿವರಾಗಿದ್ದರು. ಸಚಿವ ಸ್ಥಾನದಿಂದ ತೆಗೆದುಹಾಕಿದ ನಂತರ ಬಿಆರ್‌ಎಸ್ ತೊರೆದು 2021ರಲ್ಲಿ ಬಿಜೆಪಿ ಸೇರಿದರು. 2021ರಲ್ಲಿ ನಡೆದ ಉಪಚುನಾವಣೆಯಲ್ಲಿ ಹುಜೂರಾಬಾದ್‌ನಿಂದ ಆಯ್ಕೆಯಾದರು.

ಕುಮಾರ್ ಅವರನ್ನು ಕರೀಂನಗರದಿಂದ ಮತ್ತು ಇತರ ಇಬ್ಬರು ಸಂಸದರಾದ ಸೋಯಂ ಬಾಪು ರಾವ್ ಮತ್ತು ಧರ್ಮಪುರಿ ಅರವಿಂದ್ ಅವರನ್ನು ಬೋಥ್ ಮತ್ತು ಕೊರಟ್ಲಾದಿಂದ ಕಣಕ್ಕಿಳಿಸಲಾಗಿದೆ.

12 ಮಂದಿ ಮಹಿಳೆಯರಿಗೆ ಟಿಕೆಟ್ ನೀಡಲಾಗಿದೆ. ರಾಜ್ಯದಲ್ಲಿ ಬಿಜೆಪಿಯ ನಾಲ್ಕು ಜನ ಸಂಸದರು ಇದ್ದಾರೆ. ಕೇಂದ್ರ ಸಚಿವ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಹೆಸರು ಮೊದಲ ಪಟ್ಟಿಯಲ್ಲಿಲ್ಲ.

‘ಪಕ್ಷವು ನೀಡಿದ ಶೋಕಾಸ್ ನೋಟಿಸ್‌ಗೆ ಟಿ. ರಾಜಾ ಸಿಂಗ್ ಅವರು ನೀಡಿದ ವಿವರಣೆಯನ್ನು ಪರಿಗಣಿಸಿದ ಬಳಿಕ ಅಮಾನತು ಆದೇಶವನ್ನು ಹಿಂತೆಗೆದುಕೊಳ್ಳಲು ಕೇಂದ್ರ ಶಿಸ್ತು ಸಮಿತಿ ನಿರ್ಧರಿಸಿದೆ’ ಎಂದು ಕಿಶನ್ ರೆಡ್ಡಿ ತಿಳಿಸಿದ್ದಾರೆ.

ಗೋಶಾಮಹಲ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡಿದ್ದಕ್ಕಾಗಿ ಪಕ್ಷದ ನಾಯಕರಿಗೆ ಧನ್ಯವಾದ ತಿಳಿಸಿರುವ ಸಿಂಗ್, ಪಕ್ಷದ ಸೂಚನೆಯಂತೆ ಕ್ಷೇತ್ರಗಳಲ್ಲಿ ಪ್ರಚಾರ ನಡೆಸುವುದಾಗಿ ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ನೇತೃತ್ವದಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಹೆಸರುಗಳನ್ನು ಅಂತಿಮಗೊಳಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಕೂಡ ಭಾಗವಹಿಸಿದ್ದರು.

ತೆಲಂಗಾಣ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಪಡೆದ ಶಾಸಕ ಟಿ.ರಾಜಾ ಸಿಂಗ್ ಸಂಭ್ರಮಿಸಿದರು. ರಾಜ್ಯ ಘಟಕದ ಅಧ್ಯಕ್ಷ ಜಿ.ಕಿಶನ್ ರೆಡ್ಡಿ ಇದ್ದಾರೆ —ಪಿಟಿಐ ಚಿತ್ರ

ಅಶೋಕ್ ಗೆಹಲೋತ್ ಆಪ್ತರಿಗೆ ಮಣೆ

ನವದೆಹಲಿ (ಪಿಟಿಐ): ರಾಜಸ್ಥಾನ ವಿಧಾ ನಸಭಾ ಚುನಾವಣೆಗೆ 43 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಭಾನುವಾರ ಬಿಡುಗಡೆ ಮಾಡಿದೆ.

ಮಾಜಿ ಮುಖ್ಯ ಕಾರ್ಯದರ್ಶಿ ನಿರಂಜನ ಆರ್ಯ ಅವರನ್ನು ಸೋಜತ್ (ಎಸ್‌ಸಿ) ಕ್ಷೇತ್ರದಿಂದ ಕಣಕ್ಕಿಳಿಸಿದೆ. ಸಚಿವರಾದ ಗೋವಿಂದ್ ರಾಮ್ ಮೇಘವಾಲ್ ಮತ್ತು ಬಿ.ಡಿ. ಕಲ್ಲಾ ಅವರನ್ನು ಕ್ರಮವಾಗಿ ಖಜುವಾಲಾ (ಪರಿಶಿಷ್ಟ ಜಾತಿ) ಮತ್ತು ಬಿಕಾನೇರ್ ಪಶ್ಚಿಮದಿಂದ ಕಣಕ್ಕಿಳಿಸಲಾಗಿದೆ. ಉನ್ನತ ಶಿಕ್ಷಣ ಸಚಿವ ರಾಜೇಂದ್ರ ಸಿಂಗ್ ಯಾದವ್ ಅವರಿಗೂ ಟಿಕೆಟ್ ನೀಡಲಾಗಿದೆ.

ಈ ಮೂವರು ಸಚಿವರು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆಪ್ತರು ಎಂದು ಪರಿಗಣಿಸಲಾಗಿದೆ. 200 ಸದಸ್ಯ ಬಲದ ವಿಧಾನಸಭೆಗೆ ಈವರೆಗೆ 76 ಅಭ್ಯರ್ಥಿಗಳ ಹೆಸರು ಘೋಷಿಸಲಾಗಿದೆ.

ಬಹಿರಂಗಪಡಿಸದ ಅಪರಾಧ ವಿವರ: ದೂರು

ರಾಯಪುರ (ಪಿಟಿಐ): ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ವಿರುದ್ಧ ದಾಖಲಾಗಿರುವ ಅಪರಾಧ ಪ್ರಕರಣಗಳ ವಿವರಗಳನ್ನು ಟಿಕೆಟ್ ಹಂಚಿಕೆಯಾದ 48 ಗಂಟೆಗಳ ಒಳಗೆ ಆಯೋಗಕ್ಕೆ ಸಲ್ಲಿಸಿಲ್ಲ ಎಂದು ಆರೋಪಿಸಿ ಛತ್ತೀಸಗಢದ 83 ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ರಾಯಪುರದ ಮುಖ್ಯ ಚುನಾವಣಾ ಅಧಿಕಾರಿಗೆ (ಸಿಇಒ) ಬಿಜೆಪಿ ದೂರು ನೀಡಿದೆ.

‘ಆಡಳಿತ ಪಕ್ಷದ ಅಭ್ಯರ್ಥಿಗಳ ವಿರುದ್ಧ ಬಿಜೆಪಿ ಸುಳ್ಳು ಆರೋಪಗಳನ್ನು ಮಾಡುತ್ತಿದೆ. ಕ್ರಿಮಿನಲ್ ಹಿನ್ನೆಲೆ ಇರುವವರಿಗೆ ಟಿಕೆಟ್ ನೀಡಿಲ್ಲ ಮತ್ತು ಚುನಾವಣಾ ಆಯೋಗ ನಿಗದಿಪಡಿಸಿದ ಮಾನದಂಡಗಳನ್ನು ಅವರು ಪಾಲಿಸುತ್ತಾರೆ’ ಎಂದು ಕಾಂಗ್ರೆಸ್ ವಕ್ತಾರರು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ರಾಜಕೀಯ ಪಕ್ಷಗಳು ಅಭ್ಯರ್ಥಿಗಳಿಗೆ ಟಿಕೆಟ್ ಹಂಚಿಕೆ ಮಾಡಿದ 48 ಗಂಟೆಗಳ ಒಳಗೆ ಅವರ ಅಪರಾಧ ಹಿನ್ನೆಲೆಯ ವಿವರವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಬಿಜೆಪಿಯ ರಾಜ್ಯ ಕಾನೂನು ಘಟಕದ ಸಂಚಾಲಕ ಜೈಪ್ರಕಾಶ್ ಚಂದ್ರವಂಶಿ ಹೇಳಿದ್ದಾರೆ.

ಪಕ್ಷದ ವೆಬ್‌ಸೈಟ್, ಸಾಮಾಜಿಕ ಮಾಧ್ಯಮ ಅಥವಾ ರಾಷ್ಟ್ರೀಯ ಮತ್ತು ಸ್ಥಳೀಯ ಎರಡು ಪತ್ರಿಕೆಗಳಲ್ಲಿ ಈ ವಿವರ ಪ್ರಕಟಿಸಿಲ್ಲ. ಇದು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಎಂದು ಅವರು ಹೇಳಿದ್ದಾರೆ.

ಕ್ರಿಮಿನಲ್ ಪ್ರವೃತ್ತಿ ಹೊಂದಿರುವವರಿಗೆ ಟಿಕೆಟ್ ನೀಡಿಲ್ಲ. ಕ್ರಿಮಿನಲ್‌ಗಳನ್ನು ರಕ್ಷಿಸುವುದು ಮತ್ತು ಅವರನ್ನು ಚುನಾವಣೆಯಲ್ಲಿ ಕಣಕ್ಕಿಳಿಸುವುದು ಬಿಜೆಪಿಯ ಕೆಲಸ ಎಂದು ರಾಜ್ಯ ಕಾಂಗ್ರೆಸ್ ವಕ್ತಾರ ಧನಂಜಯ್ ಸಿಂಗ್ ಠಾಕೂರ್ ಆರೋಪಿಸಿದ್ದಾರೆ.

ಶುದ್ಧ ಚಾರಿತ್ರ್ಯ ಹೊಂದಿರುವ ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧ ಬಿಜೆಪಿ ಸುಳ್ಳು ಆರೋಪಗಳನ್ನು ಮಾಡುತ್ತಿದೆ ಎಂದಿದ್ದಾರೆ.

ಬಡನಗರ್ ವಿಧಾನಸಭಾ ಕ್ಷೇತ್ರದ ಟಿಕೆಟ್ ಹಂಚಿಕೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಅವರ ನಿವಾಸದ ಎದುರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಕಾಂಗ್ರೆಸ್ ವೀಕ್ಷಕರಾಗಿ ಅಶೋಕ್ ಚೌಹಾಣ್, ಬೋಸರಾಜು ನೇಮಕ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಶೋಕ್ ಚೌಹಾಣ್ ಮತ್ತು ಪಕ್ಷದ ನಾಯಕ, ಕರ್ನಾಟಕದ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಅವರನ್ನು ತೆಲಂಗಾಣ ವಿಧಾನಸಭೆ ಚುನಾವಣೆಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು (ಎಐಸಿಸಿ) ವಿಶೇಷ ವೀಕ್ಷಕರಾಗಿ ನೇಮಕ ಮಾಡಿದೆ. ಇದಲ್ಲದೆ, ಮಾಧ್ಯಮ ಸಿದ್ಧತೆ ವೀಕ್ಷಕರಾಗಿ ತೆಲಂಗಾಣಕ್ಕೆ ಮಾಜಿ ಸಂಸದ ಅಜಯ್ ಕುಮಾರ್ ಅವರನ್ನು ನೇಮಿಸಲಾಗಿದೆ. ಮಧ್ಯಪ್ರದೇಶಕ್ಕೆ ಪಕ್ಷದ ನಾಯಕಿ ಸುಪ್ರಿಯಾ ಶ್ರೀನೇತ್ ಹಾಗೂ ಛತ್ತೀಸಗಢಕ್ಕೆ ರಾಜ್ಯಸಭೆ ಸದಸ್ಯ ಪ್ರಮೋದ್ ತಿವಾರಿ ಅವರನ್ನು ನೇಮಿಸಲಾಗಿದೆ.

ಸಚಿವ ಭೂಪೇಂದ್ರ ಯಾದವ್ ಕಚೇರಿ ಮುಂದೆ ಪ್ರತಿಭಟನೆ

ಜಬಲ್‌ಪುರ (ಪಿಟಿಐ): ಮಧ್ಯಪ್ರದೇಶ ಚುನಾವಣೆಗೆ ಬಿಜೆಪಿ ಪ್ರಕಟಿಸಿರುವ ಐದನೇ ಪಟ್ಟಿಯಲ್ಲೂ ಸ್ಥಾನ ಪಡೆಯದ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರ ಜಬಲ್‌ಪುರದ ಕಚೇರಿ ಎದುರು ಶನಿವಾರ ಸಂಜೆ ಗಲಾಟೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಯಾದವ್ ಅವರ ಭದ್ರತಾ ಸಿಬ್ಬಂದಿ ಈ ಕುರಿತು ದೂರು ನೀಡಿದ್ದರು. ದೂರು ಆಧರಿಸಿ, ಸಾರ್ವಜನಿಕ ಸೇವೆಯಲ್ಲಿರುವ ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಯುಂಟು ಮಾಡಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ. ಈ ಕೃತ್ಯದಲ್ಲಿ ಭಾಗಿಯಾಗಿದ್ದ ಇತರರನ್ನು ಪತ್ತೆ ಮಾಡುವ ಕೆಲಸ ನಡೆದಿದೆ ಎಂದು ಹೇಳಿದ್ದಾರೆ.

ಅಭಿಲಾಷ್ ಪಾಂಡೆ ಎಂಬುವವರಿಗೆ ಜಬಲ್‌ಪುರ ಉತ್ತರ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಅವರನ್ನು ‘ಹೊರಗಿನವರು’ ಎಂದು ಪರಿಗಣಿಸಿರುವ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ರಾಜ್ಯದ ಇತರ ಕಡೆಗಳಲ್ಲೂ ಇಂಥದ್ದೇ ಘಟನೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಮತ ಚಲಾವಣೆ ಅರಿವು ಮೂಡಿಸಲು ಕಾರ್ಯಕ್ರಮ

ಬಾಲೋಡ್ (ಪಿಟಿಐ): ಛತ್ತೀಸಗಢದ ಬಾಲೋಡ್‌ನ ಜಿಲ್ಲಾಡಳಿತ ಗಾರ್ಬಾ ಮತ್ತು ನವರಾತ್ರಿ ಉತ್ಸವವನ್ನು ಆಯೋಜಿಸುವ ಮೂಲಕ ಜನರಲ್ಲಿ ಮತದಾನದ ಅರಿವು ಮೂಡಿಸುವ ಕೆಲಸ ಮಾಡಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮತದಾನ ಮಾಡಲು ಜನರನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ‘ಕ್ರಮಬದ್ಧ ಮತದಾನ ಶಿಕ್ಷಣ ಮತ್ತು ಮತದಾನದಲ್ಲಿ ಪಾಲ್ಗೊಳ್ಳುವಿಕೆ’ (ಎಸ್‌ವಿಇಇಪಿ) ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಗಿತ್ತು. ಬಾಲೋಡ್ ಜಿಲ್ಲಾಧಿಕಾರಿ ಕುಲ್ದೀಪ್ ಶರ್ಮ, ಜಿಲ್ಲಾ ಪಂಚಾಯತ್ ಸಿಇಒ ರೇಣುಕಾ ಶ್ರೀವಾತ್ಸವ, ಎಸ್‌ಪಿ ನವ್‌ನೀತ್ ಕೌರ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು ಎಂದು ಜಿಲ್ಲಾಡಳಿತದ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ. ಮತ ಚಲಾಯಿಸುವಂತೆ ಶಪಥ ಕೈಗೊಳ್ಳಲು ಜನರಿಗೆ ಜಿಲ್ಲಾಧಿಕಾರಿ ಈ ವೇಳೆ ಹೇಳಿದರು.

ಮಧ್ಯಪ್ರದೇಶ: 22 ಕ್ಷೇತ್ರಗಳಲ್ಲಿ ಮುಸ್ಲಿಂ ಮತ ನಿರ್ಣಾಯಕ

ಭೋಪಾಲ್ (ಪಿಟಿಐ): ಮುಸ್ಲಿಂ ಸಮುದಾಯದ ಮತಗಳು ಮಧ್ಯಪ್ರದೇಶದ 22 ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಣಾಯಕವಾಗಲಿವೆ ಎಂದು ಹೇಳಲಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಬಿಗಿ ಪೈಪೋಟಿ ನಡೆಯಲಿರುವ ಕ್ಷೇತ್ರಗಳಲ್ಲಿ ಮುಸ್ಲಿಂ ಮತಗಳೇ ನಿರ್ಣಾಯಕ ಎನ್ನಲಾಗಿದೆ.

ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಅವರ ಮನವಿ ಮೇರೆಗೆ 2018ರ ವಿಧಾನಸಭೆ ಚುನಾವಣೆಯಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೇ ಮತ ನೀಡಿದ್ದರು. ಇದರಿಂದ ಕಾಂಗ್ರೆಸ್ 10ರಿಂದ 12 ಕ್ಷೇತ್ರಗಳನ್ನು ಹೆಚ್ಚುವರಿ ಗೆಲ್ಲಲು ಸಾಧ್ಯವಾಗಿತ್ತು ಎಂದು ಮಧ್ಯಪ್ರದೇಶ ಮುಸ್ಲಿಂ ವಿಕಾಸ ಪರಿಷದ್‌ನ ಸಂಚಾಲಕ ಮೊಹಮದ್ ಮಾಹಿರ್ ಹೇಳಿದ್ದಾರೆ.

ಗೋಯಲ್ ಬೆಂಬಲಿಗರ ಪ್ರತಿಭಟನೆ

ಗ್ವಾಲಿಯರ್ (ಮಧ್ಯಪ್ರದೇಶ), (ಪಿಟಿಐ): ವಿಧಾನಸಭಾ ಚುನಾವಣೆಗೆ ಟಿಕೆಟ್ ನಿರಾಕರಿಸಿದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ನಿಷ್ಠ, ಬಿಜೆಪಿ ಮುಖಂಡ ಮುನ್ನಾಲಾಲ್ ಗೋಯಲ್ ಅವರ ಬೆಂಬಲಿಗರು ಭಾನುವಾರ ಗ್ವಾಲಿಯರ್‌ನ ಜಯವಿಲಾಸ ಅರಮನೆ ಹೊರಗೆ ಪ್ರತಿಭಟನೆ ನಡೆಸಿದರು.

ಗ್ವಾಲಿಯರ್ ಪೂರ್ವ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಗೋಯಲ್ ಬದಲು ಬಿಜೆಪಿ ಈ ಬಾರಿ ಮಾಯಾ ಸಿಂಗ್ ಅವರನ್ನು ಕಣಕ್ಕಿಳಿಸಿದೆ.

‘ಅನೇಕ ವರ್ಷಗಳಿಂದ ಜನರ ನಡುವೆ ಇಲ್ಲದಿದ್ದವರಿಗೆ ಟಿಕೆಟ್ ನೀಡಲಾಗಿದೆ. ಈ ಬಗ್ಗೆ ಪಕ್ಷದ ನಾಯಕರೊಂದಿಗೆ ಚರ್ಚಿಸುತ್ತೇನೆ. ಐದು ವರ್ಷಗಳಿಂದ ಜನರಿಗಾಗಿ ದಣಿವರಿಯದೆ ಕೆಲಸ ಮಾಡಿದ್ದೇನೆ’ ಎಂದು ಗೋಯಲ್ ಹೇಳಿದರು.

‘ಪಕ್ಷದ ಕಾರ್ಯಕರ್ತರ ಶಕ್ತಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಮುನ್ನಾ (ಗೋಯಲ್) ಪರ ನಿಂತು, ಸಮಸ್ಯೆಗಳನ್ನು ಪರಿಹರಿಸುತ್ತೇನೆ ಎಂದು ಭರವಸೆ ನೀಡುತ್ತೇನೆ’ ಎಂದು ಸಿಂಧಿಯಾ ಹೇಳಿದರು. ಬಳಿಕ ಪ್ರತಿಭಟನಕಾರರು ತೆರಳಿದರು.

ಗೋಯಲ್ 2018ರ ಚುನಾವಣೆ ಯಲ್ಲಿ ಗ್ವಾಲಿಯರ್ ಪೂರ್ವದಿಂದ ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ್ದರು. ಅವರು ಸೇರಿದಂತೆ ಸಿಂಧಿಯಾಗೆ ನಿಷ್ಠರಾಗಿರುವ ಅನೇಕ ಶಾಸಕರು 2020ರಲ್ಲಿ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿದರು. ಕಮಲ್ ನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಪತನಗೊಂಡಿತು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಗೋಯಲ್ ಸೋತರು.

ಬೀಗ ಹಿಡಿದು ಓಡಾಡುತ್ತಿರುವ ಕಮಲ್ ನಾಥ್: ಚೌಹಾಣ್ ವಾಗ್ದಾಳಿ

ಭೋಪಾಲ್ (ಪಿಟಿಐ): ‘ರಾಜ್ಯದಲ್ಲಿ ಕಲ್ಯಾಣ ಕಾರ್ಯಕ್ರಮಗಳನ್ನು ಬಂದ್ ಮಾಡುವ ಉದ್ದೇಶದಿಂದ ಮಧ್ಯಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಕಮಲ್ ನಾಥ್ ಅವರು ಬೀಗ ಹಿಡಿದು ಓಡಾಡುತ್ತಾರೆ’ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಶನಿವಾರ ವಾಗ್ದಾಳಿ ನಡೆಸಿದ್ದಾರೆ.

‘ರಾಜ್ಯದಲ್ಲಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲು ಚೌಹಾಣ್ ಅವರು ಕಿಸೆಯಲ್ಲಿ ತೆಂಗಿನಕಾಯಿ ಹಿಡಿದು ಓಡಾಡುತ್ತಾರೆ ಎಂದು ಕಮಲ್ ನಾಥ್ ಅವರು ಮತ್ತೆ ಮತ್ತೆ ವ್ಯಂಗ್ಯವಾಡಿದ್ದರು. ಅವರನ್ನು ‘ಘೋಷಣಾ ಮಂತ್ರಿ’ ಮತ್ತು ‘ಶಿಲಾನ್ಯಾಸ ಮಂತ್ರಿ’ ಎಂದು ಕರೆದಿದ್ದರು. ಇದಕ್ಕೆ ಚೌಹಾಣ್ ಅವರು ಈ ರೀತಿ ತಿರುಗೇಟು ನೀಡಿದ್ದಾರೆ.

ಪ್ರಿಯಾಂಕಾ ವಿರುದ್ಧ ಕ್ರಮಕ್ಕೆ ಆಗ್ರಹ

ಜೈಪುರ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದುರುದ್ದೇಶದಿಂದ ಸಾರ್ವಜನಿಕ ಸಭೆಯಲ್ಲಿ ಸುಳ್ಳುಗಳನ್ನು ಹೇಳಿದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ರಾಜಸ್ಥಾನ ಬಿಜೆಪಿ ಘಟಕವು ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ನೀಡಿದೆ.

‘ಅಕ್ಟೋಬರ್ 20ರಂದು ದೌಸಾದಲ್ಲಿ ನಡೆದ ಸಭೆಯಲ್ಲಿ ಪ್ರಿಯಾಂಕಾ ಅವರು, ಬಿಜೆಪಿಯು ಜನರ ಕಲ್ಯಾಣದ ಬಗ್ಗೆ ಕಾಳಜಿ ವಹಿಸುವುದಿಲ್ಲ ಎಂದು ಆರೋಪಿಸಿದ್ದರು. ಪ್ರಧಾನಿ ವಿರುದ್ಧ ದುರುದ್ದೇಶಪೂರಿತ ಸುಳ್ಳು ಹೇಳಿಕೆಗಳನ್ನು ನೀಡಿದ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಚುನಾವಣಾ ಆಯುಕ್ತರಿಗೆ ಸಲ್ಲಿಸಿದ ದೂರಿನಲ್ಲಿ ವಿರೋಧ ಪಕ್ಷದ ನಾಯಕ ರಾಜೇಂದ್ರ ರಾಥೋಡ್ ಆಗ್ರಹಿಸಿದ್ದಾರೆ.

ಸಿಕಾರೈ ಗ್ರಾಮದಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಸಭೆಯಲ್ಲಿ ರಾಹುಲ್ ಗಾಂಧಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಯೋಜನೆ ಪ್ರಚಾರಕ್ಕೆ ಯೋಧರು: ಖರ್ಗೆ ಟೀಕೆ

ಪ್ರಜಾವಾಣಿ ವಾರ್ತೆ

> ಸರ್ಕಾರಿ ಯೋಜನೆಗಳ ಮಾರುಕಟ್ಟೆ ಏಜೆಂಟರಂತೆ ಕೆಲಸ ಮಾಡಲು ಯೋಧರಿಗೆ ಒತ್ತಾಯ ಹೇರುವುದು ಸಶಸ್ತ್ರ ಪಡೆಗಳನ್ನು ರಾಜಕೀಯಗೊಳಿಸುವ ಅಪಾಯಕಾರಿ ಹೆಜ್ಜೆ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಅಧಿಕಾರಿಗಳನ್ನು ಹಾಗೂ ಯೋಧರನ್ನು ಆಡಳಿತಾರೂಢ ಬಿಜೆಪಿಯ ರಾಜಕೀಯ ಕಾರ್ಯಕರ್ತರನ್ನಾಗಿ, ಮಾರುಕಟ್ಟೆ ಏಜೆಂಟರಂತೆ ಬಳಸಿಕೊಳ್ಳಲು ಮುಂದಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಟೀಕಿಸಿದ್ದಾರೆ.

ಐದು ರಾಜ್ಯಗಳ ವಿಧಾನಸಭೆಗೆ ಮತ್ತು ಲೋಕಸಭೆಗೆ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಇಡೀ ಆಡಳಿತ ವ್ಯವಸ್ಥೆಯು ‘ಪ್ರಚಾರಕ’ರಂತೆ ಕೆಲಸ ಮಾಡುತ್ತಿದೆ ಎಂದು ಅವರು ದೂರಿದ್ದಾರೆ.

ಹಿರಿಯ ಅಧಿಕಾರಿಗಳನ್ನು ಜಿಲ್ಲೆಗಳ ಮಟ್ಟದಲ್ಲಿ ‘ರಥ ಪ್ರಭಾರಿ’ಗಳನ್ನಾಗಿ ಬಳಸಿಕೊಳ್ಳಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಹಿರಿಯ ಅಧಿಕಾರಿಗಳು ಕಳೆದ ಒಂಬತ್ತು ವರ್ಷಗಳಲ್ಲಿ ಸರ್ಕಾರ ಸಾಧಿಸಿರುವುದನ್ನು ಜನರಿಗೆ ತಿಳಿಸಬೇಕಿದೆ. ವಾರ್ಷಿಕ ರಜೆಯಲ್ಲಿ ಇರುವ ಯೋಧರು ಸರ್ಕಾರದ ಯೋಜನೆಗಳನ್ನು ಪ್ರಚುರಪಡಿಸಬೇಕಿದೆ. ಸರ್ಕಾರದ ಈ ನಡೆಯನ್ನು ಕಟುವಾಗಿ ಟೀಕಿಸಿ, ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

‘ಸರ್ಕಾರಿ ಅಧಿಕಾರಿಗಳು ಮತ್ತು ಯೋಧರ ವಿಚಾರವಾಗಿ ಹೇಳುವುದಾದರೆ, ಸರ್ಕಾರಿ ಯಂತ್ರವನ್ನು ರಾಜಕಾರಣದಿಂದ ಹೊರಗೆ ಇರಿಸಬೇಕಿರುವುದು ಬಹಳ ಅಗತ್ಯ. ಅದರಲ್ಲೂ ಮುಖ್ಯವಾಗಿ, ಚುನಾವಣೆ ಹತ್ತಿರವಿರುವಾಗ ಈ ಕೆಲಸ ಆಗಲೇಬೇಕು’ ಎಂದು ಅವರು ಹೇಳಿದ್ದಾರೆ.

ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಮತ್ತು ಸಿಬಿಐ, ಬಿಜೆಪಿಯ ಚುನಾವಣಾ ಇಲಾಖೆಯ ರೀತಿಯಲ್ಲಿ ಈಗಾಗಲೇ ವರ್ತಿಸುತ್ತಿರುವಾಗ ‘ಇಡೀ ಸರ್ಕಾರಿ ಯಂತ್ರವನ್ನು ಆಡಳಿತಾರೂಢ ಬಿಜೆಪಿಯ ಏಜೆಂಟರಂತೆ ಬಳಸಿಕೊಳ್ಳಲಾಗುತ್ತಿದೆ’ ಎಂದು ಖರ್ಗೆ ದೂರಿದ್ದಾರೆ.

‘ಎಲ್ಲ ಸಂಸ್ಥೆಗಳು, ಏಜೆನ್ಸಿಗಳು, ವಿಭಾಗಗಳು ಮತ್ತು ಇಲಾಖೆಗಳು ಈಗ ಅಧಿಕೃತವಾಗಿ ಪ್ರಚಾರಕರಾಗಿವೆ’ ಎಂದು ಖರ್ಗೆ ಅವರು ಪತ್ರದಲ್ಲಿ ಲೇವಡಿ ಮಾಡಿದ್ದಾರೆ. ಅಧಿಕಾರಿಗಳು ಮತ್ತು ಯೋಧರಿಗೆ ನೀಡಿರುವ ಸೂಚನೆಯನ್ನು ಹಿಂಪಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ.

765 ಜಿಲ್ಲೆಗಳಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಸಮನ್ವಯಕ್ಕೆ ಜಂಟಿ ಕಾರ್ಯದರ್ಶಿ, ನಿರ್ದೇಶಕ ಮತ್ತು ಉಪ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಗಳನ್ನು ‘ರಥ ಪ್ರಭಾರಿ’ಗಳನ್ನಾಗಿ ನೇಮಿಸಲು ಹೊರಡಿಸಿರುವ ಸೂಚನೆಯು ಸೇವಾ ನಿಯಮಗಳ ಸ್ಪಷ್ಟ ಉಲ್ಲಂಘನೆ ಎಂದು ಖರ್ಗೆ ವಿವರಿಸಿದ್ದಾರೆ. ಯಾವುದೇ ಸರ್ಕಾರಿ ನೌಕರ ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ಭಾಗಿಯಾಗುವಂತೆ ಇಲ್ಲ ಎಂದು ನಿಯಮಗಳು ಹೇಳುತ್ತವೆ.

‘ಸರ್ಕಾರಿ ಅಧಿಕಾರಿಗಳು ಮಾಹಿತಿ ಹಂಚುವ ಕೆಲಸ ಮಾಡಬೇಕು ಎಂಬುದು ಒಪ್ಪತಕ್ಕದ್ದು. ಆದರೆ ಅವರು ಸಾಧನೆಗಳನ್ನು ಪ್ರಚುರಪಡಿಸುವ ಕೆಲಸ ಮಾಡಬೇಕು ಎಂಬ ಸೂಚನೆಯು, ಅವರನ್ನು ಆಡಳಿತ ಪಕ್ಷದ ಕಾರ್ಯಕರ್ತರನ್ನಾಗಿಸುವ ಕೆಲಸ. ಕಳೆದ ಒಂಬತ್ತು ವರ್ಷಗಳ ಸಾಧನೆಯನ್ನು ಮಾತ್ರ ಪರಿಗಣಿಸಲಾಗುತ್ತಿದೆ ಎಂಬ ಸಂಗತಿಯು, ಇದು ಬಹಳ ಸ್ಪಷ್ಟವಾದ ರಾಜಕೀಯ ಆದೇಶ ಎಂಬುದನ್ನು ತಿಳಿಸುತ್ತಿದೆ. ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಗೆ ಮೊದಲು ಹೀಗೆ ಮಾಡಲಾಗಿದೆ’ ಎಂದು ಖರ್ಗೆ ಹೇಳಿದ್ದಾರೆ.

ಇಂದಿನ ಸರ್ಕಾರದ ಕೆಲಸಗಳ ಪ್ರಚಾರ ಕೆಲಸಕ್ಕೆ ಸರ್ಕಾರದ ಹಿರಿಯ ಅಧಿಕಾರಿಗಳನ್ನು ನಿಯೋಜಿಸಿದಲ್ಲಿ ದೇಶದ ಆಡಳಿತವು ಮುಂದಿನ ಆರು ತಿಂಗಳವರೆಗೆ ಸ್ಥಗಿತಗೊಳ್ಳಲಿದೆ ಎಂದು ಎಚ್ಚರಿಸಿದ್ದಾರೆ.

ವಾರ್ಷಿಕ ರಜೆಯಲ್ಲಿ ಇರುವ ಯೋಧರು ತಮ್ಮ ಸಮಯವನ್ನು ಸರ್ಕಾರದ ಯೋಜನೆಗಳನ್ನು ಪ್ರಚುರಪಡಿಸಲು ಬಳಸಿಕೊಳ್ಳಬೇಕು ಎಂದ ರಕ್ಷಣಾ ಸಚಿವಾಲಯವು ಅಕ್ಟೋಬರ್ 9ರಂದು ಆದೇಶ ಹೊರಡಿಸಿದೆ. ‘ಯೋಧರ ರಜೆಯನ್ನು ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳಬಾರದು. ತಿಂಗಳುಗಳ ಕಾಲ ಅಥವಾ ವರ್ಷಗಳ ಕಾಲ ಕಷ್ಟದ ಕೆಲಸ ಮಾಡಿದ ಯೋಧರಿಗೆ ತಮ್ಮ ರಜೆಯನ್ನು ಕುಟುಂಬದ ಸದಸ್ಯರ ಜೊತೆ ಕಳೆಯಲು ಪೂರ್ತಿಯಾಗಿ ಸ್ವಾತಂತ್ರ್ಯ ಇರಬೇಕು’ ಎಂದು ಖರ್ಗೆ ಆಗ್ರಹಿಸಿದ್ದಾರೆ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಶಸ್ತ್ರ ಪಡೆಗಳನ್ನು ಯಾವತ್ತಿಗೂ ರಾಜಕಾರಣದಿಂದ ದೂರ ಇರಿಸಬೇಕು. ಯೋಧರ ನಿಷ್ಠೆಯು ಯಾವತ್ತಿಗೂ ದೇಶ ಮತ್ತು ಸಂವಿಧಾನಕ್ಕೆ ಆಗಿರಬೇಕು ಎಂದು ಹೇಳಿದ್ದಾರೆ.

ಕಾಂಗ್ರೆಸ್ ವಿರುದ್ಧ ಜೆ.ಪಿ. ನಡ್ಡಾ ವಾಗ್ಬಾಣ

ನವದೆಹಲಿ (ಪಿಟಿಐ): ಬಡವರನ್ನು ಬಡತನದಲ್ಲಿಯೇ ಇರಿಸುವ ಉದ್ದೇಶ ಹೊಂದಿರುವ ಕಾಂಗ್ರೆಸ್ಸಿಗೆ, ಸಾರ್ವಜನಿಕ ಸೇವೆ ಎಂಬ ಪರಿಕಲ್ಪನೆಯೇ ಗೊತ್ತಿಲ್ಲ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಜರಿದಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದ ದಿನವೇ ನಡ್ಡಾ ಅವರು ಈ ಟೀಕೆ ಮಾಡಿದ್ದಾರೆ. ‘ಯೋಜನೆಗಳು ಎಲ್ಲರನ್ನೂ ತಲುಪಿವೆ ಎಂಬುದನ್ನು ಖಾತರಿಪಡಿಸಲು ಸರ್ಕಾರಿ ಸೇವೆಯಲ್ಲಿ ಇರುವವರು ತಳಮಟ್ಟದವರೆಗೂ ಹೋಗಬೇಕು ಎಂಬುದು ಕಾಂಗ್ರೆಸ್ಸಿನ ಪಾಲಿಗೆ ಸಮಸ್ಯೆಯಂತೆ ಕಾಣುವುದು ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಆಡಳಿತದ ಮೂಲ ಧಾತು ಇದಲ್ಲ ಎಂದಾದರೆ, ಇನ್ಯಾವುದು?’ ಎಂದು ನಡ್ಡಾ ಅವರು ಎಕ್ಸ್ ವೇದಿಕೆಯ ಮೂಲಕ ಪ್ರಶ್ನಿಸಿದ್ದಾರೆ.

‘ಕೇಂದ್ರ ಸರ್ಕಾರದ ಅಧಿಕಾರಿಗಳು ಅನುಷ್ಠಾನಕ್ಕೆ ಬಂದಿರುವ ಯೋಜನೆಗಳ ಬಗ್ಗೆ ಮಾತನಾಡಬೇಕಾಗಿಲ್ಲ ಎಂದು ಹೇಳಿದ್ದು ಯಾರು? ಅವರು ಕಚೇರಿಯಲ್ಲಿ ಮಾತ್ರವೇ ಕುಳಿತಿರಬೇಕೇ, ಯೋಜನೆಗಳ ಪರಿಣಾಮವನ್ನು ಕಾಣಲು ಜನರ ನಡುವೆ ಹೋಗಬಾರದೇ? ಚುನಾಯಿತ ಸರ್ಕಾರವು ಸರಿ ಎಂದು ಭಾವಿಸಿದ ರೀತಿಯಲ್ಲಿ ಜನರ ಸೇವೆ ಮಾಡುವುದು ಅಧಿಕಾರಿಗಳ ಕರ್ತವ್ಯ’ ಎಂದು ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಮಿಲಿಟರಿ ಬಲ ಹೆಚ್ಚಿಸಿದ ಅಮೆರಿಕ

ಇಸ್ರೇಲ್‌ನಿಂದ ಉತ್ತರದ ಸಿರಿಯಾ, ಲೆಬನಾನ್ ಮೇಲೆ ದಾಳಿ • 24 ಗಂಟೆಗಳಲ್ಲಿ 266 ಪ್ಯಾಲೆಸ್ಟೀನ್ ನಾಗರಿಕರು ಸಾವು

ಯುದ್ಧ ಭೂಮಿಯಲ್ಲಿ

- ಉತ್ತರದ ಲೆಬನಾನ್, ಸಿರಿಯಾ ಗಡಿಗೆ ಸನಿಹದ 14 ಕಡೆಗಳಿಂದ ಜನರನ್ನು ಸ್ಥಳಾಂತರಿಸಲಿರುವ ಇಸ್ರೇಲ್
- ಟೆಲ್ ಅವೀವ್ ಗುರಿಯಾಗಿಸಿಕೊಂಡು ಹೆಚ್ಚು ರಾಕೆಟ್‌ಗಳನ್ನು ಹಾರಿಸಿರುವುದಾಗಿ ಹಮಾಸ್ ಬಂಡುಕೋರರು ಹೇಳಿದ್ದಾರೆ.

ಗಾಜಾ/ಜೆರುಸಲೇಂ (ರಾಯಿಟರ್ಸ್): ಇಸ್ರೇಲ್ ಮಿಲಿಟರಿಯು ಗಾಜಾ ಮೇಲಿನ ವಾಯುದಾಳಿಯನ್ನು ಭಾನುವಾರ ಮುಂದುವರಿಸಿದೆ, ಲೆಬನಾನ್ ಮತ್ತು ಸಿರಿಯಾದಲ್ಲಿ ಇರುವ ಹಮಾಸ್ ಬೆಂಬಲಿಗರ ಮೇಲೆಯೂ ದಾಳಿ ನಡೆಸಿದೆ. ಇತ್ತ ಅಮೆರಿಕವು ಮಧ್ಯ ಪ್ರಾಚ್ಯದ ಕಡೆಗೆ ಇನ್ನಷ್ಟು ಹೆಚ್ಚು ಮಿಲಿಟರಿ ಉಪಕರಣಗಳನ್ನು ರವಾನಿಸಿದೆ. ಇದರಿಂದಾಗಿ, ಇಸ್ರೇಲ್-ಹಮಾಸ್ ನಡುವಿನ ಸಮರವು ಇಡೀ ಮಧ್ಯ ಪ್ರಾಚ್ಯಕ್ಕೆ ವಿಸ್ತರಿಸುವ ಭೀತಿಯು ಹೆಚ್ಚಾಗಿದೆ.

24 ಗಂಟೆಗಳ ಅವಧಿಯಲ್ಲಿ 266 ಪ್ಯಾಲೆಸ್ಟೀನ್ ನಾಗರಿಕರು (ಇವರಲ್ಲಿ 117 ಮಕ್ಕಳು) ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ಭಾನುವಾರ ಬೆಳಿಗ್ಗೆ ಇಸ್ರೇಲ್, ನೆರೆಯ ಸಿರಿಯಾ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಸಿರಿಯಾದ ಅಲೆಪ್ಪೊ ಹಾಗೂ ಡಮಾಸ್ಕಸ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಮೇಲೆ ದಾಳಿ ಆಗಿದೆ.

ಇಸ್ರೇಲ್‌ಗೆ ಬೆಂಬಲವಾಗಿ ಅಮೆರಿಕವು ಮಧ್ಯಪ್ರಾಚ್ಯಕ್ಕೆ ಇನ್ನಷ್ಟು ಮಿಲಿಟರಿ ಉಪಕರಣಗಳನ್ನು ರವಾನಿಸಲಿದೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಹೇಳಿದ್ದಾರೆ. ಇರಾನ್ ಹಾಗೂ ಅದರ ಬೆಂಬಲ ಹೊಂದಿರುವ ಕೆಲವು ಸಂಘಟನೆಗಳು ಸಂಘರ್ಷ ಹೆಚ್ಚಿಸುವ ಕೆಲಸವನ್ನು ಈಚೆಗೆ ಮಾಡಿದ್ದು, ಅದಕ್ಕೆ ಪ್ರತಿಯಾಗಿ ಅಮೆರಿಕದ ರಕ್ಷಣಾ ಸನ್ನದ್ಧತೆಯನ್ನು ಹೆಚ್ಚಿಸುವ ಉದ್ದೇಶ ಕೂಡ ನಡೆಯ ಹಿಂದೆ ಇದೆ ಎಂದು ಆಸ್ಟಿನ್ ತಿಳಿಸಿದ್ದಾರೆ.

ಇಸ್ರೇಲ್‌ನ ಮುಂದಿನ ಹಂತದ ಕಾರ್ಯಾಚರಣೆ ಬಗ್ಗೆ ಟಿ.ವಿ. ವಾಹಿನಿಯೊಂದರ ಜೊತೆ ಮಾತನಾಡಿರುವ ಇಸ್ರೇಲ್ ಮಿಲಿಟರಿ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಜೊನಾಥನ್ ಕೊನ್ರಿಕಸ್, ‘ಹಮಾಸ್ ಬಂಡುಕೋರರು ದುರ್ಬಲಗೊಂಡ, ನಿತ್ರಾಣಗೊಂಡ ಸ್ಥಿತಿ ತಲುಪಬೇಕಿದೆ’ ಎಂದಿದ್ದಾರೆ.

ಗಾಜಾ ಪಟ್ಟಿಯ ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ಸ್ಥಳಾಂತರಗೊಳ್ಳಬೇಕು ಎಂಬ ಸೂಚನೆಯು ಇಸ್ರೇಲ್ ಕಡೆಯಿಂದ ಮತ್ತೊಮ್ಮೆ ಬಂದಿದೆ ಎಂದು ಪ್ಯಾಲೆಸ್ಟೀನ್ ನಾಗರಿಕರು ಹೇಳಿದ್ದಾರೆ. ಉತ್ತರ ಭಾಗದಲ್ಲಿಯೇ ಉಳಿದವರನ್ನು ‘ಭಯೋತ್ಪಾದಕರ ಪರ ಅನುಕಂಪ ಹೊಂದಿರುವವರು ಎಂದು ಗುರುತಿಸಲಾಗುತ್ತದೆ’ ಎಂಬ ಸಂದೇಶವಿರುವ ಮಿಲಿಟರಿ ಕರಪತ್ರಗಳನ್ನು ಗಾಜಾ ಪಟ್ಟಿಯ ಮೇಲೆ ಸುರಿಸಲಾಗಿದೆ.

‘ನಿಮ್ಮ ಸುರಕ್ಷತೆಯ ದೃಷ್ಟಿಯಿಂದ ದಕ್ಷಿಣದ ಕಡೆಗೆ ಸ್ಥಳಾಂತರಗೊಳ್ಳಿ. ನಾವು ಗಾಜಾ ನಗರದ ಮೇಲೆ ಆಕ್ರಮಣವನ್ನು ಮುಂದುವರಿಸುತ್ತೇವೆ’ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ಮಕ್ಕಳಿಗೆ ತಿನ್ನಲಿಕ್ಕೆ ಏನಾದರೂ ತಂದುಕೊಡುವುದು ಕೂಡ ಕಷ್ಟವಾಗುತ್ತಿದೆ ಎಂದು ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರು ಹೇಳಿದ್ದಾರೆ.

ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ಭಾನುವಾರ ನಡೆದ ಪ್ರತಿಭಟನೆಯಲ್ಲಿ ಮಹಿಳೆಯೊಬ್ಬರು ಮುಖಕ್ಕೆ ರಕ್ತವರ್ಣವನ್ನು ಬಳಿದುಕೊಂಡು, ಗೊಂಬೆಗಳಿಗೆ ರಕ್ತದ ಬಣ್ಣ ಬಳಿದು, ಗಾಜಾ ಮೇಲಿನ ಇಸ್ರೇಲ್ ದಾಳಿಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು —ಎಎಫ್‌ಪಿ ಚಿತ್ರ

ಗಾಜಾ ಪಟ್ಟಿ ಪ್ರವೇಶಿಸಿದ ಟ್ರಕ್ಕುಗಳು

ರಫಾ (ಎಪಿ): ಪ್ಯಾಲೆಸ್ಟೀನ್ ನಾಗರಿಕರಿಗೆ ಅಗತ್ಯ ವಸ್ತುಗಳನ್ನು ತಂದಿರುವ 17 ಟ್ರಕ್ಕುಗಳು ಭಾನುವಾರ ರಫಾ ಗಡಿಯನ್ನು ದಾಟಿ ಗಾಜಾ ಪಟ್ಟಿಯನ್ನು ಪ್ರವೇಶಿಸಿದವು.

ಶನಿವಾರ 20 ಟ್ರಕ್ಕುಗಳು ಅಗತ್ಯ ವಸ್ತುಗಳನ್ನು ಹೊತ್ತು ಗಾಜಾ ಪಟ್ಟಿಯನ್ನು ಪ್ರವೇಶಿಸಿದ್ದವು. ಗಾಜಾ ಪಟ್ಟಿಗೆ ಇಂಧನವನ್ನು ಒಯ್ಯುವುದಕ್ಕೆ ಇಸ್ರೇಲ್ ಅವಕಾಶ ಕೊಡುತ್ತಿಲ್ಲ.

‘ಇಂಧನ ಇಲ್ಲದಿದ್ದರೆ ಮಾನವೀಯ ನೆಲೆಯಲ್ಲಿ ಮಾಡುತ್ತಿರುವ ಕೆಲಸಗಳು ನಿಲ್ಲುತ್ತವೆ. ಆಸ್ಪತ್ರೆಗಳು ಹಾಗೂ ಬೇಕರಿಗಳು ಕೆಲಸ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ. ಈ ರೀತಿ ಆಗಬಾರದು’ ಎಂದು ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿನ ವಿಶ್ವಸಂಸ್ಥೆಯ ಏಜೆನ್ಸಿಯ ಮುಖ್ಯಸ್ಥ ಫಿಲಿಪ್ ಲಜ್ಜರಿನಿ ಹೇಳಿದ್ದಾರೆ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿಸಂಸಂ/ಗ್ರಂಥ/04/2023–24 ದಿನಾಂಕ: 17–10–2023

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿಯ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಕ್ಕೆ 2024 ಮತ್ತು 2025 ನೇ ಶೈಕ್ಷಣಿಕ ವರ್ಷಕ್ಕೆ ವೈದ್ಯಕೀಯ ಸ್ವದೇಶಿ ಮತ್ತು ವಿದೇಶಿ (ಮುದ್ರಿತ) ಜರ್ನಲ್‌ಗಳ ಖರೀದಿಗಾಗಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಫಾರಂ, ಇ.ಎಂ.ಡಿ. ವಿವರ, ಜರ್ನಲ್ಸ್‌ಗಳ ಪಟ್ಟಿ ಮತ್ತು ಷರತ್ತು ಮುಂತಾದ ವಿವರಗಳನ್ನು https://www.kppp.karnataka.gov.in ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ, ಟೆಂಡರ್‌ಗಳನ್ನು ಸಲ್ಲಿಸಬಹುದು. ಆಸಕ್ತಿಯುಳ್ಳ ಟೆಂಡರ್‌ದಾರರು ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು.

1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 30–10–2023. 2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 15–11–2023 ರ ಅಪರಾಹ್ನ 4.30 ಗಂಟೆಗಿಂತಲೂ ಮುಂಚಿತವಾಗಿ. 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 17–11–2023 ರ ಪೂರ್ವಾಹ್ನ 10.30 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/1799/ಅಡ್ವಟೋರ್/2023–24

ಬಸ್‌ನಲ್ಲಿ ಬಂದು ಬೈಕ್ ಕದ್ದು ಪರಾರಿ

ಕಾಟನ್‌ಪೇಟೆ ಪೊಲೀಸರಿಂದ ಮೂವರ ಬಂಧನ • ₹22.30 ಲಕ್ಷ ಮೌಲ್ಯದ 31 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕಾಟನ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೋಲಾರ ಜಿಲ್ಲೆಯ ಮುಳಬಾಗಿಲು ನಿವಾಸಿಗಳಾದ ಮೊಹಮ್ಮದ್ ಆಸಿಫ್, ಮೊಹಮ್ಮದ್ ವಾಸೀಂ ಹಾಗೂ ಸೈಯದ್ ಆಸಿಫ್ ಬಂಧಿತರು. ಮೂವರು ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು. ಇವರನ್ನು ಬಂಧಿಸಿ, ₹ 22.30 ಲಕ್ಷ ಮೌಲ್ಯದ 31 ಬೈಕ್‌ಗಳು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೂವರು ಆರೋಪಿಗಳು, ಬಾಲ್ಯ ಸ್ನೇಹಿತರು. ಐಷಾರಾಮಿ ಜೀವನಕ್ಕೆ ಹಣ ಹೊಂದಿಸುವುದಕ್ಕಾಗಿ ದ್ವಿಚಕ್ರ ವಾಹನ ಕಳ್ಳತನಕ್ಕೆ ಇಳಿದಿದ್ದರು’ ಎಂದು ಮೂಲಗಳು ತಿಳಿಸಿವೆ.

ಬಸ್‌ನಲ್ಲಿ ಬಂದು ಕೃತ್ಯ: ‘ಆರೋಪಿಗಳು ಮುಳಬಾಗಿಲಿನಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬೆಂಗಳೂರಿನ ಮೆಜೆಸ್ಟಿಕ್‌ಗೆ ರಾತ್ರಿ ಬರುತ್ತಿದ್ದರು. ಕಾಟನ್‌ಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್ ಹಾಗೂ ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿ ಸುತ್ತಾಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಆರೋಪಿಗಳು ಗುರುತಿಸುತ್ತಿದ್ದರು. ನಂತರ, ಹ್ಯಾಂಡಲ್ ಲಾಕ್ ಮುರಿದು ವಾಹನ ಕದಿಯುತ್ತಿದ್ದರು. ಅದೇ ವಾಹನವನ್ನು ಮುಳಬಾಗಿಲುವರೆಗೂ ಚಲಾಯಿಸಿಕೊಂಡು ಹೋಗುತ್ತಿದ್ದರು. ಆರೋಪಿಗಳ ಕೃತ್ಯದ ಬಗ್ಗೆ ಇದುವರೆಗೂ ಯಾವುದೇ ಸುಳಿವು ಸಿಕ್ಕಿರಲಿಲ್ಲ’ ಎಂದು ತಿಳಿಸಿವೆ.

ಮುಖ್ಯಾಂಶಗಳು
- ಮನೆಗಳ ಮುಂಭಾಗ ನಿಲ್ಲಿಸುವ ದ್ವಿಚಕ್ರ ವಾಹನಗಳ ಕಳವು
- ಆರೋಪಿಗಳು ಮುಳಬಾಗಿಲು ತಾಲ್ಲೂಕಿಗೆ ಸೇರಿದ್ದಾರೆ
- ಕೋಲಾರದಲ್ಲೂ ವಾಹನ ಕದ್ದಿದ್ದ ಆರೋಪಿಗಳು

ಅಪರಾಧ ಸುದ್ದಿ

ಆರೋಪಿಗಳಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನಗಳು

ಆಸಿಫ್

ವಾಸೀಂ

ಸೈಯದ್ ಆಸಿಫ್

ಹಲವು ವಾಹನ ಮಾರಾಟ: ‘ಬೆಂಗಳೂರಿನಿಂದ ಕದ್ದುಕೊಂಡು ಹೋಗಿದ್ದ ವಾಹನಗಳನ್ನು ಮುಳಬಾಗಿಲಿನ ನಿರ್ಜನ ಪ್ರದೇಶದಲ್ಲಿ ನಿಲ್ಲಿಸುತ್ತಿದ್ದರು. ಆರಂಭದಲ್ಲಿ ಕಳ್ಳತನ ಮಾಡಿದ್ದ ವಾಹನಗಳನ್ನು ಆರೋಪಿಗಳು ಮಾರಾಟ ಮಾಡಿದ್ದರು. ಇತ್ತೀಚೆಗೆ ಕದ್ದಿದ್ದ ವಾಹನಗಳನ್ನು ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿದ್ದರು. ಸ್ಥಳಕ್ಕೂ ಹೋಗಿ ಪರಿಶೀಲನೆ ನಡೆಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಾರ್ಗಮಧ್ಯೆ ಬಂಧನ: ‘ವಾಹನಗಳ ಕಳ್ಳತನ ಸಂಬಂಧ ಮಾಲೀಕರು ದೂರು ನೀಡಿದ್ದರು. ಹೀಗಾಗಿ, ರಾತ್ರಿ ಹೊತ್ತಿನಲ್ಲಿ ಗಸ್ತು ಹೆಚ್ಚಿಸಲಾಗಿತ್ತು. ಮೂವರು ಆರೋಪಿಗಳು, ಅ. 2ರಂದು ರಾತ್ರಿ ವಾಹನ ಕದ್ದೊಯ್ಯುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಬೆಂಗಳೂರಿನಿಂದ ಮುಳಬಾಗಿಲಿನತ್ತ ಆರೋಪಿಗಳು ವಾಹನದಲ್ಲಿ ಹೊರಟಿದ್ದರು. ಅವನ್ನು ಬೆನ್ನಟ್ಟಿ ಮಾರ್ಗಮಧ್ಯೆಯೇ ಮೂವರನ್ನೂ ಬಂಧಿಸಲಾಯಿತು. ಬೆಂಗಳೂರಿಗೆ ಹಲವು ಬಾರಿ ಬಂದು ಕಳ್ಳತನ ಎಸಗಿ ಪರಾರಿಯಾಗಿದ್ದ ಬಗ್ಗೆ ಆರೋಪಿಗಳು ತಪ್ಪೊಪ್ಪಿಕೊಂಡರು’ ಎಂದು ಹೇಳಿವೆ.

‘ಕೋಲಾರದಲ್ಲೂ ಆರೋಪಿಗಳು ದ್ವಿಚಕ್ರ ವಾಹನಗಳನ್ನು ಕದ್ದಿದ್ದರು. ಆರೋಪಿಗಳ ಬಂಧನವಾಗುತ್ತಿದ್ದಂತೆ ಕೋಲಾರ ಪೊಲೀಸರಿಗೂ ಮಾಹಿತಿ ನೀಡಲಾಗಿದೆ’ ಎಂದು ತಿಳಿಸಿವೆ.

ಪೊಲೀಸ್ ಮಾಹಿತಿದಾರನೇ ಪ್ರಮುಖ ಆರೋಪಿ

ಸಿಸಿಬಿ ಹೆಸರಲ್ಲಿ ಅಪಹರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿ ಹೆಸರಿನಲ್ಲಿ ಮೊಬೈಲ್ ಮಳಿಗೆ ಮಾಲೀಕರೊಬ್ಬರನ್ನು ಅಪಹರಿಸಿ ₹ 5 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಮೊಹಮ್ಮದ್ ಖಾಸಿಂ ಮುಜಾಹಿದ್, ಮುಕ್ತಿಯಾರ್, ವಸಿಂ, ಶಬ್ಬೀರ್ ಹಾಗೂ ಶೋಯೆಬ್ ಬಂಧಿತರು. ಪ್ರಮುಖ ಆರೋಪಿ ಮುಜಾಹೀದ್, ಸಿಸಿಬಿ ಪೊಲೀಸರ ಮಾಹಿತಿದಾರನಾಗಿದ್ದ. ಈತನೇ ಸಂಚು ರೂಪಿಸಿ ಕೃತ್ಯ ಎಸಗಿದ್ದ. ಇತರೆ ಆರೋಪಿಗಳು ಅಪಹರಣಕ್ಕೆ ಸಹಕಾರ ನೀಡಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ವ್ಯಾಪಾರಿ ಕಾಲು ಸಿಂಗ್ ಅವರು ಎಸ್.ಪಿ ರಸ್ತೆಯಲ್ಲಿ ಮೊಬೈಲ್ ಮಳಿಗೆ ಇಟ್ಟುಕೊಂಡಿದ್ದಾರೆ. ನಿತ್ಯವೂ ಮನೆಯಿಂದ ಕಾರಿನಲ್ಲಿ ಮಳಿಗೆಗೆ ಬಂದು, ಅದೇ ಕಾರಿನಲ್ಲಿ ವಾಪಸು ಹೋಗುತ್ತಿದ್ದರು. ಇವರ ಬಗ್ಗೆ ಮಾಹಿತಿ ಕಲೆಹಾಕಿದ್ದ ಆರೋಪಿ ಮುಜಾಹಿದ್, ಅಪಹರಣ ಮಾಡಿ ಹಣ ಕಿತ್ತುಕೊಳ್ಳಲು ಯೋಚಿಸಿದ್ದ’ ಎಂದು ತಿಳಿಸಿದರು.

ಕಾರು ಅಡ್ಡಗಟ್ಟಿ ಅಪಹರಣ: ‘ಕಾಲು ಸಿಂಗ್ ಅವರು ತಮ್ಮ ಕಾರಿನಲ್ಲಿ ಸೆ. 2ರಂದು ವಿ.ವಿ. ಪುರ ಬಳಿ ಹೊರಟಿದ್ದರು. ಕಾರು ಅಡ್ಡಗಟ್ಟಿದ್ದ ಆರೋಪಿಗಳು, ‘ನಾವು ಸಿಸಿಬಿ ಪೊಲೀಸರು. ನೀವು ಗಾಂಜಾ ಸಾಗಿಸುತ್ತಿರುವ ಮಾಹಿತಿ ಇದೆ’ ಎಂದಿದ್ದರು. ಕಾರಿನಲ್ಲಿ ಹತ್ತಿದ್ದ ಆರೋಪಿಗಳು, ಕಾಲು ಸಿಂಗ್ ಅವರನ್ನು ಹಿಂಬದಿ ಸೀಟಿನಲ್ಲಿ ಕೂರಿಸಿದ್ದರು. ನಂತರ, ಕಾರು ಚಲಾಯಿಸಿಕೊಂಡು ಸ್ಥಳದಿಂದ ಹೊರಟಿದ್ದರು’ ಎಂದು ಅಧಿಕಾರಿ ಹೇಳಿದರು.

‘ಕಾಲು ಸಿಂಗ್ ಅವರ ಕಣ್ಣಿಗೆ ಕಪ್ಪುಬಟ್ಟೆ ಕಟ್ಟಿದ್ದ ಆರೋಪಿಗಳು, ಅದೇ ಸ್ಥಿತಿಯಲ್ಲೇ ವಿಲ್ಸನ್ ಗಾರ್ಡನ್ ಬಳಿಯ ಮನೆಯೊಂದಕ್ಕೆ ಕರೆದೊಯ್ದಿದ್ದರು. ಅದೇ ಮನೆಯಲ್ಲಿ ಕಣ್ಣಿನ ಬಟ್ಟೆ ಬಿಚ್ಚಿದ್ದರು. ನಂತರ, ಮಾರಕಾಸ್ತ್ರ ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ಹಣ ನೀಡುವಂತೆ ಬೇಡಿಕೆ ಇರಿಸಿದ್ದರು’ ಎಂದರು.

‘ಕಾಲುಸಿಂಗ್ ಮೊಬೈಲ್‌ನಿಂದ ಅವರ ಸ್ನೇಹಿತನಿಗೆ ಆರೋಪಿಗಳು ಕರೆ ಮಾಡಿದ್ದರು. ‘ನಾವು ಸಿಸಿಬಿ ಪೊಲೀಸರು. ಹಣ ತಂದುಕೊಡಬೇಕು. ಇಲ್ಲದಿದ್ದರೆ, ನಿಮ್ಮ ಸ್ನೇಹಿತನನ್ನು ಗಾಂಜಾ ಪ್ರಕರಣದಲ್ಲಿ ಬಂಧಿಸಿ ಜೈಲಿಗೆ ಕಳುಹಿಸುತ್ತೇವೆ’ ಎಂಬುದಾಗಿ ಹೆದರಿಸಿದ್ದರು ಎಂದರು.

ಸಿಸಿಬಿ ಪೊಲೀಸರು ಬಂಧಿಸಿರುವ ಆರೋಪಿಗಳು

ಪೊಲೀಸರಿಗೆ ಕರೆ ಮಾಡಿದ್ದ ಸ್ನೇಹಿತ

‘ಕಾಲು ಸಿಂಗ್ ಅಪಾಯಕ್ಕೆ ಸಿಲುಕಿರುವುದನ್ನು ಅರಿತಿದ್ದ ಸ್ನೇಹಿತ, ಅಸಲಿ ಪೊಲೀಸರಿಗೆ ವಿಷಯ ತಿಳಿಸಿದ್ದರು. ಕಾಲು ಸಿಂಗ್‌ಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದರು. ಇದು ಗೊತ್ತಾಗುತ್ತಿದ್ದಂತೆ ಆರೋಪಿಗಳು, ಕಾಲು ಸಿಂಗ್ ಅವರನ್ನು ಬಿಟ್ಟು ಕಳುಹಿಸಿದ್ದರು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಅಪಹರಣ ಹಾಗೂ ಹಣಕ್ಕೆ ಬೇಡಿಕೆ ಇರಿಸಿದ್ದ ಬಗ್ಗೆ ಕಾಲು ಸಿಂಗ್ ಅವರು ವಿ.ವಿ.ಪುರ ಠಾಣೆಗೆ ದೂರು ನೀಡಿದ್ದರು. ಆರಂಭದಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿತ್ತು. ಈ ಬಗ್ಗೆ ಮಾಹಿತಿ ಪಡೆದಿದ್ದ ಸಿಸಿಬಿ ಪೊಲೀಸರು, ಎಫ್‌ಐಆರ್ ದಾಖಲಿಸಿ ಆರೋಪಿಗಳನ್ನು ಬಂಧಿಸಿದ್ದಾರೆ’ ಎಂದು ತಿಳಿಸಿದರು.

‘ಪ್ರಮುಖ ಆರೋಪಿ ಮುಜಾಹಿದ್, ಸಿಸಿಬಿ ಅಧಿಕಾರಿಗಳು ತನಗೆ ಪರಿಚಯವೆಂದು ಹೇಳಿಕೊಂಡು ಓಡಾಡುತ್ತಿದ್ದ. ಈತ, ಮತ್ತಷ್ಟು ಜನರನ್ನು ಬೆದರಿಸಿ ಹಣ ಸುಲಿಗೆ ಮಾಡಿರುವ ಮಾಹಿತಿ ಇದೆ’ ಎಂದು ಹೇಳಿದರು.

ಸಾಫ್ಟ್‌ವೇರ್ ಎಂಜಿನಿಯರ್ ಅಡ್ಡಗಟ್ಟಿ ಸುಲಿಗೆ

ಬೆಂಗಳೂರು: ವಿಜಿನಾಪುರ ಬಳಿ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಸಾಫ್ಟ್‌ವೇರ್ ಎಂಜಿನಿಯರೊಬ್ಬರನ್ನು ಅಡ್ಡಗಟ್ಟಿ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೊಯ್ಸಳ ನಗರದ ನಿವಾಸಿಯಾಗಿರುವ ಸಾಫ್ಟ್‌ವೇರ್ ಎಂಜಿನಿಯರ್ ಅವರು ಸುಲಿಗೆ ಬಗ್ಗೆ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅ.17ರಂದು ರಾತ್ರಿ 11 ಗಂಟೆ ಸುಮಾರಿಗೆ ದೂರುದಾರರು ರಸ್ತೆಯಲ್ಲಿ ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಇಬ್ಬರು, ಚಾಕು ತೋರಿಸಿ ಬೆದರಿಸಿದ್ದರು. ಬ್ಯಾಗ್, ಕೈ ಗಡಿಯಾರ ಹಾಗೂ ನಗದು ಕಸಿದುಕೊಂಡು ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

ಒದುಗರಿಗೆ ಡಿಜಿಟಲ್ ಸೌಲಭ್ಯಕ್ಕೆ ಒತ್ತು: ಸಚಿವ ಕೃಷ್ಣಬೈರೇಗೌಡ

ಶಾಖಾ ಗ್ರಂಥಾಲಯ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಸಹಕಾರ ನಗರದ ಕೊಡಿಗೇಹಳ್ಳಿ ವಾರ್ಡ್ ಕಚೇರಿ ಕಟ್ಟಡದ ಮೊದಲನೇ ಮಹಡಿಯಲ್ಲಿ ನೂತನವಾಗಿ ಆರಂಭಿಸಿರುವ ಕೊಡಿಗೇಹಳ್ಳಿ ಶಾಖಾ ಗ್ರಂಥಾಲಯವನ್ನು ಸಚಿವ ಕೃಷ್ಣ ಬೈರೇಗೌಡ ಉದ್ಘಾಟಿಸಿದರು.

ಎರಡು ವರ್ಷಗಳ ಸತತ ಪ್ರಯತ್ನ ಹಾಗೂ ಗ್ರಂಥಾಲಯ ಇಲಾಖೆಯ ಸಹಕಾರದಿಂದ ಇಲ್ಲಿ ಡಿಜಿಟಲ್ ಸೌಲಭ್ಯ ಒಳಗೊಂಡಂತೆ ನೂತನವಾಗಿ ಸಾರ್ವಜನಿಕ ಗ್ರಂಥಾಲಯ ಆರಂಭಿಸಲಾಗಿದೆ. ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಸಾವಿರಾರು ಪುಸ್ತಕಗಳು ದೊರೆಯಲಿವೆ ಎಂದು ಸಚಿವರು ತಿಳಿಸಿದರು.

ಹಿರಿಯ ನಾಗರಿಕರು ಮನೆಯಲ್ಲಿ ಕೂರುವುದಕ್ಕಿಂತ ಹೊರಗೆಬಂದು ಓದುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯವೂ ಸುಧಾರಣೆಯಾಗುತ್ತದೆ. ಈ ಕೇಂದ್ರವನ್ನು ಹೆಚ್ಚು ಬಳಕೆ ಮಾಡಿಕೊಂಡರೆ ಗ್ರಂಥಾಲಯವನ್ನು ಮೇಲ್ದರ್ಜೆಗೇರಿಸಿ, ಹೆಚ್ಚಿನ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ್ ಕುಮಾರ್ ಹೊಸಮನಿ ಮಾತನಾಡಿ, ‘ಈ ಗ್ರಂಥಾಲಯದಲ್ಲಿ 25 ಸಾವಿರಕ್ಕೂ ಹೆಚ್ಚು ಸಾಹಿತ್ಯಿಕ, ವಿವಿಧ ಗ್ರಂಥಗಳು, ಕಲೆ, ನಾಟಕ, ಕಾವ್ಯ, ಕ್ರೀಡೆ, ಮನರಂಜನೆಗೆ ಸಂಬಂಧಿಸಿದ ಹಾಗೂ ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳು ಲಭ್ಯವಿವೆ. ನೂರಕ್ಕೂ ಹೆಚ್ಚು ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು ಈ ಕೇಂದ್ರದಲ್ಲಿವೆ’ ಎಂದು ವಿವರಿಸಿದರು.

ಪಾಲಿಕೆ ಮಾಜಿ ಸದಸ್ಯ ಕೆ.ಎಂ. ಚೇತನ್, ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ, ಕೆ.ಆರ್. ನಟರಾಜ್, ಮುರಳಿ ಹನುಮಂತೇಗೌಡ, ಕೆ.ಆರ್. ರಾಜು ಇದ್ದರು.

ಸಹಕಾರನಗರದಲ್ಲಿ ಕೊಡಿಗೇಹಳ್ಳಿ ಶಾಖಾ ಗ್ರಂಥಾಲಯವನ್ನು ಸಚಿವ ಕೃಷ್ಣಬೈರೇಗೌಡ ಉದ್ಘಾಟಿಸಿದರು. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ್ ಕುಮಾರ್ ಹೊಸಮನಿ, ಪಾಲಿಕೆ ಮಾಜಿ ಸದಸ್ಯ ಕೆ.ಎಂ. ಚೇತನ್, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಕೆ. ಆರ್.ರಾಜು ಇದ್ದರು

ಸಮರ್ಪಕ ಕಸ ವಿಲೇವಾರಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕಸ ವಿಲೇವಾರಿ ವಿಚಾರದಲ್ಲಿ ಜನರು ನಿರ್ಲಕ್ಷ್ಯ ತೋರುತ್ತಿದ್ದಾರೆ. ಎಲ್ಲೆಂದರಲ್ಲಿ ಕಸ ಬಿಸಾಡುತ್ತಿದ್ದಾರೆ. ಇದರಿಂದ ಪರಿಸರ ಕಲುಷಿತವಾಗಿ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ ಎಂದು ಸಾತನೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಾಲ ಎಂ. ಸುಬ್ರಮಣಿ ಎಚ್ಚರಿಸಿದರು.

ಬೈಯಪ್ಪನಹಳ್ಳಿ ಸರ್ಕಾರಿ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಸಾತನೂರು ಗ್ರಾಮ ಪಂಚಾಯಿತಿಯ 2023-24ನೇ ಸಾಲಿನ ಮೊದಲನೆ ಸುತ್ತಿನ ಗ್ರಾಮ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ತಮ್ಮ ಮನೆಯ ರೀತಿಯಲ್ಲೇ ಗ್ರಾಮ ಸ್ವಚ್ಛವಾಗಿರಬೇಕೆಂಬ ಉದಾರತೆ ಬೆಳೆಸಿಕೊಳ್ಳಬೇಕು. ಹಸಿ ಮತ್ತು ಒಣ ಕಸವನ್ನು ವಿಂಗಡಿಸಿ, ಕಸದ ವಾಹನಕ್ಕೆ ನೀಡಬೇಕು ಎಂದು ಮನವಿ ಮಾಡಿದರು.

ಗ್ರಾಮ ಪಂಚಾಯಿತಿಗೆ ನೂತನ ಕಟ್ಟಡ ನಿರ್ಮಿಸಬೇಕೆಂದು ಜನರು ಹಾಗೂ ಸದಸ್ಯರು ಇಂಗಿತ ವ್ಯಕ್ತಪಡಿಸಿದ್ದಾರೆ. ಎಲ್ಲರ ಸಹಕಾರ ಇದ್ದರೆ ಮುಂದಿನ ವರ್ಷದೊಳಗೆ ನೂತನ ಕಟ್ಟಡ ನಿರ್ಮಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಅವರು ತಿಳಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮುನಿತಿಮ್ಮರಾಯಪ್ಪ, ಸದಸ್ಯರಾದ ಜಿಲಾನಿ, ಮಾನಸ, ಜಾಹೇರ ತಸ್ಲೀಂ, ಸುಶ್ಮಿತಾ, ಸುಜಾತ, ಅಶ್ವಿನಿ, ಕೃಷ್ಣಪ್ಪ, ಎನ್. ನಾರಾಯಣಸ್ವಾಮಿ, ಶಿವಣ್ಣ, ಪಿಡಿಒ ಬಿ. ಮಮತಾ, ಕಾರ್ಯದರ್ಶಿ ಎಂ.ಸಿ. ಶಿವಪ್ರಸಾದ್ ಇದ್ದರು.

ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸಾತನೂರು ಗ್ರಾಮ ಸಭೆಯಲ್ಲಿ ಬಹುಮಾನವಾಗಿ ಕೈಗಡಿಯಾರ ನೀಡಲಾಯಿತು

ರಾಷ್ಟ್ರ ನಿರ್ಮಾಣ: ವಕೀಲರ ಪಾತ್ರ ಹಿರಿದು

ಹೈಕೋರ್ಟ್ ನ್ಯಾಯಮೂರ್ತಿ ಜೆ.ನರೇಂದರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ ದೊಡ್ಡದಿದೆ. ಆದ್ದರಿಂದ ವಕೀಲರಾದವರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಜೆ.ನರೇಂದರ್ ತಿಳಿಸಿದರು.

ಆರ್.ವಿ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಲಾ ನಗರದಲ್ಲಿ ಭಾನುವಾರ ಆಯೋಜಿಸಿದ ‘ವೈ20 ಇಂಡಿಯಾ ಟಾಕ್ ಅಂಡರ್ ಜಿ20’ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

‘ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವಲ್ಲಿ ನ್ಯಾಯಾಂಗ ಪ್ರಮುಖ ಪಾತ್ರವಹಿಸುತ್ತದೆ. ಸರ್ಕಾರದ ನೀತಿಯ ಮೇಲೆ ಪ್ರಭಾವ ಬೀರಲು, ಸಮಾಜದ ಇತರ ಸದಸ್ಯರಲ್ಲಿ ಕಾನೂನಿನ ಅರಿವು ಹರಡಲು ನ್ಯಾಯದ ಪಾಲಕರಾಗಿ ಕಾನೂನು ವೃತ್ತಿಪರರು ಸಕ್ರಿಯರಾಗಬೇಕು. ಯುವಕರು ಕೇವಲ ಭವಿಷ್ಯವಲ್ಲ, ಪ್ರಸ್ತುತ ಮತ್ತು ವರ್ತಮಾನವೂ ಹೌದು’ ಎಂದು ಹೇಳಿದರು.

ನ್ಯಾಯಮೂರ್ತಿ ಎಂ.ಐ. ಅರುಣ್, ‘ಸಾಮಾಜಿಕ ಬದಲಾವಣೆಗೆ ಕಾನೂನು ಸಾಧನ. ನಮ್ಮ ಯುವಜನರು ಸಂವಿಧಾನದ ಬಗ್ಗೆ ತಿಳಿದುಕೊಳ್ಳಬೇಕು. ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ಬಗ್ಗೆ ಸಾಮಾನ್ಯ ಪ್ರಜ್ಞೆಯನ್ನು ಹೊಂದಿರುವುದು ಅತ್ಯಗತ್ಯ’ ಎಂದರು.

ಆರ್.ವಿ. ವಿಶ್ವವಿದ್ಯಾಲಯದ ಕುಲಪತಿ ವೈ.ಎಸ್.ಆರ್. ಮೂರ್ತಿ, ‘ಬಡತನ, ಹವಾಮಾನ ಬದಲಾವಣೆಯಂತಹ ಸಮಸ್ಯೆಗಳು ಕಾಡುತ್ತಿವೆ. ಕಾನೂನು ವೃತ್ತಿಪರರಾಗಿ ಉತ್ತಮ ಭವಿಷ್ಯವನ್ನು ರೂಪಿಸುವುದು ನಮ್ಮ ಜವಾಬ್ದಾರಿ’ ಎಂದರು.

ಕಾರ್ಯಕ್ರಮವನ್ನು ವೈ.ಎಸ್‌ಆರ್ ಮೂರ್ತಿ ಉದ್ಘಾಟಿಸಿದರು. ನ್ಯಾ.ಜೆ.ನರೇಂದರ್ ಹಾಗೂ ನ್ಯಾ.ಎಂ.ಐ. ಅರುಣ್ ಇದ್ದಾರೆ

ಅರಣ್ಯ ಅತಿಕ್ರಮ ಪ್ರವೇಶ: ದೂರು

ಮೈಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಅತಿಕ್ರಮ ಪ್ರವೇಶ ಮಾಡಿದ ಐವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ವನ್ಯಜೀವಿ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿ ಗುರುವಾರ ಸಂಜೆ 7ಕ್ಕೆ ವ್ಯಾಮ್ಸಿ ಮೆರ್ಲಾ, ಮೋಟಾರ್ ರೇಸರ್ ಚೇತನ್ ಶಿವರಾಮ್, ವಿಜಯ್ ರಾವ್, ಲೋಕೇಶ್ ಗೌಡ ಸೇರಿದಂತೆ ಮಹಿಳೆಯೊಬ್ಬರು ಅರಣ್ಯ ಪ್ರವೇಶಿಸಿದ್ದರು’ ಎಂದು ನಾಗರಹೊಳೆ ಹುಲಿ ಯೋಜನಾ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ಪ್ರಕರಣ ದಾಖಲಿಸಿದ್ದಾರೆ. ಆರೋಪಿಗಳು ಎಲ್ಲಿಯವರು ಎನ್ನುವುದು ತಿಳಿದುಬಂದಿಲ್ಲ.

‘ಡಿ.ಬಿ.ಕುಪ್ಪೆ ಅರಣ್ಯ ವಲಯದ ಉದ್ಬೂರು ಗೇಟ್‌ನಿಂದ ಸೂಕ್ಷ್ಮ ಅರಣ್ಯ ಪ್ರದೇಶಕ್ಕೆ ಅತಿಕ್ರಮ ಪ್ರವೇಶ ಮಾಡಿರುವ ಆರೋಪಿಗಳು, ಕೇರಳ ಗಡಿಯ ಕೈಮರಕ್ಕೆ ಹೋಗಿದ್ದಾರೆ. ರಾತ್ರಿ ವೇಳೆ ಅರಣ್ಯ ಮಾರ್ಗಗಳನ್ನು ಬಳಸುವಂತಿಲ್ಲ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಶ್ರೀಮಂತರ ಅಪಹರಿಸುತ್ತಿದ್ದ ತಂಡದ ಬಂಧನ

ಹಾಸನ: ಶ್ರೀಮಂತರನ್ನು ಅಪಹರಿಸಿ, ಹಣಕ್ಕೆ ಬೇಡಿಕೆ ಇಡುತ್ತಿದ್ದ ಜಾಲವನ್ನು ಜಿಲ್ಲೆಯ ಪೊಲೀಸರು ಭೇದಿಸಿದ್ದು, ಗುಪ್ತಚರ ಇಲಾಖೆಯ ಸಬ್ ಇನ್‌ಸ್ಪೆಕ್ಟರ್ ಸೇರಿ ಆರು ಮಂದಿಯನ್ನು ಬಂಧಿಸಿದ್ದಾರೆ.

ಶಾಸಕ ಎಚ್.ಡಿ.ರೇವಣ್ಣ ಅವರ ಆಪ್ತ ಗುತ್ತಿಗೆದಾರ ಅಶ್ವತ್ಥ ನಾರಾಯಣಗೌಡ ಅವರ ಮೇಲೆ ಇತ್ತೀಚೆಗೆ ನಡೆದ ದಾಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿದ ಪೊಲೀಸರು, ಆರೋಪಿಗಳನ್ನು ಪತ್ತೆ ಹಚ್ಚಿದ್ದಾರೆ. ಬೆಂಗಳೂರಿನ ಸತೀಶ್, ಮುರುಗನ್, ಮಧುಸೂದನ್, ಅಶೋಕ್, ಚನ್ನರಾಯಪಟ್ಟಣದ ತೇಜಸ್ವಿ, ಅರವಿಂದ್ ಎಂಬುವರನ್ನು ಬಂಧಿಸಲಾಗಿದೆ. ಮತ್ತಿಬ್ಬರ ಬಂಧನಕ್ಕೆ ಶೋಧ ಮುಂದುವರಿದಿದೆ.

ಹೋಟೆಲ್ ಬಗ್ಗೆ ಅನಿಸಿಕೆ ಬರೆದರೆ ಹಣ: ವಂಚನೆ

ಬೆಂಗಳೂರು: ಹೋಟೆಲ್ ಬಗ್ಗೆ ಆನ್‌ಲೈನ್‌ನಲ್ಲಿ ಒಳ್ಳೆಯ ಅನಿಸಿಕೆ (ರಿವ್ಯೂ) ಬರೆದರೆ ಹಣ ನೀಡುವುದಾಗಿ ಹೇಳಿ ವಂಚಿಸಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸ್ಥಳೀಯ ನಿವಾಸಿಯೊಬ್ಬರು ವಂಚನೆ ಸಂಬಂಧ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರಿಗೆ ಆನ್‌ಲೈನ್ ಮೂಲಕ ಆರೋಪಿ ಪರಿಚಯವಾಗಿತ್ತು. ‘ಹೋಟೆಲ್ ಬಗ್ಗೆ ಆನ್‌ಲೈನ್‌ನಲ್ಲಿ ಒಳ್ಳೆಯ ರೀತಿಯಲ್ಲಿ ಅನಿಸಿಕೆ ಬರೆದರೆ ಹಣ ನೀಡಲಾಗುವುದು. ಒಂದು ಅನಿಸಿಕೆಗೆ ₹ 50 ಸಿಗುತ್ತದೆ’ ಎಂದು ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ಆರೋಪಿ ಹೇಳಿದ್ದ ಹೋಟೆಲ್ ಹೆಸರಿನಲ್ಲಿ ಅನಿಸಿಕೆ ಬರೆದಿದ್ದರು.’

‘ಮೊದಲ ಅನಿಸಿಕೆಗೆ ಆರೋಪಿ ₹ 50 ಪಾವತಿಸಿದ್ದ. ₹ 50 ಬಂದಿದ್ದರಿಂದ ದೂರುದಾರ, ಮತ್ತಷ್ಟು ಹೋಟೆಲ್‌ಗಳ ಬಗ್ಗೆ ಅನಿಸಿಕೆಗಳನ್ನು ಬರೆಯುವುದಾಗಿ ಹೇಳಿದ್ದರು. ಅವಾಗಲೇ ಆರೋಪಿ, ನೋಂದಣಿ ಹಾಗೂ ಇತರೆ ಶುಲ್ಕದ ಹೆಸರಿನಲ್ಲಿ ಹಂತ ಹಂತವಾಗಿ ₹ 93 ಸಾವಿರ ಪಡೆದಿದ್ದ. ಇದಾದ ನಂತರ ಆರೋಪಿ, ನಾಪತ್ತೆಯಾಗಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆನೆ ದಂತ ವಶ ಮೂವರ ಬಂಧನ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ಹನೂರು ತಾಲ್ಲೂಕಿನ ಪಿ.ಜಿ.ಪಾಳ್ಯ ಗ್ರಾಮದ ಮುಖ್ಯ ರಸ್ತೆಯಲ್ಲಿ ಕಾರಿನಲ್ಲಿ ಆನೆ ದಂತಗಳನ್ನು ಸಾಗಿಸುತ್ತಿದ್ದ ಮೂವರನ್ನು ನಗರದ ಅರಣ್ಯ ಸಂಚಾರ ದಳದ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಚಾಮರಾಜನಗರ ತಾಲ್ಲೂಕಿನ ಅಂಕನಶೆಟ್ಟಿಪುರದ ಶಿವಮೂರ್ತಿ(57), ತಮಿಳುನಾಡಿನ ತಿರುಪೂರು ಜಿಲ್ಲೆಯ ರವನಪುರಂ ಗ್ರಾಮದ ಶಿವಕುಮಾರ್ (44) ಹಾಗೂ ಅಂಡಿಪಾಳ್ಯಂ ಚಿನ್ನಕವುಂಡನ್ ಅಂತೋಣಿ (46) ಆರೋಪಿಗಳು.

ಬಂಧಿತರಿಂದ ಎರಡು ದಂತ ಹಾಗೂ ಕಾರನ್ನು ಜಪ್ತಿ ಮಾಡಲಾಗಿದೆ.

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ವಿದ್ಯಾರಣ್ಯಪುರ ದೊಡ್ಡಬೆಟ್ಟಹಳ್ಳಿ ರಸ್ತೆಯಲ್ಲಿರುವ ಗುಂಡಿ

‘ರಸ್ತೆ ಗುಂಡಿ ಮುಚ್ಚಿ’

ವಿದ್ಯಾರಣ್ಯಪುರ ಅಟ್ಟೂರ್ ವಾರ್ಡ್‌ನ ದೊಡ್ಡಬೆಟ್ಟಹಳ್ಳಿ ರಸ್ತೆಯು ಸಂಪೂರ್ಣ ಹದಗೆಟ್ಟಿದೆ. ಈ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿರುವ ಕಾರಣ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ನಗರದಲ್ಲಿ ಸಣ್ಣ ಮಳೆ ಸುರಿದರೂ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳು ತುಂಬಿಕೊಳ್ಳುತ್ತವೆ. ದ್ವಿಚಕ್ರ ವಾಹನ ಸವಾರರು ಗುಂಡಿಯಲ್ಲಿ ಬಿದ್ದು ಕೈಕಾಲು ಮುರಿದುಕೊಂಡಿದ್ದಾರೆ. ಇದು ಸಂಚಾರ ದಟ್ಟಣೆಗೂ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಲಾಗಿದೆ.

ತ್ರಿಲೋಕ, ಸ್ಥಳೀಯ ನಿವಾಸಿ

ಸದಾಮಂಗಲದದ ರಸ್ತೆಯ ದುಃಸ್ಥಿತಿ

‘ರಸ್ತೆ ಅಭಿವೃದ್ಧಿಗೊಳಿಸಿ’

ಮಹದೇವಪುರ ವಿಧಾನಸಭೆ ಕ್ಷೇತ್ರದ ಕಾಡುಗೋಡಿಯ ಸದಾಮಂಗಲದಲ್ಲಿ ಒಳಚರಂಡಿ ಕಾಮಗಾರಿಗಾಗಿ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ಈ ಭಾಗದ ಜನಸಂಚಾರಕ್ಕೆ ಅನನುಕೂಲವಾಗಿದೆ. ಚುನಾವಣೆಗೆ ಮುಂಚಿತವಾಗಿ ರಸ್ತೆ ಅಭಿವೃದ್ಧಿ ಪಡಿಸಲಾಗುವುದು ಎಂಬ ಭರವಸೆ ನೀಡಿದ್ದ ಜನಪ್ರತಿನಿಧಿಗಳು ಚುನಾವಣೆ ನಂತರ ಇತ್ತ ಗಮನ ಹರಿಸಿಲ್ಲ. ಮಳೆ ಬಂದರೆ ಈ ರಸ್ತೆಯೆಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಇದರಲ್ಲಿ ಸಂಚಾರ ಮಾಡುವುದಕ್ಕೆ ವಾಹನ ಸವಾರರು ಹರಸಾಹಸ ಪಡಬೇಕಾಗಿದೆ. ವಾಹನಗಳು ರಸ್ತೆಯಲ್ಲಿಯೇ ಸಿಲುಕಿಕೊಳ್ಳುತ್ತಿವೆ. ರಸ್ತೆ ಹದಗೆಟ್ಟ ಪರಿಣಾಮ ಇಲ್ಲಿಗೆ ಆಟೊದವರು ಬರಲು ಹಿಂದೇಟು ಹಾಕುತ್ತಿದ್ದಾರೆ. ಕೂಡಲೇ ಈ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ವಿಶಾಲ ರೆಡ್ಡಿ, ಸ್ಥಳೀಯ ನಿವಾಸಿ

ರಸ್ತೆ ಮಧ್ಯೆಯೇ ಚರಂಡಿ ತ್ಯಾಜ್ಯ

ಚರಂಡಿಯಿಂದ ತೆಗೆದ ತ್ಯಾಜ್ಯವನ್ನು ಉಪ್ಪಾರಪೇಟೆಯ ಆಸ್ಪತ್ರೆ ರಸ್ತೆಯ ಮಧ್ಯದಲ್ಲಿ ಹಾಕಲಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಈ ತ್ಯಾಜ್ಯದ ಮೇಲೆ ಸಂಚರಿಸುವ ಕಾರಣ ಇಡೀ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಬೆಂಗಳೂರು ಜಲಮಂಡಳಿ ಸಿಬ್ಬಂದಿ ನಿರ್ಲಕ್ಷ್ಯದಿಂದ ಈ ಸಮಸ್ಯೆ ಉದ್ಭವಿಸಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಮ್ಯಾನ್‌ಹೋಲ್‌ಗಳಿಂದ ತೆಗೆದ ಕಸವನ್ನು ರಸ್ತೆ ಮಧ್ಯದಲ್ಲಿ ಹಾಕಿ ಹೋಗುವ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಬೇಕು. ರಸ್ತೆಯ ಮಧ್ಯದಲ್ಲಿ ಹಾಕಿರುವ ಕಸವನ್ನು ಕೂಡಲೇ ತೆರವುಗೊಳಿಸಿ ನಗರದ ಸೌಂದರ್ಯ ಕಾಪಾಡಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ

ಉಪ್ಪಾರಪೇಟೆ ರಸ್ತೆಯ ಮಧ್ಯದಲ್ಲಿ ಹಾಕಿರುವ ತ್ಯಾಜ್ಯ

ರಸ್ತೆ ಕಾಮಗಾರಿ ವಿಳಂಬ

ಮಹದೇವಪುರ ವಿಧಾನಸಭೆ ಕ್ಷೇತ್ರದ ಹೂಡಿ ವಾರ್ಡ್‌ನ ಬಿಳೆಶಿವಾಲೆ ಗ್ರಾಮದ ರಸ್ತೆ ಕಾಮಗಾರಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿದೆ. ವಿಧಾನಸಭೆ ಚುನಾವಣೆಗೂ ಮುನ್ನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಆದರೆ, ಇದುವರೆಗೂ ಪೂರ್ಣಗೊಂಡಿಲ್ಲ. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ಸಂಚಕಾರ ಬಂದಿದೆ. ಮಳೆ ಬಂದರೆ ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಓಡಾಡಲು ಹರಸಾಹಸ ಪಡಬೇಕಾಗಿದೆ. ಈ ಬಗ್ಗೆ ಸ್ಥಳೀಯ ಬಿಬಿಎಂಪಿ ಎಂಜಿನಿಯರ್ ಹಾಗೂ ಗುತ್ತಿಗೆದಾರರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ.

ಕಾಂತ, ಸ್ಥಳೀಯ ನಿವಾಸಿ

ಪಾದಚಾರಿ ಮಾರ್ಗದಲ್ಲಿ ಕಸ

ಮೈಸೂರು ರಸ್ತೆಯ ಹೊಸಗುಡ್ಡದಹಳ್ಳಿಯ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಮಳೆಯಾದಾಗ, ಇಲ್ಲಿ ಸಂಗ್ರಹವಾಗುವ ಕಸವೆಲ್ಲ ಮುಖ್ಯರಸ್ತೆಯ ಮೇಲೆ ಕೊಚ್ಚಿ ಹೋಗುತ್ತದೆ. ಇದರಿಂದ, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಜತೆಗೆ ಇದು ಸೊಳ್ಳೆಗಳ ತಾಣವಾಗಿ ಮಾರ್ಪಟ್ಟಿದ್ದು, ರೋಗಗಳು ಹರಡುವ ಭೀತಿ ಶುರುವಾಗಿದೆ. ಆದ್ದರಿಂದ, ಬಿಬಿಎಂಪಿ ಕೂಡಲೇ ಈ ಕಸವನ್ನು ವಿಲೇವಾರಿ ಮಾಡುವ ಮೂಲಕ ನಗರದ ಸೌಂದರ್ಯ ಹಾಗೂ ಸ್ವಚ್ಛತೆ ಕಾಪಾಡಬೇಕು.

ಶಿವಾನಂದ, ಸ್ಥಳೀಯ ನಿವಾಸಿ

‘ನಿರಂತರ ಎಟಿಎಂ ಸೇವೆ ನೀಡಿ’

ಕಾವಲಬೈರಸಂದ್ರದ ಎಂ.ಎಂ. ಬಡಾವಣೆಯಲ್ಲಿರುವ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಎಟಿಎಂ ಕೇವಲ ಕಚೇರಿ ವೇಳೆಯಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಬ್ಯಾಂಕ್‌ಗಳು ತಮ್ಮ ಗ್ರಾಹಕರು ಸೇರಿದಂತೆ ಬೇರೆ ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಎಟಿಎಂಗಳ ಮೂಲಕ ವಿಸ್ತೃತ ಸೇವೆ ನೀಡುತ್ತವೆ. ಇದರಿಂದ, ಸಾರ್ವಜನಿಕರು ತುರ್ತು ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಹಾಯವಾಗುತ್ತದೆ. ಆದರೆ, ಇಲ್ಲಿನ ಎಟಿಎಂ ಕೇವಲ ಬೆಳಿಗ್ಗೆ ಮಾತ್ರ ತೆರೆಯುವುದರಿಂದ ಈ ಭಾಗದ ನಿವಾಸಿಗಳಿಗೆ ಅನನುಕೂಲವಾಗಿದೆ. ಕೂಡಲೇ ಇಲ್ಲಿನ ಎಟಿಎಂ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು.

ವಿಶ್ವನಾಥ್, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗದಲ್ಲಿ ಗುಂಡಿ’

ರಾಜರಾಜೇಶ್ವರಿ ನಗರದ ಜವಾಹರಲಾಲ್ ನೆಹರೂ ರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪೈಪ್‌ಲೈನ್‌ನಲ್ಲಿ ವಾಲ್ವ್‌ವಿರುವ ಜಾಗವನ್ನು ತೆರೆದ ಸ್ಥಿತಿಯಲ್ಲಿಡಲಾಗಿದೆ. ಇದು ಮುಖ್ಯರಸ್ತೆಯಲ್ಲೇ ಇರುವುದರಿಂದ ಪ್ರಯಾಣಿಕರ ಸಂಚಾರಕ್ಕೆ ಅಡಚಣೆಯಾಗಿದೆ. ಈ ರಸ್ತೆಯ ಪಕ್ಕದಲ್ಲೇ ಉದ್ಯಾನವಿದ್ದು, ದಿನವೂ ಮಕ್ಕಳು, ವೃದ್ಧರು ಮತ್ತು ಮಹಿಳೆಯರ ಓಡಾಟಕ್ಕೆ ಸಮಸ್ಯೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಶೀಘ್ರ ಕ್ರಮ ಕೈಗೊಳ್ಳಬೇಕು.

ಸಿದ್ದಪ್ಪ, ರಾಜರಾಜೇಶ್ವರಿ ನಗರ

ಜವಾಹರಲಾಲ್ ನೆಹರೂ ರಸ್ತೆಯ ನಡುವೆ ಗುಂಡಿ

ಸಂಪರ್ಕ ರಸ್ತೆ ದುರಸ್ತಿ

ಎಂ. ಚಿನ್ನಸ್ವಾಮಿ ಕ್ರೀಡಾಂಗಣ ಗೇಟ್ ನಂಬರ್ 7,8,9,10 ಮತ್ತು 11 ಸಂಪರ್ಕ ಕಲ್ಪಿಸುವ ರಸ್ತೆಯನ್ನು ದುರಸ್ತಿಗೊಳಿಸಲಾಗಿದೆ. ‘ಪ್ರಜಾವಾಣಿ’ ಕುಂದು ಕೊರತೆ ವಿಭಾಗದಲ್ಲಿ ಆಗಸ್ಟ್ 28ರಂದು ‘ರಸ್ತೆ ದುರಸ್ತಿಗೊಳಿಸಿ’ ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ಇದೇ 19ರಂದು ರಸ್ತೆಗೆ ಡಾಂಬರೀಕರಣ ಮಾಡಿದ್ದಾರೆ.

ವರದಿ ಪರಿಣಾಮ

ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಡಾಂಬರೀಕಣಗೊಳಿಸಿರುವುದು

ಕೇಬಲ್ ತೆರವು

ರಾಜರಾಜೇಶ್ವರಿ ನಗರದ ಹೊರವರ್ತುಲ ರಸ್ತೆಯ ಬೆಂಗಳೂರು ವಿಶ್ವವಿದ್ಯಾಲಯದ ಪಾದಚಾರಿ ಮಾರ್ಗಗಳಲ್ಲಿ ವಿದ್ಯುತ್ ಪರಿವರ್ತಕಕ್ಕೆ ಹಾಕಲಾಗಿದ್ದ ಕೇಬಲ್ ತೆರವುಗೊಳಿಸಿದ್ದಾರೆ. ‘ಪ್ರಜಾವಾಣಿ’ ಕುಂದು ಕೊರತೆ ವಿಭಾಗದಲ್ಲಿ ಇದೇ 16ರಂದು ‘ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ಪರಿವರ್ತಕ’ ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದಾರೆ.

ವಿದ್ಯತ್ ಪರಿವರ್ತಕ್ಕೆ ಹಾಕಿದ್ದ ಕೇಬಲ್ ತೆರವುಗೊಳಿಸಿರುವುದು

ನವವರ್ಣ

ನವರಾತ್ರಿಯ ಎಂಟನೆಯ ದಿನ ಆದಿಶಕ್ತಿಯನ್ನು 'ಮಹಾಗೌರಿ'ಯ ಸ್ವರೂಪದಲ್ಲಿ ಪೂಜಿಸಲಾಗುತ್ತದೆ. 'ಗೌರವರ್ಣ'ದಲ್ಲಿರುವ ಜಗನ್ಮಾತೆಯು ತಪಸ್ಸಿಗೆ ಸಂಕೇತವಾಗಿದ್ದಾಳೆ; ತಾಯಿಯು ಬಿಳುಪಿಗೇ ಬಿಳುಪಾಗಿದ್ದಾಳೆ. ಗುಲಾಬಿಬಣ್ಣವು ಸ್ತ್ರೀತನದ ಕೋಮಲತೆಯನ್ನು ಸೂಚಿಸುತ್ತದೆ. ಜಗತ್ತನ್ನೇ ಧರಿಸಿರುವ 'ಶಕ್ತಿ'ಯು ನಮಗಾಗಿ ಚೆಲುವಾಗಿಯೂ ಸೌಮ್ಯವಾಗಿಯೂ ಒದಗಬಲ್ಲಳು ಎಂಬುದಕ್ಕೆ ಈ ಬಣ್ಣ ಸಂಕೇತ. ದೇವಿಯ ಸೌಂದರ್ಯತತ್ತ್ವದ ಆರಾಧನೆಯಲ್ಲಿ ಕೆಲವರು ಕಾಣಿಸಿಕೊಂಡಿದ್ದಾರೆ, ಈ ಚಿತ್ರಗಳಲ್ಲಿ.

ನೇರಳೆ ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಸೋಮವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ... 7338018541

ಗೋಲ್ಡನ್ ಕ್ರೀಪರ್ ತಂಡ, ಬೆಂಗಳೂರು

ಲಾವಣ್ಯ ಮತ್ತು ನಕ್ಷತ್ರ, ಬೆಂಗಳೂರು

ಮಾನ್ವಿ. ಕೆ ಮತ್ತು ಯಾದ್ವಿ. ಕೆ, ಬೆಂಗಳೂರು

ಆರ್. ಅರ್ಪಿತಾಶ್ರೀ, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು


ಅಮ್ಮನ ಜೊತೆ ಸುಧಿಕ್ಷಾ, ಯಲಹಂಕ ಉಪನಗರ, ಬೆಂಗಳೂರು

ಕವಿತಾ ಮತ್ತು ಗುಂಪು, ಭೂಪಸಂದ್ರ, ಬೆಂಗಳೂರು

ಕಲ್ಪನಾ ಮತ್ತು ಸ್ನೇಹಿತೆಯರು, ಬೆಂಗಳೂರು

ಸದಸ್ಯರು, ವಿದ್ಯಾ ವಾರುಣಿ ಭಜನಾ ಮಂಡಳಿ, ಬೆಂಗಳೂರು

ಸದಸ್ಯರು, ಆಡಳಿತ ಮಂಡಳಿ, ಸಿಲಿಕಾನ್ ಸಿಟಿ ಶಾಲೆ, ಕೋಣನಕುಂಟೆ, ಬೆಂಗಳೂರು

ಅರ್ಚನಾ ಮತ್ತು ಕುಟುಂಬಸ್ಥರು, ಕೆಂಪಾಪುರ, ಬೆಂಗಳೂರು

ಮೌಲ್ಯಾ. ಎಸ್, ಬೆಂಗಳೂರು

ಗಾಯನಸಭಾ ಭಜನಾ ಮಂಡಳಿ, ಶಾರದಾದೇವಿ ನಗರ, ಬೆಂಗಳೂರು

ಧೃವಿಕಾ, ಬೆಂಗಳೂರು

ಗೌತಮಿ ನಾಗೇಂದ್ರ, ಹಾರೋಹಳ್ಳಿ, ಬೆಂಗಳೂರು


ಐಶ್ವರ್ಯ, ಬೆಂಗಳೂರು

ಕುಟುಂಬ ಸದಸ್ಯರು, ಕೊಟ್ಟುರೇಶ್ವರ ನಿಲಯ, ಎಂಸಿಇಸಿಎಚ್‌ಎಸ್ ಲೇಔಟ್, ಬೆಂಗಳೂರು

ಅನನ್ಯ ಮತ್ತು ಸ್ನೇಹಿತೆಯರು, ಉಡುಪಿ

ಅನನ್ಯ ಮತ್ತು ತಂಡ, ಬೆಂಗಳೂರು

ಅನುಶ್ರೀ ಎಂ.ಎಲ್, ನಾಗಶೆಟ್ಟಿಹಳ್ಳಿ, ಬೆಂಗಳೂರು

ಗೌರಮ್ಮ ಮತ್ತು ನಂದಿನಿ ಮಹಿಳಾ ಸಂಘ, ನಂದಿನಿ ಲೇಔಟ್, ಬೆಂಗಳೂರು

ಗೀತಾ ಮತ್ತು ಸೌಮ್ಯಾ, ಕುಮಾರಸ್ವಾಮಿ ಲೇಔಟ್, ಬೆಂಗಳೂರು

ಅನಗಾ ಮತ್ತು ಆಧ್ಯಾ ಎಸ್, ಬೆಂಗಳೂರು

ಕೃದಾ ವಿ. ಸಿಂಗ್, ಕೆ.ಆರ್. ಪುರ, ಬೆಂಗಳೂರು

ಕುಷಿಕಾ ವಿ. ಗೌಡ, ಬೆಂಗಳೂರು

ವರ್ಷಿಣಿ, ಬೆಂಗಳೂರು

ಕೂಲಿ ಕಾರ್ಮಿಕರು, ಬಡವರು ಸಂಚರಿಸುವ ಕಾಯ್ದಿರಿಸದ ಬೋಗಿಗಳ ಕೊರತೆ • ತಪ್ಪದ ನೂಕುನುಗ್ಗಲು

ಜನ ಸಾಮಾನ್ಯರಿಗೆ ಸಿಗದ ಬೋಗಿ

• ಬಾಲಕೃಷ್ಣ ಪಿ.ಎಚ್.

ಯಶವಂತಪುರ ರೈಲು ನಿಲ್ದಾಣದಲ್ಲಿ ಹಾಸನಸೊಲ್ಲಾಪುರ ರೈಲಿನಲ್ಲಿನ ಸಾಮಾನ್ಯ ಬೋಗಿ ಹತ್ತಲು ಉಂಟಾಗಿರುವ ನೂಕುನುಗ್ಗಲು

ಬೆಂಗಳೂರು: ಮಧ್ಯಮ, ಮೇಲ್ಮಧ್ಯಮ ವರ್ಗಗಳ ಪ್ರಯಾಣಿಕರಿಗೆ ಸಕಲ ಸೌಲಭ್ಯಗಳನ್ನು ಒದಗಿಸುತ್ತಿರುವ ರೈಲ್ವೆ ಇಲಾಖೆ ಜನಸಾಮಾನ್ಯರು ಪ್ರಯಾಣಿಸುವ ಕಾಯ್ದಿರಿಸದ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಿಲ್ಲ. ಹಾಗೆಯೇ, ಈಗಿರುವ ಬೋಗಿಗಳನ್ನೂ ಉಳಿಸುತ್ತಿಲ್ಲ. ಇದರಿಂದ ಸಾಮಾನ್ಯ ಬೋಗಿಯಲ್ಲಿ ನಿತ್ಯ ನೂಕುನುಗ್ಗಲು ಉಂಟಾಗುತ್ತಿದೆ.

ಬೆಂಗಳೂರು ಮೂಲಕ ಸಾಗುವ ಕೊಯಮತ್ತೂರು–ದೆಹಲಿ ಎಕ್ಸ್‌ಪ್ರೆಸ್‌ನಲ್ಲಿ ಹಿಂದೆ 11 ಹವಾನಿಯಂತ್ರಣ ರಹಿತ ಸ್ಲೀಪರ್ ಕೋಚ್‌ಗಳಿದ್ದವು. ಈಗ ಮೂರಕ್ಕೆ ಇಳಿಸಲಾಗಿದೆ. ಇದೇ ರೀತಿ ಹಲವು ರೈಲುಗಳಲ್ಲಿ ಸಾಮಾನ್ಯ ಬೋಗಿಗಳನ್ನು ಕಡಿತಗೊಳಿಸಲಾಗಿದೆ. ರೈಲಿನ ಮುಂಭಾಗದಲ್ಲಿ ಒಂದು ಮತ್ತು ಹಿಂಭಾಗದಲ್ಲಿ ಎರಡು ಬೋಗಿಗಳಷ್ಟೇ ಬಡವರ ಪಾಲಿಗೆ ಸಿಗುತ್ತಿವೆ.

ಕಾಯ್ದಿರಿಸಿದವರಿಗೂ ತೊಂದರೆ: ಕೇರಳದಿಂದ ಬರುವ ರೈಲುಗಳು, ಕಲಬುರಗಿ, ಮಂತ್ರಾಲಯ ಸಹಿತ ವಿವಿಧೆಡೆಗೆ ಸಂಚರಿಸುವ ರೈಲುಗಳ ಸಾಮಾನ್ಯ ಬೋಗಿಗಳಲ್ಲಿ ನಿಲ್ಲಲೂ ಜಾಗವಿಲ್ಲದ ವೇಳೆ ಜನರು ಎಸಿ 3 ಟೈರ್, 2 ಟೈರ್, ಫಸ್ಟ್ ಕ್ಲಾಸ್ ಬೋಗಿಗಳಿಗೆ ನುಗ್ಗುತ್ತಿದ್ದಾರೆ. ಇದರಿಂದ ಮೊದಲೇ ಕಾಯ್ದಿರಿಸಿದವರು ತೊಂದರೆಗೆ ಸಿಲುಕುತ್ತಿದ್ದಾರೆ. ಆದರೂ ಸಾಮಾನ್ಯ ಬೋಗಿಗಳನ್ನು ರೈಲ್ವೆ ಇಲಾಖೆ ಹೆಚ್ಚಿಸುತ್ತಿಲ್ಲ ಎಂದು ಪ್ರಯಾಣಿಕರು ದೂರಿದರು.

ವಿಶೇಷ ರೈಲಿನಲ್ಲಿ ದರ ಹೆಚ್ಚು: ಹಬ್ಬಗಳ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ರೈಲ್ವೆ ಇಲಾಖೆ ವಿಶೇಷ ರೈಲುಗಳನ್ನು ಓಡಿಸಲು ಕ್ರಮ ಕೈಗೊಳ್ಳುತ್ತದೆ. ಆದರೆ, ವಿಶೇಷ ರೈಲಿನಲ್ಲಿ ಟಿಕೆಟ್ ದರ ಶೇ 30ರಷ್ಟು ಅಧಿಕ ಇರುತ್ತದೆ. ಬೆಂಗಳೂರಿನಿಂದ ಹುಬ್ಬಳ್ಳಿಗೆ ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್‌ನಲ್ಲಿ ಎಸಿ 3 ಟೈರ್‌ಗೆ ₹ 730 ಇದ್ದರೆ, ವಿಶೇಷ ರೈಲಿನಲ್ಲಿ ₹ 1,050, ಸಾಮಾನ್ಯ ಬೋಗಿಗೆ ₹ 270, ವಿಶೇಷ ರೈಲಿನಲ್ಲಿ ₹ 385 ಟಿಕೆಟ್ ದರ ಇರುತ್ತದೆ. ಹಾಗಾಗಿ ಸಾಮಾನ್ಯ ಜನರು ಮಾತ್ರವಲ್ಲ, ಹವಾನಿಯಂತ್ರಿತ ಕೋಚ್‌ಗಳಲ್ಲಿ ಹೋಗುವವರು ಕೂಡ ವಿಶೇಷ ರೈಲುಗಳಿಗೆ ಆದ್ಯತೆ ನೀಡುವುದಿಲ್ಲ. ಯಶವಂತಪುರ–ವಿಜಯಪುರ ಮತ್ತು ಮಂಗಳೂರು–ವಿಜಯಪುರ ನಡುವೆ ನಿಯಮಿತವಾಗಿ ಸಂಚರಿಸುತ್ತಿರುವ ರೈಲುಗಳನ್ನೂ ಈಗಲೂ ವಿಶೇಷ ರೈಲು ಎಂದೇ ತೋರಿಸುತ್ತಿದ್ದಾರೆ. ಅದನ್ನು ಕಾಯಂ ರೈಲು ಮಾಡಿಲ್ಲ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಮಾಹಿತಿ ನೀಡಿದರು.

ನಷ್ಟದಲ್ಲಿ ರೈಲ್ವೆ: 'ರೈಲ್ವೆ ಲಾಭದಲ್ಲಿ ಇಲ್ಲ. ಆದರೂ ಜನಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯ ಬೋಗಿಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿರುತ್ತದೆ. ಹಬ್ಬಗಳ ಸಮಯದಲ್ಲಷ್ಟೇ ನೂಕುನುಗ್ಗಲು ಇರುತ್ತದೆ. ಎಕ್ಸ್‌ಪ್ರೆಸ್ ರೈಲುಗಳಲ್ಲಿ 3 ಸಾಮಾನ್ಯ ಬೋಗಿಗಳು ಇವೆ. ಇನ್ನಷ್ಟು ಬೋಗಿಗಳು ಬೇಕೆ ಬೇಡವೇ ಎಂಬುದನ್ನು ರೈಲ್ವೆ ಮಂಡಳಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ನಮ್ಮ ಹಂತದಲ್ಲಿ ಅಲ್ಲ' ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ಯಾಸೆಂಜರ್ ರೈಲು ಜರೂರಿಯಿದೆ



ಇತ್ತೀಚೆಗೆ ಯಶವಂತಪುರ- ಕಾರಟಗಿ ಮಾರ್ಗ ರೈಲಿಗಾಗಿ ಯಶವಂತಪುರ ನಿಲ್ದಾಣದಲ್ಲಿ ಕಾಯುತ್ತಿದ್ದೆ. ಹಾಸನ-ಸೊಲ್ಲಾಪುರ ರೈಲು ಬಂತು. ಅದರ ಸಾಮಾನ್ಯ ಬೋಗಿಗಳಲ್ಲಿ ವಿಪರೀತ ನೂಕುನುಗ್ಗಲು. ಅಲ್ಲಿದ್ದ ಬಹುತೇಕರು ದುಡಿಯಲು ಬೆಂಗಳೂರಿಗೆ ಬಂದ ರಾಯಚೂರು, ಯಾದಗಿರಿ, ಕಲಬುರಗಿ ಜಿಲ್ಲೆಯ ಬಡವರು. ಎಳೆ ಕೂಸುಗಳಿದ್ದ ತಾಯಂದಿರೂ ಇದ್ದರು. ಹತ್ತಿದವರಿಗೆಲ್ಲ ಸೀಟು ಸಿಕ್ಕಿತೊ ಇಲ್ಲವೊ? ಆದರೆ, ಎಕ್ಸ್‌ಪ್ರೆಸ್ ರೈಲುಗಳಿಗೆ ಸಾಮಾನ್ಯ ಬೋಗಿಗಳನ್ನು ಹೆಚ್ಚಿಸಬೇಕು. ಇಲ್ಲವೇ ಕಲಬುರಗಿಗೆ ಬೆಂಗಳೂರಿನಿಂದ ರಾತ್ರಿ ಪ್ಯಾಸೆಂಜರ್ ರೈಲನ್ನು ಓಡಿಸಬೇಕು. ಹಣ ಇದ್ದವರು ಓಡಾಡುವ ವಂದೇಭಾರತ್ ರೈಲುಗಳಿಗಿಂತ, ಇದು ತುಂಬಾ ಅಗತ್ಯವಿದೆ.

ರಹಮತ್ ತರೀಕೆರೆ, ಸಾಹಿತಿ

ಪ್ಯಾಸೆಂಜರ್ ರೈಲು ನೀಡುತ್ತಿಲ್ಲ

ಹಿಂದೆ ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ಊರುಗಳು ಎಷ್ಟೇ ದೂರವಿದ್ದರೂ ಪ್ಯಾಸೆಂಜರ್ ರೈಲು ಓಡಿಸುತ್ತಿದ್ದರು. ಇದು ಸಾಮಾನ್ಯ ಪ್ರಯಾಣಿಕರಿಗೆ ಹೆಚ್ಚು ಅನುಕೂಲವಾಗಿತ್ತು. ಕೋವಿಡ್ ನಂತರ ನಿಯಮಗಳನ್ನು ಬದಲಾಯಿಸಿದ್ದಾರೆ. 200 ಕಿ.ಮೀ. ಒಳಗೆ ಇದ್ದರೆ ಮಾತ್ರ ಪ್ಯಾಸೆಂಜರ್ ರೈಲು. ಇದಕ್ಕಿಂತ ಅಧಿಕ ದೂರವಿದ್ದರೆ ಎಕ್ಸ್‌ಪ್ರೆಸ್ ರೈಲು ಎಂದು ಮಾಡಲಾಗಿದೆ. ಬೆಂಗಳೂರಿನಿಂದ ಹುಬ್ಬಳ್ಳಿಗೆ 470 ಕಿ.ಮೀ. ಇದೆ. 2020ರವರೆಗೆ ಈ ನಿಲ್ದಾಣಗಳ ಮಧ್ಯೆ ಪ್ಯಾಸೆಂಜರ್ ರೈಲು ಸಂಚರಿಸುತ್ತಿತ್ತು. ಈಗ ಯಾವುದೇ ಪ್ಯಾಸೆಂಜರ್ ರೈಲುಗಳಿಲ್ಲ. ಬಡವರ ಬಗ್ಗೆ ಕಾಳಜಿ ಇಲ್ಲ. ಅಧಿಕಾರಿಗಳನ್ನು ಕೇಳಿದರೆ ಯಾರೂ ಉತ್ತರಿಸುತ್ತಿಲ್ಲ.

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ಸಾಮಾನ್ಯ ಬೋಗಿ ಹೆಚ್ಚಿಸಿ

ನಾನು ಹಾವೇರಿಯಿಂದ ದಾವಣಗೆರೆಗೆ ಅಥವಾ ಬೆಂಗಳೂರಿಗೆ ಹೋಗುತ್ತಿರುತ್ತೇನೆ. ಈ ಮಾರ್ಗದಲ್ಲಿ ಎಕ್ಸ್‌ಪ್ರೆಸ್ ರೈಲುಗಳಿವೆ. ಬಡವರು, ಕೂಲಿಕಾರ್ಮಿಕರು ಸಾವಿರಾರು ರೂಪಾಯಿ ನೀಡಿ ಈ ರೈಲುಗಳಲ್ಲಿ ಹೋಗಲು ಸಾಧ್ಯವಿಲ್ಲ. ಅದಕ್ಕಾಗಿ ಪ್ಯಾಸೆಂಜರ್ ರೈಲುಗಳನ್ನು ಓಡಿಸಬೇಕು. ಈಗಿರುವ ರೈಲುಗಳಲ್ಲಿ ಸಾಮಾನ್ಯ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಎಂ. ಕರಿಬಸಪ್ಪ, ರೈಲು ಪ್ರಯಾಣಿಕ, ಹಾವೇರಿ

ಅನಗತ್ಯ ಖರ್ಚಿಗೆ ಹಣವಿದೆ

ರೈಲ್ವೆ ಸೌಂದರ್ಯೀಕರಣ ಎಂದು ನೂರಾರು ಕೋಟಿ ರೂಪಾಯಿಯನ್ನು ಪ್ರತಿವರ್ಷ ಇಲಾಖೆ ಖರ್ಚು ಮಾಡುತ್ತದೆ. ಅದರಲ್ಲಿ ಸ್ವಲ್ಪ ಭಾಗವನ್ನು ಸೇವೆ ಮತ್ತು ಸೌಲಭ್ಯ ಹೆಚ್ಚಿಸಲು ಬಳಸಬಹುದು. ಸಾಮಾನ್ಯ ಬೋಗಿಗಳ ಸಂಖ್ಯೆ ಹೆಚ್ಚಿಸಿ ಎಂದರೆ ಅಂದರೆ ರೈಲ್ವೆ ನಷ್ಟದಲ್ಲಿದೆ ಎನ್ನುತ್ತಾರೆ. ಉಳಿದವುಗಳಿಗೆ ಖರ್ಚು ಮಾಡಲು ಇಲಾಖೆಯಲ್ಲಿ ಹಣವಿದೆ. ಶತಾಬ್ದಿ, ವಂದೇ ಭಾರತ್ ರೈಲುಗಳು ಇರಲಿ. ಅದನ್ನೆಲ್ಲ ಕಡಿಮೆ ಮಾಡಬೇಕು ಎಂದು ನಾವು ಹೇಳುತ್ತಿಲ್ಲ. ಅದರ ಜೊತೆಗೆ ದುಡಿಯುವ ಜನರಿಗೂ ಉಪಯೋಗವಾಗುವಂತೆ ಸಾಮಾನ್ಯ ಬೋಗಿಗಳನ್ನು ಹೆಚ್ಚಿಸಬೇಕು.

ರಾಜ್‌ಕುಮಾರ್ ದುಗರ್, ಸಂಸ್ಥಾಪಕ, ಸಿಟಿಜನ್ಸ್ ಫಾರ್ ಸಿಟಿಜನ್ಸ್

ಮದ್ದೂರಿನಲ್ಲಿ ಪ್ರಶಸ್ತಿ ಸ್ವೀಕರಿಸಿದ ಶಿವರಾಜ್‌ಕುಮಾರ್

ಅಭಿಮಾನಿಗಳೇ ಕಣ್ಣಿಗೆ ಕಾಣುವ ದೇವರು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): 'ನಮ್ಮ ತಂದೆಯವರ ಮಾತಿನಂತೆ ದೇವರಂತೆ ಕಾಣುವ ಅಭಿಮಾನಿಗಳಿಗೆ ಎಂದೆಂದಿಗೂ ಚಿರಋಣಿಯಾಗಿದ್ದೇನೆ' ಎಂದು ನಟ ಶಿವರಾಜ್ ಕುಮಾರ್ ತಿಳಿಸಿದರು.

ತಾಲ್ಲೂಕಿನ ವಳಗೆರೆಹಳ್ಳಿಯ ಎಸ್.ಡಿ. ಜಯರಾಮ್ ಕ್ರೀಡಾಂಗಣದಲ್ಲಿ ಭಾನುವಾರ ಮಾನಸ ಎಜುಕೇಷನ್ ಟ್ರಸ್ಟ್ ಹಾಗೂ ಕರಡಿಗೌಡ ಟ್ರಸ್ಟ್‌ನಿಂದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದಿ. ಕರಡಿಗೌಡರ ಪುಣ್ಯಸ್ಮರಣೆ ಅಂಗವಾಗಿ 10ನೇ ವರ್ಷದ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು. 'ಸ್ವಾತಂತ್ರ್ಯ ಹೋರಾಟಗಾರ ಡಿ. ಕರಡಿಗೌಡರ ಹೆಸರಿನಲ್ಲಿ ಪ್ರಶಸ್ತಿ ಸಿಕ್ಕಿರುವುದು ಸಂತೋಷವಾಗಿದೆ' ಎಂದರು.

ಉದ್ಘಾಟಿಸಿ ಮಾತನಾಡಿದ ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ, 'ಶ್ರೀಮಂತಿಕೆ ಮತ್ತು ಅಧಿಕಾರವನ್ನು ಆರಾಧಿಸುವ ಸಮಾಜದಲ್ಲಿ ನಾವಿದ್ದೇವೆ. ಇವೆರಡು ಅತ್ಯಂತ ಅಪಾಯಕಾರಿಯಾಗಿವೆ. ಶ್ರೀಮಂತಿಕೆಯ ಪೈಪೋಟಿ ಪ್ರಾರಂಭವಾಗಿದೆ. ಉತ್ತಮ ಮಾರ್ಗದಿಂದ ಕಾನೂನು ಬದ್ಧವಾಗಿ ಶ್ರೀಮಂತರಾದರೆ ಸಮಸ್ಯೆಯಿಲ್ಲ. ಬೇರೆಯವರ ಜೇಬಿಗೆ ಕನ್ನಹಾಕಿ ಅನ್ಯ ಮಾರ್ಗದಿಂದ ಹಣ ಮಾಡುವ ಪ್ರವೃತಿಯನ್ನು ಬಿಡಬೇಕು' ಎಂದು ತಿಳಿಸಿದರು.

ಚಾಮರಾಜನಗರದ ದೀನಬಂಧು ಮಕ್ಕಳ ಮನೆಯ ಗೌರವ ಕಾರ್ಯದರ್ಶಿ ಬಿ.ಎಸ್. ಜಯದೇವ ಅವರಿಗೂ 'ಕರಡಿಗೌಡ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅಧ್ಯಕ್ಷತೆ ವಹಿಸಿದ್ದರು. ಶಿವರಾಜ್ ಕುಮಾರ್ ಅವರು ಹಲವು ಗೀತೆಗಳನ್ನು ಹಾಡಿ ಜನರನ್ನು ರಂಜಿಸಿದರು.

ಮದ್ದೂರು ತಾಲ್ಲೂಕಿನ ವಳಗೆರೆಹಳ್ಳಿಯ ಎಸ್.ಡಿ ಜಯರಾಮ್ ಕ್ರೀಡಾಂಗಣದಲ್ಲಿ ಭಾನುವಾರ ಮಾನಸ ಎಜುಕೇಷನ್ ಟ್ರಸ್ಟ್ ಹಾಗೂ ಕರಡಿಗೌಡ ಟ್ರಸ್ಟ್‌ನಿಂದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದಿ. ಕರಡಿಗೌಡರ ಪುಣ್ಯಸ್ಮರಣೆ ಅಂಗವಾಗಿ ಚಾಮರಾಜನಗರದ ದೀನಬಂಧು ಮಕ್ಕಳ ಮನೆಯ ಗೌರವ ಕಾರ್ಯದರ್ಶಿ ಬಿ.ಎಸ್. ಜಯದೇವ ಅವರಿಗೆ 'ಕರಡಿಗೌಡ ಪ್ರಶಸ್ತಿ' ಹಾಗೂ ನಟ ಶಿವರಾಜ್ ಕುಮಾರ್ ಅವರಿಗೆ 'ಕರಡಿಗೌಡ ಕಲಾ ಕೌಸ್ತುಭ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಸರಾ ಹಾಗೂ ಆಯುಧ ಪೂಜೆ ಹಬ್ಬದ ಪ್ರಯುಕ್ತ ಸಾಲು ಸಾಲು ರಜೆಗಳು ಬಂದಿರುವುದರಿಂದ ತಮ್ಮ ತಮ್ಮ ಊರುಗಳಿಗೆ ಹೊರಟ ಪ್ರಯಾಣಿಕರು ನಾಡಪ್ರಭು ಕೆಂಪೇಗೌಡ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್‌ಗಳ ನಡುವೆ ಕಂಡು ಬಂದ ದೃಶ್ಯ
–ಪ್ರಜಾವಾಣಿ ಚಿತ್ರ, ಎಂ.ಎಸ್. ಮಂಜುನಾಥ್

ಜಿಲ್ಲೆಗಳಿಗೆ ಸಂಚರಿಸಿದ ಬಿಎಂಟಿಸಿ ಬಸ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವರಾತ್ರಿಯ ಸಾಲು ಸಾಲು ರಜೆಗಳ ಕಾರಣದಿಂದ ಬೆಂಗಳೂರಿನಿಂದ ವಿವಿಧ ಊರುಗಳಿಗೆ ತೆರಳುವವರ ಸಂಖ್ಯೆ ಭಾರಿ ಹೆಚ್ಚಳವಾಗಿದೆ. ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲದೇ ಬಿಎಂಟಿಸಿ ಬಸ್‌ಗಳನ್ನು ಕೂಡ ರಾಜ್ಯದ ವಿವಿಧೆಡೆಗೆ ಕಳುಹಿಸಲಾಗಿದೆ.

ಕೆಎಸ್‌ಆರ್‌ಟಿಸಿಯಿಂದ 2,000 ವಿಶೇಷ ಬಸ್‌ಗಳನ್ನು ರಸ್ತೆಗೆ ಇಳಿಸಲಾಗಿತ್ತು. ಅವುಗಳು ಸಾಕಾಗದ ಕಾರಣ ಸುಮಾರು 125 ಬಿಎಂಟಿಸಿ ಬಸ್‌ಗಳನ್ನು ರಾಜ್ಯದ ವಿವಿಧೆಡೆ ಕಳುಹಿಸಲಾಗುತ್ತಿದೆ. ಬೆಂಗಳೂರು ನಗರಕ್ಕೆ ಸೀಮಿತವಾಗಿದ್ದ ಬಿಎಂಟಿಸಿ ಬಸ್‌ಗಳು ರಾಜಧಾನಿ ಬಿಟ್ಟು ಸಂಚರಿಸುತ್ತಿವೆ.

ದಾವಣಗೆರೆ, ಶಿವಮೊಗ್ಗ, ಹಾಸನ, ಮಂಡ್ಯ, ಮೈಸೂರು, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಧರ್ಮಸ್ಥಳ ಸಹಿತ ಅನೇಕ ಕಡೆಗಳಿಗೆ ನಾಡಪ್ರಭು ಕೆಂಪೇಗೌಡ ಬಸ್‌ನಿಲ್ದಾಣ, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ, ಪೀಣ್ಯ ಸ್ಯಾಟಲೈಟ್ ಬಸ್ ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣ ಸಹಿತ ವಿವಿಧ ಕಡೆಗಳಿಂದ ಬಿಎಂಟಿಸಿ ಬಸ್‌ಗಳು ಸಂಚರಿಸುತ್ತಿವೆ.

'ಬಸ್ ಕೆಎಸ್‌ಆರ್‌ಟಿಸಿಯಾ? ಬಿಎಂಟಿಸಿಯಾ ಎಂಬುದು ಮುಖ್ಯವಲ್ಲ. ಪ್ರಯಾಣಿಕರು ಊರು ತಲುಪಬೇಕು. ಈ ನಿಟ್ಟಿನಲ್ಲಿ ಪ್ರಯಾಣಿಕರಿಗಾಗಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಿ ಸಾರಿಗೆ ಇಲಾಖೆ ಉಪಕಾರ ಮಾಡಿದೆ' ಎಂದು ಪ್ರಯಾಣಿಕರು ಕೃತಜ್ಞತೆ ಸಲ್ಲಿಸಿದ್ದಾರೆ.

ನಗರದಲ್ಲಿ ಇಂದು

ನವರಾತ್ರಿ ವಿಶೇಷ

ದೇವಿಗೆ ಡಬ್ಬಲ್ ಬೀನ್ಸ್, ದಾಳಿಂಬೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್, ಮಲ್ಲೇಶ್ವರ, ಬೆಳಿಗ್ಗೆ 7ರಿಂದ

ಶರನ್ನವರಾತ್ರಿ ಮಹೋತ್ಸವ: ಗುರುಪೂಜೆ, ಋಷಿ ಹೋಮ, ಪೂರ್ಣಾಹುತಿ, ಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ವೇದ ವಿಜ್ಞಾನ ಮಹಾವಿದ್ಯಾಪೀಠ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 9ರಿಂದ

ಸಿದ್ಧಿರಾತ್ರಿ ದೇವಿಯ ಆವಾಹನೆ, ಸಿದ್ಧಿ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ನಕ್ಕಿ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, 'ದೇವಿ ಮಹಾತ್ಮೆ' ಹರಿಕಥೆ: ಮುನಿಕೋಟೆ ಹರಿಕಥಾ ದಾಸರು, ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ದೇವಿ ಸ್ತೋತ್ರ ಪಠಣ: ಸಂಗೀತ ಕಾರ್ಯಕ್ರಮ: ಗಾಯನ: ಮಯುನ ಮೋಹನ್ ಗೌಡ, ಜೈಷ್ಣವಿ ಧನಂಜಯ್, ಹಾರ್ಮೋನಿಯಂ: ಮಂಜುನಾಥ್ ಕೆ.ಎಸ್., ತಬಲಾ: ಅಶ್ವತ್ಥ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ ಸಂಜೆ 5

ವಚನ ನವರಾತ್ರಿ: ಆಶಯ ನುಡಿ: ರಾಜಾ ಗುರುಪ್ರಸಾದ್, 'ಸಹೋದರತೆಯ ಮುಕ್ತಾಯಕ್ಕ' ಕುರಿತು ಉಪನ್ಯಾಸ: ಭ್ರಮರಾಂಬ, ಅತಿಥಿಗಳು: ನಿರ್ಮಲ ಶಿವಣ್ಣ, ಶಿಲ್ಪಾ ಎಂ., ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿಗೆ ಶೃಂಗೇರಿ ಹೂವಿನ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

ದೇವಿಗೆ ಅಭಿಷೇಕ, ಮೀನಾಕ್ಷಿ ಅಲಂಕಾರ, ಆಯುಧ ಪೂಜೆ: ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ಅನ್ವಿತಾ ಸಾವಿತ್ರಿ, ಅನುಷಾ ಸಾವಿತ್ರಿ

ಸಂಗೀತ ಕಾರ್ಯಕ್ರಮ: ಗಾಯನ: ಅನ್ವಿತಾ ಸಾವಿತ್ರಿ, ಅನುಷಾ ಸಾವಿತ್ರಿ, ಕೀ–ಬೋರ್ಡ್: ಅಮಿತ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ್ ಟ್ರಸ್ಟ್, ಮಲ್ಲೇಶ್ವರ, ಸಂಜೆ 6.30

ದುರ್ಗಾ ದೇವಿಗೆ 'ಸಿದ್ಧಿಧಾತ್ರಿ ಅಲಂಕಾರ': ಭರತನಾಟ್ಯ ಪ್ರದರ್ಶನ: ದೀಪ್ತಿ ಡಿಂಪಲ್ ತಂಡ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾ ರಾಜಪುರ, ಸಂಜೆ 6

ಆಯುಧ ಪೂಜೆ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಜನೆ: ಕಲ್ಪನಾ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಸಂಗೀತ ಕಾರ್ಯಕ್ರಮ: ಗಾಯನ: ಸರ್ವಮಂಗಳ, ಮೃದಂಗ: ಎಂಜೆ. ಕಿರಣ, ಪಿಟೀಲು: ಬಿ. ಚಂದನ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ದೇವಿಗೆ ಕಾಳಿ, ವಿಭೂತಿ ಅಲಂಕಾರ: ಪ್ರತ್ಯಂಗರ ದೇವಿ ಹೋಮ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಆಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

ಯಲ್ಲಮ್ಮ ದೇವಿಗೆ ಚಾಮುಂಡೇಶ್ವರಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6.30

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಲಕ್ಷ್ಮಿ ವರುಣ್, ಮೃದಂಗ: ಸಾಯಿ ವಂಶಿ, ಮೋರ್ಚಿಂಗ: ಕಾರ್ತಿಕ್ ಪ್ರಣವ್, ಆಯೋಜನೆ: ರಾಮಚಂದ್ರ ಅಯ್ಯರ್ ಟ್ರಸ್ಟ್, ಸ್ಥಳ: ಶ್ರೀರಾಮ ದೇವಸ್ಥಾನ, ವಯ್ಯಾಲಿ ಕಾವಲ್, ಸಂಜೆ 6.30

ದೇವಿಗೆ ಅನ್ನಪೂರ್ಣಾ ಅಲಂಕಾರ: ಚಂಡಿಕಾ ಹೋಮ, ಗಾಯನ: ಉಮಾ ಕುಮಾರ್, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ನಗರದಲ್ಲಿ ನಾಳೆ

ನವರಾತ್ರಿ ವಿಶೇಷ

ಶರನ್ನವರಾತ್ರಿ ಮಹೋತ್ಸವ: ವಿಜಯ ದಶಮಿ ಪೂಜೆ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ವೇದ ವಿಜ್ಞಾನ ಮಹಾವಿದ್ಯಾಪೀಠ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 8ರಿಂದ

ಗಣೇಶ, ನವದುರ್ಗೆ, ತ್ರಿದೇವತೆಗಳ ಮೆರವಣಿಗೆ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 10.45ರಿಂದ

ಮಹೇಶ್ವರಿ ದೇವಿಯ ಮೆರವಣಿಗೆ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್, ಮಲ್ಲೇಶ್ವರ, ಮಧ್ಯಾಹ್ನ 12.30

ದೇವಿಗೆ ಮಹಾಭಿಷೇಕ, ಆಭರಣ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ಗಣೇಶ ಮತ್ತು ಸರ್ಕಲ್ ಮಾರಮ್ಮ ದೇವಿಯ ಪಲ್ಲಕ್ಕಿ ಉತ್ಸವ, ಸಂಜೆ 6ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ವಚನ ವಿಯಜದಶಮಿ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅತಿಥಿಗಳು: ಗೊ.ರು. ಚನ್ನಬಸಪ್ಪ, ಎಸ್.ಟಿ. ಸೋಮಶೇಖರ್, ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಮಂಟಪ, ಬಸವೇಶ್ವರ ಉದ್ಯಾನ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 4.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ
ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ದೇವಿಗೆ ವಿಶೇಷ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

ದುರ್ಗಾ ದೇವಿಗೆ 'ಚಾಮುಂಡೇಶ್ವರಿ ಅಲಂಕಾರ': ಭಜನೆ: ವಿಜಯ ತಂಡ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾ ರಾಜಪುರ, ಸಂಜೆ 6

ವಿಜಯದಶಮಿ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಜನೆ: ಸುಕನ್ಯಾ ಆರಾಧ್ಯ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಮಕ್ಕಳ ವೇಷಭೂಷಣ ಸ್ಪರ್ಧೆ, ಸಂಗೀತ ಕಾರ್ಯಕ್ರಮ: ದಾಸರ ಪದಗಳು, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ದೇವಿಗೆ ವಿಜಯಲಕ್ಷ್ಮಿ ಅಲಂಕಾರ, ರಜತ ಕವಚ ಧಾರಣೆ: ವಿಜಯಲಕ್ಷ್ಮಿ ಹೋಮ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಆಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

'ಲಯ ಲಾಸ್ಯ ನಡೆ–ನುಡಿ' ಭರತನಾಟ್ಯ ಪ್ರದರ್ಶನ: ಶ್ರಾವ್ಯ ಎಸ್. ವಸಿಷ್ಠ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ ಸಂಜೆ 6.30

ಯಲ್ಲಮ್ಮ ದೇವಿಗೆ ಬೆಳ್ಳಿ ಕವಚ ಧಾರಣೆ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ಅಶ್ವವಾಹಿನಿ (ವಿಜಯದಶಮಿ) ಅಲಂಕಾರ: ಶ್ರೀಸೂಕ್ತ ಹೋಮ, ಗಾಯನ: ಅಂಜಲಿ ಶ್ರೀರಾಮ, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ಹೃದಯಾಘಾತ: ಗಾರ್ಬಾ ನೃತ್ಯ ವೇಳೆ 10 ಜನ ಸಾವು

ಗಾಂಧಿನಗರ: ಗುಜರಾತ್‌ನಲ್ಲಿ ನವ ರಾತ್ರಿ ಸಂಭ್ರಮಾಚರಣೆಯಲ್ಲಿ ಗಾರ್ಬಾ ನೃತ್ಯ ಪ್ರದರ್ಶಿಸುವ ವೇಳೆ 10 ಮಂದಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಭಾನುವಾರ ರಾತ್ರಿ 8ಕ್ಕೆ ಕೊನೆಗೊಂಡ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಈ ಸಾವು ಸಂಭವಿಸಿವೆ. ಮೃತಪಟ್ಟವರಲ್ಲಿ ಬಾಲಕರಿಂದ ಹಿಡಿದು ಮಧ್ಯ ವಯಸ್ಸಿನವರು ಇದ್ದಾರೆ.

ಖೇಡಾ ಜಿಲ್ಲೆಯ ಕಪದ್ವಂಜ್ ನಗರದಲ್ಲಿ ಗಾರ್ಬಾ ನೃತ್ಯ ಪ್ರದರ್ಶಿಸುತ್ತಿದ್ದ ವೇಳೆ 17 ವರ್ಷದ ವೀರ್ ಶಾ ಎಂಬಾತ ದಿಢೀರ್ ಕುಸಿದುಬಿದ್ದಿದ್ದಾರೆ. ಆತನ ಮೂಗಿನಲ್ಲಿ ರಕ್ತಸ್ರಾವವಾಗಿದ್ದು, ಕೂಡಲೇ ಆಸ್ಪತ್ರೆಗೆ ಕರೆಯೊಯ್ಯಲಾಗಿದೆ. ತಪಾಸಣೆ ನಡೆಸಿದ ವೈದ್ಯರು ಆತ ಹೃದಯಾಘಾತದಿಂದ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಬಾಲಕ ಸಾವು: ವಡೋದರ ಜಿಲ್ಲೆಯ ದಭೋಯಿಯಲ್ಲಿ 13 ವರ್ಷದ ಬಾಲಕ ಹೃದಯಾಘಾತದಿಂದ ಮೃತಪಟ್ಟಿರುವುದು ವರದಿಯಾಗಿದೆ.

ನೃತ್ಯ ಮುಗಿಸಿಕೊಂಡು ಬೈಸಿಕಲ್‌ನಲ್ಲಿ ಮನೆಗೆ ಮರಳುತ್ತಿದ್ದಾಗ ಬಾಲಕ ಕೆಳಗೆ ಬಿದ್ದು ಗಾಯಗೊಂಡಿದ್ದ. ಆತನನ್ನು ಆಸ್ಪತ್ರೆಗೆ ಕರೆದೊಯ್ದಿದ್ದ ಪೋಷಕರು ಚಿಕಿತ್ಸೆ ಕೊಡಿಸಿ ಮನೆಗೆ ಕರೆತಂದಿದ್ದರು. ಮಲಗಿದ್ದ ಬಾಲಕ ಹಲವು ಗಂಟೆಗಳು ಕಳೆದರೂ ಎಚ್ಚರಗೊಂಡಿರಲಿಲ್ಲ. ಆತನನ್ನು ಮತ್ತೆ ಆಸ್ಪತ್ರೆಗೆ ಕರೆದೊಯ್ದ ವೇಳೆ ತಪಾಸಣೆ ನಡೆಸಿದ ವೈದ್ಯರು ಹೃದಯಾಘಾತದಿಂದ ಮೃತಪಟ್ಟಿದ್ದಾನೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ದಸರಾ ರಜೆ ವಿಸ್ತರಿಸಲು ಬಸವರಾಜ ಹೊರಟ್ಟಿ ಒತ್ತಾಯ

ಹುಬ್ಬಳ್ಳಿ: 'ದಸರಾ ರಜೆಯನ್ನು ಅ.30ರವರೆಗೆ ವಿಸ್ತರಿಸಬೇಕು ಎಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಭಾನುವಾರ ಮಾತನಾಡಿದ ಅವರು, 'ಈ ಮೊದಲು ಅ. 2ರಿಂದ ಅ. 30 ರವರೆಗೆ ಶೈಕ್ಷಣಿಕ ವರ್ಷದ ಮೊದಲ ಅವಧಿಯ (ದಸರಾ) ರಜೆ ಸಿಗುತ್ತಿತ್ತು. ಆದರೆ, ಅಧಿಕಾರಿಗಳು ತಮಗೆ ಬೇಕಾದ ಹಾಗೆ ಅಲ್ಲಲ್ಲಿ, ರಜೆಗಳನ್ನು ಹಂಚಿಕೆ ಮಾಡಿರುವುದರಿಂದ ಸಮಸ್ಯೆ ಎದುರಾಗಿದೆ. ಹಿಂದಿನ ಪದ್ಧತಿಯಂತೆಯೇ, ರಜೆ ಸೌಲಭ್ಯ ಮುಂದುವರಿಸಬೇಕು ಎಂದು ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಲಾಗಿದೆ' ಎಂದರು.

ಇದೇ ಸಂದರ್ಭದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಜೊತೆ ದೂರವಾಣಿ ಮೂಲಕ ಸಂಪರ್ಕಿಸಿದ ಹೊರಟ್ಟಿ, ದಸರಾ ರಜೆಯನ್ನು ಅ. 30ರವರೆಗೆ ವಿಸ್ತರಿಸುವಂತೆ ವಿನಂತಿಸಿದರು.

'ಉತ್ತರ ಕರ್ನಾಟಕ ಭಾಗದ ಜನರ ಸಮಸ್ಯೆ ಆಲಿಸಲು ಬೆಳಗಾವಿಯ ಸುವರ್ಣ ಸೌಧದಲ್ಲಿ ಕನಿಷ್ಠ 15 ದಿನಗಳಾದರೂ ಚಳಿಗಾಲ ಅಧಿವೇಶನ ನಡೆಸಬೇಕು' ಎಂದು ಒತ್ತಾಯಿಸಿ ಮುಖ್ಯಮಂತ್ರಿಗೆ ಪತ್ರ ಬರೆಯುವುದಾಗಿ ಹೊರಟ್ಟಿ ತಿಳಿಸಿದರು.

'ಜ್ಞಾನದ ಬೆಳಕಿನ ವಚನ ನವರಾತ್ರಿ'

ಬೆಂಗಳೂರು: 'ರಕ್ತ ಹೀರುವ, ಹತ್ಯೆಗೈಯ್ಯುವ ಕಥೆ- ಪುರಾಣಗಳಿಗಿಂತ ಅರಿವು ನೀಡುವ, ಜ್ಞಾನದ ಬೆಳಕಿನ ವಚನ ನವರಾತ್ರಿಯೇ ಚೆಂದ' ಎಂದು ಸಾಮಾಜಿಕ ಹೋರಾಟಗಾರ್ತಿ ಕೆ.ಆರ್. ಸೌಮ್ಯಾ ಹೇಳಿದರು.

ವಚನಜ್ಯೋತಿ ಬಳಗ ಕಲ್ಯಾಣ್ ಲೇಔಟಿನಲ್ಲಿ ಆಯೋಜಿಸಿದ್ದ 'ವಚನ ನವರಾತ್ರಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಧಿಕಾರ ದವಲತ್ತಿನ, ಕುರುಡು ಕಾಂಚಾಣದ ದಸರೆಗಿಂತ ಪ್ರೀತಿ ವಿಶ್ವಾಸದ ವಚನ ನವರಾತ್ರಿಯೇ ಸೊಗಸು. ಒಂಬತ್ತು ದಿನವೂ ಒಬ್ಬೊಬ್ಬ ವಚನಕಾರ್ತಿಯರ ವಿಚಾರಗಳನ್ನು ಹೇಳುತ್ತ, ಪ್ರತಿದಿನವೂ ವಚನ ಸಂಗೀತ - ರೂಪಕಗಳ ನಡೆಸುವ ವಚನ ನವರಾತ್ರಿ ಅರ್ಥಪೂರ್ಣ' ಎಂದು ಹೇಳಿದರು. ವಚನ ನವರಾತ್ರಿ ಒಂದು ಸಕಾರಾತ್ಮಕ ಅಲೆಯನ್ನು ಹಬ್ಬಿಸುತ್ತಿದ್ದು, ಕಾಳವ್ವೆ, ಹಡಪದ ಲಿಂಗಮ್ಮ, ವೀರಮ್ಮ, ಲಕ್ಕಮ್ಮ ಎಂಬ ಸಾಧಕಿಯರ ಪರಿಚಯವಾಗುತ್ತಿರುವುದು ಸ್ವಾಗತಾರ್ಹ ಎಂದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ರಾಜಧಾನಿಯ ವಿವಿಧ ಭಾಗಗಳಲ್ಲಿ ಮಹಿಳಾ ತಂಡಗಳಿಂದ ವಚನ ಸಂಗೀತ ನಡೆಯಲಿದೆ. ಸ್ಥಳೀಯ ಮಕ್ಕಳು ವಚನ ರೂಪಕಗಳನ್ನು ಅಭಿನಯಿಸುತ್ತಾರೆ ಎಂದು ಹೇಳಿದರು. ವಚನಕಾರ್ತಿ ಕಾಳವ್ವೆಯ ಕುರಿತು ಉಪನ್ಯಾಸ ನೀಡಿದ ವಚನ ಕಲಿಕಾ ವಿದ್ಯಾರ್ಥಿ ದಿವ್ಯಾ ಉಮೇಶ್, 'ಕಳ್ಳನಾಗಿದ್ದ ಉರಿಲಿಂಗಪೆದ್ದಿ ಪ್ರತಿಭಾವಂತ ವಚನಕಾರನಾಗಿ ರೂಪುಗೊಂಡಿದ್ದರಲ್ಲಿ ಕಾಳವ್ವೆಯ ಪರಿಶ್ರಮವಿದೆ' ಎಂದು ವಿವರಿಸಿದರು. ಜ್ಞಾನಯೋಗ ಲಯನ್ಸ್ ಕ್ಲಬ್ ಅಧ್ಯಕ್ಷೆ ಲಯನ್ ಬಿ. ಚಂದ್ರಿಕ, ಉದ್ಯಮಿ ಶ್ರೀ ಮಹೇಶ್ ಬೆಲ್ಲದ ಇದ್ದರು.

ಪ್ರದ್ಯೋತ್ - ಪ್ರಣವಿ ಬಾಲಬಸವ ಕಿರು ನಾಟಕ ಪ್ರದರ್ಶಿಸಿದರು. ಅದಿತಿ ಮತ್ತು ತಂಡ ಅಜಗಣ್ಣ ಮುಕ್ತಾಯಕ್ಕ ರೂಪಕ ಪ್ರದರ್ಶನ ನೀಡಿದರು.

ಚಿತ್ರಾವಳಿ

ನವರಾತ್ರಿಯ ಪ್ರಯುಕ್ತ ಮಲ್ಲೇಶ್ವರದ ಗಂಗಮ್ಮ ದೇವಸ್ಥಾನದ ಮುಂಭಾಗ ದೇವಿಯ ಪ್ರತಿಮೆ ಹೊತ್ತ ಆನೆಯ ಪ್ರತಿಕೃತಿಯನ್ನು ಮಗುವೊಂದು ಕುತೂಹಲದಿಂದ ಭಾನುವಾರ ವೀಕ್ಷಿಸಿತು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಆಯುಧ ಪೂಜೆಗಾಗಿ ದ್ವಿಚಕ್ರ ಸವಾರರೊಬ್ಬರು ದೊಡ್ಡದಾದ ಬಾಳೆ ಕಂದುಗಳನ್ನು ಹಿಡಿದು ಸಾಗುತ್ತಿರುವುದು ಮಲ್ಲೇಶ್ವರದ ಬಳಿ ಭಾನುವಾರ ಕಂಡುಬಂದಿತು
–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನವವರ್ಣ

ಚಂಪಾ ಪಟೇಲ್, ಹರಪನಹಳ್ಳಿ

ಜಯಂತಿ, ಕಸ್ತೂರಿನಗರ, ಬೆಂಗಳೂರು

ಚೈತ್ರ ಆಚಾರ್ಯ ಮತ್ತು ಕುಟುಂಬ ಕಾರ್ಕಳ

ಅಮೃತಾ, ಪುಷ್ಪಮ್ಮ, ಹನ್ವಿತಾ, ಬೆಂಗಳೂರು

ಜಯಂತಿ ಮತ್ತು ಕುಟುಂಬ, ಪಾರ್ತಿಬೆಟ್ಟು

ಚಿನ್ಮಯಿ, ವಿಜಯನಗರ, ಬೆಂಗಳೂರು

ಪವಿತ್ರಾ, ಶಿರಸಿ

ಲಕ್ಷ್ಮಿ ಮತ್ತು ಸಂಗಡಿಗರು, ಶ್ರೀ ರಾಧಾಕೃಷ್ಣ ಭಜನ ಮಂಡಳಿ, ದೊಡ್ಡಬಿದರಕಲ್ಲು, ಬೆಂಗಳೂರು

ಲಲಿತಾ ಸಹಸ್ರನಾಮ ಮಾಡುವ ಗಾಯಕಿಯರು, ಪಟಾಲಮ್ಮ ದೇವಸ್ಥಾನ, ಬೆಂಗಳೂರು

ಸಂಧ್ಯಾ ಮತ್ತು ಸ್ನೇಹಿತೆಯರು, ಕೆಂಗೇರಿ ಉಪನಗರ, ಬೆಂಗಳೂರು

ಶಿಕ್ಷಕಿಯರು, ಸರ್ಕಾರಿ ಶಾಲೆ ಜೋಗುಪಾಳ್ಯ, ಬೆಂಗಳೂರು

ಚಂದನಾ, ಸಜ್ಜೆಪಾಳ್ಯ, ಬೆಂಗಳೂರು

ವಾಸವಿ ಮಹಿಳಾ ಮಂಡಳಿ, ಕುಮಾರಸ್ವಾಮಿ ಲೇಔಟ್, ಬೆಂಗಳೂರು

ದೊಡ್ಡನೆ ಕುಟುಂಬ, ಚಿಕ್ಕನಾಗಮಂಗಲ, ಬೆಂಗಳೂರು ಗ್ರಾಮಾಂತರ

ರೇಖಾರಾವ್ ಮತ್ತು ಕುಟುಂಬ, ಬೆಂಗಳೂರು

ನಳಿನಾ ಮತ್ತು ಮಕ್ಕಳು, ಯಲಹಂಕ, ಬೆಂಗಳೂರು

ದಿವ್ಯಾ ಮತ್ತು ಸ್ನೇಹಿತೆಯರು, ಕುದೂರು, ರಾಮನಗರ

ಪೂರ್ಣಿಮಾ ಮತ್ತು ಶಿಲ್ಪಾ, ಮಲ್ಲೇಶ್ವರ, ಬೆಂಗಳೂರು

ದಿವ್ಯಾ ಮತ್ತು ಸ್ನೇಹಿತೆಯರು, ಸಂತೆಕಟ್ಟೆ, ಉಡುಪಿ

ಮೀನಾಕ್ಷಿ ಮತ್ತು ಸುಷ್ಮಾ, ಬೆಂಗಳೂರು

ಭಾರತಿ ಮತ್ತು ಸ್ನೇಹಿತೆಯರು, ಶಿವರಾಮ ಕಾರಂತ ನಗರ, ಬೆಂಗಳೂರು

ಪ್ರೀತಿ ಮತ್ತು ಶ್ರೀಯಾ ಶ್ರೀಧರ್, ರಾಮನಗರ

ಪ್ರೇಮಾ ಮತ್ತು ಕುಟುಂಬಸ್ಥರು, ವಿದ್ಯಾರಣ್ಯಪುರ, ಬೆಂಗಳೂರು

ಪ್ರೇಮಾ ಮತ್ತು ಸ್ನೇಹಿತೆಯರು, ಕುಂದಾಪುರ, ಉಡುಪಿ

ಭಾಗ್ಯ ಮತ್ತು ತಂಡ, ಉಡುಪಿ

ಮಂಚೂರು ಸ್ನೇಹಿತೆಯರು, ಕೃಷ್ಣಾಪುರ, ಉಡುಪಿ

ಮಂಜುಳಾ ಮತ್ತು ಸ್ನೇಹಿತೆಯರು, ಗವಿಪುರಂ, ಬೆಂಗಳೂರು

ಪದ್ಮಾ ರಂಗಸ್ವಾಮಿ ಮತ್ತು ಕುಟುಂಬಸ್ಥರು, ಬೆಂಗಳೂರು

ಪುಣ್ಯ ಮತ್ತು ಸ್ನೇಹಿತೆಯರು, ನಾಯಂಡಹಳ್ಳಿ, ಬೆಂಗಳೂರು

ಮಹಿಳೆಯರು, ಸರಸ್ವತಿಪುರಂ, ಮೈಸೂರು

ಮಹಾಲಕ್ಷ್ಮಿ ಗೂಳಿಗೌಡ ಮತ್ತು ಸ್ನೇಹಿತೆಯರು, ರಾಮನಗರ

ಮೀನಾಕ್ಷಿ ಮತ್ತು ತಂಡದ ಸದಸ್ಯರು, ಗೊಲ್ಲಹಳ್ಳಿ, ಬೆಂಗಳೂರು

ಮನೋಜ್ಞಾ ಜಗದೀಶ್, ಉತ್ತರಹಳ್ಳಿ, ಬೆಂಗಳೂರು

ಮಂಜುಳಾ ಶ್ರೀನಿವಾಸ್ ಹೇರೋಹಳ್ಳಿ ಕ್ರಾಸ್, ಬೆಂಗಳೂರು

ಪಾರ್ವತಿ ಮಕ್ಕಳ ಬಳಗ, ಲಕ್ಷ್ಮೇಶ್ವರ, ಗದಗ

ನಿಯಮ ಉಲ್ಲಂಘನೆ: ಐಒಸಿ, ಬಿಪಿಸಿಎಲ್‌ಗೆ ₹3 ಕೋಟಿ ದಂಡ

ನವದೆಹಲಿ(ಪಿಟಿಐ): ಪೆಟ್ರೋಲ್ ಬಂಕ್‌ಗಳಲ್ಲಿ ಮಾಲಿನ್ಯ ನಿಯಂತ್ರಣ ಸಾಧನಗಳನ್ನು ಅಳವಡಿಸದ್ದಕ್ಕಾಗಿ ಸರ್ಕಾರಿ ಸ್ವಾಮ್ಯದ ಭಾರತೀಯ ತೈಲ ನಿಗಮ (ಐಒಸಿ) ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ಗೆ (ಬಿಪಿಸಿಎಲ್) ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ದಂಡ ವಿಧಿಸಿದೆ.

ಮಂಡಳಿಯು ಐಒಸಿಗೆ ₹1 ಕೋಟಿ ಮತ್ತು ಬಿಪಿಸಿಎಲ್‌ಗೆ ₹2 ಕೋಟಿ ದಂಡ ವಿಧಿಸಿದೆ ಎಂದು ಈ ಸಂಸ್ಥೆಗಳು ಪ್ರತ್ಯೇಕವಾಗಿ ಷೇರು ಮಾರುಕಟ್ಟೆಗೆ ತಿಳಿಸಿವೆ.

ಬಂಕ್‌ಗಳಲ್ಲಿ ವಾಹನಕ್ಕೆ ಇಂಧನ ತುಂಬಿಸಿದಾಗ, ಪೆಟ್ರೋಲ್ ಆವಿಯು ವಾತಾವರಣಕ್ಕೆ ಹರಡುತ್ತದೆ. ಈ ಆವಿಯು ಬೆಂಜೀನ್, ಟೊಲ್ಯೂನ್ ಮತ್ತು ಕ್ಸೈಲೀನ್‌ನಂತಹ ಕ್ಯಾನ್ಸರ್-ಉಂಟು-ಮಾಡುವ ಮಾಲಿನ್ಯ ಕಾರಕಗಳನ್ನು ಹೊಂದಿರುತ್ತದೆ. ಪೆಟ್ರೋಲ್ ಆವಿ ಹೊರಹೋಗುವುದನ್ನು ತಡೆಯಲು ಪೆಟ್ರೋಲ್ ಪಂಪ್‌ಗಳಲ್ಲಿ ವಿಆರ್‌ಎಸ್ ಅನ್ನು ಕಾಲಮಿತಿಯೊಳಗೆ ಅಳವಡಿ-ಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ 2016ರಲ್ಲಿ ಸೂಚಿಸಿತ್ತು.

ಆದರೆ ರಾಷ್ಟ್ರ ರಾಜಧಾನಿ ಪ್ರದೇಶದ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಆವಿ ತಡೆ ವ್ಯವಸ್ಥೆಯನ್ನು (ವೇಪರ್ ರಿಕವರಿ ಸಿಸ್ಟಮ್-ವಿಆರ್‌ಎಸ್) ಸುಪ್ರೀಂ ಕೋರ್ಟ್ ನೀಡಿದ ಅವಧಿಯೊಳಗೆ ಸ್ಥಾಪಿಸದಿದ್ದಕ್ಕಾಗಿ ದಂಡ ವಿಧಿಸಲಾಗಿದೆ. ಕಂಪನಿಯ ಕಾರ್ಯಾಚರಣೆ ಮತ್ತು ಇತರ ಚಟುವಟಿಕೆಗಳ ಮೇಲೆ ಇದು ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಐಒಸಿ ಹೇಳಿದೆ.

₹2 ಕೋಟಿ ದಂಡ ಪಾವತಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಯು ನೋಟಿಸ್ ನೀಡಿದೆ. ಈ ನೋಟಿಸ್ ಅನ್ನು ಪರಿಶೀಲಿಸುತ್ತಿದ್ದು, ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಕ್ತ ಉತ್ತರ ನೀಡಲಾಗುವುದು ಎಂದು ಬಿಪಿಸಿಎಲ್ ತಿಳಿಸಿದೆ.

ಎರಡೂ ಕಂಪನಿಗಳು ಇದೇ ಅಕ್ಟೋಬರ್ 19ರಂದು ನೋಟಿಸ್‌ಗಳನ್ನು ಪಡೆದಿದ್ದವು.

₹250 ಕೋಟಿ ವೆಚ್ಚದಲ್ಲಿ ಹೊಸೂರು ಬಳಿ ಹೆಲ್ಮೆಟ್ ಘಟಕ

ನವದೆಹಲಿ(ಪಿಟಿಐ): ತಮಿಳುನಾಡಿನ ಹೊಸೂರಿನಲ್ಲಿ ₹250 ಕೋಟಿ ವೆಚ್ಚದಲ್ಲಿ ನೂತನ ತಯಾರಿಕಾ ಘಟಕ ಸ್ಥಾಪಿಸುವ ಗುರಿ ಇದೆ ಎಂದು ಪ್ರಮುಖ ಹೆಲ್ಮೆಟ್ ತಯಾರಕ ಕಂಪನಿ ಸ್ಟೀಲ್‌ಬರ್ಡ್ ಹೈಟೆಕ್ ಇಂಡಿಯಾದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಟೀಲ್‌ಬರ್ಡ್ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಕಪೂರ್ ಮಾತನಾಡಿ, ಬೇಡಿಕೆ ಪೂರೈಸಲು ಘಟಕ ಸ್ಥಾಪಿಸಲಾಗುತ್ತಿದೆ. ಇದಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಕಾರ್ಯ ಅಂತಿಮ ಹಂತದಲ್ಲಿದೆ. ಆರಂಭಿಕ ಹಂತವಾಗಿ ₹100 ಕೋಟಿ ಹೂಡಿಕೆ ಮಾಡಲಿದ್ದೇವೆ. 2 ವರ್ಷಗಳಲ್ಲಿ ₹250 ಕೋಟಿ ಹೂಡಿಕೆ ಮಾಡಲಾಗುವುದು. ಆ ವೇಳೆಗೆ ಘಟಕವು ಕಾರ್ಯನಿರ್ವಹಣೆ ಆರಂಭಿಸುವ ನಿರೀಕ್ಷೆ ಇದೆ ಎಂದರು.

ಹಿಮಾಚಲ ಪ್ರದೇಶದ ಬಡ್ಡಿ ಮತ್ತು ನೊಯಿಡಾದಲ್ಲಿ ಈಗಾಗಲೇ ಕಂಪನಿ ತಲಾ ನಾಲ್ಕು ಘಟಕಗಳನ್ನು ಹೊಂದಿದೆ. ಬಡ್ಡಿಯಲ್ಲಿನ ತಯಾರಿಕಾ ಘಟಕವನ್ನು ₹105 ಕೋಟಿ ವೆಚ್ಚದಲ್ಲಿ ವಿಸ್ತರಣೆ ಮಾಡಲಾಗುತ್ತಿದೆ. ಈ ಸ್ಥಾವರ ಪೂರ್ಣವಾದ ನಂತರ ಕಂಪನಿಯ ತಯಾರಿಕಾ ಸಾಮರ್ಥ್ಯವು ದಿನಕ್ಕೆ 20 ಸಾವಿರದಿಂದ 50 ಸಾವಿರ ಹೆಲ್ಮೆಟ್‌ಗಳಿಗೆ ಏರಿಕೆ ಆಗಲಿದೆ. ಈ ಆರ್ಥಿಕ ವರ್ಷದಲ್ಲಿ ಎಲ್ಲ ಘಟಕಗಳಿಂದ ಕೋಟಿ ಹೆಲ್ಮೆಟ್ ತಯಾರಿಸುವ ನಿರೀಕ್ಷೆಯಿದೆ. ಮುಂದಿನ ವರ್ಷದ ಅಂತ್ಯದ ವೇಳೆಗೆ, ಕಂಪನಿಯು ಒಟ್ಟಾರೆ ತಯಾರಿಕೆಯನ್ನು ವರ್ಷಕ್ಕೆ 1.5 ಕೋಟಿ ಹೆಲ್ಮೆಟ್‌ಗಳಿಗೆ ವಿಸ್ತರಿಸಲು ಯೋಜಿಸಿದೆ ಎಂದು ಅವರು ಹೇಳಿದರು.

2022–23ರ ಅವಧಿಯಲ್ಲಿ ಕಂಪನಿಯು ₹554 ಕೋಟಿ ವ್ಯವಹಾರ ನಡೆಸಿದ್ದು, ಈ ಹಣಕಾಸು ವರ್ಷದಲ್ಲಿ ಇದನ್ನು ₹600 ಕೋಟಿ ಮುಟ್ಟಿಸುವ ಗುರಿ ಹೊಂದಿದೆ. 2026–27ರ ವೇಳೆಗೆ ವಹಿವಾಟನ್ನು ₹1300 ಕೋಟಿಗೆ ಹೆಚ್ಚಿಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದರು.

₹ 150 ಕೋಟಿ ಮೌಲ್ಯದ ಮಾದಕ ವಸ್ತುಗಳ ಜಪ್ತಿ

ಅಹಮದಾಬಾದ್: ಅಹಮದಾಬಾದ್‌ನ ಅಪರಾಧ ಪತ್ತೆ ವಿಭಾಗ (ಡಿಸಿಬಿ) ಮತ್ತು ರೆವಿನ್ಯೂ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ, ಸುಮಾರು ₹ 150 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

‘ಕೆಟಮೈನ್ ಮತ್ತು ಕೊಕೇನ್ ಅನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುತ್ತಿದ್ದ ಕಾರ್ಖಾನೆ ಮೇಲೆ ದಾಳಿ ನಡೆಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಇದಲ್ಲದೇ, ಮಾದಕ ವಸ್ತು ಉತ್ಪಾದಿಸಲು ಬಳಸಲಾಗುತ್ತಿದ್ದ ₹ 350 ಕೋಟಿ ಮೌಲ್ಯದ ಉಪಕರಣಗಳನ್ನು ಸಹ ಜಪ್ತಿ ಮಾಡಲಾಗಿದೆ’ ಎಂದಿವೆ.

ಷೇರು: ದುಡ್ಡು ಕಳೆದುಕೊಳ್ಳೋದು ಏಕೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಹಲವು ಬ್ರೋಕರೇಜ್ ಸಂಸ್ಥೆಗಳು ಮಾಡಿರುವ ಅಧ್ಯಯನದ ಪ್ರಕಾರ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಶೇ 90 ರಷ್ಟು ಮಂದಿ ಹಣ ಕಳೆದುಕೊಳ್ಳುತ್ತಾರೆ. ಸರಿಯಾದ ಹೂಡಿಕೆ ಜ್ಞಾನವಿಲ್ಲದೆ ದಿಢೀರ್ ದುಡ್ಡು ಮಾಡುವ ಆಸೆಯಿಂದ ಷೇರುಪೇಟೆಗೆ ಧುಮುಕುವುದೇ ಇದಕ್ಕೆ ಮುಖ್ಯ ಕಾರಣ. ಹೂಡಿಕೆ ಮಾಡುವಾಗ ಆಗುವ ಸಾಮಾನ್ಯ ತಪ್ಪುಗಳೇನು? ಅವನ್ನು ಹೇಗೆ ತಡೆಯಬಹುದು? ಬನ್ನಿ ಈ ಬಗ್ಗೆ ವಿವರವಾಗಿ ತಿಳಿಯೋಣ.

ಅರ್ಥಮಾಡಿಕೊಳ್ಳದೆ ಹೂಡಿಕೆ ಮಾಡೋದು: ತರಕಾರಿ ತೆಗೆದುಕೊಳ್ಳುವಾಗ ಅದರ ಗುಣಮಟ್ಟ ಸರಿ ಇದೆಯಾ ಎಂದು ನಾಲ್ಕಾರು ಬಾರಿ ಪರಿಶೀಲಿಸಿ ಖರೀದಿ ಮಾಡುತ್ತೇವೆ. ಆದರೆ ಷೇರುಗಳನ್ನು ಖರೀದಿ ಮಾಡುವಾಗ ಬಹುತೇಕ ಹೂಡಿಕೆದಾರರು ಈ ಕಾಳಜಿ ತೋರುವುದಿಲ್ಲ, ಅಧ್ಯಯನವಿಲ್ಲದೆ ಹೂಡಿಕೆ ಮಾಡುತ್ತಾರೆ. ಸ್ನೇಹಿತರು, ಪರಿಚಯದವರು, ವಿವಿಧ ಏಜೆನ್ಸಿಗಳು ಕೊಡುವ ಟಿಪ್ಸ್ ಆಧರಿಸಿ ಹೂಡಿಕೆ ಮಾಡಿ ನಷ್ಟ ಮಾಡಿಕೊಳ್ಳುತ್ತಾರೆ. ಶೇ 90 ರಷ್ಟು ಮಂದಿ ಹಣ ಕಳೆದುಕೊಳ್ಳುವುದು ಇದೇ ಮಾದರಿಯಲ್ಲಿ.

ಒಂದು ಕಂಪನಿ ಹೇಗೆ ಹಣ ಗಳಿಸುತ್ತದೆ ಎಂದು ನಿಮಗೆ ತಿಳಿಯದಿದ್ದಾಗ ಅದು ಹೇಗೆ ಹಣ ಕಳೆದುಕೊಳ್ಳಬಹುದು ಎಂಬ ಅಂದಾಜು ಸಹ ನಿಮಗಿರುವುದಿಲ್ಲ. ಹಾಗಾಗಿ ಹೂಡಿಕೆಗೂ ಮುನ್ನ ಕಂಪನಿಯು ಈವರೆಗೆ ಎಷ್ಟರ ಮಟ್ಟಿಗೆ ಬೆಳವಣಿಗೆ ಸಾಧಿಸಿದೆ, ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ನಿರ್ದಿಷ್ಟ ವಲಯದಲ್ಲಿ ಭವಿಷ್ಯದ ಬೆಳವಣಿಗೆಯ ಸಾಧ್ಯತೆ ಎಷ್ಟು ಹೀಗೆ ಎಲ್ಲಾ ಕೋನಗಳಿಂದ ನೋಡಿ ನಿರ್ಧಾರ ಮಾಡಬೇಕಾಗುತ್ತದೆ.

ಸೂಕ್ತವಲ್ಲದ ಸಮಯದಲ್ಲಿ ಷೇರುಗಳನ್ನು ಮಾರಾಟ ಮಾಡೋದು: ಷೇರು ಮಾರುಕಟ್ಟೆಯಲ್ಲಿ ತ್ವರಿತವಾದ ಏರಿಳಿತಗಳು ಸಹಜ. ಇಂದು ಖರೀದಿಸಿದ ಷೇರು ನಾಳೆಯೇ ಭರ್ಜರಿ ಲಾಭ ಕೊಡಬೇಕು ಎಂದು ಹಲವರು ಬಯಸುತ್ತಾರೆ. ಆದರೆ ನೆನಪಿರಲಿ, ಷೇರುಪೇಟೆಯಲ್ಲಿ ಉತ್ತಮ ಕಂಪನಿಗಳ ಮೇಲೆ ಹೂಡಿಕೆ ಮಾಡಿದಾಗಲೂ ಸಂಪತ್ತು ಸೃಷ್ಟಿಗೆ ಸಮಯಾವಕಾಶ ಬೇಕು. ನಿರ್ದಿಷ್ಟ ಕಂಪನಿಯ ಷೇರು ಉತ್ತಮ ಬೆಳವಣಿಗೆ ತೋರುತ್ತಿದ್ದರೂ ಷೇರಿನ ಬೆಲೆ ಅಲ್ಪಾವಧಿಯಲ್ಲಿ ಇಳಿಕೆ ಕಾಣುತ್ತಿದೆ ಎಂದರೆ ಆ ಷೇರನ್ನು ಮಾರಾಟ ಮಾಡುವ ಅಗತ್ಯವಿಲ್ಲ. ಹೆಚ್ಚಿನ ಲಾಭ ತಂದುಕೊಡುವ ಸಾಧ್ಯತೆ ಇರುವ ಒಳ್ಳೆಯ ಪರ್ಯಾಯ ಹೂಡಿಕೆಗೆ ಅವಕಾಶವಿದೆ ಎನ್ನುವಾಗ, ನಿರ್ದಿಷ್ಟ ಕಂಪನಿಯ ಮೂಲಭೂತ ರಚನೆ ಅಥವಾ ಸ್ಥಿತಿಗತಿ ಬದಲಾದಾಗ, ನಿಮ್ಮ ಹೂಡಿಕೆ ಗುರಿಯನ್ನು ಮುಟ್ಟಿದಾಗ ಮಾತ್ರ ಷೇರನ್ನು ಮಾರಾಟ ಮಾಡುವ ಬಗ್ಗೆ ಆಲೋಚನೆ ಮಾಡಬೇಕು. ಮನಸ್ಸಿಗೆ ಬಂದಂತೆ ಖರೀದಿ ಮತ್ತು ಮಾರಾಟ ಮಾಡಿದರೆ ಷೇರು ಹೂಡಿಕೆಯಲ್ಲಿ ಲಾಭ ಗಳಿಸಲು ಸಾಧ್ಯವಿಲ್ಲ.

ಹಿಂದಿನ ಗಳಿಕೆ ಆಧಾರದಲ್ಲಿ ಭವಿಷ್ಯದ ಅಂದಾಜು ಮಾಡೋದು: ‘ಇವತ್ತು ಹೂಡಿಕೆ ಮಾಡಿದವನು ನಿನ್ನೆ ಷೇರುಪೇಟೆಯಲ್ಲಿ ಉಂಟಾದ ಪ್ರಗತಿಯಿಂದ ಲಾಭ ನಿರೀಕ್ಷಿಸಲು ಸಾಧ್ಯವಿಲ್ಲ’ ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಕಳೆದ 10 ವರ್ಷಗಳಲ್ಲಿ ನಿರ್ದಿಷ್ಟ ಕಂಪನಿ ಇಷ್ಟು ಲಾಭಾಂಶ ಕೊಟ್ಟಿದೆ. ಮುಂದಿನ ಕೆಲ ವರ್ಷಗಳಲ್ಲಿ ಇಷ್ಟು ಲಾಭ ಸಿಗಬಹುದು ಎಂದು ನಾವು ಹಲವು ರೀತಿಯಲ್ಲಿ ಲೆಕ್ಕಾಚಾರ ಮಾಡಬಹುದು. ಆದರೆ, ಈ ಹಿಂದೆ ಲಾಭ ಗಳಿಸಿರುವ ಕಂಪನಿ ಮುಂದೆ ಹೆಚ್ಚು ಲಾಭ ಗಳಿಸದೇ ಇರಬಹುದು. ಈವರೆಗೆ ಹೆಚ್ಚು ಲಾಭ ಕೊಡದ ಕಂಪನಿ ಮುಂದೆ ಉತ್ತಮ ಲಾಭಾಂಶ ನೀಡಬಹುದು. ಲಾಭದ ಲೆಕ್ಕಾಚಾರ ಕಂಪನಿಯ ಪ್ರಸ್ತುತ ಬೆಳವಣಿಗೆ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಲು ಕಂಪನಿಯ ಬ್ಯಾಲೆನ್ಸ್ ಶೀಟ್ ನೋಡಬೇಕಾಗುತ್ತದೆ.

ಭಾವನೆಗಳ ಲೆಕ್ಕಾಚಾರಕ್ಕೆ ಮುಂದಾಗೋದು: ಹೂಡಿಕೆ ಮಾಡುವಾಗ ಲಾಭ ಮತ್ತು ನಷ್ಟದ ಲೆಕ್ಕಾಚಾರಕ್ಕೆ ಆದ್ಯತೆ ಕೊಡಿ. ಯಾವುದೇ ಕಾರಣಕ್ಕೂ ಭಾವನೆಗಳ ಆಧಾರದಲ್ಲಿ ಹೂಡಿಕೆ ಮಾಡಬೇಡಿ. ಯಾವುದೋ ಕಂಪನಿ ನಿಮಗೆ ಇಷ್ಟ ಎನ್ನುವ ಕಾರಣಕ್ಕೆ ಪೂರ್ವಾಪರ ಯೋಚಿಸದೆ ಆ ಷೇರಿನಲ್ಲಿ ಹೂಡಿಕೆ ಮಾಡುವುದು, ನಿರ್ದಿಷ್ಟ ಕಂಪನಿಯ ಷೇರು ಭರ್ಜರಿ ಲಾಭ ಕೊಡುತ್ತದೆ ಎಂದು ನನ್ನ ಮನಸ್ಸು ಹೇಳುತ್ತಿದೆ ಎಂದು ಅಂದಾಜಿನ ಮೇಲೆ ಖರೀದಿ ಮಾಡುವುದು, ಯಾರೋ ಹೇಳಿದರು ಎನ್ನುವ ಕಾರಣಕ್ಕೆ ಷೇರು ಖರೀದಿ ಮಾಡುವುದು ಸೇರಿದಂತೆ ಭಾವನೆಗಳ ಮೇಲಾಟದಲ್ಲಿ ಹೂಡಿಕೆ ಮಾಡಲು ಮುಂದಾದರೆ ನಷ್ಟ ಕಟ್ಟಿಟ್ಟ ಬುತ್ತಿ.

ಅಗತ್ಯದ ಹಣ ಷೇರಿನಲ್ಲಿ ತೊಡಗಿಸೋದು: ಅನೇಕರು ಹೆಚ್ಚು ಆಲೋಚನೆ ಮಾಡದೆ ದಿಢೀರ್ ಶ್ರೀಮಂತರಾಗುವ ಹಗಲುಗನಸಿಗೆ ಬೀಳುತ್ತಾರೆ. ತುರ್ತು ಅಗತ್ಯಗಳಿಗಾಗಿ ಬೇಕಾಗುವ ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲು ಮುಂದಾಗುತ್ತಾರೆ. ಇದು ಅತ್ಯಂತ ಅಪಾಯಕಾರಿ ನಿರ್ಧಾರ. ತುರ್ತು ಅಗತ್ಯಗಳಿಗೆ ಮೀಸಲಿಟ್ಟಿರುವ ಹಣವನ್ನು ಯಾವುದೇ ಕಾರಣಕ್ಕೂ ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಅದೃಷ್ಟ ಪರೀಕ್ಷೆಗೆ ಮುಂದಾಗಬಾರದು. ಷೇರು ಹೂಡಿಕೆಯಲ್ಲಿ ರಿಸ್ಕ್ ಹೆಚ್ಚಿಗೆ ಇರುವ ಕಾರಣ ಲಾಭದ ಸಾಧ್ಯತೆ ಎಷ್ಟಿದೆಯೋ, ನಷ್ಟದ ಸಾಧ್ಯತೆಯೂ ಅಷ್ಟೇ ಇರುತ್ತದೆ. ತುರ್ತು ಅಗತ್ಯಕ್ಕೆ ಬೇಕಿರುವ ಹಣವನ್ನು ಉಳಿತಾಯ ಖಾತೆ, ಅಲ್ಪಾವಧಿ ಎಫ್‌ಡಿ, ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಇಡುವುದು ಒಳಿತು.

ಹಣಕಾಸು ಶಿಕ್ಷಣವಿಲ್ಲದೆ ಹೂಡಿಕೆಗೆ ಮುಂದಾಗುವುದು: ನಿಮ್ಮ ಹೂಡಿಕೆಯನ್ನು ನಿಮ್ಮಷ್ಟು ಕಾಳಜಿಯಿಂದ ನಿರ್ವಹಿಸಲು ಯಾರಿಂದಲೂ ಸಾಧ್ಯವಿಲ್ಲ. ತಜ್ಞರಿಂದ ಸಲಹೆ ಸೂಚನೆಗಳನ್ನು ಪಡೆಯಿರಿ, ಆದರೆ, ಅಂತಿಮವಾಗಿ ನೀವು ನಿರ್ಧಾರ ತೆಗೆದುಕೊಳ್ಳಿ. ನೆನಪಿರಲಿ ಶ್ರೀಮಂತರಾದವರೆಲ್ಲರೂ ಅವರ ಹಣಕಾಸಿನ ನಿರ್ಧಾರಗಳನ್ನು ಅವರೇ ತೆಗೆದುಕೊಂಡಿದ್ದಾರೆ. ಮತ್ತೊಬ್ಬರ ಮೇಲೆ ಆ ಜವಾಬ್ದಾರಿ ಹೊರಿಸಿ ಸುಮ್ಮನಾಗಿಲ್ಲ. ಹೀಗೆ ಹಣಕಾಸಿನ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳುವಂತಾಗಬೇಕಾದರೆ ಅದಕ್ಕಾಗಿ ಒಂದಿಷ್ಟು ಕಲಿಕೆ ಮತ್ತು ಅಧ್ಯಯನ ಇರಬೇಕು. ಕಲಿಕೆಯಿಂದ ಮಾತ್ರ ಗಳಿಕೆ ಸಾಧ್ಯ ಎನ್ನುವುದನ್ನು ಎಂದಿಗೂ ನೆನಪಿನಲ್ಲಿಡಿ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಶೇ 1ರಷ್ಟು ಇಳಿದ ಸೆನ್ಸೆಕ್ಸ್, ನಿಫ್ಟಿ

ಕಳೆದ ಎರಡು ವಾರಗಳಲ್ಲಿ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಅಕ್ಟೋಬರ್ 20ಕ್ಕೆ ಕೊನೆಗೊಂಡ ವಾರದಲ್ಲಿ ಕುಸಿತ ಕಂಡಿವೆ. 65,397 ರಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.33 ರಷ್ಟು ಕುಸಿದಿದೆ. 19,542 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 1.05 ರಷ್ಟು ಇಳಿಕೆಯಾಗಿದೆ. ನಿಫ್ಟಿ ಮಿಡ್ ಕ್ಯಾಪ್ 100 ಸೂಚ್ಯಂಕ ಶೇ 1.55 ರಷ್ಟು ಕುಸಿದಿದೆ. ಆದರೆ ನಿಫ್ಟಿ ಸ್ಮಾಲ್ ಕ್ಯಾಪ್ 100 ಸೂಚ್ಯಂಕ ಶೇ 0.26 ಜಿಗಿದಿದೆ.

ಇಸ್ರೇಲ್-ಹಮಾಸ್ ಯುದ್ಧದ ಕಾರಣದಿಂದಾಗಿ ತೈಲ ಬೆಲೆ ಹೆಚ್ಚಳ ಆಗಿದೆ. ಬಡ್ಡಿ ದರ ಹೆಚ್ಚಳವು ಇನ್ನೂ ಹೆಚ್ಚು ಸಮಯದ ವರೆಗೆ ಮುಂದುವರಿಯಲಿದೆ ಎಂದು ಅಮೆರಿಕ ಫೆಡರಲ್ ಬ್ಯಾಂಕ್ ಸೂಚನೆ ಕೊಟ್ಟಿರುವುದು ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ ಸೇರಿದಂತೆ ಕೆಲ ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಬಜಾಜ್ ಆಟೊ ಶೇ 8.65, ಹೀರೊ ಮೋಟೊಕಾರ್ಪ್ ಶೇ 3.64, ಸಿಪ್ಲಾ ಶೇ 2.78, ಡಾ. ರೆಡ್ಡೀಸ್ ಶೇ 2, ಕೋಲ್ ಇಂಡಿಯಾ ಶೇ 1.45, ಜೀ ಎಂಟರ್‌ಟೇನ್ಮೆಂಟ್ ಶೇ 1.20 ಮತ್ತು ಅಲ್ಟ್ರಾ ಟೆಕ್ ಸಿಮೆಂಟ್ ಶೇ 1.10 ರಷ್ಟು ಜಿಗಿದಿವೆ. ವಿಪ್ರೋ ಶೇ 4.67, ಬಜಾಜ್ ಫೈನಾನ್ಸ್ ಶೇ 3.51, ಯುಪಿಎಲ್ ಶೇ 3.15, ಹಿಂದೂಸ್ಥಾನ್ ಯುನಿ ಲಿವರ್ ಶೇ 2.89 ಎಲ್ ಅಂಡ್ ಟಿ ಶೇ 2.50 ಮತ್ತು ಗೇಲ್ ಶೇ 2.50 ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಎನ್‌ಡಿಟಿವಿ, ಎಕ್ಸಿಸ್ ಬ್ಯಾಂಕ್, ಯೂನಿಯನ್ ಬ್ಯಾಂಕ್, ಏಷಿಯನ್ ಪೇಂಟ್ಸ್, ಬಿಪಿಸಿಎಲ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ತಕ್ಷಣದ ಏರಿಳಿತಗಳು ಉಂಟಾಗುತ್ತಿವೆ. ಈ ಹಂತದಲ್ಲಿ ಹೊಸದಾಗಿ ಹೂಡಿಕೆ ಮಾಡಬೇಕು ಎನ್ನುವವರು ಎಚ್ಚರಿಕೆಯ ಹೆಜ್ಜೆ ಇಡುವುದು ಮುಖ್ಯ.

ಸಕಾರಾತ್ಮಕ ಹಂತ ತಲುಪಲಿರುವ ವಹಿವಾಟು ಸಂಬಂಧ: ವಾಣಿಜ್ಯ ಸಚಿವಾಲಯದ ಹೇಳಿಕೆ

ವ್ಯಾಪಾರ: ಅಮೆರಿಕ ದೊಡ್ಡ ಪಾಲುದಾರ

ನವದೆಹಲಿ (ಪಿಟಿಐ): ‘ಪ್ರಸ್ತುತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್) ಅಮೆರಿಕವು ಭಾರತದ ಅತ್ಯಂತ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿ ಹೊರಹೊಮ್ಮಿದೆ. ಚೀನಾ ಎರಡನೇ ಸ್ಥಾನದಲ್ಲಿದೆ’ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿದೆ.

‘ಕಳೆದ ವರ್ಷಕ್ಕೆ ಹೋಲಿಸಿದರೆ, ಅಮೆರಿಕ–ಭಾರತದ ನಡುವೆ ವ್ಯಾಪಾರದಲ್ಲಿ ಶೇ 11.3ರಷ್ಟು ಇಳಿಕೆಯಾಗಿದೆ. ಜೊತೆಗೆ, ಜಾಗತಿಕವಾದ ಆರ್ಥಿಕ ಸಂಕಷ್ಟಗಳು ಮತ್ತು ರಫ್ತು–ಆಮದುಗಳಲ್ಲಿಯೂ ಇಳಿಕೆ ಕಂಡುಬಂದಿದೆ. ಹಾಗಿದ್ದರೂ ಅಮೆರಿಕ ಹಾಗೂ ಭಾರತದ ವ್ಯಾಪಾರ ಸಂಬಂಧ ಗಟ್ಟಿಯಾಗಿದೆ’ ಎಂದು ಸರ್ಕಾರ ಹೇಳಿದೆ.

‘ಜಾಗತಿಕವಾಗಿಯೇ ಬೇಡಿಕೆ ಕುಸಿತ ಕಂಡಿದೆ. ಈ ಕಾರಣಕ್ಕಾಗಿಯೇ ಭಾರತ ಹಾಗೂ ಅಮೆರಿಕ ಮಧ್ಯೆ ರಫ್ತು ಹಾಗೂ ಆಮದಿನಲ್ಲಿ ಇಳಿಕೆಯಾಗಿದೆ.



ಮುಂಬರುವ ವರ್ಷಗಳಲ್ಲಿ ಅಮೆರಿಕ–ಭಾರತ ತಮ್ಮ ಆರ್ಥಿಕ ಒಪ್ಪಂದಗಳನ್ನು ಇನ್ನಷ್ಟು ಬಲಗೊಳಿಸಿಕೊಳ್ಳಲಿವೆ. ಆದಕಾರಣ, ಮುಂದಿನ ದಿನಗಳಲ್ಲಿ 2 ದೇಶಗಳ ನಡುವೆ ವ್ಯಾಪಾರ ಸಂಬಂಧ ಸಕಾರಾತ್ಮಕ ಹಂತ ತಲುಪಲಿದೆ’ ಎನ್ನುತ್ತಾರೆ ವ್ಯಾಪಾರ ತಜ್ಞರು.

ಎರಡನೇ ಸ್ಥಾನಕ್ಕೆ ಚೀನಾ: ಭಾರತ ಹಾಗೂ ಚೀನಾದ ವ್ಯಾಪಾರದಲ್ಲೂ ಶೇ 3.56ರಷ್ಟು ಇಳಿಕೆಯಾಗಿದೆ. ಈ ವರ್ಷದ ವ್ಯಾಪಾರವು 58.11 ಬಿಲಿಯನ್ ಡಾಲರ್‌ನಷ್ಟು (ಅಂದಾಜು ₹48.37 ಲಕ್ಷ ಕೋಟಿ) ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. 2013–14ರಿಂದ 2017–18 ಹಾಗೂ 2020–21ರಲ್ಲೂ ಚೀನಾ ಭಾರತದ ಅತ್ಯಂತ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿತ್ತು.

‘ಸಾಮಾನ್ಯ ಆದ್ಯತಾ ವ್ಯವಸ್ಥೆಗೆ ಒತ್ತು ನೀಡಿ’

‘ಅಮೆರಿಕವು ಸಾಮಾನ್ಯ ಆದ್ಯತಾ ವ್ಯವಸ್ಥೆಯನ್ನು (ಅಭಿವೃದ್ಧಿಶೀಲ ದೇಶಗಳು ರಫ್ತು ಮಾಡುವ ಸರಕುಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳು ತೆರಿಗೆ ವಿನಾಯಿತಿ ನೀಡುವುದು. ಇದು ಒಪ್ಪಂದ ಇಲ್ಲದೇ ನಡೆಯುವ ವ್ಯವಸ್ಥೆ) ಮರು-ಪರಿಶೀಲಿಸಬೇಕು. ಆಗ ಭಾರತದ ರಫ್ತುದಾರರಿಗೆ ಭಾರಿ ಸಹಾಯವಾಗಲಿದೆ’ ಎಂದು ಲುಧಿಯಾನದ ರಫ್ತುದಾರ ಸಿ.ಎಸ್. ರಲ್ಹಾನ್ ಅವರು ಅಭಿಪ್ರಾಯಪಡುತ್ತಾರೆ.

ಎಸ್‌ಎಂಇಗಳ ಐಪಿಒ: ಒಟ್ಟು ₹3,540 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಸ್‌ಎಂಇ) ಐಪಿಒಗಳ (ಆರಂಭಿಕ ಷೇರು ಮಾರಾಟ) ಮೇಲೆ ಹೆಚ್ಚಿನ ಆಸಕ್ತಿ ಕಾಣಿಸಿಕೊಳ್ಳುತ್ತಿದೆ. 2023ರಲ್ಲಿ ಈವರೆಗೆ 139 ಎಸ್‌ಎಂಇಗಳು ಒಟ್ಟು ₹3,540 ಕೋಟಿ ಮೊತ್ತವನ್ನು ಸಂಗ್ರಹಿಸಿವೆ. ಉದ್ಯಮಿಗಳ ಕುಟುಂಬಗಳು ಮತ್ತು ಶ್ರೀಮಂತ ಹೂಡಿಕೆದಾರರು ಎಸ್‌ಎಂಇಗಳಲ್ಲಿ ಆಸಕ್ತಿ ತೋರಿ ಹೆಚ್ಚಿನ ಹಣ ಹೂಡಿಕೆ ಮಾಡುತ್ತಿರುವುದು ಇದಕ್ಕೆ ಕಾರಣ.

2022ರಲ್ಲಿ 109 ಎಸ್‌ಎಂಇಗಳು ₹1,875 ಕೋಟಿಯನ್ನಷ್ಟೇ ಸಂಗ್ರಹಿಸಲು ಸಾಧ್ಯವಾಗಿತ್ತು ಎಂದು ಪ್ರೈಮ್‌ಡಾಟಾಬೇಸ್ ಡಾಟ್‌ಕಾಂ ಹೇಳಿದೆ.

ಮುಂದಿನ ದಿನಗಳಲ್ಲಿ ಕೂಡ ಎಸ್‌ಎಂಇಗಳ ಐಪಿಒ ವಿಚಾರದಲ್ಲಿ ಅನುಕೂಲಕರ ವಾತಾವರಣವೇ ಮುಂದುವರಿಯಬಹುದು ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

‘ನಿರ್ದಿಷ್ಟ ವಲಯಗಳ ಬೆಳವಣಿಗೆ ಸಾಮರ್ಥ್ಯ, ಮಾರು-ಕಟ್ಟೆಯಲ್ಲಿ ಹಣದ ಹರಿವು, ಹೂಡಿಕೆದಾರರ ಮನೋಭಾವ,

> **ಉದ್ಯಮಗಳು ವಿಸ್ತರಣೆಗೊಳ್ಳುತ್ತಲೇ ಇವೆ. ಹೂಡಿಕೆದಾರರ ಮನೋಭಾವ ಸಕಾರಾತ್ಮಕವಾಗಿದೆ. ಹಲವು ಕಂಪನಿಗಳು ಈ ಅನುಕೂಲಕರ ಸ್ಥಿತಿಯನ್ನು ಬಂಡವಾಳ ಸಂಗ್ರಹಕ್ಕೆ ಬಳಸಿಕೊಳ್ಳುತ್ತಿವೆ**
> **ಹಿಮಾಂಶು ಕೊಹ್ಲಿ,** ಕ್ಲಯಿಂಟ್ ಅಸೋಸಿಯೇಟ್ಸ್‌ನ ಸಹ ಸಂಸ್ಥಾಪಕ

ನಿಯಮಗಳಲ್ಲಿ ಆಗಬಹುದಾದ ಬದಲಾವಣೆಗಳು ಮಾರುಕಟ್ಟೆಯ ಪ್ರವೃತ್ತಿಯನ್ನು ಮುಖ್ಯವಾಗಿ ನಿರ್ಧರಿಸುವ ಅಂಶಗಳು. ಈ ಎಲ್ಲ ಅಂಶಗಳು ಅನುಕೂಲಕರವಾಗಿಯೇ ಇರುವುದರಿಂದ ಮುಂದಿನ ದಿನಗಳಲ್ಲಿ ಎಸ್‌ಎಂಇಗಳ ಐಪಿಒ ಮೇಲೆ ಹೂಡಿಕೆ ಸಮೃದ್ಧವಾಗಿ ನಡೆಯಬಹುದು’ ಎಂದು ಅರಿಹಂತ್ ಕ್ಯಾಪಿಟಲ್ ಮಾರ್ಕೆಟ್ಸ್ ಲಿ.ನ ಸಂಶೋಧನಾ ವಿಭಾಗದ ಮುಖ್ಯಸ್ಥ ಅಭಿಷೇಕ್ ಜೈನ್ ಹೇಳಿದ್ದಾರೆ.

ಸೆಪ್ಟೆಂಬರ್ ತಿಂಗಳಲ್ಲಿ 37 ಎಸ್‌ಎಂಇಗಳು ಐಪಿಒ ಬಿಡುಗಡೆ ಮಾಡಿವೆ. ಸ್ಪೆಕ್ಟ್ರಮ್ ಟ್ಯಾಲೆಂಟ್ ಮ್ಯಾನೇಜ್‌ಮೆಂಟ್ ₹105 ಕೋಟಿ ಬಂಡವಾಳ ಸಂಗ್ರಹಿಸಿದೆ. ಸಿಎಫ್‌ಎಫ್ ಫ್ಲುಯಿಡ್ ಕಂಟ್ರೋಲ್ ₹86 ಕೋಟಿ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿದೆ.

ವಿವಿಧ ಕ್ಷೇತ್ರದ ಕಂಪನಿಗಳು

ಈ ಬಾರಿ ಬಂಡವಾಳ ಸಂಗ್ರಹ ಮಾಡಿದ ಎಸ್‌ಎಂಇಗಳಲ್ಲಿ ಮಾಹಿತಿ ತಂತ್ರಜ್ಞಾನ, ಗ್ರಾಹಕ ಬಳಕೆ ವಸ್ತು, ಆಟೊಮೊಬೈಲ್ ಬಿಡಿಭಾಗ, ಔಷಧ, ಮೂಲಸೌಕರ್ಯ, ಜಾಹೀರಾತು ಮತ್ತು ಆತಿಥ್ಯ ಕ್ಷೇತ್ರದ ಕಂಪನಿಗಳು ಇವೆ.

ಪ್ಯಾರಗಾನ್ ಫೈನ್ ಆ್ಯಂಡ್ ಸ್ಪೆಶಾಲಿಟಿ ಕೆಮಿಕಲ್ಸ್ ಮತ್ತು ಆನ್ ಡೋರ್ ಕಾನ್ಸೆಪ್ಟ್ಸ್ ಮುಂದಿನ ವಾರ ಐಪಿಒ ಬಿಡುಗಡೆ ಮಾಡಲಿವೆ.

ವಿಸ್ತರಣೆ, ಬಂಡವಾಳ ಅಗತ್ಯ ಪೂರೈಕೆ ಮತ್ತು ಸಾಲ ಮರು-ಪಾವತಿಯಂತಹ ಅಗತ್ಯಗಳಿಗಾಗಿ ಸಂಗ್ರಹವಾದ ಬಂಡವಾಳ ಬಳಕೆ ಅಗಿದೆ.

ಸೇನೆ ನಿಯೋಜನೆ ಹೆಚ್ಚಿಸಿದ ಚೀನಾ

ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಚೀನಾ ನಡುವೆ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಮಧ್ಯೆಯೇ ಪ್ಯಾಂಗಾಂಗ್ ಸರೋವರದ 2ನೇ ಸೇತುವೆ ಸಮೀಪ, ದೋಕಲಾದಲ್ಲಿ ಸೇನೆ ನಿಯೋಜಿಸುವ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾರ್ಯವನ್ನು ಚೀನಾ ಮತ್ತಷ್ಟು ಚುರುಕುಗೊಳಿಸಿದೆ.

ಅಮೆರಿಕದ ರಕ್ಷಣಾ ಇಲಾಖೆಯು ಇಲ್ಲಿ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಿದೆ. ಪೂರ್ವ ಲಡಾಖ್‌ನಲ್ಲಿ ಭಾರತ ಮತ್ತು ಚೀನಾದ ಸೇನೆಯ ನಡುವೆ ಮೂರು ವರ್ಷದ ಹಿಂದೆ ಸಂಘರ್ಷ ಉಂಟಾದ ಬಳಿಕ ಉದ್ವಿಗ್ನ ಸ್ಥಿತಿ ಮೂಡಿದೆ.

ಅಮೆರಿಕ ಬಿಡುಗಡೆ ಮಾಡಿದ ‘ಚೀನಾದ ಸೇನೆ ಮತ್ತು ಸುರಕ್ಷತಾ ಬೆಳವಣಿಗೆಗಳು 2023’ ವರದಿಯಲ್ಲಿ, ‘ಭಾರತ ಮತ್ತು ಚೀನಾ ಗಡಿಯಲ್ಲಿ 2020ರಿಂದಲೂ ಉದ್ವಿಗ್ನ ಪರಿಸ್ಥಿತಿ ಇದೆ. ಅದರ ನಡುವೆಯೂ ಚೀನಾ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಕಾರ್ಯ ಮುಂದುವರಿಸಿದೆ’. ‘ಚೀನಾ ಸೇನೆ ಪ್ರಸ್ತುತ ಬಳಕೆ ಮಾಡಬಹುದಾದ 500ಕ್ಕೂ ಹೆಚ್ಚು ಅಣ್ವಸ್ತ್ರ ಸಿಡಿತಲೆ ಹೊಂದಿದೆ. 2030ರ ವೇಳೆಗೆ ಇವುಗಳ ಸಂಖ್ಯೆಯು 1000 ಮೀರಬಹುದು’ ಎಂಬ ಅಂಶವನ್ನು ಉಲ್ಲೇಖಿಸಲಾಗಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹272-422
ದ್ವಿತಳಿ (ಬಿ.ವಿ)
₹321-585

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹560
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹565

ಜಂಬೂಸವಾರಿಗೆ ತಯಾರಿ

ಒಂದನೇ ಪುಟದಿಂದ

750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ವಿರಾಜಮಾನವಾ-ಗುವ ಅಧಿದೇವತೆ ಚಾಮುಂಡೇಶ್ವರಿ ಮೂರ್ತಿಗೆ ನಮಿಸಲು, ಗಜಪಡೆಯನ್ನು ನೋಡಲು ಜನರು–ಪ್ರವಾಸಿಗರು ಕಾತ-ರರಾಗಿದ್ದಾರೆ. ಅಂಬಾರಿ ಹೊರಲಿರುವ ‘ಅಭಿಮನ್ಯು’ ನೇತೃತ್ವದಲ್ಲಿ 14 ಆನೆಗಳು ಆಕರ್ಷಕ ವಿದ್ಯುತ್ ದೀಪಾಲಂಕಾರದ ನಡುವೆ ಸಾಗಲಿರುವುದು ವಿಶೇಷ.

ಸಂಜೆ ಚಾಲನೆ: ಅರಮನೆಯ ಬಲರಾಮ ದ್ವಾರದಲ್ಲಿ ಮಂಗಳವಾರ ಮಧ್ಯಾಹ್ನ1.46ರಿಂದ 2.08ರೊಳಗೆ ನಂದಿಧ್ವಜ ಪೂಜೆ ನೆರವೇರಲಿದೆ. ಸಂಜೆ 4.40ರಿಂದ 5ರವರೆಗೆ ಅಂಬಾವಿಲಾಸ ಅರಮನೆ ಒಳಾವರಣದಲ್ಲಿ ವಿಜಯ ದಶಮಿ ಮೆರವಣಿಗೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ಜಂಬೂಸವಾರಿ ಉದ್ಘಾಟನೆಗೆ ಮುಖ್ಯಅತಿಥಿಯಾಗಿ ಆಹ್ವಾನಿಸುವುದನ್ನು ಈ ವರ್ಷವೂ ಮುಂದುವರಿಸಲಾಗಿದೆ.

ಮೆರವಣಿಗೆಯು ಅರಮನೆ ಆವರಣದಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಸಾಗಲಿದೆ. 49 ಸ್ತಬ್ಧಚಿತ್ರಗಳು, 50 ಜನಪದ ಕಲಾ ತಂಡಗಳು ಭಾಗವಹಿಸಲಿವೆ. ಹ್ಯಾಟ್ರಿಕ್ ಸಾಧನೆ ಮಾಡಿರುವ ‘ಅಭಿಮನ್ಯು’ ಆನೆಯೇ ಈ ಬಾರಿಯೂ ಅಂಬಾರಿ ಹೊತ್ತು ಸಾಗಲಿದೆ. ಗಜಪಡೆಗೆ ಹಲವು ದಿನಗಳಿಂದ ತಾಲೀಮು ನಡೆಸಲಾಗಿದೆ.

ನಂದಿ ಧ್ವಜ, ನೌಫತ್ ಮತ್ತು ನಿಶಾನೆ ಆನೆಗಳು, ಪೊಲೀಸ್ ವಾದ್ಯ ವೃಂದ, ಫಿರಂಗಿ ಗಾಡಿಗಳು, ಜಾನಪದ ಕಲಾತಂಡಗಳು, ಸ್ತ-ಬ್ಧಚಿತ್ರಗಳು ಸಾಗುತ್ತವೆ. ಬಳಿಕ ನಾದಸ್ವರ, ಆನೆಗಾಡಿಯಲ್ಲಿ ಕರ್ನಾಟಕ ವಾದ್ಯವೃಂದ, ಮೈಸೂರು ಅರಮನೆ ವತಿಯಿಂದ ಅಡ್ಡಪಲ್ಲಕ್ಕಿ, ಪಂಚಕಳಸ, ಅರಮನೆಯ ಗೌರವ ನಿಶಾನೆಗಳು, ಪಟ್ಟದ ಆನೆ, ಪಟ್ಟದ ಕುದುರೆ, ಒಂಟೆಗಳು, ಕೆಎಸ್‌ಆರ್‌ಪಿ ಅಶ್ವಾರೋಹಿ ದಳದ ಇಂಗ್ಲಿಷ್ ಬ್ಯಾಂಡ್, ಪೊಲೀಸ್ ಅಶ್ವದಳ, ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿ ದೇವಿಯ ವಿಗ್ರಹ ಹಾಗೂ ಪೊಲೀಸ್ ಅಶ್ವದಳ ಸಾಗುತ್ತವೆ. ಚಿನ್ನದ ಅಂಬಾರಿ ಹೊರುವ ಗಜರಾಜನ ಅಕ್ಕಪಕ್ಕದಲ್ಲಿ ಎರಡು ಹೆಣ್ಣಾನೆಗಳು ‘ಕುಮ್ಕಿ’ ಆನೆಗಳಾಗಿ ಹೆಜ್ಜೆ ಹಾಕಲಿವೆ.

ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿರುವ ಸಿಬ್ಬಂದಿಯು ಇದೇ ಮೊದಲಿಗೆ ವಿಶೇಷ ಪೋಷಾಕು (ಸೆರೆಮೊನಿ ಡ್ರೆಸ್) ಧರಿಸಿ ಆಕರ್ಷಿಸಲಿದ್ದಾರೆ.

ಪಂಜಿನ ಕವಾಯತಿನೊಂದಿಗೆ ತೆರೆ: ಮಂಗಳವಾರ ಸಂಜೆ 7.30ಕ್ಕೆ ಬನ್ನಿಮಂಟಪ ಮೈದಾನದಲ್ಲಿ ನಡೆಯಲಿರುವ ಪಂಜಿನ ಕವಾಯತಿನಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಗೌರವವಂದನೆ ಸ್ವೀಕರಿಸಲಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಕೇಂದ್ರ ಹಾಗೂ ರಾಜ್ಯದ ಸಚಿವರು ಭಾಗವಹಿಸಲಿದ್ದಾರೆ. ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ.

‘ವೈಮಾನಿಕ ಪ್ರದರ್ಶನ’ (ಏರ್‌ಶೋ) ಈ ಬಾರಿಯ ಉತ್ಸವದ ಮತ್ತೊಂದು ಆಕರ್ಷಣೆ ಸೋಮವಾರ (ಅ.23) ಮುಖ್ಯ ಪ್ರದರ್ಶನ ನಡೆಯಲಿದ್ದು, ಭಾರತೀಯ ವಾಯುಪಡೆಯ ‘ಸೂರ್ಯಕಿರಣ್ ಏರೋಬ್ಯಾಟಿಕ್ ತಂಡ’ದವರು ಪಾಲ್ಗೊಳ್ಳಲಿದ್ದಾರೆ.

ಮೈಸೂರು ದಸರಾ ಅಂಗವಾಗಿ ಅರಮನೆ ಆವರಣದಲ್ಲಿ ಭಾನುವಾರ ನಡೆದ ಜಂಬೂಸವಾರಿ ಪೂರ್ವಾಭ್ಯಾಸಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಭಿಮನ್ಯು ಆನೆಗೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು. ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹಾಗೂ ಡಿಸಿಪಿ ಮುತ್ತುರಾಜ್ ಇದ್ದಾರೆ/ ಪ್ರಜಾವಾಣಿ ಚಿತ್ರ

> **ಜಂಬೂಸವಾರಿ ತಯಾರಿ ಅಂತಿಮ ಹಂತದಲ್ಲಿದ್ದು, ಸಂಪ್ರದಾಯದಂತೆ ಎಲ್ಲವೂ ನಡೆಯಲಿದೆ. ಶಿಷ್ಟಾಚಾರ ಪಾಲನೆಗೂ ಒತ್ತು ಕೊಡಲಾಗಿದೆ**
> **ಡಾ.ಕೆ.ವಿ. ರಾಜೇಂದ್ರ,** ಜಿಲ್ಲಾಧಿಕಾರಿ

ಅರಮನೆಯಲ್ಲಿ ‘ವಜ್ರಮುಷ್ಟಿ ಕಾಳಗ’

ಅಂಬಾವಿಲಾಸ ಅರಮನೆಯಲ್ಲಿ ವಿಜಯದಶಮಿ ಪ್ರಯುಕ್ತ ಜಟ್ಟಿಗಳ ರೋಚಕ ವಜ್ರಮುಷ್ಟಿ ಕಾಳಗ ನಡೆಯುತ್ತದೆ. ಅರಮನೆಯ ಸವಾರಿ ತೊಟ್ಟಿಯ ಮಣ್ಣಿನ ಅಖಾಡದಲ್ಲಿ, ‘ವಿಜಯಯಾತ್ರೆ’ಗೂ ಮುನ್ನ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪಟ್ಟದ ಕತ್ತಿಗೆ ಪೂಜೆ ಸಲ್ಲಿಸುತ್ತಿದ್ದಂ-ತೆ ಜಟ್ಟಿಗಳ ಕಾಳಗ ಆರಂಭವಾಗುತ್ತದೆ.

ಪಾಲ್ಗೊಳ್ಳಲಿರುವ ಆನೆಗಳು

ಅಭಿಮನ್ಯು, ಅರ್ಜುನ, ಮಹೇಂದ್ರ, ಕಂಜನ್, ಲಕ್ಷ್ಮಿ, ರೋಹಿತ, ಹಿರಣ್ಯ, ಗೋಪಿ, ಪ್ರಶಾಂತ, ಸುಗ್ರೀವ, ವಿಜಯಾ, ವರಲಕ್ಷ್ಮಿ, ಭೀಮ ಮತ್ತು ಧನಂಜಯ ಆನೆಗಳು ಜಂಬೂಸವಾರಿಯಲ್ಲಿ ಭಾಗವಹಿಸಲಿವೆ.

‘ಕಲ್ಯಾಣ’ ವಿ.ವಿಗಳಿಗೆ ಶೇ 10 ನಿಧಿ

ಒಂದನೇ ಪುಟದಿಂದ

ಅಲ್ಲದೆ, ಈ ಭಾಗದ ವಿಶ್ವ-ವಿದ್ಯಾಲಯಗಳಿಗೆ ಈಗಾಗಲೇ ಮಂಜೂರಾತಿ ನೀಡಿ ರದ್ದುಪಡಿಸಿದ ಯೋಜನೆಗಳನ್ನು ಮತ್ತೆ ಆರಂಭಿಸುವ ಬಗ್ಗೆ ಪರಿಶೀಲಿಸಬೇಕು.

ಈ ಯೋಜನೆಗಳಿಗೆ ಆದ್ಯತೆಯಲ್ಲಿ ಅನುದಾನ ಬಿಡುಗಡೆ ಮಾಡಬೇಕು. ರಾಯಚೂರು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವವನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿರುವ ಬಗ್ಗೆಯೂ ಖಾತರಿಪಡಿಸಿಕೊಳ್ಳಬೇಕು. ವಿವಿಧ ವಲಯಗಳಿಗೆ ಅನುದಾನ ಹಂಚಿಕೆ ಮಾಡಿದ ಪ್ರಸ್ತಾವವನ್ನಷ್ಟೆ ಅನುಮೋದನೆಗೆ ಕಳುಹಿಸಲಾಗುತ್ತದೆ. ಅದರ ಬದಲು, ಇನ್ನು ಮುಂದೆ ವಿವರವಾದ ಕ್ರಿಯಾ ಯೋಜನೆ ಮತ್ತು ಮಂಜೂರಾತಿಗಾಗಿ ಪ್ರಸ್ತಾವವನ್ನು ಕಳುಹಿಸಬೇಕು ಎಂದೂ ರಾಜ್ಯಪಾಲರು ಸೂಚಿಸಿದ್ದಾರೆ.

ಕೆನಡಾ ರಾಜತಾಂತ್ರಿಕರ ವಿರುದ್ಧ ಕ್ರಮ: ಜೈಶಂಕರ್ ಸಮರ್ಥನೆ

ಎಸ್. ಜೈಶಂಕರ್

ನವದೆಹಲಿ (ಪಿಟಿಐ): ‘ದೇಶದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿದ್ದರಿಂದ ಕೆನಡಾ ರಾಜತಾಂತ್ರಿಕ ಸಿಬ್ಬಂದಿ ವಿರುದ್ಧ ಕ್ರಮಕೈಗೊಳ್ಳಲಾಗಿ-ದೆ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸಮರ್ಥಿಸಿಕೊಂಡರು.

ಕೆನಡಾದಲ್ಲಿರುವ ಭಾರತದ ರಾಜತಾಂತ್ರಿಕರ ಸುರಕ್ಷತೆಗೆ ಸಂಬಂಧಿಸಿದ ಗಮನಾರ್ಹ ಪ್ರಗತಿ ಕಂಡುಬಂದಲ್ಲಿ ಕೆನಡಾದ ಪ್ರಜೆಗಳಿಗೆ ವೀಸಾ ನೀಡುವ ಪ್ರಕ್ರಿಯೆಯನ್ನು ಪುನರಾರಂಭಿಸಲು ಚಿಂತನೆ ನಡೆಯಲಿದೆ ಎಂದು ಭಾನುವಾರ ತಿಳಿಸಿದರು.

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅಕ್ಟೋಬರ್‌ನಲ್ಲಿ ಆರೋಪಿಸಿದ್ದರು. ಆ ಹೇಳಿಕೆಯ ನಂತರ ಉಭಯ ದೇಶಗಳ ಬಾಂಧವ್ಯ ಹದಗೆಟ್ಟಿತ್ತು.

ಟ್ರೂಡೊ ಆರೋಪದ ಬಳಿಕ ಕೆನಡಾ ಪ್ರಜೆಗಳಿಗೆ ವೀಸಾ ನೀಡುವುದನ್ನು ತಾತ್ಕಾಲಿಕವಾಗಿ ಸ್ಥ-ಗಿತಗೊಳಿಸಲಾಗಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಪ್ರಕಟಿಸಿದ್ದರು.

ಭಾರತ-ದಲ್ಲಿದ್ದ ಕೆನಡಾದ ರಾಜತಾಂತ್ರಿಕರ ಸಂಖ್ಯೆ ಕುಗ್ಗಿಸುವ ಕ್ರಮ ಕುರಿತಂತೆ, ವಿಯೆನ್ನಾ ಒಪ್ಪಂದದಲ್ಲಿಯೂ ಇದಕ್ಕೆ ಅವಕಾಶವಿದೆ. ನಮ್ಮ ಪ್ರಕರಣದಲ್ಲಿ ಕೆನಡಾದ ಸಿಬ್ಬಂದಿ ನಿರಂತರ ಹಸ್ತಕ್ಷೇಪ ಮಾಡುತ್ತಿದ್ದರು ಎಂಬ ಕಾರಣಕ್ಕೆ ಈ ಕ್ರಮಕೈಗೊಂಡಿದೆ ಎಂದು ತಿಳಿಸಿದರು.

ಕೆನಡಾವು ಈಗಾಗಲೇ ಭಾರತದಿಂದ 41 ಜನ ರಾಜತಾಂತ್ರಿಕರ-ನ್ನು ಹಿಂದೆ ಕರೆಸಿಕೊಂಡಿದೆ. ಗುರುವಾರ ಈ ವಿಷಯ ಪ್ರಕಟಿಸಿದ್ದ ಕೆನಡಾದ ವಿದೇಶಾಂಗ ಸಚಿವ ಮೆಲಾನಿ ಜೊಲಿ ಅವರು, ‘ಭಾರತದ ಕ್ರಮವು ಅಂತರ-ರಾಷ್ಟ್ರೀಯ ನಿಯಮಕ್ಕೆ ವಿರುದ್ಧವಾದು-ದಾಗಿದೆ’ ಎಂದು ಹೇಳಿದ್ದರು.

ಶಾಲೆಯಲ್ಲಿ ನಮಾಜ್: ಮುಖ್ಯಶಿಕ್ಷಕಿ ಅಮಾನತು

ಲಖನೌ (ಪಿಟಿಐ): ಶಾಲೆಯೊಂದರಲ್ಲಿ ಕೆಲವು ವಿದ್ಯಾರ್ಥಿಗಳು ನಮಾಜ್ ಮಾಡಿದ್ದಕ್ಕಾಗಿ ಮುಖ್ಯಶಿಕ್ಷಕಿಯನ್ನು ಅಮಾನತು ಮಾಡಲಾಗಿದೆ.

ಇಲ್ಲಿನ ಠಾಕೂರ್‌ಗಂಜ್ ಪ್ರದೇಶದಲ್ಲಿನ ಶಾಲೆಯ ಕೆಲವು ವಿದ್ಯಾರ್ಥಿಗಳು ಶಾಲೆಯಲ್ಲಿ ನಮಾಜ್ ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಶಾಲಾ ಆಡಳಿತ ಮಂಡಳಿ ವಿರುದ್ಧ ಶನಿವಾರ ಕೆಲವು ಹಿಂದೂ ಸಂಘಟನೆಗಳು ಪ್ರತಿಭಟನೆ ನಡೆಸಿದ ನಂತರ, ಈ ವಿಷಯದ ಕುರಿತಂತೆ ತನಿಖೆಗೆ ಆದೇಶಿಸಲಾಗಿತ್ತು.

‘ಇಲ್ಲಿನ ನೇಪಿಯರ್ ರಸ್ತೆಯ ಪ್ರಾಥಮಿಕ ಶಾಲೆಯಲ್ಲಿ ಬೋಧನಾ ಕಾರ್ಯ ಹೊರತುಪಡಿಸಿ ಇತರ ಚಟುವಟಿಕೆಗಳಲ್ಲಿ ಗುರುತಿಸಲಾಗದ ಕೆಲವು ವ್ಯಕ್ತಿಗಳು ಭಾಗಿಯಾಗಿದ್ದಾರೆ ಎಂಬ ಮಾಹಿತಿ ದೊರೆತಿತ್ತು. ಕೆಲವು ವಿದ್ಯಾರ್ಥಿಗಳು ಶುಕ್ರವಾರ ನಮಾಜ್ ಮಾಡಿದ್ದಾರೆ ಎಂಬುದನ್ನು ಶಿಕ್ಷಕರು ದೃಢಪಡಿಸಿದ್ದಾರೆ. ಇದು ಇಲಾಖೆಯ ನಿರ್ದೇಶನ ಮತ್ತು ಮಾರ್ಗಸೂಚಿಗೆ ವಿರುದ್ಧವಾಗಿದೆ. ಈ ಕುರಿತಂತೆ ಬ್ಲಾಕ್ ಶಿಕ್ಷಣ ಅಧಿಕಾರಿ ದಿನೇಶ್ ಕಟಿಯಾರ್ ತನಿಖೆ ನಡೆಸಿದ್ದರು’ ಎಂದು ಶಿಕ್ಷಣ ಇಲಾಖೆ ಅಧಿಕಾರಿ ಅರುಣ್ ಕುಮಾರ್ ಹೇಳಿಕೆ ನೀಡಿದ್ದಾರೆ.

‘ಈ ತನಿಖಾ ವರದಿ ಆಧಾರದಲ್ಲಿ, ಉತ್ತರ ಪ್ರದೇಶ ಸರ್ಕಾರಿ ಸೇವಕ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳು–1999ರಡಿ ಮುಖ್ಯ ಶಿಕ್ಷಕಿ ಮೀರಾ ಯಾದವ್ ಅವರನ್ನು ಶನಿವಾರ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ’ ಎಂದು ಅವರು ಹೇಳಿದರು.

‘ಶಿಕ್ಷಕಿಯರಾದ ತೆಹ್ಜೀನ್ ಫಾತಿಮಾ, ಮಮತಾ ಮಿಶ್ರಾ ಈ ಕೃತ್ಯಕ್ಕೆ ಸಹಕರಿಸಿದ್ದು, ಇಬ್ಬರಿಗೂ ಎಚ್ಚರಿಕೆ ನೀಡಲಾಗಿದೆ’ ಎಂದು ತಿಳಿಸಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

FINANCE BONANZA
Upto ₹12,500 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
BIGGEST Deepavali SALE
UPTO 70% OFF
ಎಲ್ಲರಿಗೂ ದಸರಾ ಹಬ್ಬದ ಶುಭಾಶಯಗಳು
EXCHANGE DHAMAKA
Upto ₹25,000 OFF
ON EXCHANGE OF OLD TELEVISION, HOME APPLIANCES, LAPTOP & MOBILES*
ಉಚಿತ* FIRE-BOLTT SMART CALLING WATCH WORTH ₹20000
ಮಳಿಗೆಗಳು 10AM – 10PM ವರೆಗು ತೆರೆದಿರುತ್ತದೆ
FINANCE POWERED BY Groww Upto 2,000 Cash Back
ಕೇವಲ ಪಾವತಿಸಿ ₹1 Groww ಮನೆಗೆ ತೆಗೆದುಕೊಂಡು ಹೋಗಿ*
1 ಇ.ಎಮ್.ಐ ಉಚಿತ*
ASSURED GIFTS ON ALL LG PRODUCTS*
BT SPEAKER COOKER INDUCTION STEAM IRON KETTLE DRY IRON
YES BANK 7.5% INSTANT CASHBACK ON CC EMI* MIN SWIPE RS.15000 MAX CASHBACK UPTO 7500
HDFC BANK FESTIVE TREATS 10% INSTANT DISCOUNT ON CC & DC EMI* MIN SWIPE ₹20,000 MAX CASHBACK UPTO 2500
one card 5% INSTANT CASHBACK ON CC EMI* MIN SWIPE ₹15000 MAX CASHBACK UPTO 7500
DBS BANK 7.5% INSTANT CASHBACK ON CC EMI* MIN SWIPE ₹15000 MAX CASHBACK UPTO 3000
5% INSTANT CASHBACK ON FULL SWIPE* MIN SWIPE ₹15000 MAX CASHBACK UPTO1500
LG 86 4K UHD SMART TV | HDR10 PRO 86UR8050PSB ಇ.ಎಮ್.ಐ ₹6,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 85 CRYSTAL 4K UHD SMART ಎಲ್ಇಡಿ 85CU8000 ಇ.ಎಮ್.ಐ ₹6,990 ಉಚಿತ: ₹63,900 ಮೌಲ್ಯದ SAMSUNG SOUNDBAR
SONY 75 4K HDR SMART ಎಲ್ಇಡಿ LED TV 75X82L ಇ.ಎಮ್.ಐ ₹7,500
Panasonic 55 4K UHD HDR SMART ಎಲ್ಇಡಿ ಇ.ಎಮ್.ಐ ₹4,095 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 55 QLED SMART GOOGLE TV WITH FAR-FIELD & LOCAL DIMMING ಇ.ಎಮ್.ಐ ₹2,994 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Redmi 12 5G 6/128 OFFER PRICE ₹11,750* (PRICE INCLUDING 1250 CASH BACK ICICI) ಉಚಿತ: BT NECKBAND WORTH ₹1299
OPPO A78 5G 8/128 OFFER PRICE ₹17,099* (PRICE INCLUDING 10% CASH BACK*) ಉಚಿತ: BT NECKBAND WORTH ₹2999
vivo Y 56 5G - 4/128 OFFER PRICE ₹15,999* (PRICE INCLUDING ₹1500 CASH BACK*) ಉಚಿತ: BT NECKBAND WORTH ₹2999
iPhone 15 JUST ₹110 PER DAY* ONWARDS 5000 CASH BACK* 70% OFF ON DAMAGE PROTECTION
SAMSUNG S23-8/256 S23 Ultra
Retail Price 79999 124999
Upgrade Bonus/Cash Back 10000 18000
Now Own @ 69999 106999
Pay ₹199 and Get 1 year complete damage protection + BT Calling Metal watch Worth ₹1999
HOT DEAL i5-1035G1, 8GB, 1TB HDD+ 256 GB SSD, 14" FHD, FINGER PRINT READER, WIN 10 HOME OFFER PRICE ₹36,990 ಉಚಿತ: METAL BT SMART WATCH WORTH ₹7999
DELL inspiron 3525 R5-5500U, 8GB, 512GB SSD, 15.6" FHD 120 HZ, WIN 11 MSO 21 OFFER PRICE ₹44,990 ಉಚಿತ: METAL BT SMART WATCH WORTH ₹7999+UPTO ₹5000 CASHBACK + PAY ₹2499 AND GET GOODIES WORTH ₹12199
Lenovo Slim 3i 12TH GEN I5-1235U, 8GB, 512GB SSD, 15.6 FHD, WIN11 + MSO 21, 2YRS UPTO 5% CASH BACK* OFFER PRICE ₹49,990 ಉಚಿತ: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
hp Victus Gaming 15 RYZEN 5 5600H, 16GB, 512GB SSD, RADEON RX6500M 4GB GFX, 15.6 FHD, WIN 11 UPTO 5% CASH BACK* OFFER PRICE ₹54,990 ಉಚಿತ: METAL BT SMART WATCH WORTH ₹7999 + PAY RS. 2499 AND GET GOODIES WORTH ₹10999
DELL inspiron 15 3520 12TH GEN I5-1235U, 16GB DDR4 / 512GB SSD, 15.6" FHD/WIN 11 + MSO 21 OFFER PRICE ₹57,990 ಉಚಿತ: METAL BT SMART WATCH WORTH ₹7999 1 YR EXTENDED WARRANTY @ 999 WORTH ₹4199
LG 635 ಲೀ ಸೈಡ್ ಬೈ ಸೈಡ್ L257CPZX ಇ.ಎಮ್.ಐ ₹4,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL ಇ.ಎಮ್.ಐ ₹3,990 ಉಚಿತ: ₹32500 ಮೌಲ್ಯದ SAMSUNG 10 KG TOP LOADING WASHING MACHINE
Haier 531 Ltr FRENCH DOOR REFRIGERATOR OFFER PRICE ₹59,990* MRP: ₹1,15,990
BOSCH 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,574 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,141 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 14 PLACE DISHWASHER WITH INVERTER DIRECT DRIVE DFB532FP ಇ.ಎಮ್.ಐ ₹2,999
Whirlpool 29ಲೀ ಕನ್‌ವೆಂಕ್ಷನ್ ಮೈಕ್ರೋವೇವ್ EMI ₹1,371
SONY SOUND BAR HT-S500RF 5.1Ch,1000 W, DTS, DOLBY AUDIO BLUETOOTH® CONNECTIVITY OFFER PRICE ₹33,990 EMI ₹2,833
EUREKA FORBES WATER PURIFIERS:AQUAGUARD SUPERIO RO+UV+MTDS+SS + Butterfly PRESSURE COOKERS:FRIENDLY COMBO PACK IB (2,3 & 5 LTR) OFFER PRICE: ₹19,990 COMBI MRP: ₹31,249
KAFF CHIMNEYS:MAX BF 60 + GAS STOVES:CTE584B+ NIRLEP NON STICK COOKWARE: ASPA 4 Pc SET OFFER PRICE: ₹14,990 COMBI MRP: ₹27,970
VIJAYALAKSHMI WET GRINDER:PYRAMIDA + Greenchef MIXER GRINDERS:TULIP 3 JAR 600W + PRESSURE COOKER:3 LTR NAMO OFFER PRICE: ₹5,490 COMBI MRP: ₹11,193
Yale AVAILABLE RANGE OF DIGITAL LOCK, CAMERAS & LUMINOUS INVERTERS, BATTERIES
LG SAMSUNG SONY Panasonic Haier NY IFB Godrej LLOYD Whirlpool BOSCH PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF
GIRIAS THE CONSUMER DURABLE PEOPLE Since 1971
ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್‌ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633
STORE LOCATOR
*Terms & conditions apply. Finance at the sole discretion of the Finance company. Upto 26000 Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.12,500 Bajaj cash back / vouchers valid only in selected cities & valid only on Selected models & Brands. EMI offers the above products based on 12,18,24 & fixed emi schemes. Exchange offer valid on MRP and Product as to be in good working condition. Free smart watch valid on 20000 & above Purchase on select models & brands.
146 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಮೊಹಮ್ಮದ್ ಶಮಿಗೆ ಐದು ವಿಕೆಟ್ • ನ್ಯೂಜಿಲೆಂಡ್‌ಗೆ ಮೊದಲ ಸೋಲು • ಸೆಮಿಫೈನಲ್ ಸನಿಹ ರೋಹಿತ್ ಬಳಗ

ವಿರಾಟ್ ಆಟ: ಭಾರತ ಅಜೇಯ ಓಟ

ಪ್ರಜಾವಾಣಿ ವಾರ್ತೆ

ಧರ್ಮಶಾಲಾ: ಬ್ಯಾಟಿಂಗ್ ಚಾಂಪಿಯನ್ ಸಚಿನ್ ತೆಂಡೂಲ್ಕರ್ ಅವರು ಏಕದಿನ ಕ್ರಿಕೆಟ್‌ನಲ್ಲಿ ಹೊಡೆದಿರುವ ಶತಕಗಳ ದಾಖಲೆಯನ್ನು ಸರಿಗಟ್ಟುವ ವಿರಾಟ್ ಕೊಹ್ಲಿಯ ಆಸೆಯು ಭಾನುವಾರ ಈಡೇರಲಿಲ್ಲ.

ವಿರಾಟ್ (95 ರನ್) ಕೇವಲ ಐದು ರನ್‌ಗಳ ಅಂತರದಿಂದ ಶತಕ ಕೈತಪ್ಪಿದರೂ ಭಾರತದ ಜಯಕ್ಕೆ ಅಗತ್ಯವಾದ ಆಟವನ್ನು ಆಡಿದರು. ಅದರಿಂದಾಗಿ ವೇಗಿ ಮೊಹಮ್ಮದ್ ಶಮಿ (54ಕ್ಕೆ5) ಅವರ ಅಮೋಘ ಬೌಲಿಂಗ್ ಸಾಧನೆಯೂ ವ್ಯರ್ಥವಾಗಲಿಲ್ಲ.

ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಆತಿಥೇಯರು ಸತತ ಐದನೇ ಜಯ ಸಾಧಿಸಿದರು. ನ್ಯೂಜಿಲೆಂಡ್ ತಂಡವು ನಾಲ್ಕು ವಿಕೆಟ್‌ಗಳಿಂದ ಸೋತಿತು. ಈ ಟೂರ್ನಿಯಲ್ಲಿ ಕಿವೀಸ್ ಬಳಗಕ್ಕೆ ಇದು ಮೊದಲ ಸೋಲು.

ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡವು ಡೆರಿಲ್ ಮಿಚೆಲ್ (130ರನ್) ಮತ್ತು ರಚಿನ್ ರವೀಂದ್ರ (75 ರನ್) ಅವರ ಶತಕದ ಜೊತೆ ಯಾಟದಿಂದ 50 ಓವರ್‌ಗಳಲ್ಲಿ 273 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು 48 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 274 ರನ್ ಗಳಿಸಿತು.

ಭಾರತ 128 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು, ಸಂಕಷ್ಟದಲ್ಲಿದ್ದ ತಂಡಕ್ಕೆ ವಿರಾಟ್ ಆಸರೆಯಾದರು. ಕಳೆದ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಶತಕ ದಾಖಲಿಸಿದ್ದ ಅವರು ಇಲ್ಲಿಯೂ ಚೆಂದದ ಬ್ಯಾಟಿಂಗ್ ಮಾಡಿದರು.

ಪಂದ್ಯದ ಕೊನೆಯ ಹಂತದಲ್ಲಿ ಭಾರತಕ್ಕೆ ಜಯಿಸಲು ಮತ್ತು ಕೊಹ್ಲಿಗೆ ಶತಕ ಪೂರೈಸಲು ಐದು ರನ್‌ಗಳ ಅಗತ್ಯವಿತ್ತು. ವಿರಾಟ್ ಸಿಕ್ಸರ್ ಹೊಡೆದು ಎರಡನ್ನೂ ಸಾಧಿಸುವ ಛಲದಲ್ಲಿದ್ದರು. ಆದ್ದರಿಂದ ಒಂದು, ಎರಡು ರನ್‌ಗಳ ಗೊಡವೆಗೆ ಹೋಗಲಿಲ್ಲ. ಆದರೆ, ಈ ಬಾರಿ ಅದೃಷ್ಟ ಅವರಿಗೆ ಒಲಿಯಲಿಲ್ಲ. 48ನೇ ಓವರ್‌ನಲ್ಲಿ ಮ್ಯಾಟ್ ಹೆನ್ರಿ ಹಾಕಿದ ಎಸೆತವನ್ನು ಸಿಕ್ಸರ್‌ಗೆತ್ತುವ ಪ್ರಯತ್ನ ಮಾಡಿದರು. ಆದರೆ ಬೌಂಡರಿ ಲೈನ್ ಫೀಲ್ಡರ್ ಗ್ಲೆನ್ ಫಿಲಿಪ್ ಸುಲಭದ ಕ್ಯಾಚ್ ಪಡೆದರು.

ಇಲ್ಲಿ ಕೊಹ್ಲಿ ಶತಕ ಗಳಿಸಿದ್ದರೆ ತೆಂಡೂಲ್ಕರ್ (49 ಶತಕ) ದಾಖಲೆಯನ್ನು ಸರಿಗಟ್ಟಬಹುದಿತ್ತು ಕಳೆದ ಪಂದ್ಯದಲ್ಲಿ ಅವರು ಬಾಂಗ್ಲಾದೇಶ ಎದುರು 48ನೇ ಶತಕ ಗಳಿಸಿದಾಗಲೂ ಇದೇ ರೀತಿಯ ಪರಿಸ್ಥಿತಿ ಇತ್ತು.

ಮೂರು ಜೊತೆಯಾಟದಲ್ಲಿ ಕೊಹ್ಲಿ: ಮೂರನೇ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಮತ್ತು ಶ್ರೇಯಸ್ ಅಯ್ಯರ್ 52 ರನ್‌ಗಳನ್ನು ಸೇರಿಸಿದರು. ಟ್ರೆಂಟ್ ಬೌಲ್ಟ್ ಬೌಲಿಂಗ್‌ನಲ್ಲಿ ಶ್ರೇಯಸ್ ಔಟಾದ ನಂತರ ಕೊಹ್ಲಿ ಜೊತೆಗೂಡಿದ ರಾಹುಲ್ (27 ರನ್) 4ನೇ ವಿಕೆಟ್‌ಗೆ 54 ರನ್ ಸೇರಿಸಲು ನೆರವಾದರು.

ಆದರೆ ರಾಹುಲ್ ನಿರ್ಗಮನದ ನಂತರ ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ ಕೇವಲ 2 ರನ್ ಗಳಿಸಿ ರನೌಟ್ ಆದರು. ಆಗ ತಂಡದ ಗೆಲುವಿನ ಅಂತರ ಹೆಚ್ಚಿತ್ತು, ಆದರೆ, ರವೀಂದ್ರ ಜಡೇಜ ಆತಂಕ ದೂರಗೊಳಿಸಿದರು. ಕೊಹ್ಲಿಗೆ ಉತ್ತಮ ಜೊತೆ ನೀಡಿದರು. ಆರನೇ ವಿಕೆಟ್ ಜೊತೆಯಾಟದಲ್ಲಿ 78 ರನ್ ಸೇರಿಸಿದರು. ಇದರಿಂದಾಗಿ ತಂಡವು ಗೆಲುವಿನ ಸನಿಹ ಬಂದಿತು.

ಶಮಿ ಐದು ವಿಕೆಟ್: ಹಾರ್ದಿಕ್ ಪಾಂಡ್ಯ ಗಾಯಗೊಂಡಿದ್ದರಿಂದ ಸ್ಥಾನ ಪಡೆದುಕೊಂಡ ವೇಗಿ ಮೊಹಮ್ಮದ್ ಶಮಿ ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು.

ಮಿಚೆಲ್ ಮತ್ತು ರಚಿನ್ ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ನ್ಯೂಜಿಲೆಂಡ್ ತಂಡವು 300ಕ್ಕಿಂತ ಹೆಚ್ಚು ರನ್‌ಗಳ ಮೊತ್ತ ದಾಖಲಿಸುವತ್ತ ನಡೆದಿತ್ತು. ಆದರೆ ಶಮಿ ಕಿವೀಸ್ ತಂಡಕ್ಕೆ ಅಡ್ಡಿಯಾಧರು.

ಅವರು ತಮ್ಮ ಆರಂಭಿಕ ಸ್ಪೆಲ್‌ನಲ್ಲಿ ವಿಲ್ ಯಂಗ್ ವಿಕೆಟ್ ಗಳಿಸಿದರು. ನಂತರದಲ್ಲಿ ರಚಿನ್ ಮತ್ತು ಮಿಚೆಲ್ ಜೊತೆಯಾಟ ಮುರಿದರು. ಅವರಿಬ್ಬರ ವಿಕೆಟ್‌ಗಳನ್ನೂ ಪಡೆದರು. ಕೊನೆಯಲ್ಲಿ ಸ್ಯಾಂಟನರ್ ಹಾಗೂ ಮ್ಯಾಟ್ ಹೆನ್ರಿ ವಿಕೆಟ್ ಕೂಡ ಶಮಿ ಪಾಲಾದವು.

ವಿಕೆಟ್ ಪಡೆದ ಸಂಭ್ರಮದಲ್ಲಿ ಮೊಹಮ್ಮದ್ ಶಮಿ –ಎಎಫ್‌ಪಿ ಚಿತ್ರ

ಮತ್ತೆ ಮಿಂಚಿದ ಬೆಂಗಳೂರಿನ ರಚಿನ್



ನ್ಯೂಜಿಲೆಂಡ್ ತಂಡದಲ್ಲಿರುವ ಕರ್ನಾಟಕ ಮೂಲದ ರಚಿನ್ ರವೀಂದ್ರ ಈ ವಿಶ್ವಕಪ್ ಟೂರ್ನಿಯಲ್ಲಿ ಮತ್ತೊಮ್ಮೆ ಮಹತ್ವದ ಜೊತೆಯಾಟದಲ್ಲಿ ಭಾಗಿಯಾದರು.

ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಜಯಿಸುವಲ್ಲಿ ರಚಿನ್ ಮಹತ್ವದ ಪಾತ್ರ ವಹಿಸಿದ್ದರು. ಆ ಪಂದ್ಯದಲ್ಲ ಅಜೇಯ 123 ರನ್ ಗಳಿಸಿ, ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದರು. ಅದರಲ್ಲಿ ಡೆವೊನ್ ಕಾನ್ವೆ ಅವರೊದಿಗಿನ ಅಜೇಯ ಜೊತೆಯಾಟದಲ್ಲಿ 273 ರನ್ ಸೇರಿಸಿದ್ದರು.

ಭಾರತದ ಎದುರಿನ ಪಂದ್ಯದಲ್ಲಿ ಕಿವೀಸ್ ಬಳಗವು 19 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ರಚಿನ್ ಮತ್ತು ಡೆರಿಲ್ ಮಿಚೆಲ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 159 ರನ್ ಗಳಿಸಿದರು. ಆದರೆ ಈ ಪಂದ್ಯದಲ್ಲಿ ರಚಿನ್ ಅವರಿಗೆ ಶತಕ ಪೂರೈಸಲು ಸಾಧ್ಯವಾಗಲಿಲ್ಲ. ರಚಿನ್ ಅವರು ಮೊಹಮ್ಮದ್ ಶಮಿ ಬೌಲಿಂಗ್‌ನಲ್ಲಿ ಔಟಾದರು.

23 ವರ್ಷದ ರಚಿನ್ ಐದು ಪಂದ್ಯಗಳಿಂದ 299 ರನ್ ಗಳಿಸಿದ್ದಾರೆ. ರಚಿನ್ ಅವರ ತಂದೆ ಮತ್ತು ತಾಯಿ ಮೂಲತಃ ಬೆಂಗಳೂರಿನವರು. ರಚಿನ್ ತಂದೆಯು ನ್ಯೂಜಿಲೆಂಡ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಬಾಲ್ಯವನ್ನು ಅಲ್ಲಿಯೇ ಕಳೆದಿರುವ ರಚಿನ್ ಕಿವೀಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. 2021ರಲ್ಲಿ ಅವರು ಭಾರತದಲ್ಲಿಯೇ ಟೆಸ್ಟ್ ಪದಾರ್ಪಣೆ ಮಾಡಿದ್ದರು.

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 273 (50 ಓವರ್)
ಕಾನ್ವೆ ಸಿ ಅಯ್ಯರ್ ಬಿ ಸಿರಾಜ್ 0 (9ಎ)
ಯಂಗ್ ಬಿ ಶಮಿ 17 (27 ಎ., 4X3)
ರಚಿನ್ ಸಿ ಗಿಲ್ ಬಿ ಶಮಿ 75 (87 ಎ., 4X6, 6X1)
ಮಿಚೆಲ್ ಸಿ ಕೊಹ್ಲಿ ಬಿ ಶಮಿ 130 (127 ಎ., 4X9, 6X5)
ಲಥಾಮ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 5 (7 ಎ., 4X1)
ಫಿಲಿಪ್ಸ್ ಸಿ ಶರ್ಮಾ ಬಿ ಕುಲದೀಪ್ 23 (26 ಎ., 6X1)
ಚಾಪ್ಮನ್ ಸಿ ಕೊಹ್ಲಿ ಬಿ ಬೂಮ್ರಾ 6 (8 ಎ)
ಸ್ಯಾಂಟ್ನರ್ ಬಿ ಶಮಿ 1 (2 ಎ)
ಹೆನ್ರಿ ಬಿ ಶಮಿ 0 (1 ಎ)
ಫರ್ಗ್ಯೂಸನ್ ರನೌಟ್ (ರಾಹುಲ್) 1 (5 ಎ)
ಬೌಲ್ಟ್ ಔಟಾಗದೆ 0 (1 ಎ)
ಇತರೆ: 15 (ಬೈ 3, ಲೆಗ್ ಬೈ 5, ವೈಡ್ 7)
ವಿಕೆಟ್ ಪತನ: 1–9 (ಡೆವಾನ್ ಕಾನ್ವೆ; 3.3), 2–19 (ವಿಲ್ ಯಂಗ್; 8.1), 3–178 (ರಚಿನ್ ರವೀಂದ್ರ; 33.3), 4–205 (ಟಾಮ್ ಲಥಾಮ್; 36.5), 5–243 (ಗ್ಲೆನ್ ಫಿಲಿಪ್ಸ್; 44.2), 6–257 (ಮಾರ್ಕ್ ಚಾಪ್ಮನ್; 46.6), 7–260 (ಮಿಚೆಲ್ ಸ್ಯಾಂಟ್ನರ್; 47.4), 8–260 (ಮ್ಯಾಟ್ ಹೆನ್ರಿ; 47.5), 9–273 (ಡೆರಿಲ್ ಮಿಚೆಲ್; 49.5), 10–273 (ಲಾಕಿ ಫರ್ಗ್ಯೂಸನ್; 49.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–1–45–1, ಮೊಹಮ್ಮದ್ ಸಿರಾಜ್ 10–1–45–1, ಮೊಹಮ್ಮದ್ ಶಮಿ 10–0–54–5, ರವೀಂದ್ರ ಜಡೇಜ 10–0–48–0, ಕುಲದೀಪ್ ಯಾದವ್ 10–0–73–2

ಭಾರತ 6ಕ್ಕೆ 274 (48 ಓವರ್)
ರೋಹಿತ್ ಬಿ ಫರ್ಗ್ಯೂಸನ್ 46 (40 ಎ., 4X4, 6X4)
ಗಿಲ್ ಸಿ ಮಿಚೆಲ್ ಬಿ ಫರ್ಗ್ಯೂಸನ್ 26 (31 ಎ., 4X5)
ಕೊಹ್ಲಿ ಸಿ ಫಿಲಿಪ್ಸ್ ಬಿ ಹೆನ್ರಿ 95 (104 ಎ., 4X8, 6X2)
ಅಯ್ಯರ್ ಸಿ ಕಾನ್ವೆ ಬಿ ಬೌಲ್ಟ್ 33 (29 ಎ., 4X6)
ರಾಹುಲ್ ಎಲ್‌ಬಿಡಬ್ಲ್ಯು ಬಿ ಸ್ಯಾಂಟ್ನರ್ 27 (35 ಎ., 4X3)
ಸೂರ್ಯಕುಮಾರ್ ರನೌಟ್ (ಸ್ಯಾಂಟ್ನರ್/ ಬೌಲ್ಟ್/ ಲಥಾಮ್) 2 (4 ಎ)
ಜಡೇಜ ಔಟಾಗದೆ 39 (44 ಎ., 4X3, 6X1)
ಶಮಿ ಔಟಾಗದೆ 1 (1 ಎ.)
ಇತರೆ: 5 (ಲೆಗ್ ಬೈ 1, ವೈಡ್ 4)
ವಿಕೆಟ್ ಪತನ: 1–71 (ರೋಹಿತ್ ಶರ್ಮಾ; 11.1), 2–76 (ಶುಭಮನ್ ಗಿಲ್; 13.2), 3–128 (ಶ್ರೇಯಸ್ ಅಯ್ಯರ್; 21.3), 4–182 (ಕೆ. ಎಲ್.ರಾಹುಲ್; 32.1), 5–191 (ಸೂರ್ಯಕುಮಾರ್ ಯಾದವ್; 33.5), 6–269 (ವಿರಾಟ್ ಕೊಹ್ಲಿ; 47.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 10–0–61–1, ಮ್ಯಾಟ್ ಹೆನ್ರಿ 9–0–55–1, ಮಿಚೆಲ್ ಸ್ಯಾಂಟ್ನರ್ 10–0–37–1, ಲಾಕಿ ಫರ್ಗ್ಯೂಸನ್ 8–0–63–2, ರಚಿನ್ ರವೀಂದ್ರ 9–0–46–0, ಗ್ಲೆನ್ ಫಿಲಿಪ್ಸ್ 2–0–12–0

ಫಲಿತಾಂಶ: ಭಾರತಕ್ಕೆ 4 ವಿಕೆಟ್ ಗೆಲುವು, ಎರಡು ಅಂಕ

ಬೆರಳಿಗೆ ಗಾಯ, ವಿಶ್ವಕಪ್ ಟೂರ್ನಿಯಿಂದ ಟೋಪ್ಲಿ ಹೊರಕ್ಕೆ

ಮುಂಬೈ (ಎಎಫ್‌ಪಿ): ದಕ್ಷಿಣ ಆಫ್ರಿಕಾ ವಿರುದ್ಧ ಶನಿವಾರ ಮುಂಬೈನಲ್ಲಿ ನಡೆದ ಪಂದ್ಯದ ವೇಳೆ ಬೆರಳಿಗೆ ಗಾಯಗೊಂಡ ಪರಿಣಾಮ, ಇಂಗ್ಲೆಂಡ್ ತಂಡದ ವೇಗದ ಬೌಲರ್ ರೀಸ್ ಟೋಪ್ಲಿ ಅವರು ವಿಶ್ವಕಪ್‌ನಿಂದ ಹೊರಬಿದ್ದಿದ್ದಾರೆ ಎಂದು ತಂಡದ ಸಿಬ್ಬಂದಿ ಭಾನುವಾರ ತಿಳಿಸಿದ್ದಾರೆ.

ಎಡಗೈ ವೇಗಿ ಟೋಪ್ಲಿ ಅವರು ಮೂರು ಪಂದ್ಯಗಳಿಂದ ಎಂಟು ವಿಕೆಟ್ ಪಡೆದಿದ್ದರು. ತಮ್ಮದೇ ಬೌಲಿಂಗ್‌ನಲ್ಲಿ ಎದುರಾಳಿ ಆಟಗಾರನ ಡ್ರೈವ್ ತಡೆಯುವ ಯತ್ನದಲ್ಲಿ ಅವರ ತೋರು ಬೆರಳಿಗೆ ಗಾಯವಾಗಿತ್ತು. ಆ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 229 ರನ್‌ಗಳ ಅಮೋಘ ಜಯಪಡೆದಿತ್ತು.

ಟೋಪ್ಲಿ ಅವರು 24 ಗಂಟೆಗಳ ಒಳಗೆ ಸ್ವದೇಶಕ್ಕೆ ಹಿಂತಿರುಗಲಿದ್ದಾರೆ.

ರೀಸ್ ಟೋಪ್ಲಿ

ಅವರ ಬದಲಿ ಆಟಗಾರನನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ತಂಡದ ಹೇಳಿಕೆ ತಿಳಿಸಿದೆ. ಹಾಲಿ ಚಾಂಪಿಯನ್ ಇಂಗ್ಲೆಂಡ್ ನಾಲ್ಕು ಪಂದ್ಯಗಳಲ್ಲಿ ಒಂದನ್ನು ಮಾತ್ರ ಗೆದ್ದಿದ್ದು ಸೆಮಿಫೈನಲ್ ತಲುಪುವ ಹಾದಿ ದುರ್ಗಮವಾಗಿದೆ.

ಭಾರತದ ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

4ನೇ ಸ್ಥಾನಕ್ಕೆ ವಿರಾಟ್ ಕೊಹ್ಲಿ

ಭಾರತದ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದರು. ಒಟ್ಟು ರನ್ ಗಳಿಕೆಯಲ್ಲಿ 4ನೇ ಸ್ಥಾನಕ್ಕೆ ಜಿಗಿದರು. 13,437 ರನ್ ಗಳಿಸಿದ ಕೊಹ್ಲಿ, ಶ್ರೀಲಂಕಾದ ಸನತ್ ಜಯಸೂರ್ಯ (13,430) ಅವರನ್ನು ಹಿಂದಿಕ್ಕಿದರು. ಸಚಿನ್ ತೆಂಡೂಲ್ಕರ್ (18,426), ಶ್ರೀಲಂಕಾದ ಕುಮಾರ ಸಂಗಕ್ಕಾರ (14,234), ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ (13,704) ಕ್ರಮವಾಗಿ ಮೊದಲ ಮೂರು ಸ್ಥಾನದಲ್ಲಿದ್ದಾರೆ.

20 ವರ್ಷಗಳ ಬಳಿಕ ಗೆಲುವು

20 ವರ್ಷಗಳಿಂದ ಐಸಿಸಿ ಟೂರ್ನಿಗಳಲ್ಲಿ ನ್ಯೂಜಿಲೆಂಡ್ ಎದುರು ಭಾರತ ತಂಡ ಗೆಲುವು ಸಾಧಿಸಿರಲಿಲ್ಲ. 2003ರ ವಿಶ್ವಕಪ್‌ನಲ್ಲಿ ಭಾರತ 7 ವಿಕೆಟ್‌ಗಳಿಂದ ಜಯಿಸಿತ್ತು. 2019ರ ವಿಶ್ವಕಪ್‌ನ ಸೆಮಿಫೈನಲ್‌ನಲ್ಲಿ ಭಾರತವನ್ನು ಮಣಿಸಿ ಕಿವೀಸ್ ಫೈನಲ್ ಪ್ರವೇಶಿಸಿತ್ತು. ಎರಡು ದಶಕಗಳ ಕಾಯುವಿಕೆಯ ಬಳಿಕ ಭಾರತ ಗೆಲುವು ಸಾಧಿಸಿದೆ.

48 ವರ್ಷಗಳ ಬಳಿಕ ಶತಕ: ಡೆರಿಲ್ ಮಿಚೆಲ್ 130 ರನ್ ಗಳಿಸುವ ಮೂಲಕ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ವಿರುದ್ಧ ಶತಕ ದಾಖಲಿಸಿದ ಎರಡನೇ ನ್ಯೂಜಿಲೆಂಡ್ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾದರು. 1975ರ ಟೂರ್ನಿಯಲ್ಲಿ ಗ್ಲೆನ್ ಟರ್ನರ್‌ವಾರ್ಸ್ ಮೊದಲ ಶತಕ (114 ರನ್) ದಾಖಲಿಸಿದ್ದರು.

ಗಿಲ್ ವೇಗದ 2000 ರನ್

ಧರ್ಮಶಾಲಾ (ಪಿಟಿಐ): ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಏಕದಿನ ಕ್ರಿಕೆಟ್‌ನಲ್ಲಿ ಅತಿವೇಗದಲ್ಲಿ 2000 ರನ್ ಪೂರೈಸಿದ ಸಾಧನೆ ಮಾಡಿದರು.

ಗಿಲ್, ಕೇವಲ 38 ಇನಿಂಗ್ಸ್‌ಗಳಲ್ಲಿ ಈ ಮೈಲಿಗಲ್ಲು ಸ್ಥಾಪಿಸಿದರು. ದಕ್ಷಿಣ ಆಫ್ರಿಕಾದ ಹಾಶಿಮ್ ಆಮ್ಲಾ (40 ಇನಿಂಗ್ಸ್) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು.



ಶುಭಮನ್ ಗಿಲ್

24 ವರ್ಷದ ಗಿಲ್ ಅವರಿಗೆ 2000 ರನ್‌ಗಳ ಗಡಿ ತಲುಪಲು 14 ರನ್‌ಗಳು ಬೇಕಿದ್ದವು. ಭಾರತದ ಇನಿಂಗ್ಸ್‌ನ ಏಳನೇ ಓವರ್‌ನಲ್ಲಿ ಟ್ರೆಂಟ್ ಬೌಲ್ಟ್ ಅವರ ಎಸೆತದಲ್ಲಿ ಬೌಂಡರಿ ಹೊಡೆಯುವ ಮೂಲಕ ದಾಖಲೆಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡರು. ಅವರು 31 ಎಸೆತಗಳಲ್ಲಿ 26 ರನ್ ಗಳಿಸಿ ಔಟಾದರು.

ಆಮ್ಲಾ ಅವರು 2011ರ ಜ.21 ರಂದು ಪೋರ್ಟ್ ಎಲಿಜಬೆತ್‌ನ ಸೇಂಟ್ ಜಾರ್ಜ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆದಿದ್ದ ಭಾರತದ ವಿರುದ್ಧದ ಪಂದ್ಯದಲ್ಲಿ ಈ ದಾಖಲೆ ಮಾಡಿದ್ದರು.

ವಿಶ್ವಕಪ್ ಟೂರ್ನಿಯ ಆರಂಭದ ವೇಳೆ ಡೆಂಗಿಯಿಂದ ಬಳಲಿದ್ದ ಗಿಲ್, ಆಸ್ಟ್ರೇಲಿಯಾ ಮತ್ತು ಅಫ್ಘಾನಿಸ್ತಾನ ಎದುರಿನ ಪಂದ್ಯಗಳಲ್ಲಿ ಆಡಿರಲಿಲ್ಲ. ಪಾಕಿಸ್ತಾನ ವಿರುದ್ಧ 16 ಹಾಗೂ ಬಾಂಗ್ಲಾದೇಶ ತಂಡದ ಎದುರು 53 ರನ್ ಗಳಿಸಿದ್ದರು.

ಏಕದಿನ ಕ್ರಿಕೆಟ್‌ನಲ್ಲಿ ವೇಗದ 2000 ರನ್

ಆಟಗಾರ	ದೇಶ	ಇನಿಂಗ್ಸ್
ಶುಭಮನ್ ಗಿಲ್	ಭಾರತ	38
ಹಾಶಿಂ ಆಮ್ಲಾ	ದಕ್ಷಿಣ ಆಫ್ರಿಕಾ	40
ಜಹೀರ್ ಅಬ್ಬಾಸ್	ಪಾಕಿಸ್ತಾನ	45
ಕೆವಿನ್ ಪೀಟರ್‌ಸನ್	ಇಂಗ್ಲೆಂಡ್	45
ಬಾಬರ್ ಆಜಂ	ಪಾಕಿಸ್ತಾನ	45
ರಸ್ಸಿ ವಾನ್‌ಡೆರ್ ಡಸ್ಸೆನ್	ದಕ್ಷಿಣ ಆಫ್ರಿಕಾ	45

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	5	5	0	0	10	1.353
ನ್ಯೂಜಿಲೆಂಡ್	5	4	1	0	8	1.481
ದಕ್ಷಿಣ ಆಫ್ರಿಕಾ	4	3	1	0	6	2.212
ಆಸ್ಟ್ರೇಲಿಯಾ	4	2	2	0	4	-0.193
ಪಾಕಿಸ್ತಾನ	4	2	2	0	4	-0.456
ಬಾಂಗ್ಲಾದೇಶ	4	1	3	0	2	-0.784
ನೆದರ್ಲೆಂಡ್ಸ್	4	1	3	0	2	-0.790
ಶ್ರೀಲಂಕಾ	4	1	3	0	2	-1.048
ಇಂಗ್ಲೆಂಡ್	4	1	3	0	2	-1.248
ಅಫ್ಘಾನಿಸ್ತಾನ	4	1	3	0	2	-1.250

ಚೆನ್ನೈನಲ್ಲಿ ಇಂದು ಬಾಬರ್ ಪಡೆಗೆ ಹಷ್ಮತ್‌ಉಲ್ಲಾ ಬಳಗದ ಸವಾಲು

ಪಾಕಿಸ್ತಾನ ತಂಡಕ್ಕೆ ಅಫ್ಘನ್ ಸ್ಪಿನ್ ಭಯ

ಚೆನ್ನೈ (ಪಿಟಿಐ): ಗೆಲುವಿನ ಹಾದಿಗೆ ಮರಳುವ ಪ್ರಯತ್ನದಲ್ಲಿರುವ ಪಾಕಿಸ್ತಾನ ತಂಡ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ, ಅಫ್ಘಾನಿಸ್ತಾನದ ಸವಾಲು ಎದುರಿಸಲಿದೆ.

ಚೆನ್ನೈನ ಚೆಪಾಕ್ ಕ್ರೀಡಾಂಗಣದ ಪಿಚ್, ಸ್ಪಿನ್ನರ್‌ಗಳಿಗೆ ನೆರವು ನೀಡುವುದರಿಂದ ಅಫ್ಘನ್ ತಂಡದ ಸ್ಪಿನ್ನರ್‌ಗಳು ಬಾಬರ್ ಅಜಂ ಬಳಗಕ್ಕೆ ಭಯ ಉಂಟುಮಾಡಿದ್ದಾರೆ.

ಸತತ ಎರಡು ಪಂದ್ಯಗಳಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ಎದುರು ಪರಾಭವಗೊಂಡಿರುವ ಪಾಕಿಸ್ತಾನ ತಂಡಕ್ಕೆ ಸೋಮವಾರ ಗೆಲುವು ಅನಿವಾರ್ಯ. ಇನ್ನೊಂದು ಸೋಲು ಎದುರಾದರೆ ಸೆಮಿಫೈನಲ್ ಪ್ರವೇಶದ ಸಾಧ್ಯತೆ ಕ್ಷೀಣಿಸಲಿದೆ. ನಾಲ್ಕು ಪಾಯಿಂಟ್ಸ್ ಹೊಂದಿರುವ ಬಾಬರ್ ಬಳಗ ಈಗ ಐದನೇ ಸ್ಥಾನದಲ್ಲಿದೆ. ಆದರೆ ರನ್‌ರೇಟ್ (–0.456) ಕಡಿಮೆ ಇರುವುದು ಚಿಂತೆಗೆ ಕಾರಣವಾಗಿದೆ.

ಸ್ಪಿನ್ ದಾಳಿ ಎದುರಿಸುವಲ್ಲಿ ಬ್ಯಾಟರ್‌ಗಳ ದೌರ್ಬಲ್ಯವು ಪಾಕ್ ತಂಡಕ್ಕೆ ತಲೆನೋವು ಉಂಟುಮಾಡಿದೆ. ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ತಂಡದ ನಾಲ್ವರು ಪ್ರಮುಖ ಬ್ಯಾಟರ್‌ಗಳು ಆಸ್ಟ್ರೇಲಿಯಾದ ಸ್ಪಿನ್ನರ್ ಆ್ಯಡಮ್ ಜಂಪಾ ಅವರಿಗೆ ವಿಕೆಟ್ ಒಪ್ಪಿಸಿದ್ದರು. ಜಂಪಾ ಅವರ ಎಸೆತಗಳ ಗತಿಯನ್ನು ಅಂದಾಜಿಸುವಲ್ಲಿ ಎಡವಿದ್ದರು.

ಅಫ್ಘನ್ ತಂಡದ ಪ್ರಮುಖ ಶಕ್ತಿ ಸ್ಪಿನ್ನರ್‌ಗಳೇ ಆಗಿದ್ದಾರೆ. ರಶೀದ್ ಖಾನ್, ಮೊಹಮ್ಮದ್ ನಬಿ ಮತ್ತು ಮುಜೀಬ್ ಉರ್ ರಹಮಾನ್ ಅವರು ಇಲ್ಲಿನ ಪಿಚ್‌ನಲ್ಲಿ ಪ್ರಮುಖ ಬ್ಯಾಟರ್‌ಗಳನ್ನು ಕಾಡುವ ಸಾಮರ್ಥ್ಯ ಹೊಂದಿದ್ದಾರೆ.

ಆದ್ದರಿಂದ ಪಾಕ್ ಬ್ಯಾಟರ್‌ಗಳು ವಿಕೆಟ್ ಕಾಯ್ದುಕೊಂಡು ದೊಡ್ಡ ಮೊತ್ತ ಪೇರಿಸಲು ಹೆಚ್ಚಿನ ಶ್ರಮವಹಿಸಬೇಕಿದೆ. ಅದರಲ್ಲೂ ನಾಯಕ ಬಾಬರ್ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಅವರಿಂದ ಇನ್ನೂ ದೊಡ್ಡ ಮೊತ್ತ ಮೂಡಿಬಂದಿಲ್ಲ. ಟೂರ್ನಿಯಲ್ಲಿ ಒಟ್ಟು 294 ರನ್ ಕಲೆಹಾಕಿರುವ ಮೊಹಮ್ಮದ್ ರಿಜ್ವಾನ್ ತಮ್ಮ ಉತ್ತಮ ಫಾರ್ಮ್ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಸೌದ್ ಶಕೀಲ್ ಮತ್ತು ಇಫ್ತಿಕಾರ್ ಅಹಮದ್ ಅವರಿಂದ ತಂಡವು ಉತ್ತಮ ಆಟ ನಿರೀಕ್ಷಿಸುತ್ತಿದೆ.

ಪಾಕ್ ತಂಡದ ಬೌಲರ್‌ಗಳಿಂದಲೂ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ. ಎಡಗೈ ವೇಗಿ ಶಹೀನ್ ಶಾ ಆಫ್ರಿದಿ ಅವರು ಆಸ್ಟ್ರೇಲಿಯಾ ವಿರುದ್ಧ ಐದು ವಿಕೆಟ್‌ಗಳೊಂದಿಗೆ ಲಯಕ್ಕೆ ಮರಳಿರುವುದು ತಂಡಕ್ಕೆ ಸಮಾಧಾನ ಉಂಟುಮಾಡಿದೆ. ಆದರೆ ಇತರ ಇಬ್ಬರು ವೇಗಿಗಳಾದ ಹ್ಯಾರಿಸ್ ರವೂಫ್ ಮತ್ತು ಹಸನ್ ಅಲಿ ಅವರ ಕಳಪೆ ಫಾರ್ಮ್ ಚಿಂತೆಗೆ ಎಡೆಮಾಡಿಕೊಟ್ಟಿದೆ.

ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ಮೊಹಮ್ಮದ್ ನವಾಜ್, ಶಾದಾಬ್ ಖಾನ್ ಮತ್ತು ಉಸಾಮ ಮೀರ್ ನೀಡುವ ಪ್ರದರ್ಶನವು ನಿರ್ಣಾಯಕ ಎನಿಸಲಿದೆ. ಮಧ್ಯದ ಓವರ್‌ಗಳಲ್ಲಿ ರನ್ ನಿಯಂತ್ರಿಸುವ ಜತೆಯಲ್ಲೇ, ವಿಕೆಟ್‌ಗಳನ್ನು ಗಳಿಸುವ ಸವಾಲು ಇವರ ಮೇಲಿದೆ.

ಮತ್ತೊಂದೆಡೆ ಹಷ್ಮತ್‌ಉಲ್ಲಾ ಶಾಹಿದಿ ಬಳಗ ಅಚ್ಚರಿಯ ಫಲಿತಾಂಶ ನೀಡುವ ವಿಶ್ವಾಸದಲ್ಲಿದೆ. ರಹಮಾನುಲ್ಲಾ ಗುರ್ಬಾಜ್ ಹೊರತುಪಡಿಸಿ ಈ ತಂಡದ ಇತರ ಬ್ಯಾಟರ್‌ಗಳು ಗಮನ ಸೆಳೆದಿಲ್ಲ. ಪಾಕ್ ವಿರುದ್ಧ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಇನ್ನಷ್ಟು ಜವಾಬ್ದಾರಿಯಿಂದ ಆಡಬೇಕಿದೆ.

ಪಾಕ್ ಆಟಗಾರರು ಭಾನುವಾರ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಪಾಕ್ 7–0 ಅಜೇಯ ಸಾಧನೆ

ಏಕದಿನ ಕ್ರಿಕೆಟ್‌ನಲ್ಲಿ ಉಭಯ ತಂಡಗಳು ಏಳು ಸಲ ಎದುರಾಗಿದ್ದು, ಪಾಕಿಸ್ತಾನ ತಂಡ ಎಲ್ಲ ಪಂದ್ಯಗಳನ್ನೂ ಗೆದ್ದಿದೆ. ಕೊಲಂಬೊದಲ್ಲಿ ಇದೇ ಆಗಸ್ಟ್‌ನಲ್ಲಿ ಕೊನೆಯದಾಗಿ ಹಣಾಹಣಿ ನಡೆಸಿದ್ದಾಗ ಪಾಕ್, 59 ರನ್‌ಗಳಿಂದ ಗೆದ್ದಿತ್ತು. ಇತಿಹಾಸ ತಮ್ಮ ಪರವಾಗಿದ್ದೂ ಅಚ್ಚರಿಯ ಫಲಿತಾಂಶ ನೀಡಬಲ್ಲ ಸಾಮರ್ಥ್ಯವನ್ನು ಅಫ್ಘನ್ ತಂಡ ಹೊಂದಿರುವುದರಿಂದ, ಬಾಬರ್ ಬಳಗ ಎಚ್ಚರಿಕೆಯಿಂದಲೇ ಕಣಕ್ಕಿಳಿಯಲಿದೆ.

ಅಫ್ಘಾನಿಸ್ತಾನ ತಂಡದ ರಹಮಾನುಲ್ಲಾ ಗುರ್ಬಾಜ್ –ಪಿಟಿಐ ಚಿತ್ರ

ತಂಡಗಳು

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಅಬ್ದುಲ್ಲಾ ಶಫೀಕ್, ಇಮಾಮ್ ಉಲ್ ಹಕ್, ಮೊಹಮ್ಮದ್ ರಿಜ್ವಾನ್ (ವಿಕೆಟ್‌ಕೀಪರ್), ಸೌದ್ ಶಕೀಲ್, ಇಫ್ತಿಕಾರ್ ಅಹಮದ್, ಶಾದಾಬ್ ಖಾನ್, ಉಸಾಮ ಮೀರ್, ಮೊಹಮ್ಮದ್ ನವಾಜ್, ಹಸನ್ ಅಲಿ, ಶಹೀನ್ ಆಫ್ರಿದಿ, ಹ್ಯಾರಿಸ್ ರವೂಫ್, ಮೊಹಮ್ಮದ್ ಹ್ಯಾರಿಸ್, ಮೊಹಮ್ಮದ್ ವಸೀಮ್, ಸಲ್ಮಾನ್ ಅಲಿ

ಅಫ್ಘಾನಿಸ್ತಾನ: ಹಷ್ಮತ್‌ಉಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಜ್ (ವಿಕೆಟ್ ಕೀಪರ್), ಇಬ್ರಾಹಿಂ ಜದ್ರಾನ್, ರಿಯಾಝ್ ಹಸನ್, ರಹಮತ್ ಶಾ, ನಜೀಬುಲ್ಲಾ ಜದ್ರಾನ್, ಮೊಹಮ್ಮದ್ ನಬಿ, ಇಕ್ರಮ್ ಅಲಿಖಿಲ್ (ವಿಕೆಟ್ ಕೀಪರ್), ಅಜ್ಮತ್‌ಉಲ್ಲಾ ಒಮ್ರಾರ್ಝೈ, ರಶೀದ್ ಖಾನ್, ಮುಜೀಬ್ ಉರ್ ರಹಮಾನ್, ನೂರ್ ಅಹ್ಮದ್, ಫಜಲಖ್ ಫರೂಖಿ, ಅಬ್ದುಲ್ ರಹಮಾನ್ ಮತ್ತು ನವೀನ್ ಉಲ್ ಹಕ್.

ಪಂದ್ಯ ಆರಂಭ: ಮಧ್ಯಾಹ್ನ 2
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಸಿಕ್ಕ ಅವಕಾಶ ಬಳಸಿಕೊಂಡೆ

ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್ ರೀಜಾ ಹೆಂಡ್ರಿಕ್ಸ್ ಹೇಳಿಕೆ

ಮುಂಬೈ (ಎಎಫ್‌ಪಿ): ಅಂತಿಮ ಕ್ಷಣದಲ್ಲಿ ಲಭಿಸಿದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾದದ್ದು ಸಂತಸ ಉಂಟುಮಾಡಿದೆ ಎಂದು ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್ ರೀಜಾ ಹೆಂಡ್ರಿಕ್ಸ್ ಹೇಳಿದ್ದಾರೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ, 229 ರನ್‌ಗಳಿಂದ ಇಂಗ್ಲೆಂಡ್ ತಂಡವನ್ನು ಮಣಿಸಿತ್ತು. ರೀಜಾ 85 ರನ್ ಗಳಿಸಿದ್ದರು.

34 ವರ್ಷದ ಅವರನ್ನು ಪಂದ್ಯದ ಟಾಸ್‌ಗೆ ಕೆಲವೇ ನಿಮಿಷಗಳ ಮುನ್ನ 11ರ ಬಳಗಕ್ಕೆ ಸೇರಿಸಿಕೊಳ್ಳಲಾಗಿತ್ತು. ನಾಯಕ ತೆಂಬಾ ಬವುಮಾ ಅನಾರೋಗ್ಯದಿಂದ ಹಿಂದೆ ಸರಿದದ್ದು ಹೆಂಡ್ರಿಕ್ಸ್‌ಗೆ ಅವಕಾಶ ಲಭಿಸಲು ಕಾರಣ.

ತಮಗೆ ಲಭಿಸಿದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ಈ ಅಗ್ರಕ್ರಮಾಂಕದ ಬ್ಯಾಟರ್ ಎರಡನೇ ವಿಕೆಟ್‌ಗೆ ರಸಿ ವ್ಯಾನ್ ಡೆರ್ ಡಸೆ ಜತೆ 121 ರನ್ ಸೇರಿಸಿದ್ದರು. ಇವರು ಹಾಕಿಕೊಟ್ಟ ಬುನಾದಿಯ ಮೇಲೆ ಇತರ ಬ್ಯಾಟರ್‌ಗಳು ಭರ್ಜರಿ ಆಟವಾಡಿದ್ದರಿಂದ ತಂಡ 7 ವಿಕೆಟ್‌ಗಳಿಗೆ 399 ರನ್ ಪೇರಿಸಿತ್ತು.

‘ಪಂದ್ಯದ ದಿನ ಇತರ ಆಟಗಾರರಂತೆ ನಾನೂ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದ್ದೆ. ಆದರೆ ಆಡಲು ಅವಕಾಶ ಲಭಿಸುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಟಾಸ್‌ಗೆ 10 ನಿಮಿಷಗಳಿರುವಾಗ ನನಗೆ ಆಡಬೇಕೆಂದು ಸೂಚಿಸಲಾಯಿತು. ಸವಾಲಿಗೆ ಮಾನಸಿಕವಾಗಿ ಸಿದ್ಧನಾದೆ’ ಎಂದು ಹೆಂಡ್ರಿಕ್ಸ್ ತಿಳಿಸಿದರು. ಇಂಗ್ಲೆಂಡ್ ದಾಳಿಯನ್ನು ದಿಟ್ಟವಾಗಿ ಎದುರಿಸಿದ್ದ ಅವರು ಶತಕ ಗಳಿಸುವ ಅವಕಾಶವನ್ನು ಕೇವಲ 15 ರನ್‌ಗಳಿಂದ ತಪ್ಪಿಸಿಕೊಂಡಿದ್ದರು.

ರೀಜಾ ಹೆಂಡ್ರಿಕ್ಸ್ –ಎಎಫ್‌ಪಿ ಚಿತ್ರ

‘ಕಳೆದ ಐದು ವರ್ಷಗಳಿಂದ ಆಡುತ್ತಿದ್ದರೂ, ತಂಡದಲ್ಲಿ ಸ್ಥಾನ ಭದ್ರಪಡಿಸಲು ಆಗಿಲ್ಲ. ಎರಡನೇ ಶತಕವನ್ನು ಶೀಘ್ರದಲ್ಲೇ ಗಳಿಸುವ ವಿಶ್ವಾಸ ನನ್ನದು’ ಎಂದರು. ಹೆಂಡ್ರಿಕ್ಸ್ ಅವರು 2018 ರಲ್ಲಿ ಶ್ರೀಲಂಕಾ ವಿರುದ್ಧ ತಮ್ಮ ಪದಾರ್ಪಣೆ ಪಂದ್ಯದಲ್ಲಿ ಮೊದಲ ಶತಕ ಗಳಿಸಿದ್ದರು. ಆ ಬಳಿಕ ಒಟ್ಟು 30 ಪಂದ್ಯಗಳನ್ನು ಆಡಿದ್ದಾರೆ.

ಪಾಕ್ ಕ್ರಿಕೆಟಿಗರ ಗುತ್ತಿಗೆ: ಸರ್ಫರಾಜ್‌ಗೆ ಬಡ್ತಿ

ಲಾಹೋರ್ (ಪಿಟಿಐ): ಪಾಕಿಸ್ತಾನ ತಂಡದ ಮಾಜಿ ನಾಯಕ–ವಿಕೆಟ್ ಕೀಪರ್ ಸರ್ಫರಾಜ್ ಅಹಮದ್ ಅವರಿಗೆ ಪಾಕಿಸ್ತಾನದ ಪರಿಷ್ಕೃತ ಕೇಂದ್ರೀಯ ಗುತ್ತಿಗೆಯಲ್ಲಿ ‘ಡಿ’ ದರ್ಜೆಯಿಂದ ‘ಬಿ’ ದರ್ಜೆಗೆ (ಕೆಟಗರಿ) ಬಡ್ತಿ ನೀಡಲಾಗಿದೆ.

ಏಕದಿನ ವಿಶ್ವಕಪ್‌ಗೆ ಮೊದಲು ಈ ಹಿಂದಿನ ಪಟ್ಟಿ ಪ್ರಕಟಿಸಲಾಗಿತ್ತು. ಪಾಕ್ ಕ್ರಿಕೆಟ್ ಮಂಡಳಿ ಶುಕ್ರವಾರ ಪರಿಷ್ಕೃತ ಗುತ್ತಿಗೆ ಪಟ್ಟಿ ಪ್ರಕಟಿಸಿದೆ. ನಾಯಕ ಬಾಬರ್ ಆಜಂ, ಮುಖ್ಯ ಆಯ್ಕೆಗಾರ ಇಂಜಮಾಮ್ ಉಲ್ ಹಕ್ ಮತ್ತು ಮುಖ್ಯ ತರಬೇತುದಾರ ಮಿಕಿ ಆರ್ಥರ್ ಅವರು ಪಟ್ಟಿಯನ್ನು ಅಂತಿಮಗೊಳಿಸಿದ್ದು, ಇದಕ್ಕೆ ಪಿಸಿಬಿ ಅಧ್ಯಕ್ಷ ಝಕಾ ಅಶ್ರಫ್ ಸಮ್ಮತಿ ನೀಡಿದ್ದಾರೆ.

ಒಟ್ಟು 30 ಮಂದಿ ನಾಲ್ಕು ವಿವಿಧ ದರ್ಜೆಗಳಲ್ಲಿ ಇದ್ದಾರೆ. ಮೂರು ವರ್ಷಗಳ ಗುತ್ತಿಗೆ ಒಪ್ಪಂದ 2023ರ ಜುಲೈನಿಂದ 2026ರ ಜೂನ್ 30ರವರೆಗೆ ಇರಲಿದೆ.

36 ವರ್ಷದ ಸರ್ಫರಾಜ್ ಅವರು ಟೆಸ್ಟ್‌ನಲ್ಲಿ ಪಾಕ್‌ನ ಮೊದಲ ಆಯ್ಕೆಯ ವಿಕೆಟ್ ಕೀಪರ್ ಆಗಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ತಂಡಕ್ಕೆ ಪುನರಾಗಮನ ಮಾಡಿದ ನಂತರ ಅವರು 61.6 ಸರಾಸರಿಯಲ್ಲಿ ನಾಲ್ಕು ಪಂದ್ಯಗಳಿಂದ 367 ರನ್ ಗಳಿಸಿದ್ದಾರೆ.

ಸರ್ಫರಾಜ್ ಅಹಮದ್

ಪರಿಷ್ಕೃತ ಗುತ್ತಿಗೆ: ‘ಎ’ ದರ್ಜೆ: ಬಾಬರ್ ಆಜಂ, ಮೊಹಮ್ಮದ್ ರಿಜ್ವಾನ್ ಮತ್ತು ಶಾಹೀನ್ ಶಾ ಅಫ್ರೀದಿ.

‘ಬಿ’ ದರ್ಜೆ: ಫಕ್ರ್ ಜಮಾನ್, ಹ್ಯಾರಿಸ್ ರೌಫ್, ಇಮಾಮ್–ಉಲ್–ಹಕ್, ಮೊಹಮ್ಮದ್ ನವಾಜ್, ನಸೀಮ್ ಶಾ, ಸರ್ಫರಾಜ್ ಅಹ್ಮದ್ ಮತ್ತು ಶಾದಾಬ್ ಖಾನ್.

‘ಸಿ’ ದರ್ಜೆ: ಅಬ್ದುಲ್ಲಾ ಶಫೀಖ್, ಅಬ್ರಾರ್ ಅಹ್ಮದ್, ಇಮದ್ ವಾಸಿಂ ಮತ್ತು ನೊಮಾನ್ ಅಲಿ. ಇವರ ಜೊತೆಗೆ, 16 ಆಟಗಾರರು ‘ಡಿ’ ಕೆಟಗರಿಯಲ್ಲಿ ಸ್ಥಾನ ಪಡೆದಿದ್ದಾರೆ.

ರನ್ ಹೊಳೆ ಹರಿಸುವುದೇ ದಕ್ಷಿಣ ಆಫ್ರಿಕಾ

ಮರ್ಕರಂ ಬಳಗದ ಓಟಕ್ಕೆ ಕಡಿವಾಣ ಹಾಕಲು ಬಾಂಗ್ಲಾದೇಶ ತಂಡ ಪ್ರಯತ್ನ

ಮುಂಬೈ: ಈ ಬಾರಿಯ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ರನ್‌ಗಳ ಪ್ರವಾಹವನ್ನೇ ಹರಿಸುತ್ತಿರುವ ದಕ್ಷಿಣ ಆಫ್ರಿಕಾ ತಂಡವು ಎರಡು ಬಾರಿ ನಾಲ್ಕನೂರು ರನ್‌ಗಳಿಗಿಂತ ಹೆಚ್ಚು ಮೊತ್ತ ಗಳಿಸಿದೆ.

ಈ ತಂಡದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಸಿಡಿಲಬ್ಬರದ ಬ್ಯಾಟಿಂಗ್ ಮಾಡುತ್ತಿದ್ದಾರೆ. ಆಡಿರುವ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಗೆದ್ದಿದೆ. ಮಂಗಳವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಬಾಂಗ್ಲಾದೇಶ ಎದುರು ನಡೆಯಲಿರುವ ಪಂದ್ಯದಲ್ಲಿಯೂ ಜಯ ಗಳಿಸುವ ವಿಶ್ವಾಸದಲ್ಲಿದೆ.

ಟೂರ್ನಿಯಲ್ಲಿ ಇದುವರೆಗೂ ಏಡನ್ ಮರ್ಕರಂ ನಾಯಕತ್ವದ ದಕ್ಷಿಣ ಆಫ್ರಿಕಾ ಬಳಗವು ಅಚ್ಚರಿ ಮೂಡಿಸುವಂತಹ ಆಟವಾಡಿದೆ. ತನ್ನ ಮೊದಲ ಪಂದ್ಯದಲ್ಲಿ ಶ್ರೀಲಂಕಾ ತಂಡಕ್ಕೆ 428 ರನ್ ಗಳ ಗುರಿ ನೀಡಿ ಗೆದ್ದಿತ್ತು. ಬಲಿಷ್ಠ ಆಸ್ಟ್ರೇಲಿಯಾದ ಎದುರು 134 ರನ್‌ಗಳ ಅಂತರದಿಂದ ಜಯಿಸಿತ್ತು. ಆದರೆ ಮೂರನೇ ಪಂದ್ಯದಲ್ಲಿ 'ದುರ್ಬಲ' ನೆದರ್ಲೆಂಡ್ಸ್ ಎದುರು 38 ರನ್‌ಗಳಿಂದ ಸೋತಿತ್ತು.

ನಾಲ್ಕನೇ ಪಂದ್ಯದಲ್ಲಿ ಪುಟಿದೆದ್ದ ಮರ್ಕರಂ ಬಳಗವು ಹಾಲಿ ಚಾಂಪಿಯನ್ ಇಂಗ್ಲೆಂಡ್‌ಗೆ 229 ರನ್‌ಗಳ ಸೋಲಿನ ರುಚಿ ಉಣಿಸಿತು. ಈ ಪಂದ್ಯದಲ್ಲಿಯೂ ದಕ್ಷಿಣ ಆಫ್ರಿಕಾ ತಂಡವು 399 ರನ್ ಗುರಿ ಒಡ್ಡಿತ್ತು.

ಇದೀಗ ಸತತ ಮೂರು ಸೋಲುಗಳಿಂದ ಕಂಗಾಲಾಗಿರುವ ಬಾಂಗ್ಲಾ ತಂಡಕ್ಕೆ ದಕ್ಷಿಣ ಆಫ್ರಿಕಾದ ಓಟಕ್ಕೆ ಕಡಿವಾಣ ಹಾಕುವ ಒತ್ತಡವಿದೆ. ಆದರೆ, ಎರಡು ಶತಕ ಹೊಡೆದಿರುವ ಕ್ವಿಂಟನ್ ಡಿಕಾಕ್, ತಲಾ ಒಂದು ಶತಕ ಗಳಿಸಿರುವ ನಾಯಕ ಏಡನ್, ರಸಿ ವ್ಯಾನ್ ಡೆರ್ ಡಸೆನ್, ಹೆನ್ರಿಚ್ ಕ್ಲಾಸೆನ್ ಅವರ ಅಬ್ಬರವನ್ನು ಕಟ್ಟಿಹಾಕುವುದು ಬಾಂಗ್ಲಾ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸೆನ್ ಅವರು ತಾಲೀಮು ನಡೆಸಿದರು –ಎಎಫ್‌ಪಿ ಚಿತ್ರ

ಕಳೆದ ಪಂದ್ಯದಲ್ಲಿ ಭಾರತದ ಎದುರು ಬಾಂಗ್ಲಾದ ಬೌಲರ್‌ಗಳಾದ ಶೊರಿಫುಲ್ ಇಸ್ಲಾಂ, ನಸುಮ್ ಅಹಮದ್, ಹಸನ್ ಮೆಹಮೂದ, ಮೆಹದಿ ಹಸನ್ ಮಿರಾಜ್ ಅವರು ದುಬಾರಿಯಾಗಿದ್ದರು. ಶಕೀಬ್ ಅಲ್ ಹಸನ್ ಆ ಪಂದ್ಯದಲ್ಲಿ ಆಡಿರಲಿಲ್ಲ. ದಕ್ಷಿಣ ಆಫ್ರಿಕಾ ಎದುರು ಕೂಡ ಅವರು ಆಡುವುದು ಅನುಮಾನ. ಇದರಿಂದಾಗಿ ಬೌಲಿಂಗ್ ನಲ್ಲಿ ಅನುಭವಿಗಳ ಕೊರತೆ ಕಾಡಬಹುದು.

ಆದರೆ ದಕ್ಷಿಣ ಆಫ್ರಿಕಾದಲ್ಲಿ ಅನುಭವಿ ಅನುಭವಿ ವೇಗಿಗಳು ಮತ್ತು ಸ್ಪಿನ್ನರ್‌ಗಳು ಇದ್ದಾರೆ. ಬಾಂಗ್ಲಾದ ಆರಂಭಿಕ ಜೋಡಿ ತಂಜಿದ್ ಹಸನ್ ಮತ್ತು ಲಿಟನ್ ದಾಸ್ ಉತ್ತಮ ಲಯದಲ್ಲಿದ್ದಾರೆ. ಉಳಿದ ಬ್ಯಾಟರ್‌ಗಳ ಫಾರ್ಮ್ ಅಸ್ಥಿರವಾಗಿದೆ. ಆದರೆ ನೆದರ್ಲೆಂಡ್ಸ್ ವಿರುದ್ಧ ಸೋಲಿನಿಂದಾಗಿ ಯಾವುದೇ ತಂಡವನ್ನು ಹಗುರವಾಗಿ ಪರಿಗಣಿಸದಿರುವ ಪಾಠವನ್ನು ಮರ್ಕರಂ ಬಳಗ ಕಲಿತಿರಬಹುದು. ಬಾಂಗ್ಲಾ ತಂಡದ ವಿರುದ್ಧ ಸುಲಭ ಜಯದ ನಿರೀಕ್ಷೆ ಮಾಡದೇ ತನ್ನ ನೈಜ ಹಾಗೂ ಹೊಣೆಗಾರಿಕೆಯ ಆಟವನ್ನು ನೆಚ್ಚಿಕೊಳ್ಳಬಹುದು.

ತಂಡಗಳು

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಕ್ವಿಂಟನ್ ಡಿ ಕಾಕ್, ರೀಜಾ ಹೆನ್ರಿಕ್ಸ್, ರಸಿ ವ್ಯಾನ್ ಡೆರ್ ಡಸೆ, ಹೆನ್ರಿಚ್ ಕ್ಲಾಸೆನ್, ಡೇವಿಡ್ ಮಿಲ್ಲರ್, ಮಾರ್ಕೊ ಜೆನ್ಸನ್, ಗೆರಾಲ್ಡ್ ಕೋಝಿ, ಕೇಶವ್ ಮಹಾರಾಜ, ಕಗಿಸೊ ರಬಾಡ, ಲುಂಗಿ ಗಿಡಿ, ತೆಂಬಾ ಬವುಮಾ, ತಬ್ರೇಜ್ ಶಮ್ಸಿ, ಆ್ಯಂಡಿಲೆ ಪಿಶುವಾಯೊ, ಲಿಜಾದ್ ವಿಲಿಯಮ್ಸ್.

ಬಾಂಗ್ಲಾದೇಶ: ನಜ್ಮುಲ್ ಹೊಸೇನ್ ಶಾಂತೊ (ನಾಯಕ), ಮೆಹದಿನ ಹಸನ್ ಮಿರಾಜ್, ತೌಹಿದ್ ಹೃದಯ್, ಮುಷ್ಫಿಕುರ್ ರಹೀಮ್ (ವಿಕೆಟ್‌ಕೀಪರ್), ಮಹಮುದುಲ್ಲಾ, ನಸೂಮ್ ಅಹಮದ್, ಹಸನ್ ಮೆಹಮೂದ್, ಮುಸ್ತಫಿಜುರ್ ರೆಹಮಾನ್, ಶೊರಿಫುಲ್ ಇಸ್ಲಾಂ, ತಂಜೀಮ್ ಹಸನ್ ಸಕೀಬ್, ಮೆಹದಿ ಹಸನ್, ತಸ್ಕಿನ್ ಅಹಮದ್.

ಪಂದ್ಯ ಆರಂಭ: ಮಧ್ಯಾಹ್ನ 2 (ಅಕ್ಟೋಬರ್ 24)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಕೊಡಗು ಎಫ್‌ಸಿ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0 ಯಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಕೊಡಗು ತಂಡದ ಪರ ಹೈವಾನ್‌ಭಾ ದಖರ್ (66ನೇ), ಶ್ಲೋಕ್ ತಿವಾರಿ (73ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಐಟಿಎಫ್ ಟೂರ್ನಿಯ ಮುಖ್ಯ ಸುತ್ತಿನ ಪಂದ್ಯಗಳು

ದಾವಣಗೆರೆಯಲ್ಲಿ ಟೆನಿಸ್ ಸಂಭ್ರಮ

• ಜಿ.ಶಿವಕುಮಾರ

ದಾವಣಗೆರೆ: 'ದೇವನಗರಿ' ಖ್ಯಾತಿಯ ದಾವಣಗೆರೆಯಲ್ಲಿ ದಶಕದ ನಂತರ ಟೆನಿಸ್ ಸಂಭ್ರಮ ಗರಿಗೆದರಿದೆ. ದಾವಣಗೆರೆ ನಗರವು 3ನೇ ಬಾರಿಗೆ ಐಟಿಎಫ್ ಟೂರ್ನಿಯ ಆತಿಥ್ಯ ವಹಿಸುತ್ತಿದೆ.

2002ರಲ್ಲಿ ಮೊದಲ ಸಲ ಇಲ್ಲಿ ಐಟಿಎಫ್ ಟೂರ್ನಿ ನಡೆದಿತ್ತು. ಅದಾಗಿ 10 ವರ್ಷಗಳ ಬಳಿಕ (2012) ಮತ್ತೊಮ್ಮೆ ಅಂತರರಾಷ್ಟ್ರೀಯ ಟೂರ್ನಿ ಆಯೋಜನೆಗೊಂಡಿತ್ತು.

ದಸರಾ ಹಬ್ಬದ ಸಡಗರದ ಜೊತೆಗೆ ಈ ಬಾರಿ ನಗರದಲ್ಲಿ ಟೆನಿಸ್ ಸಂಭ್ರಮವೂ ಕಳೆಗಟ್ಟಿದೆ. ಭಾನುವಾರ ಹಾಗೂ ಸೋಮವಾರ ಸಿಂಗಲ್ಸ್ ವಿಭಾಗದ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ಮಂಗಳವಾರದಿಂದ ಮುಖ್ಯ ಸುತ್ತಿನ ಪಂದ್ಯಗಳು ಆರಂಭವಾಗಲಿದ್ದು, ಇದೇ 29 ರಂದು (ಭಾನುವಾರ) ಫೈನಲ್ ನಿಗದಿಯಾಗಿದೆ.

ಪುರುಷರ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಟೂರ್ನಿ ನಡೆಯುತ್ತಿದೆ. ಸಿಂಗಲ್ಸ್‌ನಲ್ಲಿ 32 ಮಂದಿ 'ಅದೃಷ್ಟ ಪರೀಕ್ಷೆ'ಗೆ ಇಳಿಯಲಿದ್ದಾರೆ. ಡಬಲ್ಸ್‌ನಲ್ಲಿ 16 ಜೋಡಿ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿದೆ.

ಡೇವಿಸ್ ಕಪ್ ಆಟಗಾರ ಹಾಗೂ ಈಚೆಗೆ ಮುಗಿದ ಏಷ್ಯನ್ ಕ್ರೀಡಾಕೂಟದ ಪುರುಷರ ಡಬಲ್ಸ್‌ನಲ್ಲಿ ಬೆಳ್ಳಿಯ ಪದಕ ಗೆದ್ದಿರುವ ಭಾರತದ ರಾಮಕುಮಾರ್ ರಾಮನಾಥನ್ ಎಲ್ಲರ ಆಕರ್ಷಣೆಯಾಗಿದ್ದಾರೆ. ಧಾರವಾಡದಲ್ಲಿ ಭಾನುವಾರ ಮುಗಿದಿದ್ದ ಐಟಿಎಫ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿರುವ ಅವರು ಇಲ್ಲಿಯೂ ಟ್ರೋಫಿಗೆ ಮುತ್ತಿಕ್ಕುವ ಉತ್ಸಾಹದಲ್ಲಿದ್ದಾರೆ.

ರಾಮಕುಮಾರ್‌ಗೆ ಅಮೆರಿಕದ ನಿಕ್ ಚಾಪೆಲ್, ಫ್ರಾನ್ಸ್‌ನ ಫ್ಲೋರೆಂಟ್ ಬ್ಯಾಕ್ಸ್ ಹಾಗೂ ದಿಗ್ವಿಜಯ ಪ್ರತಾಪ್ ಸಿಂಗ್ ಅವರಿಂದ ತೀವ್ರ ಪೈಪೋಟಿ ಎದುರಾಗುವ ನಿರೀಕ್ಷೆ ಇದೆ.

ಕರ್ನಾಟಕದ ಪ್ರಜ್ವಲ್ ದೇವ್, ನಿಕಿ ಪೂಣಚ್ಚ ಹಾಗೂ ಅನುಭವಿ ಆಟಗಾರ ವಿಷ್ಣುವರ್ಧನ್ ಅವರೂ ಪ್ರಶಸ್ತಿಯ ಕನವರಿಕೆಯಲ್ಲಿದ್ದಾರೆ.

ದಾವಣಗೆರೆ ಜಿಲ್ಲಾ ಟೆನಿಸ್ ಸಂಸ್ಥೆಯು ಪ್ರೇಕ್ಷಕರಿಗೆ ಉಚಿತ ಪ್ರವೇಶ ಕಲ್ಪಿಸಿದ್ದು, ಟೆನಿಸ್ ಪ್ರಿಯರು ಅಂತರರಾಷ್ಟ್ರೀಯ ಕ್ರೀಡಾಪಟುಗಳ ಆಟವನ್ನು ಕಣ್ತುಂಬಿಕೊಳ್ಳುವ ಕಾತರದಲ್ಲಿದ್ದಾರೆ.

ಪ್ಯಾರಾ ಏಷ್ಯನ್ ಗೇಮ್ಸ್ ಚೀನಾದ ಹಾಂಗ್‌ಝೌನಲ್ಲಿ ಭಾನುವಾರ ನಡೆದ ಪ್ಯಾರಾ ಏಷ್ಯನ್ ಕ್ರೀಡಾಕೂಟದ ವರ್ಣರಂಜಿತ ಉದ್ಘಾಟನಾ ಸಮಾರಂಭದಲ್ಲಿ ಅಥ್ಲೀಟ್‌ಗಳು ಪಥಸಂಚಲನ ನಡೆಸಿದರು – ಎಎಫ್‌ಪಿ ಚಿತ್ರ

ಧಾರವಾಡ ಐಟಿಎಫ್: ರೋಚಕ ಫೈನಲ್‌ನಲ್ಲಿ ಸೋತ ದಿಗ್ವಿಜಯ್

ರಾಮಕುಮಾರ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಧಾರವಾಡ: ಭಾರತದ ರಾಮಕುಮಾರ್ ರಾಮನಾಥನ್ ಇಲ್ಲಿ ನಡೆದ ಐಟಿಎಫ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಜಿಲ್ಲಾ ಲಾನ್ ಟೆನಿಸ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ತಮಿಳುನಾಡಿನವರಾದ ನಾಲ್ಕನೇ ಶ್ರೇಯಾಂಕದ ರಾಮಕುಮಾರ್ 7–6 (5), 7–6 (6) ರಿಂದ ಮೂರನೇ ಶ್ರೇಯಾಂಕದ ದಿಗ್ವಿಜಯ್ ಪ್ರತಾಪ್ ಸಿಂಗ್ ಎದುರು ಗೆದ್ದರು. ಎರಡೂ ಸೆಟ್‌ಗಳೂ ರೋಚಕವಾಗಿದ್ದವು.

ಇಲ್ಲಿ ರಾಮಕುಮಾರ್ ಅವರು ₹ 3 ಲಕ್ಷ ನಗದು, ಟ್ರೋಫಿ ಸ್ವೀಕರಿಸಿದರು. ಏಷ್ಯನ್ ಕ್ರೀಡಾಕೂಟದಲ್ಲಿ ಬೆಳ್ಳಿ ಗೆದ್ದ ರಾಮಕುಮಾರ್ ಅವರಿಗೆ ಕೆಎಸ್‌ಎಲ್‌ಟಿಎ ವತಿಯಿಂದ ₹1 ಲಕ್ಷ ನಗದು ನೀಡಿ ಸನ್ಮಾನಿಸಲಾಯಿತು. ರನ್ನರ್ ಅಪ್ ದಿಗ್ವಿಜಯ ಪ್ರತಾಪ್ ಸಿಂಗ್ ಅವರಿಗೆ ₹ 1.76 ಲಕ್ಷ ನಗದು ಹಾಗೂ ಟ್ರೋಫಿ ಪಡೆದರು.

ಫೈನಲ್ ಪಂದ್ಯದಲ್ಲಿ ಪ್ರತಿ ಹಂತದಲ್ಲೂ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಎರಡೂ ಸೆಟ್‌ಗಳು ಟೈಬ್ರೇಕರ್ ನಲ್ಲಿ ಅಂತ್ಯ ಕಂಡವು. ರಾಮಕುಮಾರ್ ಅವರು ನಿಖರವಾದ ಹೊಡೆತಗಳು ಮತ್ತು ಆಕ್ರಮಣಕಾರಿ ಆಟದಿಂದ ಎದುರಾಳಿಯನ್ನು ಹಿಮ್ಮೆಟ್ಟಿಸಿದರು.

ಮುಖ್ಯಾಂಶಗಳು

- ರಾಮಕುಮಾರ್‌ಗೆ ₹3 ಲಕ್ಷ ನಗದು ಬಹುಮಾನ, ಟ್ರೋಫಿ
- ಏಷ್ಯನ್ ಕ್ರೀಡಾಕೂಟದಲ್ಲಿ ಬೆಳ್ಳಿ ಗೆದ್ದಿದ್ದ ರಾಮಕುಮಾರ್

ಎರಡನೇ ಸೆಟ್‌ನಲ್ಲಿ ಪಂದ್ಯ ತೀವ್ರ ಕುತೂಹಲ ಮೂಡಿಸಿತು. ದಿಗ್ವಿಜಯ ಕೂಡ ತಿರುಗೇಟು ನೀಡುವ ಪ್ರಯತ್ನ ಮಾಡಿದತು. ಇದರಿಂದಾಗಿ ರಾಮಕುಮಾರ್ ಅವರಿಗೆ ಸುಲಭ ಜಯ ಸಾಧಿಸಲು ಸಾಧ್ಯವಾಗಲಿಲ್ಲ. ಫೋರ್‌ಹ್ಯಾಂಡ್ ಹಾಗೂ ಬ್ಯಾಕ್ ಹ್ಯಾಂಡ್ ಹೊಡೆತಗಳ ಪ್ರದರ್ಶನ ಮನ ಮುದಗೊಳಿಸಿತು.

ಧಾರವಾಡದ ಐಟಿಎಫ್ ಗೆಲುವು ರಾಮಕುಮಾರ್ ಅವರಿಗೆ ಸಾಧನೆಯ ಹೆಜ್ಜೆ ಗುರುತಾಗಿದೆ. ಅವರು 11 ವರ್ಷಗಳ ಹಿಂದೆ ಇಲ್ಲಿ ನಡೆದ ಐಟಿಎಫ್ ಫ್ಯೂಚರ್ಸ್ ಟೈಲ್ ನಲ್ಲಿ ರನ್ನರ್ ಅಪ್ ಆಗಿದ್ದರು.

'ಕಳೆದ ಕೆಲವು ವಾರಗಳಿಂದ ಕಠಿಣ ಅಭ್ಯಾಸ ನಡೆಸಿದ್ದೆ. ಈ ಟೂರ್ನಿಯ ಗೆಲುವಿನಿಂದಾಗಿ ಆತ್ಮಬಲ ವೃದ್ಧಿಸಿದೆ. ಮುಂದಿನ ಟೂರ್ನಿಗಳಲ್ಲಿ ಆಡಲು ಪ್ರೇರಣೆಯಾಗಿದೆ' ಎಂದು ರಾಮಕುಮಾರ್ ಪಂದ್ಯದ ನಂತರ ಸುದ್ದಿಗಾರರಿಗೆ ತಿಳಿಸಿದರು.

ಧಾರವಾಡದಲ್ಲಿ ನಡೆದ ಐಟಿಎಫ್ ಟೂರ್ನಿ ಚಾಂಪಿಯನ್ ರಾಮಕುಮಾರ್ ರಾಮನಾಥನ್ (ಎಡ) ಮತ್ತು ರನ್ನರ್ ಅಪ್ ಸ್ಥಾನ ಪಡೆದ ದಿಗ್ವಿಜಯ ಪ್ರತಾಪ್ ಸಿಂಗ್ ಅವರು ಟ್ರೋಫಿಯೊಂದಿಗೆ. ಬಿ.ಎಂ.ಕೇದಾರನಾಥ /ಪ್ರಜಾವಾಣಿ ಚಿತ್ರ

#Safetyforall

HYUNDAI

To know more, WhatsApp us on 8447228019 | my Hyundai app | Hyundai Cl!ck to Buy | 3 YEAR Unlimited** Kilometer Warranty | 3 YEAR 1 00 000km Warranty Coverage^^ | UPTO 7 YEARS Extended Warranty^ | 3 YEAR Road Side Assistance (RSA)* | UPTO 5 YEARS Shield of Trust Running Repair Package# | UPTO 5 YEARS Shield of Trust Super Maintenance Package#

For Information Contact: Toll Free:1800114645 **Bangalore:** Advaith Hyundai, Residency Road, Ph: 9606076451 Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Kormangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457 Trident Hyundai, Sankey Road, Ph: 9844266882 K R Puram, Ph: 9844266873 Hosur Road, Ph: 9964187952 Indiranagar, Ph: 9743786943, Yelahanka, Ph: 7353750677, Yeshwantpur, Ph: 9844701452 Blue Hyundai, New Bel Road, Ph: 9513000800 Magadi Road, Ph: 9513200033, Rajajinagar, Ph: 9591200001, Basavangudi, Ph: 9591211118, Mysore Road, Ph: 9591100001, Nelamangala, Ph: 9742245636 Lakshmi Hyundai, Hebbal Ph: 9900037900 Kalyan Nagar, Ph: 8884441111, Whitefield, Ph: 8884497700, Devanahalli, Ph: 8884499037 Pavan Hyundai, Kanakpura Road, Ph: 7483033704, Electronic City, Ph: 7337882335 **Ramanagara:** Advaith Hyundai, Ph: 9900095504, Pavan Hyundai, Kanakpura, Ph: 7892718572 **Kolar:** Advaith Hyundai, Ph: 9620229885 **Mangalore:** Kanchana Hyundai, Ph: 9900144113, Advaith Hyundai, Ph: 77609628814 **Dakshina Kannada:** Kanchana Hyundai, Puttur, Ph: 9740873450, Surathkal, Ph: 9482574530. Advaith Hyundai Belthangady, Ph: 7760962819, Sullia, Ph: 8861003072 **Udupi:** Kanchana Hyundai, Ph: 9611133151 / 9686697448, Kundapur, Ph: 9900145948, Karkala, Ph: 8762464853 **Uttara Kannada:** Kanchana Hyundai, Karwar, Ph: 6364860518, Sirsi, Ph: 9731856300, Kumta, Ph: 9535855966 **Mysore:** Advaith Hyundai, Belavadi, Ph: 9538970802 JLB Road, Ph: 9538971141, Star Hyundai, Mysore Ph: 9538018888 Hunsur, Ph: 9538879235 **Mandya:** Advaith Hyundai, Ph: 9740060075 **Coorg:** Advaith Hyundai, Madikeri, Ph: 9538971151 Gonikoppal, Ph: 9538971188 Kushalnagar, Advaith Hyundai, Ph: 9538971149 **Hassan:** Advaith Hyundai, Ph: 9620004782, Star Hyundai, Sakleshpura, Ph: 9538879238, Channarayapatna, Ph: 9538879238 **Shimoga:** Rahul Hyundai, Ph: 6364465441 Sagar, Ph: 7625080180, Thirthahalli, Ph: 9108843230, Shikaripura, Ph: 7795800034 **Chikmagalur:** Rahul Hyundai, Ph: 7795800038 **Hubli:** Bellad Hyundai, Ph: 9900035084, Raam Hyundai, Ph: 8495072555 **Belgaum:** Nagshanti Hyundai, Ph: 9844890456, 9844890459 Chikodi, Ph: 8088511713 Gokak, Ph: 8147978240 Athani, Ph: 8722552253 Saundatti, Ph: 8147978240 **Bijapur:** Narayan Hyundai, Ph: 9742272157, 9742272153 Bagalkot, Ph: 9742253245, Jamkhandi, Ph: 9742272271 **Davanagere:** KJ Hyundai, Ph: 7022001201 Channagiri, Ph: 7022425985 **Chitradurga:** KJ Hyundai, Ph: 9980759983 **Gulbarga:** Shah Hyundai, Ph: 9108049250 **Hospete:** Anika Hyundai, Ph: 8884484018 **Bidar:** Shah Hyundai, Ph: 7625093556 **Raichur:** Shah Hyundai, Ph: 9108049252, Sindhanur, Ph: 9071411136 **Tumkur:** Pavan Hyundai, Ph: 7337882383, Advaith Hyundai, Tiptur, Ph: 9686668513, **Bellari:** Anika Hyundai, Ph: 8792910448 **Yadgir:** Shah Hyundai, Ph: 9108049262 **Koppal:** Anika Hyundai, Ph: 8884484015, **Chamarajanagar:** Star Hyundai, Kollegal, Ph : 9538879248, **Gadag:** Bellad Hyundai, Ph : 9844504724, **Haveri:** Bellad Hyundai, Ph : 9731596540

*Terms & Conditions apply. ^^3 year warranty or upto 1 00 000 km whichever is earlier for Grand i10 NIOS, AURA, i20 & i20 N Line. **3 year unlimited km warranty is applicable for EXTER, VENUE, VENUE N Line, CRETA, ALCAZAR, TUCSON, VERNA, KONA Electric and IONIQ 5. ^Upto 7 years extended warranty is applicable on all cars (petrol variants only). HMIL reserves the right to withdraw/modify the scheme without prior notice. #Shield of trust and shield of trust super packages available for all Model except KONA Electric and IONIQ 5. For IONIQ 5, iCare packages available on Hyundai Website. Visit your nearest Hyundai dealership for more details. Hyundai urges you to follow traffic rules - they are meant to keep you safe on roads. INNOCEAN-071/23 KAN

ಬೋರ್ನಿಲ್ ಆಕಾಶ್ ಚಂಗ್ಮಾಯಿ

ಜೂನಿಯರ್ ಬ್ಯಾಡ್ಮಿಂಟನ್: ತನ್ವಿಗೆ ಬೆಳ್ಳಿ

ಬೋರ್ನಿಲ್ ಆಕಾಶ್ ಮುಡಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಬೋರ್ನಿಲ್ ಆಕಾಶ್ ಚಂಗ್ಮಾಯಿ ಅವರು ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ 15 ವರ್ಷದೊಳಗಿನವರ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಎರಡನೇ ಆಟಗಾರ ಎಂಬ ಗೌರವಕ್ಕೆ ಪಾತ್ರರಾದರು.

ಆದರೆ ತನ್ವಿ ಶರ್ಮಾ ಅವರು ಚೀನಾದ ಚೆಂಗ್ಡುವಿನಲ್ಲಿ ಭಾನುವಾರ ಕೊನೆಗೊಂಡ ಟೂರ್ನಿಯ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಎಡವಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. 21–17, 11–21, 21–19 ರಿಂದ ಗೆದ್ದ ಥಾಯ್ಲೆಂಡ್‌ನ ಯಾತವೀಮಿನ್ ಕೆತ್ಕಿಲಿಯೆಂಗ್ ಅವರು ಚಾಂಪಿಯನ್ ಆದರು.

ತನ್ವಿ ಶರ್ಮಾ

ತನ್ವಿ ಅವರು ಈ ಟೂರ್ನಿಯ ಪ್ರಶಸ್ತಿ ಸುತ್ತು ತಲುಪಿದ ಭಾರತದ ಎರಡನೇ ಆಟಗಾರ್ತಿ ಎನಿಸಿಕೊಂಡಿದ್ದರು. ಕಳೆದ ವರ್ಷ ಉನ್ನತಿ ಹೂಡಾ ಫೈನಲ್ ಪ್ರವೇಶಿಸಿದ್ದರಲ್ಲದೆ, ಬೆಳ್ಳಿ ಜಯಿಸಿದ್ದರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಆಕಾಶ್ 21-19, 21-13 ರಿಂದ ಚೀನಾದ ಫಾನ್ ಹಾಂಗ್ ಕ್ಸುವಾನ್ ಅವರ ಸವಾಲನ್ನು ಬದಿಗೊತ್ತಿದರು. ಅಸ್ಸಾಂನ 13 ವರ್ಷದ ಆಕಾಶ್ ಕೇವಲ 34 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು. ಸಿರಿಲ್ ವರ್ಮಾ ಅವರು 2013 ರಲ್ಲಿ ಇದೇ ವಯೋವರ್ಗದಲ್ಲಿ ಚಿನ್ನ ಗೆದ್ದಿದ್ದರು. ಆಕಾಶ್, ಈ ಸಾಧನೆ ಮಾಡಿದ ಎರಡನೇ ಆಟಗಾರ ಎನಿಸಿಕೊಂಡರು.

ಟೂರ್ನಿಯುದ್ದಕ್ಕೂ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದ ಅವರು ಸೆಮಿಫೈನಲ್‌ನಲ್ಲಿ ಭಾರತದವರೇ ಆದ ಜಗಶೇರ್ ಸಿಂಗ್ ಖನ್ನುರಾ ಅವರನ್ನು ಪರಾಭವಗೊಳಿಸಿದ್ದರು.

ಆಕಾಶ್ ಅವರ ಸಾಧನೆಯು ಜೂನಿಯರ್ ವಿಭಾಗದಲ್ಲಿ ಭಾರತದ ಶಟ್ಲರ್‌ಗಳ ಗಮನಾರ್ಹ ಸಾಧನೆಗೆ ಮತ್ತೊಂದು ಸೇರ್ಪಡೆ ಎನಿಸಿದೆ. ಆಯುಷ್ ಶೆಟ್ಟಿ ಅವರು ಈ ತಿಂಗಳ ಆರಂಭದಲ್ಲಿ ಅಮೆರಿಕದಲ್ಲಿ ನಡೆದಿದ್ದ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದರು.

ನೆಟ್‌ಬಾಲ್: ರಾಜ್ಯ ತಂಡಗಳ ಶುಭಾರಂಭ

ಬೆಂಗಳೂರು: ಕರ್ನಾಟಕ ಪುರುಷರ ಮತ್ತು ಮಹಿಳೆಯರ ನೆಟ್‌ಬಾಲ್ ತಂಡಗಳು ಗೋವಾದಲ್ಲಿ ಭಾನುವಾರ ಆರಂಭವಾದ 37ನೇ ರಾಷ್ಟ್ರೀಯ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಶುಭಾರಂಭ ಮಾಡಿವೆ.

ಕರ್ನಾಟಕದ ಪುರುಷರ ತಂಡವು 61–44 ರಿಂದ ತೆಲಂಗಾಣ ತಂಡವನ್ನು ಮಣಿಸಿದರೆ, ಮಹಿಳೆಯರ ತಂಡವು 70–35ರಿಂದ ದೆಹಲಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಮಹಿಳಾ ನೆಟ್‌ಬಾಲ್ ಪಂದ್ಯದಲ್ಲಿ ಕರ್ನಾಟಕ (ನೀಲಿ) ಮತ್ತು ದೆಹಲಿ ತಂಡಗಳ ಆಟಗಾರರ ಪೈಪೋಟಿ

ಭಾರತದ ಬಾಕ್ಸರ್ ಪದಕ ಕಳೆದುಕೊಳ್ಳುವ ಸಾಧ್ಯತೆ

ನವದೆಹಲಿ (ಪಿಟಿಐ): ‘ಚಲನವಲನ ಮಾಹಿತಿ’ ನೀಡಲು ವಿಫಲವಾದದ್ದಕ್ಕೆ ಭಾರತದ ಮಹಿಳಾ ಬಾಕ್ಸರ್‌ವೊಬ್ಬರು ತಮ್ಮ ಏಷ್ಯನ್ ಗೇಮ್ಸ್ ಪದಕ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ಕೋಟಾವನ್ನು ಕಳೆದುಕೊಳ್ಳುವ ಆತಂಕ ಎದುರಿಸಿದ್ದಾರೆ.

ಚಲನವಲನ ಮಾಹಿತಿ ನೀಡದೇ ಇರುವ ಮಹಿಳಾ ಬಾಕ್ಸರ್‌ಗೆ ಅಂತರರಾಷ್ಟ್ರೀಯ ಟೆಸ್ಟಿಂಗ್ ಏಜೆನ್ಸಿಯು (ಐಟಿಎ) ನೋಟಿಸ್ ಜಾರಿಗೊಳಿಸಿದೆ. ಏಷ್ಯನ್ ಗೇಮ್ಸ್‌ಗೂ ಮುನ್ನ ಅವರು ಮಾಹಿತಿ ನೀಡಲು ವಿಫಲರಾಗಿದ್ದರು.

ತಪ್ಪಿತಸ್ಥೆ ಎಂದು ಸಾಬೀತಾದರೆ ಗರಿಷ್ಠ ಎರಡು ವರ್ಷಗಳ ನಿಷೇಧ ಶಿಕ್ಷೆಗೆ ಗುರಿಯಾಗುವ ಸಾಧ್ಯತೆಯಿದೆ.

‘ಏಷ್ಯನ್ ಗೇಮ್ಸ್‌ಗೂ ಮುಂಚಿನ ಅವಧಿಗೆ ಸಂಬಂಧಿಸಿದ ನೋಟಿಸ್ ಅದಾಗಿದೆ. ಆ ಅವಧಿಯಲ್ಲಿ ಬಾಕ್ಸರ್‌ನ ಹತ್ತಿರದವರ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು. ಅವರು ಗೊಂದಲದ ಮನಸ್ಥಿತಿ ಎದುರಿಸಿದ್ದರಿಂದ ಚಲನವಲನ ಮಾಹಿತಿ ನೀಡಿರಲಿಲ್ಲ’ ಎಂದು ಬಿಎಫ್‌ಐ ಅಧಿಕಾರಿಯೊಬ್ಬರು ತಿಳಿಸಿದರು.

ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಬಾಕ್ಸರ್‌ಗಳು ಐದು ಪದಕ ಜಯಿಸಿದ್ದರು. ನಾಲ್ವರು ಮಹಿಳಾ ಬಾಕ್ಸರ್‌ಗಳು ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದರು. ಈ ಬಾರಿಯ ಕೂಟದಲ್ಲಿ ಭಾರತ ದಾಖಲೆಯ 107 ಪದಕಗಳನ್ನು ಗೆದ್ದುಕೊಂಡಿತ್ತು.



ಸೋಮವಾರ, ಅಕ್ಟೋಬರ್ 23, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶಾಲಾ ತರಗತಿಗಳಲ್ಲಿ ಬಹುಭಾಷಾ ಕಲಿಕೆಯಿಂದ ಮಕ್ಕಳ ಭಾಷಾ ಕೌಶಲ ಪರಿಣತಿ ಸಾಧಿಸಬಹುದಾಗಿದೆ. ಹೇಗೆ ಎಂಬ ವಿವರ..

ಪ್ರಜಾವಾಣಿ ಸೋಮವಾರ, 23 ಅಕ್ಟೋಬರ್ 2023

ಶಿಕ್ಷಣ

ವರ್ಗಕೋಣೆಗಳಲ್ಲಿ ಬಹುಭಾಷಾ ಬೋಧನೆ

ವಿಠ್ಠಲ ದಳವಾಯಿ

ಮನೆಮಾತು ಹಾಗೂ ಶಾಲಾ ಭಾಷೆಯ ನಡುವಿನ ಅಂತರದಿಂದಾಗಿ, ಪ್ರಾಥಮಿಕ ತರಗತಿಗಳಲ್ಲಿ ಕಲಿಯುವ ಶೇ25ರಷ್ಟು ಮಕ್ಕಳು ಕಲಿಕೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದು ಅಂದಾಜಿಸಲಾಗಿದೆ. ಅಪರಿಚಿತ ಭಾಷೆಗಳನ್ನು ಕಲಿಯುವುದು ಅವರಿಗೆ ಸವಾಲಾಗಿದೆ. ಅಲ್ಲದೇ ಒಂದು ರಾಜ್ಯದಲ್ಲಿ ವಾಸಿಸುವ ಮಕ್ಕಳ ಮಾತೃಭಾಷೆಯು ರಾಜ್ಯಭಾಷೆಗಿಂತ ಭಿನ್ನವಾಗಿರುತ್ತದೆ ಅಥವಾ ಅಂತರರಾಜ್ಯ ಗಡಿಗಳಲ್ಲಿ ಜೀವಿಸುವ ಮಕ್ಕಳು ತಮ್ಮ ಮಾತೃಭಾಷೆಗೆ ಹೊರತಾದ ಇನ್ನೊಂದು ಭಾಷೆಯಲ್ಲಿ ಕಲಿಯುತ್ತಿರುತ್ತಾರೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಓದುವ ಹೆಚ್ಚಿನ ಮಕ್ಕಳಿಗೆ ಶಾಲಾ ಪರಿಸರದಿಂದ ಹೊರಗೆ ಇಂಗ್ಲಿಷ್ ವಾತಾವರಣವೇ ಸಿಗುವುದಿಲ್ಲವೆಂಬುದು ವಾಸ್ತವ ಸಂಗತಿಯಾಗಿದೆ.

ಪರಿಣಾಮವಾಗಿ, ಒಂದು ತಿಳಿಯಲಾರದ ಅಥವಾ ಮಾತನಾಡಲಾರದ ಭಾಷೆಯಲ್ಲಿ ಅಂತಹ ಮಕ್ಕಳ ಪ್ರಾಥಮಿಕ ಶಿಕ್ಷಣವು ಮುಗಿದು ಹೋಗುತ್ತದೆ. ಇದರಿಂದಾಗಿ ಮಕ್ಕಳು, ಶಾಲೆಯ ಬೋಧನಾ ಹಾಗೂ ಕಲಿಕಾ ಪ್ರಕ್ರಿಯೆಗಳಲ್ಲಿ ಅರ್ಥಪೂರ್ಣವಾಗಿ ತೊಡಗಿಕೊಳ್ಳಲು ಅಡ್ಡಿಯಾಗುತ್ತದೆ. ಮತ್ತು ಅವರ ಆತ್ಮಗೌರವವು ಮುಕ್ಕಾಗಿ ಅಸಹಾಯಕತೆಯ ಭಾವದಿಂದ ಬಳಲುತ್ತಾರೆ. ಅವರ ಆತ್ಮವಿಶ್ವಾಸವು ಕುಸಿದು ಶೈಕ್ಷಣಿಕ ಸಾಧನೆಯ ಮೇಲೆ ನಕಾರಾತ್ಮಕ ಪರಿಣಾಮವುಂಟಾಗುತ್ತದೆ. ಆದ್ದರಿಂದ ಶಿಕ್ಷಕರು ಮಕ್ಕಳ ಮನೆಮಾತು ಮತ್ತು ಶಾಲೆಯ ಭಾಷೆಗಳ ನಡುವಿನ ಭಿನ್ನತೆಯ ಬಗ್ಗೆ ಸದಾ ಜಾಗೃತರಾಗಿರಬೇಕು. ಎಲ್ಲ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಅವರ ಮನೆಮಾತನ್ನೇ ಸೇತುವೆಯಾಗಿ ಬಳಸಿ ಕಲಿಕಾ ಬೋಧನಾ ತಂತ್ರಗಳನ್ನು ರೂಪಿಸಬೇಕು. ಅದಕ್ಕಾಗಿ ಬಹುಭಾಷಾ ಬೋಧನಾ ವಿಧಾನವು, ಮಕ್ಕಳ ಮಾತೃಭಾಷೆಯ ನೆರವಿನಿಂದ ಇಂಗ್ಲಿಷ್ ಕಲಿಕೆಯನ್ನು ಸಾಧಿಸಲು ಉತ್ತೇಜನ ನೀಡುತ್ತದೆ.

ಮಕ್ಕಳಿಗೆ ಪ್ರಾದೇಶಿಕ ಭಾಷೆಗಳೊಂದಿಗೆ ಅವರ ತಾಯ್ನುಡಿಯನ್ನೂ ಸೇರಿಸಿ, ಕಲಿಸುವಾಗ ಕಲಿಕೆ ಪರಿಣಾಮಕಾರಿಯಾಗುತ್ತದೆ. ಅವರ ಭಾಷಾ ಕೌಶಲ ಬೆಳೆಸಲು, ಗ್ರಹಿಕಾ ಸಾಮರ್ಥ್ಯ ಹೆಚ್ಚಿಸಲು ಈ ಬಹುಭಾಷಾ ಕಲಿಕೆಯ ಸಾಮರ್ಥ್ಯಗಳ ಕುರಿತು..

ಬಹುಭಾಷೆಯಿಂದ ಭಾವಕೋಶದ ಬೆಳವಣಿಗೆ

ವಾಸ್ತವವಾಗಿ, ಬಹುಭಾಷಿಕತೆಯು ಭಾಷಿಕ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಭಿನ್ನತೆಗಳು ಒಂದಕ್ಕೊಂದು ಪರಸ್ಪರ ಹೆಣೆದುಕೊಂಡಿವೆ. ವಿಚಾರಗಳು, ಪಾಠಗಳು ಮತ್ತು ಪಠ್ಯಗಳನ್ನು ಸುಲಭವಾಗಿ ಹಾಗೂ ಪರಿಣಾಮಕಾರಿಯಾಗಿ ಕಲಿಸಲು ಸಾಧ್ಯವಾಗುತ್ತದೆ. ಜಾಗತಿಕವಾಗಿ ಇಂಗ್ಲೀಷು ಪ್ರಬಲ ಕೊಂಡಿ ಭಾಷೆಯಾಗಿದ್ದು ಇದನ್ನು ಕಲಿಯಲು ಬಹುಭಾಷಿಕ ವಿಧಾನವು ಪೂರಕವಾಗಿದೆ. ಇದು ಜನರು ಮತ್ತು ಜಗತ್ತನ್ನು ಅರಿಯಲು ಸಹಾಯ ಮಾಡುವುದಲ್ಲದೇ ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡುತ್ತದೆ. ಮತ್ತು ಇದರಿಂದಾಗಿ ಸಂವಹನ ಕೊರತೆಯು ಕಡಿಮೆಯಾಗಿ, ಬಹತ್ವವನ್ನು ಗುರುತಿಸಿ, ಭಾವನಾತ್ಮಕ ಸುರಕ್ಷೆಯನ್ನು ಉತ್ತೇಜಿಸುತ್ತದೆ.

ಬಹುಭಾಷಿಕ ತರಗತಿಗಳು ಹೆಚ್ಚು ಕ್ರಿಯಾಶೀಲ, ರಚನಾತ್ಮಕ ಮತ್ತು ಸಂತಸದಾಯಕ ಕಲಿಕೆಯನ್ನು ಉಂಟು ಮಾಡುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಸರ್ವಾಂಗೀಣ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಯೆಂದು ಸಂಶೋಧನೆಗಳು ಸಾಬೀತು ಪಡಿಸಿವೆ.

'ಮಕ್ಕಳು ವಿವಿಧ ಭಾಷಿಕ ಹಿನ್ನೆಲೆಯಿಂದ ಬಂದಿರುವುದರಿಂದ ಶಿಕ್ಷಕರು ತರಗತಿಗಳಲ್ಲಿ ತಮ್ಮ ಭಾಷೆಗಳನ್ನು ಮಾತನಾಡಲು ಅವಕಾಶ ಮಾಡಿಕೊಡಬೇಕು. ಶಿಕ್ಷಕ ಆ ಭಾಷೆಯನ್ನು ತಿಳಿದಿರಲೇಬೇಕೆಂದಿಲ್ಲ. ಮಕ್ಕಳಿಗೆ ಹಾಗೆ ಅವಕಾಶ ನೀಡುವುದರಿಂದ ಅವರು ತಮ್ಮ ಜೀವನಾನುಭವಗಳನ್ನು ವರ್ಗಕೋಣೆಗೆ ತರಲು ಸಾಧ್ಯವಾಗುತ್ತದೆ. ಇದು ಎಲ್ಲರನ್ನು ಒಳಗೊಳ್ಳುವ ಜನತಾಂತ್ರಿಕ ಉಪಕ್ರಮವಾಗಿದ್ದು ಮಕ್ಕಳಲ್ಲಿ ಇತರರ ಭಾಷೆ, ಸಂಸ್ಕೃತಿ, ಧರ್ಮ ಮತ್ತು ಹಿನ್ನೆಲೆಗಳನ್ನು ಗೌರವಿಸುವ ಮನೋಧರ್ಮವನ್ನು ಬೆಳೆಸಲು ನೆರವಾಗುತ್ತದೆ' ಎಂದು ಬೆಂಗಳೂರಿನ ರೀಜಿನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸೌತ್ ಇಂಡಿಯಾ (ಆರ್‌ಐಇಎಸ್‌ಇ)ದ ಪ್ರಾಧ್ಯಾಪಕರೂ ಹಾಗೂ ಶೈಕ್ಷಣಿಕ ವಿಭಾಗದ ಮುಖ್ಯಸ್ಥರಾದ ಡಾ.ರವಿನಾರಾಯಣ ಚಕ್ರಕೋಡಿ ಅಭಿಪ್ರಾಯ ಪಡುತ್ತಾರೆ.

ಈ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷಾ ಬೋಧನೆಯನ್ನು ಸುಗಮಗೊಳಿಸಲು ಶಿಕ್ಷಕರಿಗೆ ವಿವಿಧ ತರಬೇತಿಗಳನ್ನು ನೀಡುವ ರೀಜಿನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸೌತ್ ಇಂಡಿಯಾ (ಆರ್‌ಐಇಎಸ್‌ಇ) ಸಂಸ್ಥೆಯು ಈಗ ರಾಜ್ಯದ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳ 1-5 ನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಶಿಕ್ಷಕರಿಗೆ ಬಹುಭಾಷಾ ಬೋಧನಾ ವಿಧಾನ(ಮಲ್ಟಿಲಿಂಗ್ವಲ್ ಪೆಡಗಾಜಿ)ದ ಕುರಿತು ತರಬೇತಿಗಳನ್ನು ಆಯೋಜಿಸುತ್ತಿದೆ. ಇಂಗ್ಲಿಷ್ ಅನ್ನೂ ತಮ್ಮ ಮನೆಮಾತಿನ ಮೂಲಕ ಆತ್ಮವಿಶ್ವಾಸದಿಂದ ಸಂತಸದಾಯಕವಾಗಿ ಕಲಿಯುವಂತೆ ಮಾಡಲು ಶಿಕ್ಷಕರಿಗೆ ಪ್ರೇರಣೆ ನೀಡುತ್ತಿದೆ.

ಬಹುಭಾಷೆಯ ಕುರಿತು ಕೆಲವು ತಪ್ಪು ಕಲ್ಪನೆಗಳು

- ಇಂಗ್ಲಿಷ್ ಭಾಷೆಯನ್ನು ಇಂಗ್ಲಿಷ್‌ನಲ್ಲಿಯೇ ಕಲಿಸಬೇಕು.
- ಬೇರೆ ಭಾಷೆಗಳ ಮೂಲಕ ಇಂಗ್ಲಿಷ್ ಕಲಿಸುವುದು ಪರಿಣಾಮಕಾರಿಯಾಗಿರುವುದಿಲ್ಲ.
- ಒಂದು ಭಾಷೆಯಲ್ಲಿ ಮತ್ತೊಂದು ಭಾಷೆಯ ಬಳಕೆ (ಕೋಡ್ ಸ್ವಿಚ್ಚಿಂಗ್)ಯು ಭಾಷಾ ಗ್ರಹಿಕೆಯ ಮೇಲೆ ಕಾರಾತ್ಮಕ ಪರಿಣಾಮವನ್ನು ಉಂಟು ಮಾಡುತ್ತದೆ.
- ಭಾಷಾ ಬೆಳವಣಿಗೆಯನ್ನು ತಡ ಮಾಡುತ್ತದೆ.
- ಮಕ್ಕಳು ಕಡಿಮೆ ಇಂಗ್ಲಿಷ್ ಶಬ್ದಗಳನ್ನು ತಿಳಿದಿರುತ್ತಾರೆ.
- ಮಾತನಾಡುವುದು ಮಕ್ಕಳಿಗೆ ಕಠಿಣವಾಗುತ್ತದೆ.
- ಮಕ್ಕಳನ್ನು ಗೊಂದಲಕ್ಕೆ ತಳ್ಳುತ್ತದೆ.
- ಅಪರಿಣಾಮಕಾರಿ ಮತ್ತು ಅವಾಸ್ತವಿಕ
- ಇಂಗ್ಲೀಷಿನಲ್ಲಿ ಕಲಿಯಬಹುದಾದ ಒಂದು ನಿರ್ದಿಷ್ಟ ಪಠ್ಯವಸ್ತು ಬಹುಭಾಷಿಕ ತರಗತಿಯಲ್ಲಿ ಸವಾಲಾಗುತ್ತದೆ.

ಬಹುಭಾಷಾ ಬೋಧನೆಯ ಸವಾಲುಗಳು

- ಬಹುಭಾಷಾ ಶಿಕ್ಷಕರ ಕೊರತೆ.
- ಶಿಕ್ಷಕರಿಗೆ ಬಹುಭಾಷಾ ಬೋಧನಾ ವಿಧಾನದ ಬಗ್ಗೆ ವೃತ್ತಿ¥ರ ತರಬೇತಿಯ ಕೊರತೆ.
- ಪರಸ್ಪರ ಭಾಷಿಕ ವರ್ಗಾವಣೆಯ ಕಲಿಕೆಯ ಅಗತ್ಯ
- ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರ ನಡುವಿನ ಸಕಾರಾತ್ಮಕ ಸಂಬಂಧವು ಬಹುಭಾಷಾ ಬೋಧನೆಯ ಉತ್ತೇಜನಕ್ಕೆ ಅವಶ್ಯ.
- ಹೆಚ್ಚಿನ ಚರ್ಚೆ ಮತ್ತು ಸಂಶೋಧನೆಯ ಅವಶ್ಯಕತೆ.

ನೀಟ್‌ಗೆ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

- **1. ನಾನು ಅಂತಿಮ ವರ್ಷದ ಬಿ.ಎಸ್ಸಿ ಮಾಡುತ್ತಿದ್ದು, ಮುಂದೆ ನೀಟ್ ಪರೀಕ್ಷೆಗೆ ತಯಾರಾಗಲೋ ಅಥವಾ ಕೆಲಸಕ್ಕೆ ಸೇರುವುದೋ ತಿಳಿಯದು. ನಮ್ಮದು ಬಡತನದ ಕುಟುಂಬ. ದಯವಿಟ್ಟು ಮಾರ್ಗದರ್ಶನ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಈಗಿನ ಪರಿಸ್ಥಿತಿಯಿಂದ ಎದೆಗುಂದದೆ, ನಿಮ್ಮ ದೀರ್ಘಾವಧಿ ಕನಸುಗಳನ್ನು ಸಾಕಾರಗೊಳಿಸುವ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ. ಆರ್ಥಿಕ ಸಮಸ್ಯೆಯ ಕಾರಣದಿಂದ ನಿಮ್ಮ ಭವಿಷ್ಯದ ಕನಸುಗಳನ್ನು ಕಾಣದೆ ಮುಂದಿನ ಜೀವನದ ಬಗ್ಗೆ ರಾಜಿಯಾಗದಿರಿ; ಏಕೆಂದರೆ, ಆರ್ಥಿಕ ಸಮಸ್ಯೆಗಳು ತಾತ್ಕಾಲಿಕ. ಬಿ.ಎಸ್ಸಿ ನಂತರ ಸೂಕ್ತವಾದ ಕೆಲಸಕ್ಕೆ ಸೇರಿ, ನಿಮ್ಮ ವೃತ್ತಿಯೋಜನೆಗೆ ಅನುಗುಣವಾಗಿ ಮುಂದೆ ಯಾವ ಕೋರ್ಸ್ ಮಾಡಬೇಕೆಂದು ತೀರ್ಮಾನಿಸಿ, ಸಂಜೆ ಕಾಲೇಜು/ದೂರ ಶಿಕ್ಷಣದ ಮೂಲಕ ಅಧ್ಯಯನವನ್ನು ಮುಂದುವರೆಸಿ. ವೃತ್ತಿಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = oyUMPrEKPPU

- **2.ನಾನು ಕಳೆದ ನಾಲ್ಕು ವರ್ಷಗಳಿಂದ ಪೊಲೀಸ್ ಕೆಲಸಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಜವಾಬ್ದಾರಿಯಿರುವುದರಿಂದ, ಕೆಲಸದಿಂದ ಬಂದ ನಂತರವೇ ಓದಲು ಸಾಧ್ಯ. ಕೋಚಿಂಗ್ ಪಡೆಯಲು ಸಾಧ್ಯವಿಲ್ಲ. ಯಾವುದನ್ನು ಹೇಗೆ, ಯಾವ ರೀತಿ ಓದುವುದು ತಿಳಿಯುತ್ತಿಲ್ಲ. ಪರಿಹಾರ ತಿಳಿಸಿ.**

ದರ್ಶನ್, ಚಿಕ್ಕಮಗಳೂರು.

ಈ ಸಲಹೆಗಳನ್ನು ಗಮನಿಸಿ:

- ಸರ್ಕಾರಿ ವಲಯದಲ್ಲಿ ವೃತ್ತಿಯನ್ನು ಪಡೆಯಲು ಆಯೋಜಿಸುವ ಪರೀಕ್ಷೆಗಳು ಅತ್ಯಂತ ಸ್ಪರ್ಧಾತ್ಮಕವಾಗಿರುತ್ತದೆ. ಈವರೆಗಿನ ನಿಮ್ಮ ಅನುಭವವನ್ನು ಪರಿಗಣಿಸಿ, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿ.
- ಸ್ಪರ್ಧಾತ್ಮಕ ಪರೀಕ್ಷೆಯಲ್ಲಿರುವ ವಿಷಯಗಳ ಪಠ್ಯಕ್ರಮವನ್ನು ತಿಳಿದುಕೊಂಡು, ಅಗತ್ಯವಾದ ಪುಸ್ತಕಗಳು ಮತ್ತು ಇನ್ನಿತರ ಅಧ್ಯಯನದ ಮಾಹಿತಿಯನ್ನು ಸಂಗ್ರಹಿಸಿ.
- ಕಳೆದ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ, ಅಣಕು- ಪರೀಕ್ಷೆ ಆಧಾರಿತ ತಯಾರಿಯನ್ನು ಮಾಡುತ್ತಿರಬೇಕು.
- ಪರೀಕ್ಷೆಯಲ್ಲಿ ಯಶಸ್ವಿಯಾಗಲು ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಮತ್ತು ಆಳವಾದ ಓದುವಿಕೆ, ಪುನರಾವರ್ತನೆ ಮತ್ತು ಉತ್ಕೃಷ್ಟವಾದ ಬರವಣಿಗೆ ಇರಬೇಕು. ನಿಮ್ಮ ಬರವಣಿಗೆ ಕಾಗುಣಿತ, ವ್ಯಾಕರಣ ದೋಷ ಮುಕ್ತವಾಗಿರಲಿ; ಓದಲು ಸುಲಭವಾಗಿರಲಿ.
- ಜೊತೆಗೆ, ಸಮಯದ ನಿರ್ವಹಣೆ, ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ. ಪರಿಣಾಮಕಾರಿ ಅಧ್ಯಯನಕ್ಕೆ ಸಹಾಯವಾಗಬಹುದಾದ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = 3PzmKRaJHmk

- **3. ನಾನು ಮೊದಲು ಚೆನ್ನಾಗಿ ಓದುತ್ತಿದ್ದು, ಮೊಬೈಲ್ ತೆಗೆದುಕೊಂಡ ನಂತರ ಓದಲು ಆಗುತ್ತಿಲ್ಲ. ದಯವಿಟ್ಟು ನಿಮ್ಮ ಸಲಹೆ ನೀಡಿ.**

ಹೆಸರು, ಊರು ತಿಳಿಸಿಲ್ಲ.

ನೀವು ಯಾವ ತರಗತಿಯಲ್ಲಿ ಓದುತ್ತಿದ್ದೀರಿ ಎಂದು ತಿಳಿಸಿಲ್ಲ. ಅತಿಯಾದ ಮೊಬೈಲ್ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ನಿಮಗೆ ಈಗಾಗಲೇ ಅರಿವಾಗಿರುವುದು ಶ್ಲಾಘನೀಯ. ಮೊಬೈಲ್ ಬಳಕೆಯನ್ನು ಮಿತಿಗೊಳಿಸುವುದರ ಜೊತೆಗೆ, ಮೊಬೈಲ್ ತಂತ್ರಜ್ಞಾನದ ಸದುಪಯೋಗದಿಂದ ಕಲಿಕೆಯನ್ನು ಪರಿಣಾಮಕಾರಿಯಾಗಿಸಬಹುದೆಂದು ಗಮನಿಸಿ. ಉದಾಹರಣೆಗೆ, ಕಷ್ಟಕರವಾದ ವಿಷಯಗಳನ್ನು, ಪರಿಕಲ್ಪನೆಗಳನ್ನು ಗೂಗಲ್, ಯೂಟ್ಯೂಬ್ ಮುಂತಾದ ಸಾಧನಗಳಿಂದ ಅರ್ಥ ಮಾಡಿಕೊಳ್ಳುವುದು ಸಾಧ್ಯ. ಹಾಗೂ, ಇ-ಲರ್ನಿಂಗ್, ಇ-ಕ್ಲಾಸ್‌ರೂಮ್, ವೆಬಿನಾರ್ ಮುಂತಾದ ಮಾಧ್ಯಮಗಳಿಂದ ಉಪಯುಕ್ತವಾದ ಮಾಹಿತಿಯ ವಿತರಣೆ ಮತ್ತು ತಜ್ಞರ/ಉಪನ್ಯಾಸಕರ ಮಾರ್ಗದರ್ಶನವನ್ನು ಮೊಬೈಲ್ ತಂತ್ರಜ್ಞಾನದ ಮೂಲಕ ಪಡೆಯಬಹುದು.

ನಿಮ್ಮ ಭವಿಷ್ಯದ ಕನಸುಗಳಂತೆ, ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ಯಶಸ್ವಿಯಾಗಲು ಸ್ಪಷ್ಟವಾದ, ಸಾಧಿಸಬಹುದಾದ ಗುರಿಗಳನ್ನು ನಿಗದಿಪಡಿಸಿ. ಈ ಗುರಿಗಳು ದೃಢವಾಗಿದ್ದರೆ, ಸ್ವಯಂಪ್ರೇರಣೆ ತಾನೇ ತಾನಾಗಿ ಮೂಡುತ್ತದೆ. ಪ್ರೇರಣೆಯೆಂದರೆ, ನಮ್ಮ ಗುರಿಗಳತ್ತ ನಮ್ಮನ್ನು ಕ್ರಿಯಾತ್ಮಕವಾಗಿಸುವ ಚಾಲನಾ ಶಕ್ತಿ. ಏಕೆಂದರೆ, ಅತ್ಯಂತ ಶಕ್ತಿಶಾಲಿಯಾದ ಆಂತರಿಕ ಪ್ರೇರಣೆಯೇ ನಮ್ಮ ಸ್ಫೂರ್ತಿಗೂ, ಚೈತನ್ಯಕ್ಕೂ, ಕಾರ್ಯತತ್ಪರತೆಗೂ ಮೂಲ. ಪ್ರೇರಣೆ, ಬದುಕಿನ ಕನಸುಗಳನ್ನು ಕಾಣುವುದರ ಜೊತೆಗೆ ನಮ್ಮಲ್ಲಿ ಅವುಗಳನ್ನು ಸಾಧಿಸುವ ಛಲ, ಆತ್ಮವಿಶ್ವಾಸವನ್ನು ಹುಟ್ಟುಹಾಕುತ್ತದೆ. ಆದ್ದರಿಂದ, ಮೊಬೈಲ್‌ನ ಸದುಪಯೋಗದ ಅಭ್ಯಾಸವನ್ನು ರೂಡಿಸಿಕೊಂಡು, ದೃಢಸಂಕಲ್ಪದಿಂದಲೂ ಏಕಾಗ್ರತೆಯಿಂದಲೂ, ನಿಮ್ಮ ಗುರಿಗಳನ್ನು ಸಾಧಿಸುವತ್ತ ಕಠಿಣವಾದ ಪರಿಶ್ರಮವಿರಲಿ.

- **4. ನಾನು 2023ರಲ್ಲಿ ಬಿಎ ಪದವಿ ಮುಗಿಸಿದ್ದು ಮುಂದೇನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಒಳ್ಳೆಯ ಕೋರ್ಸ್ ಬಗ್ಗೆ ತಿಳಿಸಿ.**

ಹೆಸರು, ಊರು ತಿಳಿಸಿಲ್ಲ.

ಕಲಾ ವಿಭಾಗ ವಿಸ್ತಾರವಾದ ಕ್ಷೇತ್ರ. ನಿಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನಿಸಿ, ಮುಂದೇನು ಮಾಡಬೇಕೆಂದು ನಿರ್ಧರಿಸಬಹುದು. ಬಿಎ ನಂತರ ಮಾಡಬಹುದಾದ ಕೋರ್ಸ್‌ಗಳೆಂದರೆ, ಬಿಎಲ್, ಬಿ.ಇಡಿ, ಎಂಎ, ಎಂಬಿಎ, ಎಂ. ಡಿಸೈನ್, ಪತ್ರಿಕೋದ್ಯಮ, ಹೋಟೆಲ್ ಮ್ಯಾನೇಜ್‌ಮೆಂಟ್ ಇತ್ಯಾದಿ. ಇದಲ್ಲದೆ ಬಿಎ ನಂತರ ಆಸಕ್ತಿಯಿದ್ದಲ್ಲಿ, ಬಿಸಿನೆಸ್ ಅನಾಲಿಟಿಕ್ಸ್, ಡೇಟಾ ಸೈನ್ಸ್, ಸಾಫ್ಟ್‌ವೇರ್ ಡೆವಲಪ್‌ಮೆಂಟ್, ಡಿಜಿಟಲ್ ಮಾರ್ಕೆಟಿಂಗ್, ಮಾನವ ಸಂಪನ್ಮೂಲ ಇತ್ಯಾದಿ

ಕ್ಷೇತ್ರಗಳಲ್ಲಿ ಅಲ್ಪಾವಧಿ/ಆನ್‌ಲೈನ್ ಕೋರ್ಸ್‌ಗಳನ್ನು ಮಾಡಿ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಹಾಗೂ, ಸರ್ಕಾರಿ ವಲಯದ ಯುಪಿಎಸ್‌ಸಿ, ಕೆಪಿಎಸ್‌ಸಿ, ಎಸ್‌ಎಸ್‌ಸಿ, ರೈಲ್ವೇಸ್, ಬ್ಯಾಂಕಿಂಗ್ ಮುಂತಾದ ಕ್ಷೇತ್ರಗಳಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ವೃತ್ತಿಯನ್ನು ರೂಪಿಸಿಕೊಳ್ಳಬಹುದು.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ 1.2

6) –150 ಇದು 11, 8, 5, 2 ..... ಸಮಾಂತರ ಶ್ರೇಢಿಯ ಪದವಾಗಿದೆಯೇ ಪರೀಕ್ಷಿಸಿ.

ಪರಿಹಾರ: ದತ್ತ ಸಮಾಂತರ ಶ್ರೇಢಿಯ ಪದ 11, 8, 5, 2 .....

$$\Rightarrow a_2 - a_1 = 8 - 11 = -3$$
$$\Rightarrow a_3 - a_2 = 5 - 8 = -3$$
$$\Rightarrow a_4 - a_3 = 2 - 5 = -3$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು $a = 11$ ಸಾಮಾನ್ಯ ವ್ಯತ್ಯಾಸ $d = 3$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

–150 ಈ ಸಮಾಂತರ ಶ್ರೇಢಿಯ ಪದವಾಗಿದ್ದಾಗ ಇದು n ನೇ ಪದವಾಗಿರುತ್ತದೆ

$$a_n = -150$$
$$a_n = a + (n-1)d = -150$$
$$11 + (n-1)(-3) = -150$$
$$-3(n-1) = -150 - 11$$
$$-3(n-1) = -161$$
$$-3(n-1) = -161$$
$$3(n-1) = 161$$
$$(n-1) = \frac{161}{3}$$
$$n = \frac{161}{3} + 1 \Rightarrow n = \frac{164}{3}$$

ಇಲ್ಲಿ n ಒಂದು ಧನ ಪೂರ್ಣಾಂಕವಲ್ಲ ಆದ್ದರಿಂದ ದತ್ತ –150 ಸಮಾಂತರ ಶ್ರೇಢಿಯ ಪದವಲ್ಲ.

7) ಒಂದು ಸಮಾಂತರ ಶ್ರೇಢಿಯ 11ನೇ ಪದ 38, 16ನೇ ಪದ 73 ಆದರೆ 31ನೇ ಪದವನ್ನು ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

11ನೇ ಪದ= 38

$$a + (11\text{-}1)d = 38 \quad (\because a_n = a + (n-1)d)$$
$$a + 10d = 38 \ldots\ldots\ldots\ldots (1)$$

16ನೇ ಪದ= 73

$$a + (16\text{-}1)d = 73 \ldots\ldots\ldots\ldots (2)$$

(1) ಮತ್ತು (2)ನ್ನು ಬಿಡಿಸುವುದರಿಂದ

$$a + 15d = 73$$
$$a + 10d = 38$$
$$(-) \quad (-) \quad (-)$$
$$5d = 35$$
$$\therefore d = 7$$

ಈಗ ಸಮೀಕರಣ 1ನ್ನು ತೆಗೆದುಕೊಂಡು ಅದರಲ್ಲಿ d =7 ಆದೇಶಿಸಿದಾಗ

$$a + 10d = 38 \Rightarrow a + 10(7) = 38 \Rightarrow a = -32$$

$\therefore a = -32$ $d = 7$ ಲಭ್ಯವಾಗುವುದು

ಆದ್ದರಿಂದ 31ನೇ ಪದ= $a + (31 - 1)d$

$$= a + 30d \Rightarrow = -32 + (30)(7)$$
$$= -32 + 210 = 178$$

ಹೀಗಾಗಿ 31ನೇ ಪದ 178 ಆಗಿದೆ

8) 50 ಪದಗಳನ್ನು ಹೊಂದಿರುವ ಸಮಾಂತರ ಶ್ರೇಢಿಯ 3ನೇ ಪದ 12 ಮತ್ತು ಕೊನೆಯ ಪದ 106 ಆದರೆ 29ನೇ ಪದ ಕಂಡುಹಿಡಿಯಿರಿ

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ = 12

$$a + (3\text{-}1)d = 12 \quad (\because a_n = a + (n-1)d)$$
$$a + 2d = 12 \ldots\ldots\ldots\ldots (1)$$

ಕೊನೆಯ ಪದ ಮತ್ತು 50ನೇ ಪದ = 106

$$a + (50\text{-}1)d = 106.$$
$$a + (49)d = 106 \ldots\ldots\ldots (2)$$

(1) ಮತ್ತು (2)ನ್ನು ಬಿಡಿಸುವುದರಿಂದ

$$a + 49d = 106$$
$$a + 2d = 12$$
$$(-) \quad (-) \quad (-)$$
$$47d = 94 \qquad \therefore d = 2$$

ಈಗ ಸಮೀಕರಣ 1ನ್ನು ತೆಗೆದುಕೊಂಡು ಅದರಲ್ಲಿ d =2 ಆದೇಶಿಸಿದಾಗ

$$a + 2d = 12 \Rightarrow a + 2(2) = 12 \Rightarrow a = 8$$

$\therefore a = 8$ $d = 2$ ಲಭ್ಯವಾಗುವುದು

ಆದ್ದರಿಂದ 29ನೇ ಪದ =

$$= 8 + (29\text{-}1)d \quad (\because a_n = a + (n-1)d)$$
$$= 8 + 28d \Rightarrow = 8 + (28)(2) \Rightarrow = 8 + 56 = 64$$

9) ಒಂದು ಸಮಾಂತರ ಶ್ರೇಢಿಯ 3ನೇ ಮತ್ತು 9ನೇ ಪದಗಳು ಕ್ರಮವಾಗಿ 4 ಮತ್ತು –8 ಆದರೆ ಅದರ ಎಷ್ಟನೇ ಪದ ಸೊನ್ನೆಯಾಗಿದೆ?

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ = 4

$$a + (3 - 1)d = 4 \quad (\because a_n = a + (n-1)d)$$
$$a + 2d = 4 \ldots\ldots\ldots\ldots (1)$$

9ನೇ ಪದ = - 8

$$a + (9\text{-}1)d = -8$$
$$a + 8d = -8 \ldots\ldots\ldots\ldots\ldots\ldots (2)$$

(1) ಮತ್ತು (2)ನ್ನು ಬಿಡಿಸುವುದರಿಂದ

$$a = 8 \qquad d = -2$$

ಸಮಾಂತರ ಶ್ರೇಢಿಯ nನೇ ಪದ ಶೂನ್ಯವಾದಾಗ

$$a + (n\text{-}1)d = 0 \quad (\because a_n = a + (n-1)d)$$
$$= 8 + (n\text{-}1)(-2) = 0$$
$$= -2(n\text{-}1) = -8$$
$$= 2(n\text{-}1) = 8 \Rightarrow n\text{-}1 = 8/2 = 4 \Rightarrow n = 4+1 = 5$$

5ನೇ ಪದ ವು ಶೂನ್ಯವಾಗಿದೆ

10) ಒಂದು ಸಮಾಂತರ ಶ್ರೇಢಿಯ 17ನೇ ಪದವು ಅದರ 10ನೇ ಪದಕ್ಕಿಂತ 7 ಹೆಚ್ಚಾಗಿದ್ದರೆ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, ಪ್ರಶ್ನೆಯಲ್ಲಿ ಕೊಟ್ಟಂತೆ

$$a_{17} = a_{10} + 7$$
$$a + (17\text{-}1)d = a + (10\text{-}1)d + 7 \; (\because a_n = a + (n-1)d)$$
$$a + 16d = a + 9d + 7$$
$$16d - 9d = 7 \Rightarrow 7d = 7 \Rightarrow d = 7/7 = 1$$

ಸಾಮಾನ್ಯ ವ್ಯತ್ಯಾಸ = 1

11) 3, 15, 27, 39 .... ಈ ಸಮಾಂತರ ಶ್ರೇಢಿಯ ಯಾವ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿದೆ?

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 15, 27, 39.........

ಇಲ್ಲಿ $a = 3$ $d = 15 - 3 = 12$

nನೇ ಪದವು 54ನೇ ಪದಕ್ಕಿಂತ 132 ಹೆಚ್ಚಾಗಿದೆ ಎಂದು ಭಾವಿಸಿದಾಗ

$$a_n = a_{54} + 132$$
$$a + (n\text{-}1)12 = a + (54\text{-}1)\,12 + 132$$
$$3 + (n\text{-}1)12 = 3 + (53), (12) + 132$$
$$3 + 12n - 12 = 3 + 636 + 132$$
$$12n - 9 = 771 \Rightarrow 12n = 771 + 9 \Rightarrow 12n = 780$$
$$n = 780/12 = 65$$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿದೆ

(ಮುಂದುವರಿಯುವುದು......)

II PUC CHEMISTRY

ELECTROCHEMISTRY

22. How can we prevent corrosion using the anti- rust solutions?

Ans:- The solutions of the alkaline phosphates and alkaline chromates are generally used as anti- rust solutions. Due to the alkaline nature of these solutions, the H^+ ions are removed from the solutions, and rusting is prevented. *Eg:-* Iron articles are dipped in the alkaline sodium phosphate solutions and a protective insoluble film of iron phosphate is formed.

23. What is Standard Electrode Potential?

Ans:- The Standard Electrode Potential is the potential developed between the metal and the solution containing its own ions, when the metal is in equilibrium with its ions of unit concentration at 25^0 C

24. What is Standard Hydrogen Electrode Potential?

Ans:- Standard Hydrogen Electrode Potential is the potential developed when hydrogen gas at one atmospheric pressure is passed through a solution containing hydrogen ions of unit activity.

25. Write a brief note on Sacrificial Protection method of preventing corrosion.

Ans:- Sacrificial Protection - In this method, the surface of the metal to be protected (Eg: iron) is coated with a more reactive metal i.e., metal which occupies a position lower in the electrochemical series than the metal to be protected. Being more reactive, it will take part in the redox reaction and will save the other metal. In other words, it will sacrifice itself for the sake of the metal to be protected. Eg:- iron is generally coated with zinc and this process is called galvanization. Zinc is more reactive than iron as it evident from the E° values.

$$Zn^{2+}(aq) + 2e^- \rightleftharpoons Zn(s); E^\circ = -0.76\,V$$
$$Fe^{2-}(aq) + 2e^- \rightleftharpoons Fe(s); E^\circ = -0.44\,V$$

In case iron has been galvanized, then zinc will be corroded instead of iron because it is more reactive than iron. It will change to the basic zinc carbonate $ZnCO_3.Zn(OH)_2$, a compound which is formed in the same way as hydrated ferric oxide. Sometimes scratches appear on the surface of iron galvanized with zinc. Even then, zinc will be corroded in preference to iron because there will be a competition between both these metals to take part in oxidation half reaction or in competitive oxidation



Protection of rusting of iron by zinc

reaction. Atoms of zinc will be oxidized in preference to the iron atoms Sometimes surface of iron is coated with tin metal and this process is known as tinning or tin plating. It may be noted that tin is not as effective as zinc since it lies above iron in the electrochemical series as it is evident from its E° value.

$$Sn^{2+}(aq) + 2e^- \rightleftharpoons Sn(s); E^\circ = -0.14\,V$$

Thus, tin will be effective in checking the rusting of iron as long as the surface of iron is not exposed to the atmosphere. However, If scratches are formed on the surface, then iron will participate in the redox reaction being more reactive than tin and rusting of iron will re-start. This clearly shows that galvanization should be preferred to tinning to check the rusting of iron.

26. What is the significance of the electrochemical series?

Ans:- The significance of the electrochemical series are as follows-

(1) The metals on the top of the list are good reducing agents and the metals at the bottom of the list are good oxidising agents.

(2) A metal in the electrochemical series can displace another metal below it in the series, from a solution of the salt.

(3) Metals which are above hydrogen in the list can liberate hydrogen gas from dilute acids whereas metals which come below hydrogen cannot.

(4) The list helps in the selective discharge of different elements from a mixture of their ions

27. Give reason, why Copper cannot displace hydrogen from acid?

Ans:- Copper is found to be below hydrogen in the electrochemical series, hence the reduction potential of Cu is more than that of hydrogen. So, Cu cannot reduce H+ ions to hydrogen. Thus Cu does not displace hydrogen from an acid.

28. Give reason, why zinc displaces hydrogen from acid?

Ans:- Zinc is found to be situated above hydrogen in the electrochemical series, hence the reduction potential of hydrogen is more than that of Zinc. Hence H^+ ions are easily reduced to hydrogen. Zinc gets oxidized to Zn^{2+} ions. Thus zinc displaces hydrogen from HCl.

$$Zn \rightarrow Zn^{2+} + 2e^-, \quad 2H^+ + 2e \rightarrow H_2\uparrow$$

29. Give reason, why zinc displaces copper form $CuSO_4$?

Ans:- Zinc is found above copper in the electrochemical series, so the reduction potential of copper is higher than that of zinc. Hence the copper ions are more easily reduced to Cu and Zn is more easily oxidized to Zn^{2+} giving electrons for reduction. Hence, zinc displaces copper form $CuSO_4$.

30. Write a brief note on the Electrical protection method of preventing corrosion.

Ans:- Electrical protection (cathodic protection) - This method is used for the protection of submerged structures, ships and underground pipes.

(Contd.....)

ವಿದ್ಯಾರ್ಥಿವೇತನ

ಎಸ್‌ಬಿಐಎಫ್ ಆಶಾ ಸ್ಕಾಲರ್‌ಶಿಪ್

ವಿವರ: ಎಸ್‌ಬಿಐ ಫೌಂಡೇಷನ್ ಕಡಿಮೆ ಆದಾಯದಿಂದ ಬಂದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲು ಉದ್ದೇಶಿಸಿದೆ.

ಅರ್ಹತೆ: 6 ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷ ದಲ್ಲಿ ಕನಿಷ್ಠ ಶೇ 75 ಅಂಕಗ ಳನ್ನು ಗಳಿಸಿರಬೇಕು. ಅವರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 3ಲಕ್ಷ ಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ವರ್ಷಕ್ಕೆ ₹ 10,000

ಅರ್ಜಿ ಸಲ್ಲಿಸಲು ಕೊನೆ ದಿನ: 30-11-2023. ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SBIFS6

ಚಾಲಕರ ಮಕ್ಕಳಿಗೆ ಸಹಾಯ

ವಿವರ: ಮಹೀಂದ್ರಾ ಫೈನಾನ್ಸ್ ಸಕ್ಷಮ್ ಸ್ಕಾಲರ್‌ಶಿಪ್ ಯೋಜನೆಯಡಿ ಚಾಲಕರ ಮಕ್ಕಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಸ್ನಾತಕೋತ್ತರ ಹಂತದವರೆಗೆ ಓದುತ್ತಿರುವ ಅವಕಾಶ ವಂಚಿತ ಮಕ್ಕಳಿಗೆ ಪ್ರಾಮುಖ್ಯ ನೀಡಲಾಗುವುದು.

ಅರ್ಹತೆ: ವಿದ್ಯಾರ್ಥಿಗಳು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಪ್ರದೇಶ ವ್ಯಾಪ್ತಿಯಲ್ಲಿರಬೇಕು. ಚಾಲನಾ ಪರವಾನಗಿ ಹೊಂದಿರುವ ಚಾಲಕರ (ಎಲ್ಲಾ ಲಘು ಮೋಟಾರು ವಾಹನಗಳು ಮತ್ತು ಟ್ಯಾಕ್ಸಿ, ಜೀಪ್, ಕಾರು ಮತ್ತು ಪಿಕಪ್, ಮ್ಯಾಜಿಕ್, ಸ್ಕೂಲ್ ವ್ಯಾನ್ ಇತ್ಯಾದಿ ಡೆಲಿವರಿ ವ್ಯಾನ್‌ಗಳಂತಹ ಸಣ್ಣ ವಾಣಿಜ್ಯ ವಾಹನ ಚಾಲಕರ ಮಕ್ಕಳು ಅರ್ಜಿ ಸಲ್ಲಿಸಬಹುದು. ಶೇ 60 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 3ಲಕ್ಷಕ್ಕಿಂತ ಹೆಚ್ಚಿರಬಾರದು. ಪೋಷಕರಲ್ಲಿ ಒಬ್ಬರು ಚಾಲಕರಾಗಿರಬೇಕು . ವರ್ಷಕ್ಕೆ ₹ 5,000 ರಿಂದ ₹. 20,000 ವರೆಗಿನ ವಿದ್ಯಾರ್ಥಿವೇತನ

ಅರ್ಜಿ ಸಲ್ಲಿಸಲು ಕೊನೆ ದಿನ: 30-10-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SKSP5

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ
ಅಹಮದಾಬಾದ್‌ನಲ್ಲಿ ನವರಾತ್ರಿ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗಾರ್ಬಾ ನೃತ್ಯ ಪ್ರದರ್ಶಿಸಿದ ಯುವತಿ

'ಗೃಹಜ್ಯೋತಿ' ಜಾರಿಯಾದ ನಂತರ ಬಾಕಿ ಶುಲ್ಕ ಪಾವತಿಗೆ ಜನರ ಹಿಂದೇಟು

ವಿದ್ಯುತ್ ಬಾಕಿ ₹734 ಕೋಟಿ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ರಾಜ್ಯದ ನಾಲ್ಕು ವಿದ್ಯುತ್ ನಿಗಮಗಳ ವ್ಯಾಪ್ತಿಯಲ್ಲಿನ 24 ಜಿಲ್ಲೆಗಳ 55.51 ಲಕ್ಷ ಗೃಹ ಬಳಕೆ ಗ್ರಾಹಕರು ಒಟ್ಟು ₹734.35 ಕೋಟಿ ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿದ್ದಾರೆ.

'ಗೃಹಜ್ಯೋತಿ' ಜಾರಿ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 30ರೊಳಗೆ ಗೃಹ ಬಳಕೆ ಗ್ರಾಹಕರು ವಿದ್ಯುತ್ ಶುಲ್ಕದ ಹಳೆಯ ಬಾಕಿ ಮೊತ್ತ ಪಾವತಿಸಬೇಕು. ಇಲ್ಲದಿದ್ದರೆ, ವಿದ್ಯುತ್ ಸಂಪರ್ಕ ಕಡಿತಗೊಳ್ಳಲಿದೆ ಎಂದು ಸರ್ಕಾರ ಜೂನ್ 5ರಂದು ತಿಳಿಸಿತ್ತು. ಬಾಕಿ ಪಾವತಿಸದಿದ್ದರೆ, 'ಗೃಹಜ್ಯೋತಿ'ಯ ಉಚಿತ ವಿದ್ಯುತ್ ಯೋಜನೆ ಸೌಲಭ್ಯ ಸಿಗುವುದಿಲ್ಲ' ಎಂದು ವಿದ್ಯುತ್ ನಿಗಮಗಳು ಪ್ರಕಟಣೆ ನೀಡಿದ್ದವು.

'ಸೆಪ್ಟೆಂಬರ್ 30ರ ಗಡುವು ಮುಗಿದರೂ ನಿರೀಕ್ಷಿತ ಮಟ್ಟದಲ್ಲಿ ಹಳೆಯ ಬಾಕಿ ಶುಲ್ಕದ ವಸೂಲಿ ಆಗುತ್ತಿಲ್ಲ. ಶುಲ್ಕ ಬಾಕಿ ಕಟ್ಟಲು ಮನೆ, ಮನೆಗೆ ತೆರಳಿ ನಮ್ಮ ಸಿಬ್ಬಂದಿ ಕೋರುವಂತಾಗಿದೆ. ಬಾಕಿ ಶುಲ್ಕ ಕಟ್ಟದ ಮನೆಗಳ ವಿದ್ಯುತ್ ಸಂಪರ್ಕವನ್ನು ಹಂತಹಂತವಾಗಿ ಕಡಿತಗೊಳಿಸುತ್ತೇವೆ' ಎಂದು ಹೆಸ್ಕಾಂ ಸಿಬ್ಬಂದಿ ತಿಳಿಸಿದರು.

'ಸೆಸ್ಕ್'ನಲ್ಲೇ ವಿದ್ಯುತ್ ಬಾಕಿ ಹೆಚ್ಚು: ನಾಲ್ಕು ವಿದ್ಯುತ್ ನಿಗಮಗಳ ಪೈಕಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಸೆಸ್ಕ್) ವ್ಯಾಪ್ತಿಯಲ್ಲೇ ಅತಿ ಹೆಚ್ಚು ವಿದ್ಯುತ್ ಬಾಕಿ ಉಳಿದಿದೆ. ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ ಜಿಲ್ಲೆಯ 6.43 ಲಕ್ಷ ಗೃಹ ಬಳಕೆ ಗ್ರಾಹಕರು ಒಟ್ಟು ₹339.87 ಕೋಟಿ ಶುಲ್ಕ ಬಾಕಿ ಉಳಿಸಿಕೊಂಡಿದ್ದಾರೆ. ಅದರಲ್ಲೂ ಭಾಗ್ಯಜ್ಯೋತಿ ಫಲಾನುಭವಿಗಳದ್ದೇ ₹140 ಕೋಟಿ ಶುಲ್ಕ ಬಾಕಿ ಉಳಿದಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ನಿಗಮ (ಹೆಸ್ಕಾಂ) ವ್ಯಾಪ್ತಿಯ 7 ಜಿಲ್ಲೆಗಳಲ್ಲಿ ಅತಿ ಹೆಚ್ಚು ವಿದ್ಯುತ್ ಬಾಕಿ ಉಳಿಸಿಕೊಂಡ ಜಿಲ್ಲೆಗಳಲ್ಲಿ ಬೆಳಗಾವಿ (₹36.42 ಕೋಟಿ) ಮತ್ತು ಧಾರವಾಡ (₹28.24 ಕೋಟಿ) ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನಗಳಲ್ಲಿವೆ. ಉತ್ತರ ಕನ್ನಡ ಜಿಲ್ಲೆ (₹7.95 ಕೋಟಿ) ಕೊನೆಯ ಸ್ಥಾನದಲ್ಲಿದೆ.

ಬಾಕಿ ಪಾವತಿಗೆ ಹಿಂದೇಟು: 'ಗೃಹಜ್ಯೋತಿ ಯೋಜನೆಗೆ ನೋಂದಣಿ ಮಾಡಿಕೊಂಡ ಗೃಹ ಬಳಕೆ ಗ್ರಾಹಕರು ನಿಗದಿತ ಯೂನಿಟ್‌ನೊಳಗೆ ಬಳಸಿದರೆ ಮಾತ್ರ 'ಶೂನ್ಯ ಬಿಲ್' ಕೊಡುತ್ತೇವೆ. ಹೆಚ್ಚುವರಿ ಯೂನಿಟ್ ಬಳಸಿದರೆ, ನಿಗದಿತ ಯೂನಿಟ್‌ನ ಶುಲ್ಕದ ಮೊತ್ತ ಬಿಲ್‌ನಲ್ಲಿ ಕಡಿತಗೊಳಿಸಿ ಉಳಿದ ಮೊತ್ತದ ಬಿಲ್ ಕೊಡುತ್ತೇವೆ. ಇದನ್ನು ಗ್ರಾಹಕರು ಕಡ್ಡಾಯವಾಗಿ ಪಾವತಿಸಬೇಕು. ಈ ಹೆಚ್ಚುವರಿ ಮೊತ್ತ ಮತ್ತು ಹಳೆಯ ಶುಲ್ಕ ಬಾಕಿ ಪಾವತಿಗೆ ಜನರು ಹಿಂದೇಟು ಹಾಕುತ್ತಾರೆ' ಎಂದು ಸೆಸ್ಕ್ ಸಿಬ್ಬಂದಿ ತಿಳಿಸಿದರು.

ವಿದ್ಯುತ್ ಖರೀದಿಗೂ ತೊಡಕು: 'ಏಳು ಜಿಲ್ಲೆಗಳ ಜನರ ಬೇಡಿಕೆ ಅನುಸಾರ ವಿದ್ಯುತ್ ಪೂರೈಕೆ ಹೆಸ್ಕಾಂ ಹೊಣೆ. ಆದರೆ, ಗೃಹ ಬಳಕೆ ಗ್ರಾಹಕರು ₹140 ಕೋಟಿ ಮತ್ತು ವಿವಿಧ ಸರ್ಕಾರಿ ಇಲಾಖೆಗಳು ಕೋಟ್ಯಂತರ ರೂಪಾಯಿ ಬಾಕಿ ಉಳಿಸಿಕೊಂಡ ಕಾರಣ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಖರೀದಿ ಹೆಸ್ಕಾಂಗೆ ದೊಡ್ಡ ಸವಾಲಾಗಿದೆ. ವಿದ್ಯುತ್ ಪರಿವರ್ತಕಗಳ (ಟಿಸಿ) ಪೂರೈಕೆ, ಕೊಳವೆಬಾವಿಗಳಿಗೆ ಹೊಸ ವಿದ್ಯುತ್ ಸಂಪರ್ಕ, ವಿದ್ಯುತ್ ತಂತಿ ದುರಸ್ತಿ ಮುಂತಾದ ಕಾರ್ಯಗಳಿಗೆ ಹಣಕಾಸಿನ ಕೊರತೆಯಾಗಿದೆ' ಎಂದು ಹೆಸ್ಕಾಂ ಎಂಜಿನಿಯರ್‌ಗಳು 'ಪ್ರಜಾವಾಣಿ'ಗೆ ತಿಳಿಸಿದರು.

'ವಿದ್ಯುತ್ ಗ್ಯಾರಂಟಿ ಕಲ್ಪಿಸಿ'



'ಈ ಬಾರಿ ಮುಂಗಾರು ಮಳೆ ಕೈಕೊಟ್ಟಿದ್ದು, ಬೆಳೆಗಳು ನೆಲಕಚ್ಚಿವೆ. ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಪಂಪ್‌ಸೆಟ್‌ಗಳು ಹಾಳಾಗುತ್ತಿವೆ. ವೋಲ್ಟೇಜ್ ಸಮಸ್ಯೆಯಿಂದ ವಿದ್ಯುತ್ ಪರಿವರ್ತಕಗಳು ಸುಟ್ಟಿವೆ. ಬರಗಾಲದಿಂದ ರೈತರು ಸಾಲದ ಸುಳಿಯಲ್ಲಿದ್ದಾರೆ. ಗ್ರಾಮೀಣ ಪ್ರದೇಶಗಳಿಗೆ ನಿತ್ಯ 7 ಗಂಟೆ ವಿದ್ಯುತ್ ಪೂರೈಸಲು ಸರ್ಕಾರ ವಿಫಲವಾಗಿದೆ. ರೈತರ ಪಾಲಿಗೆ 'ವಿದ್ಯುತ್ ಗ್ಯಾರಂಟಿ' ಇಲ್ಲವಾಗಿದೆ' ಎಂದು ರೈತಸಂಘದ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷ ಹನುಮಂತಪ್ಪ ಹುಚ್ಚಣ್ಣನವರ ತಿಳಿಸಿದರು.

ವಿದ್ಯುತ್ ಬಾಕಿ ಪಾವತಿಸದವರ ಮನೆಗಳ ವಿದ್ಯುತ್ ಸಂಪರ್ಕ ಕಡಿತ ಮಾಡಲಾಗುವುದು. ವಿವಿಧ ಸರ್ಕಾರಿ ಇಲಾಖೆಗಳು ₹975 ಕೋಟಿ ಬಾಕಿ ಉಳಿಸಿಕೊಂಡಿದ್ದು, ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗಿದೆ

ಮೊಹಮ್ಮದ್ ರೋಶನ್, ವ್ಯವಸ್ಥಾಪಕ ನಿರ್ದೇಶಕ, ಹೆಸ್ಕಾಂ

ಜೆಸ್ಕಾಂ ವ್ಯಾಪ್ತಿಯಲ್ಲಿನ 5 ಜಿಲ್ಲೆಗಳ ವಿದ್ಯುತ್ ಬಾಕಿ ಮಾಹಿತಿಯು ತಾಂತ್ರಿಕ ಸಮಸ್ಯೆಯಿಂದ ಸದ್ಯಕ್ಕೆ ಲಭ್ಯವಿಲ್ಲ. ಆದಷ್ಟು ಬೇಗ ಮಾಹಿತಿ ಸಂಗ್ರಹಿಸಲಾಗುವುದು

ಅಧಿಕಾರಿ, ಜೆಸ್ಕಾಂ ವಿಭಾಗ

ಗೃಹ ಬಳಕೆ ಗ್ರಾಹಕರಿಂದ ವಿದ್ಯುತ್ ಬಾಕಿ ವಿವರ

ವಿದ್ಯುತ್ ನಿಗಮ	ಗ್ರಾಹಕರ ಸಂಖ್ಯೆ	ಬಾಕಿ ಮೊತ್ತ (₹ಕೋಟಿಗಳಲ್ಲಿ)
ಬೆಸ್ಕಾಂ	10.55 ಲಕ್ಷ	₹147.83
ಹೆಸ್ಕಾಂ	19.59 ಲಕ್ಷ	₹140.66
ಮೆಸ್ಕಾಂ	18.94 ಲಕ್ಷ	₹105.99
ಸೆಸ್ಕ್	6.43 ಲಕ್ಷ	₹339.87
ಒಟ್ಟು	55.51 ಲಕ್ಷ	₹734.35

ಇಸ್ರೇಲ್‌ನ ದಾಳಿಯಿಂದ ತತ್ತರಿಸಿರುವ ದಕ್ಷಿಣ ಗಾಜಾ ಪಟ್ಟಿಯ ರಫಾ ನಗರದ ಬೇಕರಿಯೊಂದರ ಮುಂಭಾಗದಲ್ಲಿ ಆಹಾರ ಸಾಮಗ್ರಿ ಪಡೆಯಲು ಜನರು ಭಾನುವಾರ ಸರದಿಯಲ್ಲಿ ನಿಂತಿದ್ದರು –ಎಎಫ್‌ಪಿ ಚಿತ್ರ

ಪ್ಯಾಲೆಸ್ಟೀನ್‌ಗೆ ಭಾರತದ ನೆರವು

ನವದೆಹಲಿ (ಎಎಫ್‌ಪಿ): ಗಾಜಾ ಪಟ್ಟಿಯಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರಿಗೆ ತಲುಪಿಸಲು ಭಾರತವು 38.5 ಟನ್‌ಗಳಷ್ಟು ಅಗತ್ಯ ವಸ್ತುಗಳನ್ನು ಭಾನುವಾರ ರವಾನಿಸಿದೆ. ಅಗತ್ಯ ವಸ್ತುಗಳನ್ನು ಹೊತ್ತ ಭಾರತೀಯ ವಾಯುಪಡೆಯ ಬೋಯಿಂಗ್ ಸಿ–17 ವಿಮಾನವು ಈಜಿಪ್ಟ್‌ನ ಸಿನಾಯ್ ಪ್ರಾಂತ್ಯಕ್ಕೆ ತೆರಳಿದೆ.

ಈ ವಿಮಾನದಲ್ಲಿ 6.5 ಟನ್‌ಗಳಷ್ಟು ವೈದ್ಯಕೀಯ ನೆರವು ವಸ್ತುಗಳು ಹಾಗೂ 32 ಟನ್‌ಗಳಷ್ಟು ವಿಪತ್ತು ಪರಿಹಾರ ವಸ್ತುಗಳು ಇವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

'ಜೀವ ರಕ್ಷಕ ಔಷಧಗಳು, ಶಸ್ತ್ರ ಚಿಕಿತ್ಸೆಯಲ್ಲಿ ಬಳಸುವ ವಸ್ತುಗಳು, ಸ್ಲೀಪಿಂಗ್ ಬ್ಯಾಗ್‌ಗಳು, ಟಾರ್ಪಲಿನ್‌ಗಳು, ನೀರು ಶುದ್ಧೀಕರಣಕ್ಕೆ ಬಳಸುವ ಗುಳಿಗೆಗಳು ಹಾಗೂ ಇತರ ಕೆಲವು ಅಗತ್ಯ ವಸ್ತುಗಳನ್ನು ಈ ವಿಮಾನ ಕೊಂಡೊಯ್ದಿದೆ' ಎಂದು ಬಾಗ್ಚಿ ಅವರು ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.

ಇಸ್ರೇಲ್ ಮೇಲೆ ಹಮಾಸ್ ನಡೆಸಿರುವುದು 'ಭಯೋತ್ಪಾದಕ ದಾಳಿ' ಎಂದು ಭಾರತ ಈಗಾಗಲೇ ಖಂಡಿಸಿದೆ. ಹಾಗೆಯೇ ಪ್ಯಾಲೆಸ್ಟೀನ್ ಸ್ವತಂತ್ರ ರಾಷ್ಟ್ರ ನಿರ್ಮಾಣ ಆಗಬೇಕು ಎಂದು ತಾನು ಹಿಂದಿನಿಂದಲೂ ತಾಳಿರುವ ನಿಲುವನ್ನು ಪುನರುಚ್ಚರಿಸಿದೆ.

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಸಂ

ಆಳ-ಅಗಲ

ದ್ವೇಷದ ಭರದಲ್ಲಿ ಮರೆಯಾದ ಕ್ರೀಡಾಸ್ಫೂರ್ತಿ

ಸಿಯಾಚಿನ್: ಅಗ್ನಿವೀರ ಹುತಾತ್ಮ

ನವದೆಹಲಿ (ಪಿಟಿಐ): ಸಿಯಾಚಿನ್‌ನಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಅಗ್ನಿವೀರರೊಬ್ಬರು ಹುತಾತ್ಮರಾಗಿದ್ದಾರೆ.

ಮಹಾರಾಷ್ಟ್ರದ ಅಗ್ನಿವೀರ ಗವತೆ ಅಕ್ಷಯ್ ಲಕ್ಷ್ಮಣ್ ಹುತಾತ್ಮರಾದವರು.

ಅಕ್ಷಯ್ ಲಕ್ಷ್ಮಣ್ ಅವರ ಸಾವಿನ ಕುರಿತು ಹೆಚ್ಚಿನ ಮಾಹಿತಿ ಲಭಿಸಿಲ್ಲ ಎಂದು ಮೂಲಗಳು ತಿಳಿಸಿವೆ.

'ಅಕ್ಷಯ್ ಲಕ್ಷ್ಮಣ್ ಹುತಾತ್ಮರಾಗಿರುವುದಕ್ಕೆ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಮತ್ತು ಇತರ ಉನ್ನತ ಅಧಿಕಾರಿಗಳು ಶೋಕ ವ್ಯಕ್ತಪಡಿಸಿದ್ದಾರೆ' ಎಂದು ಲೇಹ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಸೇನೆಯ ಫೈರ್ ಅಂಡ್ ಫ್ಯೂರಿ ಕೋರ್ 'ಎಕ್ಸ್' ವೇದಿಕೆಯಲ್ಲಿ ತಿಳಿಸಿದೆ.

ಕಾರಕೋರಂ ಶ್ರೇಣಿಯಲ್ಲಿರುವ ಅಂದಾಜು 20 ಸಾವಿರ ಅಡಿ ಎತ್ತರದ ಸಿಯಾಚಿನ್ ಗ್ಲೇಸಿಯರ್ ವಿಶ್ವದ ಅತೀ ಎತ್ತರದ ಸೇನಾ ವಲಯವಾಗಿದೆ.

ಇಸ್ರೊ ಬಾಹ್ಯಾಕಾಶ ಯಾನದಲ್ಲಿ ಮಹಿಳೆಯರು

ತಿರುವನಂತಪುರ (ಪಿಟಿಐ): ಮಾನವಸಹಿತ ಬಾಹ್ಯಾಕಾಶ ಯೋಜನೆ 'ಗಗನಯಾನ'ದ ಅಡಿಯಲ್ಲಿ, ಯುದ್ಧ ವಿಮಾನ ಚಲಾಯಿಸುವ ಮಹಿಳಾ ಪೈಲಟ್ ಅಥವಾ ಮಹಿಳಾ ವಿಜ್ಞಾನಿಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಉದ್ದೇಶ ಇದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ಮುಂದಿನ ವರ್ಷ ಬಾಹ್ಯಾಕಾಶಕ್ಕೆ ಸಾಗಲಿರುವ ಗಗನಯಾನ ನೌಕೆಯಲ್ಲಿ ಮಹಿಳೆಯನ್ನು ಹೋಲುವ ರೊಬೋಟ್ ಒಂದು ಇರಲಿದೆ ಎಂದು ಅವರು ತಿಳಿಸಿದ್ದಾರೆ. ಇಸ್ರೊ ಸಂಸ್ಥೆಯ ಮಹತ್ವಾಕಾಂಕ್ಷೆಯ ಗಗನಯಾನ ಯೋಜನೆಯು ಭೂಮಿಯ ಮೇಲ್ಮೈನಿಂದ 400 ಕಿ.ಮೀ. ಎತ್ತರದ ಕಕ್ಷೆಗೆ ಮನುಷ್ಯರನ್ನು ಕಳುಹಿಸಿ, ಮೂರು ದಿನಗಳ ನಂತರದಲ್ಲಿ ಅವರನ್ನು ಸುರಕ್ಷಿತವಾಗಿ ಭೂಮಿಗೆ ವಾಪಸ್ ಕರೆಸಿಕೊಳ್ಳುವ ಉದ್ದೇಶ ಹೊಂದಿದೆ.

'ಇದರಲ್ಲಿ ಅನುಮಾನವೇ ಬೇಡ... ಆದರೆ ನಾವು ಮಹಿಳಾ ಅಭ್ಯರ್ಥಿಯನ್ನು ಹುಡುಕಬೇಕಿದೆ' ಎಂದು ಸೋಮನಾಥ್ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ. ಮಾನವಸಹಿತ ಬಾಹ್ಯಾಕಾಶ ಪ್ರಯಾಣ ಯೋಜನೆಯ ಭಾಗವಾಗಿ 'ಟಿವಿ–ಡಿ1' ವಾಹನದ ಪರೀಕ್ಷೆಯು ಯಶಸ್ಸು ಕಂಡ ಮಾರನೆಯ ದಿನ ಅವರು ಈ ಮಾತು ಹೇಳಿದ್ದಾರೆ.

ಮಾನವಸಹಿತ ಬಾಹ್ಯಾಕಾಶ ಯಾನವು 2025ಕ್ಕೆ ಮೊದಲು ನಡೆಯುವ ನಿರೀಕ್ಷೆ ಇದೆ. ಮೊದಲ ಹಂತದಲ್ಲಿ ಯುದ್ಧ ವಿಮಾನಗಳನ್ನು ಪರೀಕ್ಷಾರ್ಥವಾಗಿ ಹಾರಿಸುವ ಮಹಿಳಾ ಪೈಲಟ್‌ಗಳನ್ನು ಗುರುತಿಸಬೇಕು. ಎರಡನೆಯ ಹಂತದಲ್ಲಿ ಮಹಿಳಾ ವಿಜ್ಞಾನಿಗಳನ್ನು ಗಗನಯಾನಿಗಳನ್ನಾಗಿ ಕಳುಹಿಸಲಾಗುತ್ತದೆ ಎಂದು ಸೋಮನಾಥ್ ಹೇಳಿದ್ದಾರೆ. 2035ಕ್ಕೆ ಮೊದಲು ಪೂರ್ಣ ಪ್ರಮಾಣದ ಬಾಹ್ಯಾಕಾಶ ನಿಲ್ದಾಣವನ್ನು ಸ್ಥಾಪಿಸುವ ಉದ್ದೇಶವನ್ನು ಇಸ್ರೊ ಹೊಂದಿದೆ ಎಂದೂ ಅವರು ಹೇಳಿದ್ದಾರೆ.

72198 21111 | BAJAJ FINANCE LTD - AF | BAJAJ SECURE • AMC • ROAD SIDE ASSISTANCE

ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. *ಪಲ್ಸರ್ 125 Neon ವೇರಿಯಂಟ್‌ಗಾಗಿ ಶುರುವಾಗುವ ಬೆಲೆ ಮತ್ತು ಡೌನ್ ಪೇಮೆಂಟ್. ಡೌನ್ ಪೇಮೆಂಟ್‌ನಲ್ಲಿ ಪ್ರೊಸೆಸಿಂಗ್ ಫೀ ಮತ್ತು ಇತರ ಚಾರ್ಜ್‌ಗಳು ಸೇರಿಲ್ಲ ಮತ್ತು ಸಾಲಕ್ಕಾಗಿ ನಿಗದಿತ ಪರಿಮಿತಿಗಳ ಪೂರ್ಣತೆಯನ್ನು ಆಧರಿಸುತ್ತದೆ. ಆರ್ಥಿಕ ಸೌಲಭ್ಯವು ಫೈನಾನ್ಸ್‌ರ್ ಏಕೈಕ ನಿಷ್ಕರ್ಷೆಯ ಮೇರೆಗೆ ಇರುತ್ತದೆ. ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಮುಂದಾಗಿ ಸೂಚನೆ ನೀಡದೇ ಹಿಂತೆಗೆಯುವ ಅಧಿಕಾರವನ್ನು ಬಜಾಜ್ ಆಟೊ ಕಾದಿರಿಸಿಕೊಂಡಿದೆ. ಸ್ಟಂಟ್‌ಗಳನ್ನು ವಿಶೇಷಜ್ಞರು, ವೃತ್ತಿಪರರ ಮೇಲ್ವಿಚಾರಣೆಯಲ್ಲಿ, ನಿಯಂತ್ರಿತ ಹಾಗೂ ಆವರಿಸಿದ ಪರಿಸರದಲ್ಲಿ, ಜನಸಾಮಾನ್ಯರಿಂಗಲೀ ಅಥವಾ ಯಾವುದೇ ಸಾರ್ವಜನಿಕ ರಸ್ತೆಗಳಾಗಲೀ ಇಲ್ಲದಿರುವಲ್ಲಿ ಕೈಗೊಳ್ಳಲಾಗಿದೆ. ದಯವಿಟ್ಟು ಈ ಸ್ಟಂಟ್‌ಗಳ ನಕಲು ಮಾಡಲು ಪ್ರಯತ್ನಿಸಬೇಡಿ ಮತ್ತು ಯಾವಾಗಲೂ ಟ್ರಾಫಿಕ್ ಹಾಗೂ ಸುರಕ್ಷಾ ನಿಯಮಗಳನ್ನು ಪಾಲಿಸಿರಿ. ಎಮ್‌ಸಿ ನಿರ್ದಿಷ್ಟ ಮಾಡೆಲ್‌ಗಳಿಗಾಗಿ ನಿರ್ದಿಷ್ಟ ರಾಜ್ಯಗಳಲ್ಲಿ ಲಭ್ಯವಿದೆ. ವಿವರಗಳಿಗಾಗಿ ಬಜಾಜ್ ಡೀಲರರನ್ನು ವಿಚಾರಿಸಿರಿ. ರಸ್ತೆ ಬದಿಯ ಸಹಾಯವನ್ನು ತೃತೀಯ ಪಕ್ಷದವರು ನೀಡುತ್ತಾರೆ ಮತ್ತು ಅವರ ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 6360308373 • **Chandra Layout Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur** : KHIVRAJ BAJAJ: - 96320 68142 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಯಶಸ್ಸಿನತ್ತ ದೃಷ್ಟಿ ನೆಟ್ಟರೆ ಒತ್ತಡ ಅನುಭವಿಸುತ್ತೀರಿ. ಆದರೆ, ನೀವು ಉತ್ಕೃಷ್ಟತೆ ಕಾಯ್ದುಕೊಂಡರೆ ಯಶಸ್ಸಿನ ಖಾತರಿ ಇರುತ್ತದೆ.

-ದೀಪಕ್ ಚೋಪ್ರಾ

ಭಾರತ–ಶ್ರೀಲಂಕಾ ದೋಣಿ ಸೇವೆ ನಂಟು ಬಲಪಡಿಸಲು ಪೂರಕ

ಭಾರತ ಮತ್ತು ಶ್ರೀಲಂಕಾ ನಡುವೆ ಪ್ರಯಾಣಿಕ ದೋಣಿ ಸೇವೆಯನ್ನು ಪುನರಾರಂಭಿಸಲಾಗಿದೆ. ಇದರಿಂದಾಗಿ ಎರಡೂ ದೇಶಗಳ ನಡುವಣ ಸಂಬಂಧ ಮತ್ತು ಸಂಪರ್ಕ ಉತ್ತಮಗೊಳ್ಳಲಿದೆ. ತಮಿಳುನಾಡಿನ ನಾಗಪಟ್ಟಣಂ ಮತ್ತು ಜಾಫ್ನಾದ ಕಂಕೆಸಂತೊರೈ ನಡುವೆ 'ಚೆರಿಯಪಾನಿ' ಎಂಬ ದೋಣಿ ಸಂಚಾರವನ್ನು ಇತ್ತೀಚೆಗೆ ಆರಂಭಿಸಲಾಗಿದೆ. 50 ಜನರನ್ನು ಈ ದೋಣಿಯಲ್ಲಿ ಕರೆದೊಯ್ಯುವ ಮೂಲಕ ದೋಣಿ ಸೇವೆಗೆ ಚಾಲನೆ ನೀಡಲಾಗಿದೆ. ಎರಡೂ ದೇಶಗಳ ಮಧ್ಯೆ ಇಂತಹ ದೋಣಿ ಸೇವೆಯನ್ನು 1900ರ ಹೊತ್ತಿಗೇ ಆರಂಭಿಸಲಾಗಿತ್ತು. ಚೆನ್ನೈ–ತಲೈಮನ್ನಾರ್ ನಡುವಣ ದೋಣಿ–ರೈಲು ಸೇವೆ, ರಾಮೇಶ್ವರದಿಂದ ತಲೈಮನ್ನಾರ್ ಹಾಗೂ ತೂತ್ತುಕುಡಿಯಿಂದ ಕೊಲಂಬೊ ನಡುವೆ ದೋಣಿ ಸೇವೆ ಆಗಿನಿಂದಲೇ ಇತ್ತು. ಆದರೆ, ಶ್ರೀಲಂಕಾದಲ್ಲಿ 1980ರ ದಶಕದಲ್ಲಿ ಜನಾಂಗೀಯ ಕಲಹವು ತೀವ್ರಗೊಂಡಾಗ ಈ ಎಲ್ಲ ಸೇವೆಗಳು ಅಸ್ತವ್ಯಸ್ತಗೊಂಡು, ಬಳಿಕ ರದ್ದಾದವು. ವಾಯುಯಾನವು ಮಾತ್ರ ಎರಡೂ ದೇಶಗಳ ನಡುವಣ ಪ್ರಮುಖ ಸಂಪರ್ಕ ಕೊಂಡಿಯಾಗಿ ಉಳಿಯಿತು. ಕೊಲಂಬೊ ಮತ್ತು ತೂತ್ತುಕುಡಿ ನಡುವೆ ಹತ್ತು ವರ್ಷಗಳ ಹಿಂದೆ ದೋಣಿ ಸೇವೆಯನ್ನು ಆರಂಭಿಸಲಾಯಿತಾದರೂ ಅಲ್ಪಕಾಲದ ನಂತರ ಅದನ್ನು ನಿಲ್ಲಿಸಲಾಯಿತು. ಚೆನ್ನೈಯಿಂದ ಖಾಸಗಿ ದೋಣಿ ಸಂಚಾರ ಸೇವೆಯನ್ನು ನಾಲ್ಕು ತಿಂಗಳ ಹಿಂದೆ ಆರಂಭಿಸಲಾಯಿತು. ಇದಕ್ಕೆ ಜನರಿಂದ ಉತ್ತಮ ಸ್ಪಂದನ ಸಿಕ್ಕಿದೆ. ಈಗ ಆರಂಭಿಸಲಾಗಿರುವ ದೋಣಿ ಸೇವೆಯು ದೀರ್ಘಕಾಲ ಉಳಿಯುವ ಭರವಸೆ ಇದೆ.

ಸಂಪರ್ಕ ಸೇವೆ ಉತ್ತಮಗೊಳ್ಳುವುದು ಎರಡೂ ದೇಶಗಳಿಗೆ ಪ್ರಯೋಜನಕಾರಿ ಆಗಲಿದೆ

ಭಾರತ ಮತ್ತು ಶ್ರೀಲಂಕಾ ನಡುವಣ ಸಂಬಂಧವು ಈ ಹಿಂದೆ ಹಲವು ಏರಿಳಿತಗಳನ್ನು ಕಂಡಿದೆ. ಆರ್ಥಿಕ ನೆರವು ಮತ್ತು ಬಂಡವಾಳ ಹೂಡಿಕೆಯ ಮೂಲಕ ಶ್ರೀಲಂಕಾ ಜೊತೆಗಿನ ನಂಟನ್ನು ಚೀನಾ ಗಟ್ಟಿಗೊಳಿಸಿದೆ. ಇತ್ತೀಚಿನ ವರ್ಷಗಳಲ್ಲಿ ಈ ಬಂಧವು ಇನ್ನಷ್ಟು ಬಲಗೊಂಡಿದೆ. ದ್ವೀಪರಾಷ್ಟ್ರ ಶ್ರೀಲಂಕಾವನ್ನು ಜೊತೆಗೆ ಇರಿಸಿಕೊಳ್ಳಲು ಭಾರತ ಮತ್ತು ಚೀನಾ ನಡುವೆ ಪೈಪೋಟಿ ಇದ್ದಂತೆ ಕಾಣಿಸುತ್ತಿದೆ. ಶ್ರೀಲಂಕಾವು ಹಣಕಾಸಿನ ಗಂಭೀರ ಸಮಸ್ಯೆ ಎದುರಿಸಿ ಅರ್ಥ ವ್ಯವಸ್ಥೆಯು ಇನ್ನೇನು ಪೂರ್ಣವಾಗಿ ಕುಸಿದುಬೀಳಲಿದೆ ಎಂಬ ಸ್ಥಿತಿ ತಲುಪಿದಾಗ ಭಾರತವು ದೊಡ್ಡ ಮಟ್ಟದಲ್ಲಿ ನೆರವಾಗಿತ್ತು. ಶ್ರೀಲಂಕಾ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರು ಭಾರತಕ್ಕೆ ಜುಲೈನಲ್ಲಿ ಭೇಟಿ ಕೊಟ್ಟಿದ್ದರು. ಹಲವು ಒಪ್ಪಂದಗಳಿಗೆ ಆ ಸಂದರ್ಭದಲ್ಲಿ ಸಹಿ ಹಾಕಲಾಗಿತ್ತು. ಎರಡೂ ದೇಶಗಳ ನಡುವಣ ಜಲಸಾರಿಗೆಯನ್ನು ಉತ್ತಮಪಡಿಸಬೇಕು ಮತ್ತು ಹಳೆಯ ಜಲಮಾರ್ಗಗಳನ್ನು ಪುನರಾರಂಭಿಸಬೇಕು ಎಂಬುದರ ಬಗ್ಗೆಯೂ ಚರ್ಚೆ ಆಗಿತ್ತು. ವ್ಯಾಪಾರ ವಹಿವಾಟು ಮತ್ತು ಇತರ ಸಂಪರ್ಕಗಳನ್ನು ಉತ್ತಮಪಡಿಸುವುದಕ್ಕಾಗಿ ಕೊಲಂಬೊ, ಕಂಕೆಸಂತೊರೈ ಮತ್ತು ಟ್ರಿಂಕಾಮಲಿ ಬಂದರುಗಳ ಅಭಿವೃದ್ಧಿಗೆ ನೆರವು ನೀಡುವುದಕ್ಕೆ ಭಾರತವು ಒಪ್ಪಿಕೊಂಡಿದೆ. ಹೀಗಾಗಿ, ದೋಣಿ ಸೇವೆಯ ಪುನರಾರಂಭವು ಮಹತ್ವವನ್ನು ಪಡೆದುಕೊಂಡಿದೆ.

ಸಮುದ್ರ ಮಾರ್ಗವನ್ನು ಪುನರಾರಂಭಿಸಿರುವುದು ವ್ಯಾಪಾರ ಮತ್ತು ಆರ್ಥಿಕ ಚಟುವಟಿಕೆಗಳನ್ನು ಬಲಪಡಿಸುವುದರ ಜೊತೆಗೆ ಜನರ ನಡುವಣ ಸಂಪರ್ಕ ಹಾಗೂ ಸಾಂಸ್ಕೃತಿಕ ವಿನಿಮಯಕ್ಕೂ ಅವಕಾಶ ಕೊಡಲಿದೆ. ಎರಡೂ ದೇಶಗಳ ನಡುವೆ ಇಂತಹ ಸಂಬಂಧವು ಬಹಳ ಹಿಂದಿನಿಂದಲೂ ಇತ್ತು. ಈ ಬಂಧವು ಈಗ ಇನ್ನಷ್ಟು ಉತ್ತಮಗೊಂಡರೆ ಎರಡೂ ದೇಶಗಳು ಮತ್ತು ಜನರಿಗೆ ಅದರಿಂದ ಅನುಕೂಲಗಳು ಇವೆ. ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ಇರುವ ಅಪಾರವಾದ ಅವಕಾಶಗಳನ್ನು ಎರಡೂ ದೇಶಗಳು ಬಳಸಿಕೊಳ್ಳಬಹುದು. ಹಿಂಗಾರು ಮಾರುತದ ಕಾರಣಕ್ಕಾಗಿ, ದೋಣಿ ಸೇವೆಯು ಮುಂದಿನ ವಾರದಿಂದ ಸ್ಥಗಿತಗೊಳ್ಳಲಿದೆ. ಜನವರಿಯಿಂದ ಮತ್ತೆ ಆರಂಭಗೊಳ್ಳಲಿದೆ. ಏಕಮುಖ ಸಂಚಾರಕ್ಕೆ ₹ 7,600 ದರ ನಿಗದಿ ಮಾಡಲಾಗಿದೆ. ಇದು ಅತಿಯಾಯಿತು. ಜಲಸಾರಿಗೆಯು ಇತರ ಸಾರಿಗೆಗಳಿಗಿಂತ ಅಗ್ಗವಾಗಿರಬೇಕು. ಆದರೆ, 'ಚೆರಿಯಪಾನಿ' ದೋಣಿಯ ಪ್ರಯಾಣ ದರವು ವಿಮಾನದ ದರಕ್ಕಿಂತಲೂ ಹೆಚ್ಚಾಗಿದೆ. ನಾಗಪಟ್ಟಣಂ ಬಂದರಿನಲ್ಲಿ ಪ್ರಯಾಣಿಕರಿಗೆ ಇರುವ ಸೌಲಭ್ಯಗಳು ಮತ್ತು ಮೂಲಸೌಕರ್ಯಗಳನ್ನು ಉತ್ತಮಪಡಿಸಬೇಕಾದ ಅಗತ್ಯ ಇದೆ. ಈಗ ಆರಂಭಿಸಿರುವ ದೋಣಿ ಸೇವೆಯು ಸ್ಥಿರಗೊಂಡರೆ, ಇತ್ತೀಚಿನ ದಿನಗಳಲ್ಲಿ ನಿಲ್ಲಿಸಲಾದ ಇತರ ದೋಣಿ ಸೇವೆಗಳು ಕೂಡ ಪುನರಾರಂಭ ಆಗಬಹುದು. ಸಂಪರ್ಕವು ಉತ್ತಮಗೊಳ್ಳುವುದು ಎರಡೂ ದೇಶಗಳಿಗೆ ಪ್ರಯೋಜನಕಾರಿ ಆಗಲಿದೆ.

ದಿನದ ಟ್ವೀಟ್

ಒಳ್ಳೆಯ ಆಹಾರಕ್ರಮ ರೂಢಿಸೋಣ

ಮಕ್ಕಳಿಗೆ ತಿನ್ನೋದಕ್ಕೆ ಏನಾದರೂ ಕೊಂಡುಕೊಳ್ಳೋಣ ಅಂತ ಅಂಗಡಿಗೆ ಹೋದರೆ ಒಳ್ಳೆಯದು ಏನೂ ಸಿಗುವುದಿಲ್ಲ. ಸಕ್ಕರೆ, ಮೈದಾ, ರಿಫೈನ್ಡ್ ಎಣ್ಣೆ, ಬಣ್ಣ, ಪ್ರಿಸರ್‌ವೆಟಿವ್... ಮುಂತಾದವನ್ನು ಹಾಕಿ ಮಾಡಿರುವ ಚಾಕಲೇಟ್, ಬಿಸ್ಕೆಟ್ ಹಾಗೂ ಇನ್ನಿತರ ತಿಂಡಿಗಳೇ ತುಂಬಿರುತ್ತವೆ. ಕೊಂಡುಕೊಳ್ಳಬಹುದಾದದ್ದು ಬೆರಳೆಣಿಕೆಯಷ್ಟು. ಆದರೆ ಮಕ್ಕಳಿಗೆ ರುಚಿಸುವುದು ಆರೋಗ್ಯಕ್ಕೆ ಒಳ್ಳೆಯದಲ್ಲದ ಚಾಕಲೇಟ್, ಬಿಸ್ಕೆಟ್, ಕೇಕು, ಐಸ್‌ಕ್ರೀಮು, ಕುರುಕಲು ತಿಂಡಿ... ಇವುಗಳಿಂದ ಮಕ್ಕಳನ್ನು ಕಾಪಾಡುವುದು ದೊಡ್ಡ ಕೆಲಸ, ಹೊಣೆ.

ಮಲ್ಲೇಶ್ ಬೆಳವಾಡಿ

ಕಿಡಿನುಡಿ

ಮತ್ತೊಮ್ಮೆ ಹೇಳುತ್ತಿದ್ದೇನೆ. ಪಾಲ್ಗೊಳ್ಳುವ ಪ್ರತಿಯೊಂದು ತಂಡ ಮತ್ತು ಅದರ ಅಭಿಮಾನಿಗಳ ಘನತೆಗೆ ಚ್ಯುತಿಯಾಗದಂತೆ ನೋಡಿಕೊಳ್ಳಲು ಆಗದಿದ್ದರೆ ಮತ್ತು ಭದ್ರತೆಯನ್ನು ಒದಗಿಸಲು ಸಾಧ್ಯವಾಗದಿದ್ದರೆ ಅಂತರರಾಷ್ಟ್ರೀಯ ಕ್ರೀಡಾಕೂಟಗಳನ್ನು ಆಯೋಜಿಸಬೇಡಿ.

(ಬಾಂಗ್ಲಾದೇಶದ ಕಟ್ಟಾ ಕ್ರಿಕೆಟ್ ಅಭಿಮಾನಿಯೊಬ್ಬರನ್ನು ಪುಣೆಯಲ್ಲಿ ನಡೆದ ಭಾರತ– ಬಾಂಗ್ಲಾದೇಶದ ನಡುವಿನ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಅಭಿಮಾನಿಗಳು ಅವಮಾನಿಸಿರುವುದಕ್ಕೆ ಪ್ರತಿಕ್ರಿಯೆ)

ಸಯಂತನ್ ಘೋಷ್, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ 23–10–1998

● **ಪಟೇಲ್ ನಾಯಕತ್ವ ಬದಲಾವಣೆಗೆ 50 ಭಿನ್ನಮತೀಯ ಶಾಸಕರ ಆಗ್ರಹ**

ಬೆಂಗಳೂರು, ಅ. 22– ರಾಜ್ಯದಲ್ಲಿ ಪಕ್ಷ ಹಾಗೂ ಸರ್ಕಾರವನ್ನು ಕ್ರಿಯಾಶೀಲಗೊಳಿಸಲು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ನಾಯಕತ್ವ ಬದಲಾವಣೆ ಅನಿವಾರ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಆಡಳಿತ ಜನತಾ ದಳದ ಸುಮಾರು 50 ಶಾಸಕರು, ಪಟೇಲ್ ಅವರು ಶಾಸಕರ ವಿಶ್ವಾಸ ಕಳೆದುಕೊಂಡಿರುವುದರಿಂದ ಶಾಸಕಾಂಗ ಪಕ್ಷದ ತುರ್ತು ಸಭೆ ಕರೆದು ವಿಶ್ವಾಸಮತ ಕೋರಬೇಕೆಂದು ಇಂದು ಆಗ್ರಹಪಡಿಸಿದ್ದಾರೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ಜನತಾದಳದ ಭಿನ್ನಮತೀಯ ಶಾಸಕರೊಂದಿಗೆ ಮಹತ್ವದ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ಈ ಅಭಿಪ್ರಾಯವನ್ನು ಶಾಸಕರು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಈಗ ಪಟೇಲರ ಸರ್ಕಾರ ಅಪಾಯದ ಅಂಚಿಗೆ ಸರಿದಂತಾಗಿದೆ.

● **ಶಿಕ್ಷಣ ಸಚಿವರ ಸಮಾವೇಶದಲ್ಲಿ ಗದ್ದಲ, ಸಭಾತ್ಯಾಗ**

ನವದೆಹಲಿ. ಅ. 22– ಶಿಕ್ಷಣ ರಂಗದಲ್ಲಿ ಹಿಂದುತ್ವವನ್ನು ಹೇರುವ ಪ್ರಯತ್ನವನ್ನು ವಿರೋಧಿಸಿ ಬಿಜೆಪಿಯ ಮಿತ್ರಪಕ್ಷಗಳೂ ಸೇರಿದಂತೆ ಹಲವು ರಾಜ್ಯಗಳ ಪ್ರತಿನಿಧಿಗಳು ಇಂದು ಸಭಾತ್ಯಾಗ ಮಾಡುವುದರೊಂದಿಗೆ, ಇಲ್ಲಿ ರಾಜ್ಯ ಶಿಕ್ಷಣ ಸಚಿವರುಗಳ ಸಮ್ಮೇಳನ ಕೋಲಾಹಲದಿಂದಲೇ ಪ್ರಾರಂಭಗೊಂಡಿತು.

ಆದರೆ ಮತೀಯ ಅಂಧವಿಶ್ವಾಸಕ್ಕೂ ಅಸಹನೆಗೂ ಶಿಕ್ಷಣರಂಗದಲ್ಲಿ ಸ್ಥಾನವಿಲ್ಲ ಎಂದು ಪ್ರಧಾನಿ ಎ.ಬಿ ವಾಜಪೇಯಿ ಅವರು ಸಮಾವೇಶದಲ್ಲಿ ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 23–10–1973

● **ಮಧ್ಯಪ್ರಾಚ್ಯ ಸಮರ ಅಂತ್ಯ: ಅಮೆರಿಕ–ರಷ್ಯಾ ಸಂಧಾನ ಯಶಸ್ವಿ**

ವಿಶ್ವಸಂಸ್ಥೆ, ಅ. 22– ಈಗ ಸಶಸ್ತ್ರ ಪಡೆಗಳು ಇರುವ ಸ್ಥಳದಲ್ಲೇ ಕದನವಿರಾಮ ಜಾರಿಗೆ ತರಬೇಕೆಂಬ ಭದ್ರತಾ ಸಮಿತಿ ಕರೆಯನ್ನು ಇಸ್ರೇಲ್ ಮತ್ತು ಈಜಿಪ್ಟ್ ಒಪ್ಪಿಕೊಂಡಿವೆ. ಕದನ ವಿರಾಮಕ್ಕೆ ಕರೆ ನೀಡುವ, ರಷ್ಯಾ–ಅಮೆರಿಕ ಸಂಯುಕ್ತವಾಗಿ ಮಂಡಿಸಿದ ನಿರ್ಣಯವನ್ನು ಭದ್ರತಾ ಸಮಿತಿ ಇಂದು ಅಂಗೀಕರಿಸಿತು.

ಕನದವಿರಾಮ ಇಂದು ರಾತ್ರಿ ಭಾರತೀಯ ಕಾಲಮಾನ ಹತ್ತೂವರೆಯಿಂದ ಜಾರಿಗೆ ಬರಲಿದೆ. ಇಸ್ರೇಲ್ ಮತ್ತು ಈಜಿಪ್ಟ್ ಕದನ ವಿರಾಮ ನಿರ್ಣಯಕ್ಕೆ ಒಪ್ಪಿಗೆ ನೀಡಿವೆ. ಯುದ್ಧ ಬಂದಿಗಳ ವಾಪಸಾತಿಗೆ ಇಸ್ರೇಲ್ ಒತ್ತಾಯಪಡಿಸಿದೆ.

● **ಕರ್ನಾಟಕ ಹೈಕೋರ್ಟ್**

ಬೆಂಗಳೂರು, ಅ. 22– ರಾಜ್ಯದ ಹೈಕೋರ್ಟಿನ ಹೆಸರನ್ನು ನವೆಂಬರ್ 1ರಿಂದ ಕರ್ನಾಟಕ ಹೈಕೋರ್ಟ್ ಎಂದು ಬದಲಾಯಿಸಬಹುದೆಂದು ಸರ್ಕಾರಕ್ಕೆ ಹೈಕೋರ್ಟ್ ತಿಳಿಸಿದೆ. ಅದನ್ನು ಅನುಸರಿಸಿ ಮೊಹರು, ರಬ್ಬರ್ ಸ್ಟ್ಯಾಂಪ್ಸ್, ಲೇಖನ ಸಾಮಗ್ರಿ, ನಾಮಫಲಕ ಮುಂತಾದವನ್ನು ಬದಲಾಯಿಸಲು ಕ್ರಮ ಕೈಗೊಳ್ಳುವಂತೆ ರಿಜಿಸ್ಟ್ರಾರ್ ಹೊರಡಿಸಿರುವ ಪ್ರಕಟಣೆ ತಿಳಿಸಿದೆ.

ಬೆದರಿಕೆಗೆ ಮಣಿಯುವ ರಾಷ್ಟ್ರ ಅಲ್ಲ ಎಂಬ ಸಂದೇಶವನ್ನು ವಿಶ್ವಕ್ಕೆ ಭಾರತ ಸಾರಿದೆ

ನವಭಾರತವನ್ನು ಎದುರಿಸಬೇಕಿದೆ ಕೆನಡಾ

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಭಾರತದ ರಾಷ್ಟ್ರೀಯ ನಾಯಕರ ಪುಕ್ಕಲುತನದ ಕಾರಣದಿಂದಾಗಿ, ಸ್ವಾತಂತ್ರ್ಯಾನಂತರ ಹಲವು ದಶಕಗಳವರೆಗೆ ಭಾರತವನ್ನು ಪಶ್ಚಿಮದ ದೇಶಗಳು, ಚೀನಾ ಹಾಗೂ ಕೆಲವೊಮ್ಮೆ ಪಾಕಿಸ್ತಾನ ಸಹ ಬೆದರಿಸುತ್ತಿದ್ದವು. ತನ್ನ ನಿಲುವನ್ನು ಗಟ್ಟಿಯಾಗಿ ಹೇಳಬೇಕಾಗಿದ್ದ ಸಂದರ್ಭದಲ್ಲಿಯೂ ಭಾರತವು ಬಹಳ ಸೌಮ್ಯವಾಗಿ ನಡೆದುಕೊಳ್ಳುತ್ತಿತ್ತು. ವಿಶ್ವದ ಇತರ ದೇಶಗಳ ಪಾಲಿಗೆ ಇದು ಭಾರತದ ಸಹಜ ನಡೆ ಎಂಬಂತಾಗಿತ್ತು. ಹೀಗಾಗಿ, ಕೆನಡಾದಂತಹ ದೇಶಗಳು ಇಂತಹ ನಿಲುವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದ್ದವು.

ಆದರೆ, ರಾಷ್ಟ್ರ ರಾಜಕಾರಣದಲ್ಲಿ ನರೇಂದ್ರ ಮೋದಿ ಅವರು ಮುನ್ನೆಲೆಗೆ ಬಂದ ನಂತರದಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ತಾವು 'ನವಭಾರತ'ದ ಜೊತೆ ಸಂಬಂಧ ನಿಭಾಯಿಸಬೇಕು ಎಂಬುದು ನೆರೆಯ ಚೀನಾ ಮತ್ತು ಪಾಕಿಸ್ತಾನಕ್ಕೆ ಗೊತ್ತಾಗಿದೆ. ಅಮೆರಿಕ, ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟ ಕೂಡ ಈಚಿನ ದಿನಗಳಲ್ಲಿ ಇದನ್ನು ಅರ್ಥ ಮಾಡಿಕೊಂಡಿವೆ, ತನ್ನ ಪಟ್ಟು ಬಿಟ್ಟುಕೊಡದ ಭಾರತದ ಜೊತೆ ಸಂಬಂಧಕ್ಕಾಗಿ ತಮ್ಮ ನಡೆಗಳಲ್ಲಿ ಬದಲಾವಣೆ ತಂದುಕೊಂಡಿವೆ. ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅವರ ಗಂಭೀರ ಆರೋಪಗಳಿಗೆ ಭಾರತ ನೀಡುತ್ತಿರುವ ದೃಢ ಪ್ರತಿಕ್ರಿಯೆಗಳನ್ನು 'ನವಭಾರತ'ದ ನಿಲುವುಗಳ ಸೂಚಕವಾಗಿ ನೋಡಬೇಕು.

ಕೆನಡಾದ ನೆಲದಲ್ಲಿ 'ಖಾಲಿಸ್ತಾನ' ಪರವಾಗಿ ನಡೆಯುತ್ತಿರುವ ಅಭಿಯಾನದ ಕುರಿತು ಭಾರತವು ಬಹಳ ಹಿಂದೆಯೇ ಕೆನಡಾ ಸರ್ಕಾರದ ಗಮನ ಸೆಳೆದಿತ್ತು. ಇಂದಿರಾ ಗಾಂಧಿ ಅವರ ಹತ್ಯೆಯನ್ನು ವೈಭವೀಕರಿಸುವ ಹಾಗೂ ಭಾರತದ ನಾಯಕರ ಹತ್ಯೆಗೆ ಕರೆ ನೀಡುವ ಕೆಲಸವು ಕೆನಡಾದ ಬ್ರಾಂಪ್ಟನ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಆಗಿತ್ತು. ಕೆನಡಾದ ಒಟ್ಟಾವಾದಲ್ಲಿ ಇರುವ ಭಾರತದ ಹೈಕಮಿಷನರ್, ಉಪ ಹೈಕಮಿಷನರ್ ಹಾಗೂ ಟೊರಂಟೊದಲ್ಲಿನ ಕಾನ್ಸುಲ್ ಜನರಲ್ ಹತ್ಯೆಗೆ ಕರೆ ನೀಡಲಾಗಿತ್ತು. ಆಘಾತಕಾರಿ ಸಂಗತಿಯೆಂದರೆ, ಇವೆಲ್ಲವೂ 'ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗ, ನಾವು ಮಧ್ಯಪ್ರವೇಶಿಸಲು ಆಗದು' ಎಂದು ಟ್ರೂಡೊ ನೇತೃತ್ವದ ಸರ್ಕಾರವು ಹೇಳಿತ್ತು.

ಇವೆಲ್ಲವೂ ಒಂದೆಡೆ ನಡೆಯುತ್ತಿದ್ದಾಗ, ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯು ಭಾರತ–ಕೆನಡಾ ಸಂಬಂಧವು ಹಾಳಾಗಲು ಹೊಸ ಕಾರಣವಾಗಿ ಬಂತು. ಭಾರತದ ವಿರುದ್ಧ ಅಭಿಯಾನ ನಡೆಸುವ, ಭಾರತದಲ್ಲಿ ಪ್ರತ್ಯೇಕತಾವಾದಕ್ಕೆ ಬೆಂಬಲ ನೀಡುವ ಕೆಲಸವನ್ನು ನಿಜ್ಜರ್ ಮಾಡುತ್ತಿದ್ದ. ಬ್ರಿಟಿಷ್ ಕೊಲಂಬಿಯಾದ ಸರ್ರೆ ಪ್ರದೇಶದ ಗುರುದ್ವಾರವೊಂದರ ಬಳಿ ಇಬ್ಬರು ಮುಸುಕುಧಾರಿ ವ್ಯಕ್ತಿಗಳು ನಿಜ್ಜರ್‌ನನ್ನು ಜೂನ್ 18ರಂದು ಗುಂಡಿಕ್ಕಿ ಹತ್ಯೆ ಮಾಡಿದರು.

ಹತ್ಯೆಯಾದ ಕೆಲವು ಸಮಯದ ನಂತರ, ಭಾರತದ ರಾಜತಾಂತ್ರಿಕರೊಬ್ಬರನ್ನು ಹೊರಹಾಕಲು ಕೆನಡಾ ತೀರ್ಮಾನಿಸಿತು. ಹತ್ಯೆ ಅಪರಾಧದಲ್ಲಿ ಈ ರಾಜತಾಂತ್ರಿಕ ಒಂದು ಬಗೆಯಲ್ಲಿ ಭಾಗಿ ಎಂದು ದೂರಿತು. ಇದನ್ನು ತೀವ್ರವಾಗಿ ವಿರೋಧಿಸಿದ ಭಾರತವು ಪ್ರತಿಯಾಗಿ ಕೆನಡಾದ ರಾಜತಾಂತ್ರಿಕರೊಬ್ಬರನ್ನು ಹೊರಕಳಿಸಿತು. ಕೆನಡಿಯನ್ ವ್ಯಕ್ತಿಯನ್ನು ಕೆನಡಾದ ನೆಲದಲ್ಲಿ ಹತ್ಯೆ ಮಾಡಿದ್ದರಲ್ಲಿ ಭಾರತ ಸರ್ಕಾರದ ಏಜೆಂಟರ ಪಾತ್ರವಿದೆ ಎಂದು ನಂಬುವುದಕ್ಕೆ ವಿಶ್ವಾಸಾರ್ಹ ಕಾರಣಗಳಿವೆ ಎಂದು ಕೆನಡಾ ಪ್ರಧಾನಿ ಅಲ್ಲಿನ ಸಂಸತ್ತಿನಲ್ಲಿ ಹೇಳಿದ ನಂತರದಲ್ಲಿ ಎರಡೂ ದೇಶಗಳ ನಡುವಿನ ಸಂಬಂಧವು ಹದಗೆಟ್ಟಿದೆ.

ಇದಕ್ಕೆ ಬಹಳ ದೃಢವಾದ ಪ್ರತಿಕ್ರಿಯೆ ನೀಡಿದ ಭಾರತ, ಆರೋಪಗಳು ರಾಜಕೀಯಪ್ರೇರಿತ ಎಂದು ಹೇಳಿತು. ಭಾರತ ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕಲು ಕೆನಡಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದೂ ಭಾರತ ಹೇಳಿತು. ಕೆನಡಾ ಪ್ರಜೆಗಳಿಗೆ ವೀಸಾ ನೀಡುವುದನ್ನು ಸ್ಥಗಿತಗೊಳಿಸುವ ಪ್ರಕಟಣೆ ಹೊರಡಿಸಿತು. ನಂತರದಲ್ಲಿ, 41 ಮಂದಿ ರಾಜತಾಂತ್ರಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಭಾರತವು ಕೆನಡಾಕ್ಕೆ ಸೂಚಿಸಿತು. ಇದು ಭಾರತ ನೀಡಿದ ಕಟು ಪ್ರತ್ಯುತ್ತರವೇ ಆಗಿತ್ತು. ಭಾರತದಿಂದ ಈ ಬಗೆಯ ಪ್ರತ್ಯುತ್ತರವನ್ನು ಕೆನಡಾ ಅಥವಾ ಯಾವುದೇ ಪಾಶ್ಚಿಮಾತ್ಯ ದೇಶ ಹಿಂದೆ ಕಂಡಿರಲಿಲ್ಲ. ಭಾರತದ ಪ್ರಜೆಗಳಿಗೆ ವೀಸಾ ನಿರಾಕರಿಸಿದರೆ ತನಗೇ ತೊಂದರೆ ಆಗುತ್ತದೆ ಎಂಬುದನ್ನು ಕೆನಡಾ ಅರ್ಥ ಮಾಡಿಕೊಂಡಿತು. ಏಕೆಂದರೆ ಲಕ್ಷಾಂತರ ಮಂದಿ ಭಾರತೀಯ ವಿದ್ಯಾರ್ಥಿಗಳು ಕೆನಡಾದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಭಾರತದ ವಿದ್ಯಾರ್ಥಿಗಳಿಗೆ ವೀಸಾ ನೀಡದೇ ಇದ್ದಲ್ಲಿ, ಈ ವಿಶ್ವವಿದ್ಯಾಲಯಗಳ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಉಂಟಾಗುತ್ತದೆ.

ಎರಡನೆಯದಾಗಿ, ಭಾರತ ಮೂಲದ ಜನರ ಸಂಖ್ಯೆ ಕೆನಡಾದಲ್ಲಿ ಬಹಳ ದೊಡ್ಡದಾಗಿಯೇ ಇದೆ. ಭಾರತೀಯರಿಗೆ ವೀಸಾ ನೀಡುವ ವಿಚಾರದಲ್ಲಿ ಕೆನಡಾ ನಿರ್ಬಂಧಗಳನ್ನು ಹೇರಿದಲ್ಲಿ, ಕೆನಡಾ ನಾಗರಿಕರ ಮೇಲೆಯೇ ಕೆಟ್ಟ ಪರಿಣಾಮ ಉಂಟಾಗುತ್ತದೆ. ಅಲ್ಲಿನ ಭಾರತ ಮೂಲದ ನಾಗರಿಕರಲ್ಲಿ ಹೆಚ್ಚಿನವರು ಪಂಜಾಬ್‌ನವರು. ಅವರ ಕುಟುಂಬದ ಸದಸ್ಯರು ಪಂಜಾಬ್‌ನಲ್ಲಿ ಇದ್ದಾರೆ. ನಿಜ್ಜರ್ ಹತ್ಯೆಯ ವಿಚಾರವಾಗಿ ಹೇಳುವುದಾದಲ್ಲಿ, ಈ ಹತ್ಯೆ ಪ್ರಕರಣದ ತನಿಖೆಯು ಸಮರ್ಥವಾಗಿ ಆಗಿಲ್ಲ, ತನಿಖಾ ಪ್ರಕ್ರಿಯೆ ಬಹಳ ನಿಧಾನವಾಗಿ ನಡೆದಿದೆ. ನಿಜ್ಜರ್ ಹತ್ಯೆಯಾಗಿ ನಾಲ್ಕು ತಿಂಗಳುಗಳು ಕಳೆದಿದ್ದರೂ ಯಾರನ್ನೂ ಬಂಧಿಸಲಾಗಿಲ್ಲ.

ಕೆನಡಾ ಜೊತೆಗಿನ ಸಂಘರ್ಷವು ಗಂಭೀರ ಸ್ವರೂಪ ಪಡೆದುಕೊಂಡ ನಂತರದಲ್ಲಿ ವಾಷಿಂಗ್ಟನ್‌ನಲ್ಲಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರು ಪಾಲಿಸಿಕೊಂಡು ಬಂದಿರುವ ದೃಢವಾದ ಹಾಗೂ ಯಾವುದೇ ಅವಿವೇಕಗಳಿಂದ ಹೊರತಾಗಿರುವ ನಿಲುವನ್ನು ಸ್ಪಷ್ಟವಾಗಿ ಹೇಳಿದರು. ಭಾರತದ ರಾಜತಾಂತ್ರಿಕರು ಕೆನಡಾದಲ್ಲಿ ಬೆದರಿಕೆಯ ವಾತಾವರಣದಲ್ಲಿ ಹಾಗೂ ಹಿಂಸೆಯ ಪರಿಸ್ಥಿತಿಯಲ್ಲಿ ಕೆಲಸ ಮಾಡಿದ್ದಾರೆ ಎಂದು ಜೈಶಂಕರ್ ಹೇಳಿದರು. ಈ ಪರಿಸ್ಥಿತಿ ಕೊನೆಗೊಳ್ಳಬೇಕಿತ್ತು. ಜಸ್ಟಿನ್ ಟ್ರೂಡೊ ಅವರು ಆರಂಭದಲ್ಲಿ ಖಾಸಗಿಯಾಗಿ ಕೆಲವು ಆರೋಪಗಳನ್ನು ಮಾಡಿದರು, ನಂತರದಲ್ಲಿ ಬಹಿರಂಗವಾಗಿ ಹೇಳಿಕೆಯೊಂದನ್ನು ನೀಡಿದರು ಎಂದೂ ಜೈಶಂಕರ್ ವಿವರಿಸಿದರು. ನಿರ್ದಿಷ್ಟವಾದ ಯಾವುದೇ ಆಧಾರ ಟ್ರೂಡೊ ಅವರಲ್ಲಿ ಇದ್ದರೆ ಭಾರತ ಅದನ್ನು ಪರಿಶೀಲಿಸುತ್ತದೆ. ಸಿಖ್ ಪ್ರತ್ಯೇಕತಾವಾದವು ಭಾರತ ಮತ್ತು ಕೆನಡಾ ನಡುವೆ ತೀವ್ರ ಸಂಘರ್ಷಕ್ಕೆ 1980ರ ದಶಕದಿಂದಲೂ ಕಾರಣವಾಗಿದೆ. ಅದು ಕೆಲವು ಕಾಲ ಸುಪ್ತವಾಗಿತ್ತು. ಆದರೆ ಭಯೋತ್ಪಾದನೆಯ ಬಗ್ಗೆ ಕೆನಡಾ ಹೊಂದಿರುವ ಧೋರಣೆಯ ಕಾರಣದಿಂದಾಗಿ ಮತ್ತೆ ದೊಡ್ಡ ಮಟ್ಟದಲ್ಲಿ ತಲೆ ಎತ್ತಿದೆ.

ಕೆನಡಾದ ರಾಜಕಾರಣದ ಒತ್ತಡಗಳ ಕಾರಣದಿಂದಾಗಿ, ಹಿಂಸೆಯ ಪರವಾಗಿರುವ ತೀವ್ರಗಾಮಿಗಳಿಗೆ ಕಾರ್ಯಾಚರಣೆ ನಡೆಸಲು ಕೆನಡಾದಲ್ಲಿ ಒಂದಿಷ್ಟು ಅವಕಾಶ ಲಭಿಸಿದೆ. ಅವರು ಪ್ರತ್ಯೇಕತಾವಾದ ಹಾಗೂ ಭಯೋತ್ಪಾದನೆಯನ್ನು ಹರಡುತ್ತಿದ್ದಾರೆ. ಇವೆಲ್ಲವೂ ಬೇರೆ ಬೇರೆ ವಿಚಾರಗಳ ಬಹಳ ವಿಷಕಾರಿ ಮಿಶ್ರಣ ಎಂದು ಜೈಶಂಕರ್ ಬಣ್ಣಿಸಿದ್ದಾರೆ.

ಭಾರತದ ಈ ಗಟ್ಟಿ ಉತ್ತರದ ನಂತರದಲ್ಲಿ ಕೆನಡಾ ಒಂದು ಹೆಜ್ಜೆ ಹಿಂದಕ್ಕೆ ಸರಿದಿದೆ. ಹತ್ಯೆಯನ್ನು ಉತ್ತೇಜಿಸುವ ಪೋಸ್ಟರ್‌ಗಳನ್ನು ತೆಗೆಯಲಾಗಿದೆ. ಇಡೀ ವಿಚಾರವನ್ನು ಇನ್ನಷ್ಟು ಬೆಳೆಸಲು ತಮಗೆ ಇಷ್ಟವಿಲ್ಲ ಎಂದು ಟ್ರೂಡೊ ಹೇಳಿದ್ದಾರೆ. ಮೋದಿ ಅವರ ದೃಢ ನಿಲುವುಗಳು ಈಗಂತೂ ಒಳ್ಳೆಯ ಫಲ ನೀಡುತ್ತಿರುವಂತೆ ಕಾಣುತ್ತಿದೆ. ಫಲಿತಾಂಶ ಏನೇ ಇದ್ದರೂ, ಭಾರತವು ತಾನು ಬೆದರಿಕೆಗೆ ಮಣಿಯುವ ರಾಷ್ಟ್ರ ಅಲ್ಲ ಎಂಬ ಸಂದೇಶವನ್ನು ವಿಶ್ವಕ್ಕೆ ಸಾರಿದೆ. ಇದು ಹಿಂದೆಯೇ ಆಗಬೇಕಿದ್ದ ಕೆಲಸ!

ಚುರುಮುರಿ

ಉದ್ಘಾಟನಾ ಪಾಲಿಟಿಕ್ಸ್

● ಗುರು ಪಿ.ಎಸ್.

'ಬೇಗ ಬೇಗ ಮಾಡಿ ಮಾರ್ರೆ, ಎಲೆಕ್ಷನ್ ಮುಗಿಯೋದ್ರೊಳಗೆ ನಿಮ್ಮ ಕೆಲಸ ಕಂಪ್ಲೀಟ್ ಆಗ್ಬೇಕು ಗೊತ್ತಾಯ್ತಲ್ವಾ' ಒಂದೇ ಉಸಿರಿನಲ್ಲಿ ಒತ್ತಾಯಿಸುತ್ತಿದ್ದ ಎಮ್ಮೆಲ್ಲೆ ಪಿ.ಎ. ಮುದ್ದಣ್ಣ.

'ಎಂತ ನಿಂದು ಪಿರಿಪಿರಿ? ದೇವರ ಮೂರ್ತಿ ಚಂದ ಕಾಣಬೇಕ, ಬೇಡ್ವ?' ಕೇಳಿದ ಮುದ್ದಣ್ಣನ ಸ್ನೇಹಿತ ವಿಜಿ.

'ಚಂದಸ ಕಾಣಬೇಕು, ಬೇಗ ಮುಗೀಬೇಕು ಮಾರ್ರೆ. ಇಲ್ಲದ್ರೆ ನಮ್ಮ ಬಾಸ್ ಉಂಟಲ್ಲ, ನನ್ನ ತಲೆಯನ್ನೇ ತೆಗೀತಾರೆ'.

'ಅಲ್ಲ ಮಾರ್ರೆ ಇಷ್ಟು ಅರ್ಜಂಟ್ ಯಾಕೆ?'

'ನೋಡಣ್ಣ, ನಮ್ಮ ಕಡೆಯ ಆರಾಧ್ಯವ್ಯಕ್ತಿಯ ಮೂರ್ತಿ ಇದು. ಎಲೆಕ್ಷನ್‌ಗಿಂತ ಮುಂಚೆಯೇ ಅನಾವರಣ ಆದ್ರೆ, ಯಾವಾಗ್ಲೂ ಬರುದಕ್ಕಿಂತ ಒಂದಷ್ಟು ಹೆಚ್ಚು ವೋಟು ಬೀಳ್ತಾವಲ್ಲ'

'ಹೌದು, ಈ ಮೂರ್ತಿ ಕಂಚಿನದೋ, ಫೈಬರ್‌ದೋ' ಶಿಲ್ಪ ಕಲಾವಿದರನ್ನು ಕೇಳಿದ ವಿಜಿ.

'ಎಂಥದೋ ಒಂದು ಹಾಕಿ ಮಾಡ್ತಾರೆ, ನೀ ಸುಮ್ಮನೆ ಇರು ಮಾರ್ರೆ. ಎಲೆಕ್ಷನ್ ಆದ ಮೇಲೆ ನಮ್ಮದೇ ಸರ್ಕಾರ ಬರ್ತದೆ ಅಲ್ವಾ, ಆಗ ಎಲ್ಲ ಸರಿಯಾಗಿ ಮಾಡಿದ್ರಾಯ್ತು' ಗದರಿದ ಮುದ್ದಣ್ಣ.

'ಒಂದು ವೇಳೆ ಬರ್ಲಿಲ್ಲ ಅಂತಾದ್ರೆ?'

'ಆಗ, ಕಲಾವಿದರ ಮೇಲೆ ಹಾಕಿದ್ರಾಯ್ತು' ಸಿಟ್ಟಲ್ಲಿದ್ದುಕೊಂಡೇ ನಕ್ಕ ಮುದ್ದಣ್ಣ.

'ನಿಮ್ಮ ಎಮ್ಮೆಲ್ಲೆ ಯಾವಾಗಲೂ ಹೀಗೇನಾ?'

'ನಮ್ ಬಾಸ್ ಮಾತ್ರ ಅಲ್ಲಣ್ಣ, ಅಧಿಕಾರದಲ್ಲಿರೋರು ಎಲ್ಲರೂ ಹಾಗೇ'.

'ಅಂದ್ರೆ?'

'ನಮ್ಮ ಕಾಲದಲ್ಲೇ ದೊಡ್ಡ ಪ್ರಾಜೆಕ್ಟ್‌ಗಳೆಲ್ಲ ಉದ್ಘಾಟನೆ ಆಗಬೇಕು, ಕ್ರೆಡಿಟ್ ನಮಗೇ ಸಿಗಬೇಕು, ಎಲೆಕ್ಷನ್ ಗೆಲ್ಲುತ್ತಲೇ ಇರಬೇಕು ಅಂತ ಆಸೆ. ಇದೊಂದು ಥರ ಉದ್ಘಾಟನಾ ಪಾಲಿಟಿಕ್ಸ್'.

'ಮತ್ತೆ ಗುಣಮಟ್ಟ?'

'ಸುಮ್ಮನೆ ಇರು ಮಾರ್ರೆ. ನೀನು ಬೋಧನೆ ಮಾಡಬೇಡ. ನಮಗೆಲ್ಲ ಗೊತ್ತುಂಟು. ನೋಡಿಲ್ಲಿ ನಮ್ಮ ನ್ಯಾಷನಲ್ ಬಾಸ್, ರೈಲಿಗೇ ಅವರ ಹೆಸರಿಟ್ಟಿದ್ದಾರೆ. ಅವರ ಮುಂದೆ ನಾವೆಲ್ಲ ಏನು?'

'ಓಹ್, ತುಂಬಾ ಕರೆಕ್ಟ್ ನಿರ್ಧಾರ' ವ್ಯಂಗ್ಯವಾಗಿ ನಕ್ಕ ವಿಜಿ.

'ಯಾಕೀ ಕುಹಕ?'

'...ಅನ್ವರ್ಥನಾಮ' ಅಂದು ಕಾಲ್ಕಿತ್ತ ವಿಜಿ.

ಸಂಗತ

ಮೇಲೆ ಕಸ, ಕೆಳಗೆ ದಂಡ!

ಬಾಹ್ಯಾಕಾಶವನ್ನು ಗಲೀಜು ಮಾಡುವವರು ಎಚ್ಚೆತ್ತುಕೊಳ್ಳಲೇಬೇಕು

● ಗುರುರಾಜ್ ಎಸ್. ದಾವಣಗೆರೆ

ಮೇಲೆ ಕಸ, ಕೆಳಗೆ ದಂಡ! ಈ ಶೀರ್ಷಿಕೆ ವಿಚಿತ್ರವಾಗಿದೆ ಅನಿಸುತ್ತಿದೆಯೇ? ವಿಷಯವೇ ಹಾಗಿದೆ. ವಿಶ್ವದ ಬಾಹ್ಯಾಕಾಶ ಇತಿಹಾಸದಲ್ಲೇ ಪ್ರಥಮ ಬಾರಿಗೆ, ಬಾಹ್ಯಾಕಾಶ ಕಕ್ಷೆಯಲ್ಲಿ ಕಸ ಹಾಕಿದ್ದಕ್ಕೆ ಟೆಲಿವಿಷನ್ ಕಂಪನಿಯೊಂದಕ್ಕೆ ಭಾರಿ ದಂಡ ಹಾಕಲಾಗಿದೆ. ದಂಡ ಹಾಕಿಸಿಕೊಂಡ ಕಂಪನಿ ಎರಡು ಕಂತಿನಲ್ಲಿ ದಂಡ ಪಾವತಿಸಲು ಅನುಮತಿ ಕೇಳಿದೆ. ಅಚ್ಚರಿ ವ್ಯಕ್ತಪಡಿಸುತ್ತಲೇ ಈ ಕ್ರಮವನ್ನು ಸ್ವಾಗತಿಸಿರುವ ಸಂಶೋಧನಾ ಸಂಸ್ಥೆಗಳು, ಇದು ಎಲ್ಲರಿಗೂ ಎಚ್ಚರಿಕೆಯ ಪಾಠವಾಗಲಿದೆ ಎಂದು ಹೇಳಿವೆ.

ನಡೆದಿರುವುದು ಇಷ್ಟು. ಅಮೆರಿಕದ 'ಡಿಶ್' ಟೆಲಿವಿಷನ್ ಸಂಸ್ಥೆ ತನ್ನ ಪ್ರಸಾರ ಜಾಲದ ಭಾಗವಾಗಿ 2002ರಲ್ಲಿ ಎಕೊಸ್ಟಾರ್–7 ಎಂಬ ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಹಾರಿಸಿತು. ಇಪ್ಪತ್ತೊಂದು ವರ್ಷಗಳ ಸುದೀರ್ಘ ಕೆಲಸದ ನಂತರ ಅದು ನಿಷ್ಕ್ರಿಯಗೊಂಡಿತ್ತು. ಹೀಗೆ ನಿಷ್ಕ್ರಿಯಗೊಳ್ಳುವ ಉಪಗ್ರಹವನ್ನು ಅದು ಇರುವ ಕಕ್ಷೆಯಿಂದ ಮೇಲು ಕಕ್ಷೆಗೆ ಅಥವಾ ಸುರಕ್ಷಿತ ಕಕ್ಷೆಗೆ ವರ್ಗಾಯಿಸುವ ಜವಾಬ್ದಾರಿ ಅದನ್ನು ಮೇಲಾಕಾಶಕ್ಕೆ ಕಳಿಸಿದ ಸಂಸ್ಥೆಯದೇ ಆಗಿರುತ್ತದೆ. ಅಂಥ ಒಪ್ಪಂದವೊಂದಕ್ಕೆ ಸಂಸ್ಥೆಗಳು, ಕಂಪನಿಗಳು ಸಹಿ ಹಾಕಿರುತ್ತವೆ. ತಪ್ಪಿದಲ್ಲಿ ದಂಡ ತೆರಬೇಕೆಂಬ ನಿಬಂಧನೆಯೂ ಅದರಲ್ಲಿರುತ್ತದೆ.

ಬಾಹ್ಯಾಕಾಶ ಚಟುವಟಿಕೆಗಳನ್ನು ನಿಗಾ ಮಾಡುವ, ನಿಯಂತ್ರಿಸುವ ಹೊಣೆ ಹೊತ್ತಿರುವ ಅಮೆರಿಕದ 'ಫೆಡರಲ್ ಕಮ್ಯುನಿಕೇಷನ್ಸ್ ಕಮಿಷನ್' (ಎಫ್‌ಸಿಸಿ) ಸಂಸ್ಥೆಯು ದಂಡ ವಿಧಿಸುವ ಅಧಿಕಾರ ಪಡೆದಿದೆ. ವಾಣಿಜ್ಯ ಉದ್ದೇಶ– ವ್ಯವಹಾರದ ಕಂಪನಿಗಳು ಎಫ್‌ಸಿಸಿಯ ಒಪ್ಪಂದಕ್ಕೆ ಸಹಿ ಮಾಡಿದ ನಂತರವಷ್ಟೇ ಉಪಗ್ರಹ ಹಾರಿಸಲು ಅನುಮತಿ ದೊರಕುತ್ತದೆ.

ಡಿಶ್ ಕಂಪನಿಯ ಉಪಗ್ರಹ ತನ್ನ ಕೆಲಸ ಮುಗಿಸಿ ಗುಜರಿಯಾಗಿತ್ತು. ಒಪ್ಪಂದದಂತೆ ಡಿಶ್ ಕಂಪನಿಯವರು ಕೆಲಸ ಮುಗಿಸಿದ ಉಪಗ್ರಹವನ್ನು ತಾನಿದ್ದ ಕಕ್ಷೆಯಿಂದ 7,200 ಕಿ.ಮೀ. ಎತ್ತರದ ಕಕ್ಷೆಯಲ್ಲಿ ಇರಿಸಬೇಕಿತ್ತು. ಆದರೆ ಅದರಲ್ಲಿದ್ದ ಇಂಧನ ಖಾಲಿಯಾದದ್ದರಿಂದ ಕಂಪನಿಯು ಬರೀ 122 ಕಿ.ಮೀ. ಎತ್ತರದ ಕಕ್ಷೆಗೆ ಅದನ್ನು ವರ್ಗಾಯಿಸಿ ಕೈತೊಳೆದುಕೊಂಡಿತ್ತು. ಇದನ್ನು ಗಮನಿಸಿದ ಎಫ್‌ಸಿಸಿ, ಇದು ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿದೆ, ಇದರಿಂದ ಕಕ್ಷೆಯಲ್ಲಿರುವ ಇತರ ಕ್ರಿಯಾತ್ಮಕ ಉಪಗ್ರಹಗಳಿಗೆ ತೊಂದರೆಯಾಗುತ್ತದೆ ಎಂಬ ಕಾರಣ ನೀಡಿ ಡಿಶ್ ಕಂಪನಿಗೆ ಬರೋಬ್ಬರಿ ಒಂದೂವರೆ ಲಕ್ಷ ಡಾಲರ್‌ಗಳ ದಂಡ ಹಾಕಿದೆ.

ಡಿಶ್ ಕಂಪನಿಯ ಉಪಗ್ರಹವು ಭೂಮಧ್ಯ ರೇಖೆಯಿಂದ 36,000 ಕಿ.ಮೀ. ಎತ್ತರದ ಭೂಸ್ಥಿರ ಜಿಯೊಸ್ಟೇಷನರಿ ಕಕ್ಷೆಯಲ್ಲಿ ಸುತ್ತುತ್ತಿತ್ತು. ಹವಾಮಾನ, ಮಿಲಿಟರಿ ಬೇಹುಗಾರಿಕೆ ಮತ್ತು ಪ್ರಸಾರಕ್ಕಾಗಿ ಬಳಸುವ ಉಪಗ್ರಹಗಳು ಸುತ್ತುವ ಕಕ್ಷೆಯನ್ನು ಜಿಯೊಸ್ಟೇಷನರಿ ಕಕ್ಷೆ ಎನ್ನುತ್ತೇವೆ. ಈಗಾಗಲೇ ಈ ಕಕ್ಷೆಯಲ್ಲಿ ವಿವಿಧ ದೇಶಗಳಿಗೆ ಸಂಬಂಧಿಸಿದ 500ಕ್ಕೂ ಹೆಚ್ಚು ಉಪಗ್ರಹಗಳು ನೆಲೆಯಾಗಿದ್ದು, ಭೂಮಿಯ ಜೊತೆಗೇ ಸುತ್ತುತ್ತ ಹಲವು ಅನುಕೂಲ ಕಲ್ಪಿಸಿವೆ. ಬಾಹ್ಯಾಕಾಶದಲ್ಲಿರುವ ಸಕ್ರಿಯ ಉಪಗ್ರಹಗಳ ಸಂಖ್ಯೆ 7,000ಕ್ಕೂ ಹೆಚ್ಚು. ನಾಲ್ಕೂವರೆ ಸಾವಿರದಷ್ಟು ಉಪಗ್ರಹಗಳು ಭೂಮಿಯಿಂದ ಬರೀ 2,000 ಕಿ.ಮೀ. ಎತ್ತರದಲ್ಲಿವೆ. ಬಾಹ್ಯಾಕಾಶ ಚಟುವಟಿಕೆಗಳು ಖಾಸಗಿ ವಲಯಕ್ಕೆ ತೆರೆದುಕೊಂಡಿರುವುದರಿಂದ ಈ ದಶಕದ ಅಂತ್ಯದ ವೇಳೆಗೆ ಬಾಹ್ಯಾಕಾಶ ಸೇರುವ ಉಪಗ್ರಹಗಳ ಸಂಖ್ಯೆ 58,000 ತಲುಪುವ ಅಂದಾಜಿದೆ.

ಭೂಮಿಯ ಮೇಲೆ ಕಸ ಹಾಕಲು ಜಾಗಗಳಿರುವಂತೆ ಬಾಹ್ಯಾಕಾಶದಲ್ಲೂ 'ಸ್ಯಾಟಲೈಟ್ ಜಂಕ್ ಯಾರ್ಡ್' ಸೃಷ್ಟಿಯಾಗಿದೆ. ಅದು ಉಪಗ್ರಹ ಇರುವ ಜಾಗದಿಂದ ಕನಿಷ್ಠ 600 ಕಿ.ಮೀ.ನಷ್ಟು ಎತ್ತರದಲ್ಲಿರುತ್ತದೆ. ಉಪಗ್ರಹಗಳ ಸಂಖ್ಯೆ ಹೆಚ್ಚಾದಂತೆ ಕಸವೂ ಹೆಚ್ಚುತ್ತದೆ. ಯಾವುದೇ ಉಪಗ್ರಹದ ಅವಧಿ ತೀರಿದರೆ ಅದನ್ನು ಮೇಲುಕಕ್ಷೆಗೆ ಒಯ್ಯಲೇಬೇಕು. ಇಲ್ಲದಿದ್ದರೆ ದಂಡ ಕಟ್ಟಲು ತಯಾರಿರಬೇಕು. ಮುಂದಿನದ್ದನ್ನು ಎಫ್‌ಸಿಸಿ ನೋಡಿಕೊಳ್ಳುತ್ತದೆ.

ಬಾಹ್ಯಾಕಾಶದಲ್ಲಿ ದಿಕ್ಕುತಪ್ಪಿ ಸುತ್ತುವ ಉಪಗ್ರಹದ ಸಣ್ಣಸಣ್ಣ ಭಾಗಗಳನ್ನು ಪತ್ತೆಹಚ್ಚುವುದು ತುಂಬಾ ಕಷ್ಟ. ಅಮೆರಿಕದ ಸ್ಪೇಸ್ ಸರ್ವೇಲೆನ್ಸ್ ಸಿಸ್ಟಂ ಮತ್ತು ಲಿಯೊಲ್ಯಾಬ್‌ಗಳು ಬಾಹ್ಯಾಕಾಶದಲ್ಲಿರುವ ಉಪಗ್ರಹದ ದೊಡ್ಡ ಕಸ-ತುಣುಕುಗಳನ್ನು ಪತ್ತೆಹಚ್ಚುತ್ತವೆ. ಈಗಾಗಲೇ ವಿವಿಧ ಅಳತೆಯ 34,000 ತುಂಡುಗಳು ಮೇಲಾಕಾಶದ ಕಕ್ಷೆಗಳಲ್ಲಿವೆ. ಮೇಲೆ ಹೋಗುವ ರಾಕೆಟ್‌ನ ಭಾಗಗಳು, ಸ್ಫೋಟಗೊಳ್ಳುವ ಉಪಗ್ರಹಗಳು ಅಲ್ಲಿ ಕಸವಾಗಿ ಬದಲಾಗಿ ಗಗನಯಾತ್ರಿ ಮತ್ತು ಉಪಗ್ರಹಗಳಿಗೆ ಗಂಟೆಗೆ 18,000 ಮೈಲಿ ವೇಗದಲ್ಲಿ ಡಿಕ್ಕಿ ಹೊಡೆಯುತ್ತವೆ. 1997ರಲ್ಲಿ ಮಾನವರಹಿತ ಉಪಗ್ರಹದ ತುಣುಕೊಂದು ರಷ್ಯಾದ ಬಾಹ್ಯಾಕಾಶ ನಿಲ್ದಾಣ ಮಿರ್‌ಗೆ ಡಿಕ್ಕಿ ಹೊಡೆದಾಗ ಮಿರ್‌ನ ಸೌರಫಲಕಗಳು ಜಖಂಗೊಂಡಿದ್ದವು.

ಜನಸಾಮಾನ್ಯರಿಗೆ ಬಾಹ್ಯಾಕಾಶ ಪ್ರವಾಸ ಏರ್ಪಡಿಸುತ್ತಿರುವ ಇಲಾನ್ ಮಸ್ಕ್ ಅವರ ಸ್ಪೇಸ್ ಎಕ್ಸ್ ಮತ್ತು ಜೆಫ್ ಬೆಜೋಸ್ ಅವರ ಬ್ಲೂ ಆರಿಜಿನ್ ಕಂಪನಿಗಳು ಉಪಗ್ರಹ ಕೊಂಡೊಯ್ಯುವ ತಮ್ಮ ರಾಕೆಟ್‌ಗಳ ಕಸ ಮೇಲಾಕಾಶದಲ್ಲಿ ಇರಕೂಡದು ಎಂಬ ಒಳ್ಳೆಯ ನಿರ್ಧಾರದಿಂದ, ಪುನರ್‌ಬಳಸಬಹುದಾದ ರಾಕೆಟ್‌ಗಳನ್ನು ತಯಾರಿಸಿಕೊಂಡು ಉಡಾವಣೆ ಮಾಡುತ್ತಿವೆ. ಈಗಾಗಲೇ ನಾವು ಬಳಸಿ ಬಿಸಾಡಿದ ಪ್ಲಾಸ್ಟಿಕ್‌ನಿಂದ ಪೆಸಿಫಿಕ್ ಸಾಗರದಲ್ಲಿ 'ಕಸದ ದ್ವೀಪ ಖಂಡ'ವೇ ನಿರ್ಮಾಣವಾಗಿದೆ. ಮೇಲಿನ ಆಕಾಶವನ್ನಾದರೂ ಕಸಮುಕ್ತವಾಗಿ ಇಟ್ಟುಕೊಳ್ಳದಿದ್ದರೆ ಹೇಗೆ? ಈ ವಿಚಾರದಲ್ಲಿ ದಂಡಂ ದಶಗುಣಂ ಸರಿಯಾಗಿದೆ.

ವಾಚಕರ ವಾಣಿ

ಕಡ್ಡಾಯ ಗ್ರಾಮೀಣ ಸೇವೆ ರದ್ದು: ಸಮಂಜಸ ಕ್ರಮ

ವೈದ್ಯರಿಗಾಗಿ ಕಡ್ಡಾಯ ಗ್ರಾಮೀಣ ಸೇವೆಯನ್ನು ರಾಜ್ಯದಲ್ಲಿ ಜಾರಿಗೆ ತಂದಾಗ ಅದರ ಉದ್ದೇಶವೇ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಾಗಿತ್ತು. ಆಗ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಕೊರತೆ ಇತ್ತು. ತಜ್ಞ ವೈದ್ಯರು ಸರ್ಕಾರದ ಸೇವೆಗೆ ಸೇರಲು ಹಿಂಜರಿಯುತ್ತಿದ್ದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇದ್ದ ವೈದ್ಯರ ಹುದ್ದೆಗಳಿಗೆ ಪರ್ಯಾಯವಾಗಿ ಕಡ್ಡಾಯ ಸೇವೆಯ ವೈದ್ಯರನ್ನು ನೇಮಕ ಮಾಡಲಾಗುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಗ್ರಾಮೀಣ ಪ್ರದೇಶದ ಅನೇಕ ವೈದ್ಯಾಧಿಕಾರಿಗಳ ಹುದ್ದೆಗಳು ವೈದ್ಯರ ಹೊಸ ನೇಮಕಾತಿಯಿಂದ ಭರ್ತಿಯಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಅರೋಗ್ಯ ಸೇವೆಗಳು ಸುಲಭವಾಗಿ ಲಭ್ಯವಾಗುತ್ತಿವೆ. ಸಮುದಾಯ ವೈದ್ಯ ಕೇಂದ್ರಗಳು ಮತ್ತು ತಾಲ್ಲೂಕು ಆಸ್ಪತ್ರೆಗಳ ತಜ್ಞ ವೈದ್ಯರ ಹುದ್ದೆಗಳೂ ಭರ್ತಿಯಾಗುತ್ತಿವೆ. ಬಹುತೇಕ ಕಡೆ ನುರಿತ ವೈದ್ಯರ ಸೇವೆ ಜನರಿಗೆ ಸ್ಥಳೀಯವಾಗಿಯೇ ಲಭ್ಯವಾಗುತ್ತಿದೆ. ಈ ಕಾರಣಗಳಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಖಾಲಿ ಹುದ್ದೆಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ಮತ್ತೊಂದು ಕಡೆ, ವೈದ್ಯಕೀಯ ಕಾಲೇಜುಗಳ ಸಂಖ್ಯೆಯ ಹೆಚ್ಚಳದಿಂದ ಪ್ರತಿವರ್ಷ ಹೆಚ್ಚಿನ ಸಂಖ್ಯೆಯ ವೈದ್ಯರು ಹೊರಬರುತ್ತಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹುದ್ದೆ ಖಾಲಿ ಇಲ್ಲದೆ ಇವರೆಲ್ಲರಿಗೂ ಕಡ್ಡಾಯ ಸೇವೆಗೆ ಜಾಗ ತೋರಿಸುವುದು ಸಾಧ್ಯವಾಗುವುದಿಲ್ಲ. ಕಡ್ಡಾಯ ಸೇವೆಯ ಕಾನೂನು ಇರುವುದರಿಂದ ಪದವಿ ಪಡೆದು ಹೊರಬಂದ ವೈದ್ಯರಿಗೆ ತಮ್ಮ ಪ್ರಮಾಣಪತ್ರಗಳು ಸಿಗದೆ ತೊಂದರೆಯಾಗುತ್ತದೆ. ಆದ್ದರಿಂದ ಕಡ್ಡಾಯ ಸೇವೆಯಿಂದ ವೈದ್ಯರಿಗೆ ವಿನಾಯಿತಿ ನೀಡುವ ಸರ್ಕಾರದ ನಿರ್ಧಾರ ಸಮಂಜಸವಾಗಿದೆ.

ಡಾ.ಕೆ.ಎಸ್.ಗಂಗಾಧರ, ಶಿವಮೊಗ್ಗ

ಹಳ್ಳಿ ಸೇವೆ...

ಕೋಟಿ ಕೋಟಿ ಚೆಲ್ಲಿ
ಪಿ.ಜಿ. ಸೀಟು ಪಡೆದು
ನಂತರ ಅದನ್ನು
ಬಡ್ಡಿಸಹಿತ ಸೆಳೆವವರಿಗೆ,
ಒಂದಿಪ್ಪತ್ತು ಲಕ್ಷ ರೂಪಾಯಿ
ಎಂದರೆ ಜುಜುಬಿ ಎಂದೇ
ಭಾವಿಸಬಹುದು.
ಗ್ರಾಮೀಣ ಸೇವೆ ಸಲ್ಲಿಸಲು
ಒಲ್ಲದವರಿಂದ ಇಷ್ಟನ್ನೂ ವಸೂಲು
ಮಾಡುವ ಧಮ್ ಇಲ್ಲವೇ
ನಮ್ಮನ್ನು ಆಳುವವರಿಗೆ?
ದುಡ್ಡು ಹೆಚ್ಚಾದವರು ಖಜಾನೆ
ತುಂಬುತ್ತಾರೆ; ದುಡ್ಡು ಇಲ್ಲದವರು
ಹಳ್ಳಿಗಳ ಆಸ್ಪತ್ರೆಗಳನ್ನು ತುಂಬುತ್ತಾರೆ!

ಡಾ. ಶ.ಶಿ.ಶಿರಹಟ್ಟಿ
ವಿಜಯಪುರ

ತಂದವರೇ ತೆಗೆಯಲಿ ಕಸದ ರಾಶಿ

ಹಬ್ಬಗಳು ಸಂಭ್ರಮದ ಪ್ರತೀಕ. ತಳಿರು ತೋರಣ ಕಟ್ಟಲು, ಪೂಜೆ, ಅಲಂಕಾರಕ್ಕೆ ಮಾವಿನ ಸೊಪ್ಪು, ಬಾಳೆ ಕಂಬ, ಕಬ್ಬಿನಜಲ್ಲೆ, ಬೂದುಗುಂಬಳದಂತಹವು ಬೇಕು. ರೈತರು, ಮಾರಾಟಗಾರರು, ಖರೀದಿದಾರರಿಗೆ ಇದರಿಂದ ಅನುಕೂಲವೇ. ಇವುಗಳನ್ನು ಮಾರುಕಟ್ಟೆ ಪ್ರದೇಶ ಮಾತ್ರವಲ್ಲದೆ ಆಯಕಟ್ಟಿನ ಸ್ಥಳಗಳಲ್ಲೂ ಇಟ್ಟುಕೊಂಡು ಮಾರಾಟ ಮಾಡುತ್ತಾರೆ. ಆದರೆ ಮಾರಾಟಕ್ಕಾಗಿ ಇವುಗಳನ್ನು ತರುವಾಗ ಇರುವ ಆಸಕ್ತಿ ಅಲ್ಲಿಂದ ಹೊರಡುವಾಗ ಇರುವುದಿಲ್ಲ. ವ್ಯರ್ಥ ಹಾಗೂ ಮಾರಾಟವಾಗದೇ ಉಳಿದದ್ದನ್ನು ಹಾಗೇ ಬಿಟ್ಟು ಹೊರಡುತ್ತಾರೆ.

ಒಂದೆಡೆ, ಮನೆ ಮನೆಗಳಲ್ಲಿ ಹಬ್ಬದ ಸಂಭ್ರಮವಾದರೆ, ಬೀದಿಗಳಲ್ಲಿ ಕಸದ ರಾಶಿ. ಹೀಗಾಗುವುದರ ಬದಲು ಈ ವಸ್ತುಗಳನ್ನು ಮಾರಾಟಕ್ಕೆ ತರುವವರೇ ಅಲ್ಲಿಂದ ಹೊರಡುವಾಗ ವಿಲೇವಾರಿ ಮಾಡುವುದು ಸೂಕ್ತ. ಈ ದಿಸೆಯಲ್ಲಿ ಸ್ಥಳೀಯ ಆಡಳಿತ ಕ್ರಮ ಕೈಗೊಳ್ಳಬೇಕು.

ಸುಮಾವೀಣಾ, ಹಾಸನ

ವಿದ್ಯುತ್ ಉಳಿತಾಯದ ಪಾಠ ಕಲಿಯಲಿ

'ಬೇಕು ವಿದ್ಯುತ್ ಉಳಿತಾಯದ ಸೂತ್ರ' ಎಂಬ ಪ.ರಾಮಕೃಷ್ಣ ಶಾಸ್ತ್ರಿ ಅವರ ಲೇಖನ (ಸಂಗತ, ಅ. 21) ಸಕಾಲಿಕವಾಗಿದೆ. ಮಂಗಳೂರಿನಲ್ಲಿ ಜಿಲ್ಲಾಡಳಿತ ಈ ಬಾರಿ ನವರಾತ್ರಿ ಆಚರಣೆಯ ಹಿನ್ನೆಲೆಯಲ್ಲಿ ರಸ್ತೆ ವಿದ್ಯುತ್ ಅಲಂಕಾರಕ್ಕೆ ₹ 3 ಕೋಟಿ ಖರ್ಚು ಮಾಡಿರುವುದಾಗಿ ಹೆಮ್ಮೆಯಿಂದ ಹೇಳಿಕೊಂಡಿದೆ. ಅದೇ ಹಣದಲ್ಲಿ ಒಂದಿಷ್ಟನ್ನು ಉಳಿಸಿಕೊಂಡಿದ್ದರೆ, ಮುಂಬರಬಹುದಾದ ಜಲಕ್ಷಾಮದ ಸಂದರ್ಭದಲ್ಲಿ ಬಳಸಿಕೊಳ್ಳಬಹುದಿತ್ತು. ಮಳೆಯಿಲ್ಲ, ಹೀಗಾಗಿ ನೀರು, ವಿದ್ಯುತ್‌ನಂತಹ ಸಂಪನ್ಮೂಲಗಳನ್ನು ಈಗಿನಿಂದಲೇ ಮಿತವಾಗಿ ಬಳಸಿ ಎಂದು ಕರೆ ನೀಡಬಹುದಿತ್ತು. ಯಾವ ಸಂದರ್ಭದಲ್ಲಿ ಯಾವ ಕೆಲಸಕ್ಕೆ ಎಷ್ಟು ಒತ್ತು ಕೊಡಬೇಕು ಎನ್ನುವುದನ್ನು ಅಧಿಕಾರಿ ವರ್ಗ ಅರ್ಥ ಮಾಡಿಕೊಳ್ಳಬೇಕು.

ಸರೋಜಾ ಪ್ರಕಾಶ, ಮಂಗಳೂರು

ಸೌಹಾರ್ದದ ಅಸ್ಮಿತೆ ಮೆರೆದವರು

ಜಾತ್ರೆ ವ್ಯಾಪಾರದಲ್ಲಿ ಗ್ರಾಹಕರು ಧರ್ಮಕ್ಕೆ ಸೊಪ್ಪು ಹಾಕದಿರುವುದು (ಪ್ರ.ವಾ., ಅ. 20) ನಿಜಕ್ಕೂ ಎಲ್ಲರ ಮನಸ್ಸಿಗೆ ಮುದವನ್ನು ಉಂಟುಮಾಡುವ 'ಒಳ್ಳೆ ಸುದ್ದಿ'ಯೇ ಆಗಿದೆ. ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ನವರಾತ್ರಿ ಉತ್ಸವದ ಸಂದರ್ಭದಲ್ಲಿ ದೇವಸ್ಥಾನದ ಆಸುಪಾಸಿನ ಬೀದಿಗಳಲ್ಲಿ ಹಿಂದೂಗಳಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ಕಲ್ಪಿಸಬೇಕೆಂದು ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಸನಾತನ ಹಿಂದೂ ವ್ಯಾಪಾರಸ್ಥರ ಸಂಘದವರು ಇಟ್ಟಿದ್ದರೆನ್ನಲಾದ ಬೇಡಿಕೆ ಈಡೇರದಿದ್ದಾಗ, ಭಗವಾಧ್ವಜ ಕಟ್ಟಿರುವ ಮಳಿಗೆಗಳಲ್ಲಿ ಮಾತ್ರ ಖರೀದಿಸುವಂತೆ ಹಿಂದೂಗಳಿಗೆ ಸಂದೇಶ ರವಾನಿಸಿದ್ದರು. ಆದರೆ, ಇದಕ್ಕೆ ಗ್ರಾಹಕರು ಸೊಪ್ಪು ಹಾಕಿಲ್ಲ. ಹಿಂದೂಗಳ ಮಳಿಗೆಗಳಲ್ಲಿ ಮುಸ್ಲಿಮರು, ಮುಸ್ಲಿಮರ ಮಳಿಗೆಗಳಲ್ಲಿ ಹಿಂದೂಗಳು ವ್ಯಾಪಾರ ನಡೆಸಿದ್ದು ಕಂಡುಬಂದಿದೆ.

ಭಾರತದಲ್ಲಿ ಸಹನಶೀಲತೆ ಹಾಗೂ ಸೌಹಾರ್ದಕ್ಕೆ ಪ್ರಖ್ಯಾತರಾದ ಕನ್ನಡಿಗರ ವಿಶಿಷ್ಟ ಅಸ್ಮಿತೆಯನ್ನು ಮೆರೆದು ಮಾದರಿ ಎನಿಸಿದ ಮಂಗಳೂರಿನ ಜನರಿಗೆ ಕರ್ನಾಟಕದ ಸಮಸ್ತರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಈಗಲಾದರೂ ನಮ್ಮ ಕೋಮುವಾದಿ ರಾಜಕಾರಣಿಗಳು ಮತ್ತು ಅವರ ಬಳಗದ ಕಣ್ಣು ತೆರೆಯುತ್ತದೆಯೇ?

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಕ್ರೀಡೆಯಲ್ಲಿ ಶತ್ರುತ್ವ ಇಲ್ಲ. ಯಾವುದೇ ಆಟವು ಎರಡು ತಂಡಗಳ ನಡುವಣ ಸಂಘರ್ಷ ಅಲ್ಲವೇ ಅಲ್ಲ. ಆಟದಲ್ಲಿ ಸೋಲು–ಗೆಲುವಿಗಿಂತ ಭಾಗವಹಿಸುವಿಕೆಯೇ ಮಹತ್ವದ್ದು ಎಂಬ ಭಾವನೆ ಇದೆ. ನಿಜ ಜೀವನದಲ್ಲಿಯೂ ಕ್ರೀಡಾಸ್ಫೂರ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಲಾಗುತ್ತಿದೆ. ಆದರೆ, ಕೆಲವೊಮ್ಮೆ ಕ್ರೀಡಾಂಗಣವೇ ದ್ವೇಷಕ್ಕೆ ಸಾಕ್ಷಿಯಾಗಿಬಿಡುತ್ತದೆ. ಅಂತಹ ಕೆಲವು ಘಟನೆಗಳ ಸುತ್ತ...

ದ್ವೇಷದ ಭರದಲ್ಲಿ ಮರೆಯಾದ ಕ್ರೀಡಾಸ್ಫೂರ್ತಿ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ವಿಶ್ವಕಪ್ ನಡೆಯುತ್ತಿದೆ. ಅ.14ರಂದು ಭಾರತ–ಪಾಕಿಸ್ತಾನ ಪಂದ್ಯವು ಗುಜರಾತ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಿತು. ಈ ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ ಸೇರಿದ್ದ ಭಾರತದ ಕ್ರೀಡಾಭಿಮಾನಿಗಳ ನಡವಳಿಕೆಯ ಕುರಿತು ಸರಿ–ತಪ್ಪುಗಳ ಚರ್ಚೆ ನಡೆಯಿತು. ಪಾಕಿಸ್ತಾನದ ಆಟಗಾರರನ್ನು ಭಾರತದ ಕ್ರೀಡಾಭಿಮಾನಿಗಳು ನಡೆಸಿಕೊಂಡ ರೀತಿಯ ಬಗ್ಗೆ ಹಲವರು ಬೇಸರ ಹಾಗೂ ಆತಂಕವನ್ನು ವ್ಯಕ್ತಪಡಿಸಿದರು.

ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ತಮ್ಮ ವಿಕೆಟ್ ಕಳೆದುಕೊಂಡು ಪೆವಿಲಿಯನ್ ಅತ್ತ ಬರುತ್ತಿದ್ದಾಗ ಭಾರತದ ಕ್ರೀಡಾಭಿಮಾನಿಗಳು 'ಜೈ ಶ್ರೀರಾಮ್' ಎಂದು ಘೋಷಣೆಗಳನ್ನು ಕೂಗಿದರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಡಿತು. 'ನನ್ನ 30 ವರ್ಷಗಳ ವೃತ್ತಿ ಜೀವನದಲ್ಲಿ ಇಂಥ ವೈರತ್ವವನ್ನು ನಾನು ಹಿಂದೆಂದೂ ಕಂಡಿಲ್ಲ. ಮತ್ತು ಭಾರತದ ಇತರೆ ಯಾವ ಭಾಗದಲ್ಲೂ ಕಂಡಿಲ್ಲ' ಎಂದು ಹಿರಿಯ ಕ್ರಿಕೆಟ್ ಬರಹಗಾರ ಕುಲ್‌ದೀಪ್ ಲಾಲ್ ಅವರು 'ಅಲ್‌ಜಜೀರಾ' ಪತ್ರಿಕೆಯೊಂದಿಗೆ ಅಭಿಪ್ರಾಯ ಹಂಚಿಕೊಂಡಿದ್ದರು. '1.32 ಲಕ್ಷ ಆಸನ ವ್ಯವಸ್ಥೆ ಇರುವ ವಿಶ್ವದ ಅತ್ಯಂತ ದೊಡ್ಡ ಕ್ರೀಡಾಂಗಣದಲ್ಲಿ ಪಾಕಿಸ್ತಾನದ ಕೆಲವೇ ಅಭಿಮಾನಿಗಳು ಮಾತ್ರ ಇದ್ದರು. ಹತ್ತು ಜನರಿಗೆ ಮಾತ್ರವೇ ಟಿಕೆಟ್ ನೀಡಲಾಗಿತ್ತು' ಎಂದು ಎಎಫ್‌ಪಿ ವರದಿ ಮಾಡಿದೆ. ಭಾರತದ ಕ್ರೀಡಾಭಿಮಾನಿಗಳ ಬಗ್ಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಆಕ್ರೋಶ ವ್ಯಕ್ತಪಡಿಸಿದೆ. ಈ ಬಗ್ಗೆ ಐಸಿಸಿಗೆ ಅದು ದೂರನ್ನು ನೀಡಿದೆ ಕೂಡ.

ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳು ತಮ್ಮ ವಿರೋಧಿ ಆಟಗಾರರ ಬಗೆಗೆ ಅಸಹನೆ ತೋರುವುದು, ಮಾತಿನ ಚಕಮಕಿ ನಡೆಸುವುದು ಸಾಮಾನ್ಯ. ಹಲವು ಬಾರಿ ಬೌಂಡರಿ ಗೆರೆಯ ಬಳಿ ನಿಂತ ಆಟಗಾರರ ಕುರಿತು ದ್ವೇಷದ ಮಾತು ಆಡಿದ್ದು, ಅವಮಾನ ಮಾಡಿದ್ದೂ ಈ ಹಿಂದೆ ನಡೆದಿದೆ. ಆದರೆ, ಅಹಮದಾಬಾದ್‌ನಲ್ಲಿ ಮಾತ್ರ, ಇಡೀ ಕ್ರೀಡಾಂಗಣದಲ್ಲಿಯೇ ಕ್ರೀಡಾಭಿಮಾನಿಗಳ ನಡವಳಿಕೆಯು ಬದಲಾದ ಕ್ರೀಡಾಮನೋಭಾವವನ್ನು ತೋರಿಸುತ್ತಿತ್ತು. ಇದರ ಜೊತೆಯಲ್ಲಿ ಮಾಧ್ಯಮ ಕೂಡ ಭಾರತ–ಪಾಕಿಸ್ತಾನ ಪಂದ್ಯವನ್ನು ಸಮರ ಎಂಬಂತೆ ತೋರಿಸುವುದು ಕೂಡ ಜನರಲ್ಲಿ ದ್ವೇಷ ಭಾವನೆ ಮೂಡುವುದಕ್ಕೆ ಕಾರಣ ಎನ್ನುತ್ತಾರೆ ಕ್ರೀಡಾಭಿಮಾನಿಗಳು.

ಅಹಮದಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಭಾರತ–ಪಾಕಿಸ್ತಾನ ವಿಶ್ವಕಪ್ ಪಂದ್ಯದಲ್ಲಿ ಭಾರತ ಜಯಗಳಿಸಿದ ಕಾರಣ ಜಮ್ಮುವಿನಲ್ಲಿ ಜನರು ಸಂಭ್ರಮಾಚರಣೆ ಮಾಡಿದ್ದರು —ಪಿಟಿಐ ಚಿತ್ರ

ವಿರಾಟ್ ಮಗಳಿಗೆ ಅತ್ಯಾಚಾರದ ಬೆದರಿಕೆ

2021ರಲ್ಲಿ ಟಿ20 ವಿಶ್ವಕಪ್ ನಡೆಯುತ್ತಿತ್ತು. ಅಕ್ಟೋಬರ್ 24ರಂದು ಭಾರತ–ಪಾಕಿಸ್ತಾನ ನಡುವೆ ಪಂದ್ಯ ನಡೆದಿತ್ತು. ಈ ಪಂದ್ಯದಲ್ಲಿ ಭಾರತವು ಪಾಕಿಸ್ತಾನದ ಎದುರು ಸೋತಿತು. ಪಾಕಿಸ್ತಾನವು 10 ವಿಕೆಟ್‌ಗಳ ಜಯ ದಾಖಲಿಸಿತು. ಈ ಪಂದ್ಯದಲ್ಲಿ ಮೊಹಮ್ಮದ್ ಶಮಿ ಅವರು ಕಳಪೆ ಪ್ರದರ್ಶನ ತೋರಿದರು ಎನ್ನುವ ಕಾರಣಕ್ಕೆ ಭಾರತದ ಕ್ರೀಡಾಭಿಮಾನಿಗಳು ಅವರ ವಿರುದ್ಧ ಮುಗಿಬಿದ್ದರು. ಶಮಿ ಅವರ ಧರ್ಮದ ಕಾರಣಕ್ಕಾಗಿಯೇ ಅವರನ್ನು ಹೀಗಳೆಯಲಾಗಿತ್ತು. ಆದರೆ, ಆಗಿನ ತಂಡದ ನಾಯಕನಾಗಿದ್ದ ವಿರಾಟ್ ಕೊಹ್ಲಿ ಶಮಿ ಪರ ನಿಂತರು. ವಿರಾಟ್ ಅವರು ಶಮಿ ಅವರ ಪರ ಇದ್ದಾರೆ ಎನ್ನುವ ಕಾರಣಕ್ಕಾಗಿಯೇ ವಿರಾಟ್ ಅವರ ವಿರುದ್ಧವೂ ದ್ವೇಷಭರಿತ ಟ್ವೀಟ್‌ಗಳನ್ನು ಅಭಿಮಾನಿಗಳು ಮಾಡಲಾಂಭಿಸಿದರು. ಇದು ಯಾವ ಮಟ್ಟಕ್ಕೆ ತಲುಪಿತು ಎಂದರೆ, ಹೈದರಾಬಾದ್‌ನ ಟೆಕ್ಕಿ ರಾಮ್‌ನಾಗೇಶ್ ಶ್ರೀನಿವಾಸ್ ಎಂಬವರು, ವಿರಾಟ್ ಮತ್ತು ಅನುಷ್ಕಾ ಶರ್ಮ ದಂಪತಿಯ 11 ತಿಂಗಳ ಹೆಣ್ಣುಮಗುವಿನ ಮೇಲೆ ಅತ್ಯಾಚಾರ ಎಸಗುವ ಬೆದರಿಕೆ ಹಾಕುವ ಮಟ್ಟಕ್ಕೆ ತಲುಪಿತು. ನಂತರ ದಂಪತಿಯು ಟೆಕ್ಕಿ ವಿರುದ್ಧ ಪೊಲೀಸರಿಗೆ ದೂರು ನೀಡಿದರು.

ಬಾಬರ್‌ಗೆ ಜರ್ಸಿ

ಅಕ್ಟೋಬರ್ 14ರಂದು ನಡೆದ ಭಾರತ–ಪಾಕಿಸ್ತಾನ ಪಂದ್ಯವು ಹಲವು ಕಾರಣಗಳಿಗಾಗಿ ಚರ್ಚೆಗೆ ಗ್ರಾಸವಾಯಿತು. ಅವುಗಳಲ್ಲಿ ವಿರಾಟ್ ಅವರು ಬಾಬರ್ ಅವರಿಗೆ ತಮ್ಮ ಜರ್ಸಿ ನೀಡಿದ್ದು ಕೂಡ ಒಂದು. ವಿರಾಟ್ ಕೊಹ್ಲಿ ಅವರು ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅವರಿಗೆ ತಮ್ಮ ಹಸ್ತಾಕ್ಷರ ಇರುವ ಜರ್ಸಿ ಅನ್ನು ಉಡುಗೊರೆ ನೀಡಿದರು. ವಿರಾಟ್ ಅವರ ಈ ನಡವಳಿಕೆಯನ್ನು ದೊಡ್ಡ ಸಂಖ್ಯೆಯಲ್ಲಿ ಕ್ರೀಡಾಭಿಮಾನಿಗಳು ಮೆಚ್ಚಿಕೊಂಡರು. ಆದರೂ, ಇದನ್ನು ವಿರೋಧಿಸಿ ಹಲವರು ಟ್ವೀಟ್ ಮಾಡಿದ್ದಾರೆ.

ನೀರಜ್ ಚೋಪ್ರಾಗೆ ಪ್ರೀತಿ–ದ್ವೇಷ

2021ರಲ್ಲಿ ಟೋಕಿಯೊದಲ್ಲಿ ಒಲಿಂಪಿಕ್ಸ್ ನಡೆದಿತ್ತು. ಈ ವೇಳೆ ಭಾರತದ ನೀರಜ್ ಚೋಪ್ರಾ ಅವರು ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದು ಇತಿಹಾಸ ಸೃಷ್ಟಿಸಿದ್ದರು. ಕೊನೇ ಸುತ್ತಿಗೂ ಮೊದಲು ಪಾಕಿಸ್ತಾನದ ಜಾವೆಲಿನ್ ಕ್ರೀಡಾಪಟು ಅರ್ಷದ್ ನದೀಮ್ ಅವರು ಅಭ್ಯಾಸ ಮಾಡುವುದಕ್ಕಾಗಿ ನೀರಜ್ ಅವರ ಜಾವೆಲಿನ್ ಅನ್ನು ಬಳಸಿಕೊಂಡಿದ್ದರು. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ, ಭಾರತೀಯ ಮಾಧ್ಯಮಗಳಲ್ಲಿ ದೊಡ್ಡ ಮಟ್ಟದ ಚರ್ಚೆ ನಡೆದಿತ್ತು. ನದೀಮ್ ಅವರು ಚೋಪ್ರಾ ಅವರ ಜಾವೆಲಿನ್ ಅನ್ನು ಹಾಳುಗೆಡಹುವುದಕ್ಕೇ ತೆಗೆದುಕೊಂಡಿದ್ದಾರೆ ಎನ್ನುವ ವರದಿಗಳನ್ನು ಮಾಡಲಾಯಿತು. ಆದರೆ, ಆ ಪಂದ್ಯದಲ್ಲಿ ನೀರಜ್ ಚಿನ್ನ ಗೆದ್ದರು. ನದೀಮ್ ಅವರು ಐದನೇ ಸ್ಥಾನ ಪಡೆದುಕೊಂಡರು.

'ಕ್ರೀಡೆಯು ನಮಗೆ ಒಟ್ಟಿಗೆ ಇರಲು, ಒಗ್ಗೂಡಲು ಹೇಳಿಕೊಡುತ್ತದೆ. ನದೀಮ್ ಅವರು ನನ್ನ ಜಾವೆಲಿನ್ ತೆಗೆದುಕೊಂಡಿದ್ದರ ಕುರಿತು ಎದ್ದಿರುವ ವಿವಾದ, ಜನರ ಪ್ರತಿಕ್ರಿಯೆಗಳು ನನಗೆ ಬೇಸರ ತರಿಸಿವೆ' ಎಂದು ನೀರಜ್ ಚೋಪ್ರಾ ಅವರು 2021ರಲ್ಲಿ ಹೇಳಿದ್ದರು.

ಇತ್ತೀಚೆಗೆ, ವಿಶ್ವ ಅಥ್ಲೆಟಿಕ್ಸ್ ಕೂಟ ಬುಡಾಪೆಸ್ಟ್‌ನಲ್ಲಿ ನಡೆಯಿತು. ಈ ವೇಳೆಯಲ್ಲಿ ನೀರಜ್ ಅವರು ಚಿನ್ನ ಗೆದ್ದುಕೊಂಡರು. ನದೀಮ್ ಅವರು ಬೆಳ್ಳಿ ಗೆದ್ದುಕೊಂಡರು. ಪದಕ ಪ್ರದಾನದ ಬಳಿಕ, ಫೋಟೊ ತೆಗೆಯುವ ವೇಳೆ, ನೀರಜ್ ಅವರು ನದೀಮ್ ಅವರನ್ನೂ ಕರೆದರು. ನೀರಜ್ ಅವರ ಈ ನಡವಳಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಮೆಚ್ಚುಗೆ ಪಡೆದುಕೊಂಡಿತು. ಆದರೂ, ಕೆಲವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಕ್ರಿಕೆಟ್, ಹಾಕಿ, ಕಬಡ್ಡಿ ಬಳಿಕ ಜಾವೆಲಿನ್ ಥ್ರೋ ಕೂಡ ಭಾರತ–ಪಾಕಿಸ್ತಾನದ 'ಹೈವೋಲ್ಟೇಜ್' ಪರಿಧಿಗೆ ಬರುತ್ತಿದೆಯೇ ಎಂದು ಹಲವರು ಪ್ರಶ್ನಿಸಿದ್ದಾರೆ.

ಪಾಕಿಸ್ತಾನದಲ್ಲಿ ಅತಿರೇಕ

ಭಾರತದ ವಿರುದ್ಧ ಸೋತರೆ ಪಾಕಿಸ್ತಾನದಲ್ಲಿ ಕ್ರಿಕೆಟ್ ಆಟಗಾರರಿಗೆ ದ್ವೇಷದ ಪ್ರತಿಕ್ರಿಯೆ ದೊರೆಯುತ್ತದೆ. ಕ್ರೀಡಾಭಿಮಾನಿಗಳು ತಮ್ಮ ಮನೆಯ ಟಿ.ವಿಗಳನ್ನು ಒಡೆದು ಹಾಕುತ್ತಾರೆ. ಅಭಿಮಾನಿಗಳು ಮನೆಯ ಮೇಲೆ ಕಲ್ಲು ಹೊಡೆಯುವ ಆತಂಕದ ಕಾರಣಕ್ಕೆ ಆಟಗಾರರು ಕೂಡ ಪಂದ್ಯಾವಳಿ ಮುಗಿದ ತಕ್ಷಣವೇ ತಮ್ಮ ಮನೆಗಳಿಗೆ ತೆರಳುವುದಿಲ್ಲ. 2016ರಲ್ಲಿ ಭಾರತ–ಆಸ್ಟ್ರೇಲಿಯಾ ಸರಣಿ ನಡೆಯುತ್ತಿತ್ತು. ಈ ವೇಳೆ ಪಂದ್ಯವೊಂದರಲ್ಲಿ ಭಾರತ ಗೆದ್ದಿತು. ಇದನ್ನು ಸಂಭ್ರಮಿಸಲು ಪಾಕಿಸ್ತಾನದ ವಿರಾಟ್ ಕೊಹ್ಲಿ ಅಭಿಮಾನಿಯೊಬ್ಬರು ತಮ್ಮ ಮನೆಯ ಮೇಲೆ ಭಾರತದ ಧ್ವಜವನ್ನು ಹಾಕಿದರು. ಇದಕ್ಕಾಗಿ ಅವರನ್ನು ಜೈಲಿಗೆ ಕಳುಹಿಸಲಾಯಿತು.

ಸುಳ್ಳು ಸುದ್ದಿ ಮತ್ತು ವಿಶ್ವಕಪ್

ಭಾರತದಲ್ಲಿ ವಿಶ್ವಕಪ್ ಆರಂಭವಾಗುತ್ತಿದ್ದಂತೆ ಭಾರತದ ಕೆಲ ಆಟಗಾರರು ಹಾಗೂ ಪಾಕಿಸ್ತಾನ ತಂಡದ ಕುರಿತು ಸುಳ್ಳು ಸುದ್ದಿಗಳು ಪ್ರಾಮುಖ್ಯ ಪಡೆದುಕೊಂಡಿತು. ವಿರಾಟ್, ಸಿರಾಜ್ ಕುರಿತು ಸುಳ್ಳು ಸುದ್ದಿಗಳು ಇಂದಿಗೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

1 ವಿರಾಟ್ ಕೊಹ್ಲಿ ಅವರು ತಮ್ಮ ಮನೆಯಲ್ಲಿ ಪಾಕಿಸ್ತಾನ ತಂಡಕ್ಕೆ ಔತಣಕೂಟ ಏರ್ಪಡಿಸಿದ್ದಾರೆ ಎಂಬ ಸುದ್ದಿಯು ದೊಡ್ಡ ಸದ್ದನ್ನೇ ಮಾಡಿತು. ಔತಣಕೂಟ ಏರ್ಪಡಿಸಿದ ಬಗ್ಗೆ ವಿರಾಟ್ ಅವರೇ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ ಎಂದೂ ಹೇಳಲಾಯಿತು. ಆದರೆ, ಅದೊಂದು ಸುಳ್ಳು ಸುದ್ದಿ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿತು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಪೋಸ್ಟ್ ಅನ್ನು ಶೇರ್ ಮಾಡಿದ್ದ ಖಾತೆಯು ನಕಲಿ ಎಂದು ಅದು ಹೇಳಿತು.

2 'ವಿಶ್ವಕಪ್ ಕ್ರಿಕೆಟ್ ಪಂದ್ಯದ ಗೆಲುವನ್ನು ನಾನು ಇಸ್ರೇಲ್‌ನ ಸೋದರ ಸೋದರಿಯರಿಗೆ ಅರ್ಪಿಸುತ್ತೇನೆ' ಎಂದು ಮೊಹಮ್ಮದ್ ಸಿರಾಜ್ ಹೇಳಿದ್ದಾರೆ. ಜೊತೆಗೆ, ಅಫ್ಗಾನಿಸ್ತಾನದ ಕ್ರಿಕೆಟಿಗ ರಶೀದ್ ಖಾನ್ ಸಹ ಇದನ್ನೇ ಹೇಳಿದ್ದಾರೆ ಎಂಬ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. 'ನೋಡಿ ಮುಸ್ಲಿಮರೂ ಇಸ್ರೇಲ್ ಅನ್ನೇ ಬೆಂಬಲಿಸುತ್ತಿದ್ದಾರೆ' ಎಂಬ ಬರಹದೊಂದಿಗೆ ಈ ಸ್ಕ್ರೀನ್‌ಶಾಟ್‌ಗಳನ್ನು ಹಂಚಿಕೊಂಡರು. ಆದರೆ, ಅದೂ ಸುಳ್ಳು ಸುದ್ದಿಯಾಗಿತ್ತು. ಈ ಪೋಸ್ಟ್ ಅನ್ನು ಕೂಡ ನಕಲಿ ಖಾತೆಯಿಂದ ಮಾಡಲಾಗಿದೆ ಎಂದು ಪಿಟಿಐ ಹೇಳಿತು.

3 ಪಾಕಿಸ್ತಾನದ ಆಟಗಾರರು ವಿಶ್ವಕಪ್‌ಗಾಗಿ ಭಾರತಕ್ಕೆ ಬಂದಿಳಿದಾಗ ಅವರನ್ನು ಕೇಸರಿ ಶಾಲುಗಳನ್ನು ಹೊದಿಸಿ ಬರಮಾಡಿಕೊಳ್ಳಲಾಯಿತು ಎಂಬ ಸುದ್ದಿ ಕೂಡ ದೊಡ್ಡ ಸದ್ದು ಮಾಡಿತ್ತು. ಪಾಕಿಸ್ತಾನ ತಂಡದ ನಾಯಕ ಬಾಬರ್ ಅವರು ಕೇಸರಿ ಶಾಲು ಹೊದ್ದ ವಿಡಿಯೊ ಕ್ಲಿಪ್ ಹರಿದಾಡಿತ್ತು. ಆದರೆ, ಇದು ಸುಳ್ಳು ಸುದ್ದಿಯಾಗಿತ್ತು. ಪಾಕಿಸ್ತಾನದ ಆಟಗಾರರನ್ನು ನೀಲಿ, ಹಸಿರು, ಗುಲಾಬಿ ಬಣ್ಣಗಳ ಶಾಲುಗಳನ್ನು ಹೊದಿಸುವ ಮೂಲಕ ಬರಮಾಡಿಕೊಳ್ಳಲಾಗಿತ್ತು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿತು.

ಆಧಾರ: ಪಿಟಿಐ, ಎಎಫ್‌ಪಿ, ಅಲ್‌ಜಜೀರಾ, ಬಿಬಿಸಿ

ಸುದೀಪ್‌ಗೆ ನಾಯಕಿಯಾದ ಶ್ರೀನಿಧಿ ಶೆಟ್ಟಿ

ಶ್ರೀನಿಧಿ ಶೆಟ್ಟಿ

'ಕೆಜಿಎಫ್' ಬೆಡಗಿ ಶ್ರೀನಿಧಿ ಶೆಟ್ಟಿ #K47 ಚಿತ್ರದಲ್ಲಿ ಕಿಚ್ಚ ಸುದೀಪ್‌ಗೆ ಜೋಡಿಯಾಗಲಿದ್ದಾರೆ. ತಮಿಳಿನ ನಿರ್ಮಾಣ ಸಂಸ್ಥೆ ಸತ್ಯ ಜ್ಯೋತಿ ಪಿಕ್ಚರ್ಸ್ ಈ ಚಿತ್ರ ನಿರ್ಮಿಸುತ್ತಿದ್ದು, ಈ ಹಿಂದೆ ತಮಿಳಿನಲ್ಲಿ 'ಆಟೋಗ್ರಾಫ್' ಚಿತ್ರ ನಿರ್ದೇಶಿಸಿದ್ದ ಚೇರನ್ #K47ಗೆ ಆ್ಯಕ್ಷನ್-ಕಟ್ ಹೇಳಲಿದ್ದಾರೆ. ಕನ್ನಡ, ತಮಿಳು ಸೇರಿ ಹಲವು ಭಾಷೆಗಳಲ್ಲಿ ತೆರೆ ಕಾಣಲಿರುವ ಪ್ಯಾನ್ ಇಂಡಿಯಾ ಸಿನಿಮಾ ಇದಾಗಿದೆ.

ಸುದೀಪ್, ಕನ್ನಡಕ್ಕೆ 'ಮೈ ಆಟೋಗ್ರಾಫ್' ಹೆಸರಲ್ಲಿ ಚೇರನ್ ಅವರ ಚಿತ್ರವನ್ನು ರಿಮೇಕ್ ಮಾಡಿದ್ದರು. ಕೆಜಿಎಫ್‌ನಲ್ಲಿ ರಾಕಿಬಾಯ್‌ಗೆ ರೀನಾ ಆಗಿದ್ದ ಶ್ರೀನಿಧಿ ಅವರ ಹುಟ್ಟುಹಬ್ಬದ ಪ್ರಯುಕ್ತ ಚಿತ್ರತಂಡ ವಿಶೇಷ ಪೋಸ್ಟರ್ ಬಿಡುಗಡೆಗೊಳಿಸಿದೆ. ಸದ್ಯ ಸುದೀಪ್ 'ಮ್ಯಾಕ್ಸ್' ಸಿನಿಮಾದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದು, ಆ ಬಳಿಕ #K47 ಪ್ರಾಜೆಕ್ಟ್ ಪ್ರಾರಂಭವಾಗಲಿದೆ. ಶ್ರೀನಿಧಿ, 'ಕೆಜಿಎಫ್ ಚಾಪ್ಟರ್-2' ಬಳಿಕ ತಮಿಳಿನ 'ಕೋಬ್ರಾ' ಸಿನಿಮಾದಲ್ಲಿ ನಟಿಸಿದ್ದರು. ಅದಾದ ಮೇಲೆ ಬೇರಾವ ಸಿನಿಮಾ ಒಪ್ಪಿಕೊಳ್ಳದ ಶ್ರೀನಿಧಿ, ಇತ್ತೀಚೆಗಷ್ಟೇ 'ತೆಲುಸು ಕದಾ' ಹೆಸರಿನ ತೆಲುಗು ಚಿತ್ರಕ್ಕೂ ಆಯ್ಕೆ ಆಗಿದ್ದರು.

ಹೊರಬಂತು 'ಸಪ್ಲಯರ್ ಶಂಕರ' ಟೀಸರ್

'ಗಂಟುಮೂಟೆ' ಖ್ಯಾತಿಯ ನಿಶ್ಚಿತ್ ಕರೋಡಿ, ದೀಪಿಕಾ ಆರಾಧ್ಯ ಜೋಡಿಯಾಗಿ ನಟಿಸಿರುವ 'ಸಪ್ಲಯರ್ ಶಂಕರ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ತ್ರಿನೇತ್ರ ಫಿಲಂಸ್ ಲಾಂಛನದಲ್ಲಿ ಎಂ. ಚಂದ್ರಶೇಖರ್ ಹಾಗೂ ಎಂ.ನಾಗೇಂದ್ರ ಸಿಂಗ್ ನಿರ್ಮಿಸಿರುವ ಚಿತ್ರಕ್ಕೆ ರಂಜಿತ್ ನಿರ್ದೇಶನವಿದೆ. "ಕಳೆದ ವರ್ಷ ಫೆಬ್ರುವರಿಯಲ್ಲಿ ಈ ಚಿತ್ರಕ್ಕೆ ಚಾಲನೆ ದೊರೆತಿತ್ತು. ಬಾರ್ ಸಪ್ಲಯರ್ ಒಬ್ಬನ ಕಥೆ. ಕಾಮಿಡಿ, ಸೆಂಟಿಮೆಂಟ್, ಲವ್, ಥ್ರಿಲ್ಲರ್ ಎಲ್ಲವೂ ಇದೆ. ಎಲ್ಲರೂ ಚಿತ್ರಕ್ಕಾಗಿ ಕಷ್ಟಪಟ್ಟಿದ್ದೇವೆ. ಶೀಘ್ರದಲ್ಲೇ 'ಸಪ್ಲಯರ್ ಶಂಕರ' ನಿಮ್ಮ ಮೆಚ್ಚಿನ ಚಿತ್ರ ಮಂದಿರಗಳಿಗೆ ಬರುತ್ತಾನೆ" ಎಂದರು ನಿರ್ದೇಶಕರು. ಶಿಕ್ಷಕಿ ಪಾತ್ರದಲ್ಲಿ ದೀಪಿಕಾ ಆರಾಧ್ಯ ಕಾಣಿಸಿಕೊಂಡಿದ್ದಾರೆ. ಆರ್. ಬಿ. ಭರತ್ ಸಂಗೀತ ನಿರ್ದೇಶನ, ಸತೀಶ್ ಕುಮಾರ್ ಛಾಯಾಗ್ರಹಣ, ಸತೀಶ್ ಚಂದ್ರಯ್ಯ ಸಂಕಲನ ಚಿತ್ರಕ್ಕಿದೆ.

ನಿಶ್ಚಿತ್ ಕರೋಡಿ, ದೀಪಿಕಾ ಆರಾಧ್ಯ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಾಲ್ ಒಂದರಲ್ಲಿ ಭಾರತದ ಧ್ವಜಕ್ಕಿಂತ ಎತ್ತರದಲ್ಲಿ ಪಾಕಿಸ್ತಾನ ಧ್ವಜವನ್ನು ತೂಗುಹಾಕಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಕೇರಳದ ಕೊಚ್ಚಿಯಲ್ಲಿಯ ಲುಲು ಮಾಲ್‌ನಲ್ಲಿ ತೆಗೆಯಲಾಗಿರುವ ಚಿತ್ರ ಇದಾಗಿದೆ. ಪಾಕಿಸ್ತಾನದ ಧ್ವಜವನ್ನು ಭಾರತದ ಧ್ವಜಕ್ಕಿಂತ ಎತ್ತರದಲ್ಲಿ ಹಾರಿಸಲಾಗಿದೆ. ಅದರ ಗಾತ್ರವೂ ಭಾರತದ ಧ್ವಜಕ್ಕಿಂತ ದೊಡ್ಡದಿದೆ. ರಾಷ್ಟ್ರಧ್ವಜ ಸಂಹಿತೆಯನ್ನು ಇಲ್ಲಿ ಉಲ್ಲಂಘಿಸಲಾಗಿದೆ' ಎಂದು 'ಎಕ್ಸ್' ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. ಬಳಿಕ ಹಲವರು ಈ ಪೋಸ್ಟನ್ನು ಹಂಚಿಕೊಂಡಿದ್ದಾರೆ. ಆದರೆ ಇದು ಸತ್ಯವಲ್ಲ.

'ಆಲ್ಟ್‌ನ್ಯೂಸ್' ಫ್ಯಾಕ್ಟ್‌ಚೆಕ್ ವೇದಿಕೆಯು ಕೊಚ್ಚಿಯ ಲುಲು ಮಾಲ್‌ನ ಸಿಬ್ಬಂದಿಯನ್ನು ಸಂಪರ್ಕಿಸಿ ಚಿತ್ರದ ಕುರಿತು ವಿವರಣೆ ಪಡೆದಿದೆ. 'ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾಗವಹಿಸಿರುವ ಎಲ್ಲಾ ದೇಶಗಳ ಧ್ವಜಗಳನ್ನೂ ಮಾಲ್‌ನಲ್ಲಿ ಪ್ರದರ್ಶಿಸಲಾಗಿದೆ. ಎಲ್ಲವೂ ಒಂದೇ ಗಾತ್ರದ ಧ್ವಜಗಳಾಗಿದ್ದು, ಎಲ್ಲವನ್ನೂ ಒಂದೇ ಮಟ್ಟದಿಂದ ತೂಗುಹಾಕಲಾಗಿದೆ. ಸದ್ಯ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವನ್ನು ನಿರ್ದಿಷ್ಟ ಕೋನದಿಂದ ತೆಗೆಯಲಾಗಿದ್ದು, ಪಾಕಿಸ್ತಾನ ಧ್ವಜವೇ ದೊಡ್ಡದು ಎಂಬ ಭಾವನೆ ಮೂಡಿಸುವಂತಿದೆ' ಎಂದಿದ್ದಾರೆ. ಮಾಲ್‌ನ ಕೆಳ ಅಂತಸ್ತಿನಿಂದ ತೆಗೆದಿರುವ ಚಿತ್ರವನ್ನೂ ಸಿಬ್ಬಂದಿ ಒದಗಿಸಿದ್ದಾರೆ. ಅದರಲ್ಲಿ ಎಲ್ಲಾ ಧ್ವಜಗಳೂ ಒಂದೇ ಗಾತ್ರವಿರುವುದು ಕಾಣುತ್ತದೆ.

ಗುಂಡಣ್ಣ

ಯಶಸ್ಸಿಗೆ ಒಳದಾರಿಗಳಿಲ್ಲ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಸಮರಕಲೆಗಳಲ್ಲಿ ಒಂದು ಮಟ್ಟಕ್ಕೆ ಸಾಧನೆ ಮಾಡಿದ್ದ ಯುವಕನೊಬ್ಬ ಇದರಲ್ಲಿ ಅತ್ಯದ್ಭುತವಾದದ್ದನ್ನು ಸಾಧಿಸಿದ್ದ ಗುರುವೊಬ್ಬನ ಬಳಿ ಬಂದ. 'ಗುರುಗಳೇ ನಾನು ಸಮರ ಕಲೆಗಳಲ್ಲಿ ನಿಮ್ಮಂತೆ ಅತ್ಯಂತ ದೊಡ್ಡ ಸಾಧಕನಾಗಬೇಕು ಎಂದಿದ್ದೇನೆ. ಈ ರೀತಿಯ ಯಶಸ್ಸನ್ನು ಗಳಿಸಲು, ನಾನು ನಿಮ್ಮ ಶಿಷ್ಯನಾಗಲು ಬಯಸುತ್ತೇನೆ. ಇದರಲ್ಲಿ ನಿಮ್ಮಂತೆ ಅತ್ಯುನ್ನತ ಹಂತಕ್ಕೇರಲು ನನಗೆ ಎಷ್ಟು ವರ್ಷಗಳ ಸಾಧನೆಯ ಅಗತ್ಯವಿದೆ' ಎಂದು ಪ್ರಶ್ನಿಸಿದ. ಆಗ ಆ ಗುರು ಸ್ವಲ್ಪ ಯೋಚಿಸಿ 'ಸುಮಾರು ಹತ್ತು ವರ್ಷ ಬೇಕಾಗಬಹುದು' ಎಂದ.

ಈ ಮಾತನ್ನು ಕೇಳಿ ಅವಾಕ್ಕಾದ ಯುವಕ 'ಅಯ್ಯೋ ಅಷ್ಟು ವರ್ಷ ಕಾಯಲು ನನ್ನಿಂದ ಸಾಧ್ಯವಿಲ್ಲ. ನಾನು ಬೇಕಾದರೆ ಪ್ರತಿದಿನವೂ ಎರಡು ಪಟ್ಟು ಅಭ್ಯಾಸ ಮಾಡುತ್ತೇನೆ. ನನಗೆ ಬೇಗ ಸಾಧಕನಾಗಬೇಕಾಗಿದೆ' ಎಂದು ನುಡಿದ. ಅದಕ್ಕೆ ಆ ವೃದ್ಧ ಗುರು 'ಹಾಗಾದರೆ ನೀನು ಇಪ್ಪತ್ತು ವರ್ಷಗಳ ಅಭ್ಯಾಸವನ್ನು ಖಂಡಿತ ಮಾಡಬೇಕು' ಎಂದು ಹೇಳಿದ.

ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರು ದಿಢೀರ್ ಯಶಸ್ಸನ್ನು ಬಯಸುತ್ತಾರೆ. ದಿಢೀರ್ ಶ್ರೀಮಂತರಾಗುವುದನ್ನು ಇಷ್ಟಪಡುತ್ತಾರೆ. ಮಾರ್ಗ ಯಾವುದೇ ಇರಲಿ ಹಣ ಗಳಿಕೆ ಬೇಗ ಆಗಬೇಕು ಎಂಬುದೇ ಎಲ್ಲರ ಆಸೆ. ಆದರೆ ಯಾವುದೇ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕಾದರೆ, ಆಳಕ್ಕಿಳಿದು ಅಧ್ಯಯನ ಹಾಗೂ ನಿರಂತರ ಅಭ್ಯಾಸ ಮಾಡಬೇಕು. ಯಶಸ್ಸಿಗೆ ಯಾವುದೇ ಒಳದಾರಿಗಳಿಲ್ಲ. ಕಠಿಣ ಪರಿಶ್ರಮ ಒಂದೇ ಯಶಸ್ಸಿನ ಸರಿಯಾದ ಮಾರ್ಗ. ಶತಕಗಳ ಶತಕ ಬಾರಿಸಿದ ಸಚಿನ್ ತೆಂಡೂಲ್ಕರ್, ಅತ್ಯದ್ಭುತ ಟೆನ್ನಿಸ್ ಪ್ರತಿಭೆ ರೋಜರ್ ಫೆಡರರ್, ಮಿಂಚಿನ ಓಟಗಾರ ಉಸೈನ್ ಬೋಲ್ಟ್ ಮುಂತಾದ ಕ್ರೀಡಾತಾರೆಯರು ಗಳಿಸಿರುವ ಸಂಪತ್ತು ನಮ್ಮ ಗಮನ ಸೆಳೆಯುತ್ತದೆ. ಆದರೆ ಆ ಸಂಪತ್ತಿನ ಗಳಿಕೆ ಹಿಂದಿರುವ ಅವರ ಕಠಿಣ ಪರಿಶ್ರಮ ನಮ್ಮ ಅರಿವಿಗೆ ಬರುವುದೇ ಇಲ್ಲ.

ಅದೇ ರೀತಿ ಪ್ರಖ್ಯಾತ ಸಂಗೀತಗಾರರಾದ ಪಂಡಿತ್ ಭೀಮಸೇನ ಜೋಶಿ, ಎಂ ಎಸ್ ಸುಬ್ಬಲಕ್ಷ್ಮಿ, ಎಸ್. ಪಿ. ಬಾಲಸುಬ್ರಮಣ್ಯಂ ಮುಂತಾದವರು ಅತ್ಯುನ್ನತ ಮಟ್ಟದ ಸಾಧನೆ ಮಾಡಲು ಸಾಧ್ಯವಾಗಿದ್ದು ಅವರ ಅವಿರತ ಪರಿಶ್ರಮದಿಂದ. ಸಾಹಿತ್ಯ ಕ್ಷೇತ್ರದ ದಿಗ್ಗಜರಾದ ಕುವೆಂಪು, ಬೇಂದ್ರೆ, ಕಾರಂತ ಮುಂತಾದವರ ಸಾಹಿತ್ಯಕ ಸಾಧನೆಯ ಬೃಹತ್ ವೃಕ್ಷದಡಿಯಲ್ಲಿ ಅವರ ಆಳವಾದ ಅಧ್ಯಯನದ ಬೇರು ಗಳಿರುವುದನ್ನು ನಾವೆಂದಿಗೂ ಮರೆಯುವಂತಿಲ್ಲ.

'ಹತ್ತೆಡೆಯೊಳು ತೋಡಿ, ಒಂದಡಿಯಷ್ಟನು ಬರಲಿಲ್ಲ ನೀರು ಎಂದೆನಬೇಡ... ಒಂದೆಡೆಯಲಿ ತೋಡು ಹತ್ತಡಿಯಷ್ಟನು ಚಿಮ್ಮುವುದು ಉದಕವು ನೋಡ' ಎಂಬುದಾಗಿ ಕವಿ ಎಸ್. ವಿ. ಪರಮೇಶ್ವರ ಭಟ್ಟರು ಹೇಳುತ್ತಾರೆ. ಹತ್ತು ಕಡೆಯಲ್ಲಿ ಬರೀ ಒಂದಡಿ ತೋಡಿದರೆ ನೀರು ಸಿಕ್ಕುವುದಿಲ್ಲ. ಅದೇ ಒಂದೇ ಕಡೆಯಲ್ಲಿ ಆಳಕ್ಕಿಳಿದು ತೋಡಿದಾಗ ಖಂಡಿತವಾಗಿಯೂ ನೀರು ಚಿಮ್ಮುತ್ತದೆ. ಹಾಗೆಯೇ ಸಾಧನೆ ಎಂಬುದು ಆಳಕ್ಕಿಳಿದು ಪರಿಶ್ರಮಪಟ್ಟು ಕಾಯಕ ಮಾಡಿದಾಗ ಮಾತ್ರ ಲಭ್ಯವಾಗುವಂಥದ್ದು. ಇದಕ್ಕೆ ನಮ್ಮಲ್ಲಿ ತಾಳ್ಮೆ ಅತ್ಯಗತ್ಯ.'ತಾಳುವಿಕೆಗಿಂತ ಅನ್ಯ ತಪವಿಲ್ಲ' ಎಂಬ ಮಾತಿನಂತೆ ತಾಳ್ಮೆ ಎಂಬುದು ತಪಸ್ಸಿನಂತೆ. ಸಾಧಕರ ಯಶಸ್ಸಿನ ಗುಟ್ಟೇ ಅವರ ಅವಿರತ ಪರಿಶ್ರಮ ಹಾಗೂ ಅನನ್ಯವಾದ ತಾಳ್ಮೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಅಕ್ಟೋಬರ್ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ನವಮಿ ಗಂ. 17-45 ನಕ್ಷತ್ರ: ಶ್ರವಣ ಗಂ. 17-14 ಯೋಗ: ಶೂಲ ಗಂ 18-52 ಕರಣ: ಬಾಲವ ಗಂ. 06-55, ತುಲಾ ಮಾಸದ 06 ನೇ ದಿನ, ಮಳೆನಕ್ಷತ್ರ: ಚಿತ್ರ 4.
ರಾಹುಕಾಲ: ಬೆಳಿಗ್ಗೆ 07-30 - 09-00,
ಸೂರ್ಯೋದಯ: 06-26 ಸೂರ್ಯಾಸ್ತ: 06-04
ಮುಸ್ಲಿಂ ದಿನಾಂಕ: 07 ರಬಿಯುಸ್ಸಾನಿ, ದಿನ ವಿಶೇಷ: ಮಹಾ ನವಮಿ, ಆಯುಧ ಪೂಜಾ, ತ್ರಿವೆಂಡ್ರಮ್ ಆರತ್, ಅದೃಷ್ಟ ಸಂಖ್ಯೆ : 5, 4

ಮೇಷ: ರೈತರ ಹಾಗೂ ವಿದ್ಯಾರ್ಥಿಗಳ ಪ್ರಯತ್ನ ಬಲಕ್ಕೆ ಉತ್ತಮ ಫಲ ದೊರೆಯುವುದು. ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಹೆಚ್ಚಿನ ಸ್ಥಾನ ಮಾನ ದೊರೆಯಲಿದೆ. ಉದ್ಯೋಗದಲ್ಲಿ ಎದುರಾಗಿದ್ದ ಚಿಂತೆ ದೂರಾಗುವುದು.

ವೃಷಭ: ಇಂದು ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ತಾತ್ಕಾಲಿಕ ಅಥವಾ ಗುತ್ತಿಗೆಯ ಕೆಲಸದಂತಹ ಸಣ್ಣ-ಪುಟ್ಟ ಉದ್ಯೋಗ ದೊರೆಯಲಿದೆ. ಚಾಲಕ ವೃತ್ತಿಯವರು ಕೆಲಸದಲ್ಲಿ ಒತ್ತಡವನ್ನು ಎದುರಿಸಬೇಕಾಗುವುದು.

ಮಿಥುನ: ರಾಜಕೀಯ ವ್ಯಕ್ತಿಗಳಿಗೆ ಪಕ್ಷದ ವರಿಷ್ಠರೊಂದಿಗೆ ದಿಢೀರ್ ಸಮಾಲೋಚನೆ ನಡೆಸಬೇಕಾಗಬಹುದು. ಅವಿವಾಹಿತರಿಗೆ ಸೋದರ ಮಾವನ ಸಹಾಯದಿಂದ ವಿವಾಹ ಸಂಬಂಧಗಳು ಕೂಡಿ ಬರಲಿದೆ.

ಕರ್ಕಾಟಕ: ಕ್ರೀಡಾಪಟುಗಳು, ಕಲಾವಿದರು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಪೂರ್ವ ತಯಾರಿ ನಡೆಸುವುದು ಅನಿವಾರ್ಯ. ಪೊಲೀಸರಿಗೆ ಕೆಲಸದ ಒತ್ತಡ ನಿವಾರಣೆಯಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯ ಜರುಗಲಿದೆ.

ಸಿಂಹ: ನಿಮ್ಮನ್ನು ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ನಿಮ್ಮ ಸ್ನೇಹಿತರ ಬಳಗದಲ್ಲಿ ನಡೆಯಲಿದೆ. ಸಾಮಾಜಿಕವಾಗಿ ಗೌರವ ದೊರೆತು ನೆಮ್ಮದಿ ಉಂಟಾಗುವುದು. ನಿಮ್ಮ ಕಠಿಣ ಶ್ರಮಕ್ಕೆ ಇಂದು ತಕ್ಕ ಪ್ರತಿಫಲ ಸಿಗುವುದು.

ಕನ್ಯಾ: ಪೀಠೋಪಕರಣಗಳ ವ್ಯಾಪಾರಸ್ಥರು ಪ್ರದರ್ಶನ ಮಾರಾಟದಂತಹ ಯೋಜನೆಯಿಂದ ಅಥವಾ ಜಾಹಿರಾತುಗಳ ಮೂಲಕ ಬೆಳಕಿಗೆ ಬರುವ ಪ್ರಯತ್ನ ಮಾಡಬಹುದು. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನದ ದಿನವಿದು.

ತುಲಾ: ನಿಮ್ಮ ಮೃದು ಮನಸ್ಸು ಹೊಸ ಜಾಗದಲ್ಲಿ ಹೊಸ ಕೆಲಸಗಳಲ್ಲಿ ಹೊಂದಿಕೊಳ್ಳಲು ಉಪಯೋಗವಾಗುವುದು. ನಿಮ್ಮ ಅಭ್ಯುದಯಕ್ಕೆ ನಿಮ್ಮ ಚಂಚಲ ಮನೋಭಾವ ಅಡ್ಡಿ ಉಂಟುಮಾಡುತ್ತದೆ.

ವೃಶ್ಚಿಕ: ಪಾಲುದಾರಿಕೆಯಲ್ಲಿ ಹೋಟೆಲ್ ನಡೆಸಲು ಒಪ್ಪಿಕೊಳ್ಳಬಹುದು. ವೃತ್ತಿರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದು ಅಭಿವೃದ್ಧಿಗೆ ಪೂರಕವಾಗಲಿದೆ. ಉನ್ನತ ವ್ಯಾಸಂಗದವರಿಗೆ ಕೆಲಸಕ್ಕೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ಧನು: ತಾಂತ್ರಿಕ ಉದ್ಯೋಗಿಗಳಿಗೆ ಈಗಿರುವ ಸಂಸ್ಥೆಯಲ್ಲಿನ ವೃತ್ತಿ ತಾತ್ಕಾಲಿಕ ಸಮಾಧಾನ ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಬಂದ ಅವಕಾಶವನ್ನು ಬಳಸಿಕೊಳ್ಳುವುದು ಉತ್ತಮ. ಶೀತ ಬಾಧೆ ಉಂಟಾಗುವುದು.

ಮಕರ: ಬೇರೆಯವರು ಮಾಡಿದ ವಂಚನೆ ಕೆಲಸಕ್ಕೆ ನೀವು ಹೊಣೆಗಾರಿಕೆ ಹೊರುವ ಪರಿಸ್ಥಿತಿಗೆ ಸಿಕ್ಕಿಕೊಳ್ಳುವ ಸನ್ನಿವೇಶ ಎದುರಾಗಬಹುದು. ಎಚ್ಚರವಾಗಿರಿ. ವಾಹನ ಮಾರಾಟಗಾರರಿಗೆ ಉತ್ತಮ ಆದಾಯ ಸಿಗಲಿದೆ.

ಕುಂಭ: ಸಮಾಧಾನದಿಂದ ವಿಚಾರ ವಿನಿಮಯ ಮಾಡಿಕೊಂಡರೆ ವಿವಾದಗಳು ನಿವಾರಣೆಯಾಗಲಿವೆ. ಉಪನ್ಯಾಸಕರಿಗೆ, ಸಂಗೀತಗಾರರಿಗೆ ಸನ್ಮಾನದಂಥ ಗೌರವವು ಸಿಗಲಿದೆ. ಚರ್ಮ ರೋಗ ಎದುರಾಗಬಹುದು.

ಮೀನ: ವೃತ್ತಿಯ ಬದುಕಿನಲ್ಲಿ ಬೆಳಕಿಗೆ ಬರಲು ಅನುಕೂಲವಾಗಿರುವ ಮುಖ್ಯ ಸಲಹೆಯೊಂದನ್ನು ಪಡೆಯಲಿದ್ದೀರಿ. ಗೆಳೆಯರ ದುಃಖದ ಪರಿಸ್ಥಿತಿಗಳಿಗೆ ಸಮಾಧಾನ ಹೇಳಬೇಕಾಗುವುದು. ಉತ್ತಮ ಆದಾಯ ಪ್ರಾಪ್ತಿಯಾಗುತ್ತದೆ.

ಪದಬಂಧ 5479 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೈನಾ ಹಕ್ಕಿಯನ್ನು ಹೀಗೂ ಕರೆವರು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ಕೊನೆಗೆ ಫಲವಿಟ್ಟರೆ ಇದು ಸೋಲು! (3)
6.ಮಣ್ಣು ಕಲೆಸಿದ ನೀರು (3)
8.ಸಾಮರ್ಥ್ಯ ಇಲ್ಲಿ ಕಾಣುತ್ತಿದೆ (3)
9.ಅರ್ಚನೆ ಮಾಡುತ್ತಿರುವ ಪೂಜಾರಿ (3)
10.ರೀತಿಯೊಡಗೂಡುವ ಜೋಡು ನುಡಿ (3)
12.ಜಗಳಕ್ಕೊಂದು ಪರ್ಯಾಯ ಪದ (3)
14.ಕಣದಲ್ಲಿರುವ ಲಗಾಮು (4)
15.ಖೈದಿಗಳನ್ನು ಕೂಡಿಹಾಕುವ ಜಾಗ (4)

ಮೇಲಿಂದ ಕೆಳಕ್ಕೆ
1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಈತ ಕವಿತೆ ಬರೆಯುವವನು (2)
3.ಬಾಲಕನಿಗೆ ಮೂಡಿರುವ ಲಾಂಗೂಲ (2)
4.ತೊಂದರೆ ಹೀಗೆ ಬಂದಿದೆ (3)
7.ದುಃಖಾಂತವಾದ ಪ್ರಹಸನ (5)
8.ಅನುಪಸ್ಥಿತಿಯನ್ನು ಹೀಗೂ ಹೇಳಬಹುದು (5)
9.ಎಂಟು ಭಾಗಗಳುಳ್ಳದ್ದು (3)
11.ತಪ್ಪಿಗಾಗಿ ತೆರಬೇಕಾದ ದಂಡ (3)
12.ಕಬ್ಬಿಣದಲ್ಲಿರುವ ಚಿಕ್ಕಚೂರು (2)
13.ಹಾವಸೆಯಿರುವ ಜಾಗದಲ್ಲಿನ ರಂಗೋಲಿ (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	■		■	■	■		■	■
■	■		■	■	■		■	■
9			■	■	■	10		11
	■	■	12		13	■	■	
14				■	15			

5478ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ 3.ಉಪವಾಸ
5.ಕರಡಿ 6.ಅನುಮತಿ
8.ತಾತಾ 9.ಉಮೇದು
10.ವಧು 11.ವನವಾಸ
12.ಸರಾಗ 15.ನದೀತೀರ
16.ಸರಕು

ಮೇಲಿಂದ ಕೆಳಕ್ಕೆ:
1.ಪತ್ನಿ 2.ವಿಧುರ
4.ಸದ್ಗತಿ 5.ಕರತಾಡನ
6.ಆಮದು 7.ಮದುವಣಿಗ
9.ಉಲ್ಲಾಸ 11.ವದನ
13.ರಾಯಸ 14.ಬಾಕು

ಸುಡೊಕು 5865

		5	8			4	1	
2	8							
		4			2	8		6
3		6			8	5		9
	7						8	
8		1				3		7
4			6		1		9	
	3				5	7		8
6		8	2	3			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5864 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

88 (223) CMS OLED TV — The Zenith of LG OLED TV* — Z-Series — REAL 8K — LG
SIGNATURE OLED 8K — Self-lit OLED — 120 Hz Refresh Rate — Eye Comfort — webOS with user profiles
EMI STARTS ₹6,999/-

Available Sizes: 83 (210cm) / 77 (195cm) / 65 (164cm) 55 (139cm) / 48 (121cm) / 42 (106cm) — LG
C Series | Our Most Celebrated OLED TV*
OLED — Multi-View 2-in-1 TV — NVIDIA G-SYNC — AMD FreeSync Premium — 0.1ms Response Time
EMI STARTS ₹4,999/-

75 (223) CMS UHD/4K — AI ThinQ — LG
LG UHD AI ThinQ
• 4K Display / a5 AI Processor 4K Gen6 • Built-in Alexa / Apple Airplay & Homekit / Works with Hey Google • 60 Hz
EMI STARTS ₹4,999/-

65 (164) CMS UHD/4K — AI ThinQ — LG
LG UHD AI ThinQ
• 4K Display / a5 AI Processor 4K Gen6 • Built-in Alexa / Apple Airplay & Homekit / Works with Hey Google • 60 Hz
EMI STARTS ₹3,999/-

FESTIVE EXCLUSIVE OFFERS — WIN LG DREAM HOME PACKAGE Every Day* — GRAND PRIZE AUDI Q3*
To participate in these offers, send an SMS <"First Name" "Last Name" GTM Code> to 7835073507

HOME APPLIANCES OFFERS — FREE* GLASS BOWL KIT (On Select Models of Microwave Oven) — FREE* Maintenance worth ₹4200* (Part of 1st Year Package) (On Select Models of Water Purifier)

HOME ENTERTAINMENT OFFERS — 3 YEAR* WARRANTY (With Select LG TVs) — FREE LG SMART CAM Worth ₹9990 (With Select LG TVs)

Up to 26%* CASHBACK Max ₹26000* ON SELECT CREDIT / DEBIT CARDS

OLED CIRCLE — An exclusive alliance — Get benefits up to ₹50000*

UP TO 30% OFF ON LG SOUNDBAR* (With Select LG TVs) — FIXED EMI Starting from ₹2999*

INTRODUCING THE ALL-NEW RANGE OF LG REFRIGERATORS STUNNINGLY STYLISH

AND GET UP TO 20%* CASHBACK ON PURCHASE OF LG REFRIGERATOR

LG Side by Side Refrigerator GL-L257CMCX
• AI ThinQ • Door Cooling • Stylish Design • Hygiene Fresh • Multi-Air Flow • Water Dispenser • Ice Dispenser • Colour : Matt Black
Capacity : 655 Ltrs.
EMI STARTS ₹4,999/-

LG Wi-Fi Convertible Side by Side Refrigerator GL-B257EPZX/Z3
• Wi-Fi Convertible* • Door Cooling • Stylish Design • Hygiene Fresh • Multi-Air Flow • Express Freeze • Multi Digital Sensor • Colour : Shiny Steel
Capacity : 655 Ltrs.
EMI STARTS ₹4,999/-

LG Side by Side Refrigerator GL-B257DBMX
• Door Cooling • Premium Glass Door • Compressor Hygiene Fresh • Multi-Air Flow • Smart Diagnosis • Colour : Black Mirror Finish
Capacity : 655 Ltrs.
EMI STARTS ₹4,999/-

LG Premium Frost Free Refrigerator GN-H602HLHM
• AI ThinQ • Door Cooling • Stylish Design • Hygiene Fresh • Multi-Air Flow • Inverter Linear Compressor • Smart Diagnosis • Fresh O zone • Colour : Shiny Steel
Capacity : 516 Ltrs.
EMI STARTS ₹2,999/-

LG Frost Free Refrigerator GL-T502APZR
• Door Cooling • Stylish Design • Hygiene Fresh • Auto Smart Connect • Smart Inverter Compressor • Convertible • Toughened Glass Shelves • Colour : Shiny Steel
Capacity : 446 Ltrs.
EMI STARTS ₹2,999/-

Go Easy Intelligent! with AI DD™ MORE CONVENIENCE & MORE FABRIC CARE

AND GET UP TO 20%* CASHBACK ON PURCHASE OF LG WASHING MACHINE

11 Kg FHP1411Z9P Front Load Washig Machine — LG
• AI DD • 6 Motion DD • TurboWash 360 • Steam+ • LG ThinQ (Wi-Fi) • Smart Diagnosis • 10-year Warranty* • RPM : Max. 1400 • Colour : Platinum Silver
EMI STARTS ₹4,999/-

10 Kg FHP1410Z5M Front Load Washig Machine — LG
• Inverter Direct Drive • AI Direct Drive • 6 Motion Direct Drive • Steam+ • LG ThinQ (Wi-Fi) • Smart Diagnosis • 10-year Warranty* • Colour : Middle Black
EMI STARTS ₹3,999/-

9/5 Kg FHD0905STB Front Load Washer Dryer — LG
• Turbo Wash • AI Direct Drive • 6 Motion Direct Drive • Steam+ • LG ThinQ • Smart Diagnosis • 10-year Warranty* • Colour : Middle Black
EMI STARTS ₹4,590/-

14 Place Settings Dish Washer DFB532FP — LG
• True Steam • Quad Wash • Inverter Direct Drive • Easy Rack Plus • LG ThinQ • 14 Place Setting • Colour : Shiny Steel
EMI STARTS ₹2,999/-

9 Kg THD09SWM Top Load Washig Machine — LG
• AI Intelligent Care • 6 Motion Drive • In-built Heater with steam • Allergy Removal • LG ThinQ • Turbo Drum • Turbo Wash • Colour : Middle Black
EMI STARTS ₹2,490/-

ಬೆಂಗಳೂರು — ಬಾಗಲೂರು — ಅಕ್ಷಯನಗರ — ನೆಲಮಂಗಲ — ಬಿಡದಿ — ಕೋಣನಕುಂಟೆ — ಬೇಗೂರು — ಆರ್.ಟಿ. ನಗರ — ಹೊಸಕೋಟೆ — ಹೆಣ್ಣೂರು ಮುಖ್ಯ ರಸ್ತೆ — ಮಹದೇವಪುರ — ಉತ್ತರಹಳ್ಳಿ — ವೈಟ್ ಫೀಲ್ಡ್ — ಯಲಹಂಕ — ಹೆಬ್ಬಗೋಡಿ — ರಾಜಾಜಿನಗರ — ದನಸಂದ್ರ — ವಿಜಯನಗರ — ಪೀಣ್ಯ — ಮತ್ತಿಕೆರೆ — ಹೆಚ್.ಎಸ್.ಆರ್. ಲೇಔಟ್ — ಬನಶಂಕರಿ — ಜಯನಗರ — ಚಂದ್ರ ಲೇಔಟ್ — ನಾಗರಭಾವಿ — ಮಾರತಹಳ್ಳಿ — ಕೆಂಗೇರಿ — ಚನ್ನಸಂದ್ರ — ಸುಂಕದಕಟ್ಟೆ — ರಾಜಾಜಿನಗರ — ವಿದ್ಯಾರಣ್ಯಪುರ — ಹೆಗ್ಗನಹಳ್ಳಿ — ಹೆಚ್.ಆರ್.ಬಿ.ಆರ್. ಲೇಔಟ್ — ರಾಮಮೂರ್ತಿನಗರ — ಪುಟ್ಟೇನಹಳ್ಳಿ — ಹುಳಿಮಾವು — LG SHOPPE ಮಾರತಹಳ್ಳಿ — LG SHOPPE ರಾಜಾಜಿನಗರ — LG SHOPPE ರಾಜರಾಜೇಶ್ವರಿನಗರ

Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681

• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
ಬಂಪರ್ ಬಹುಮಾನ
1 Kg GOLD
Worth ₹ 51 Lakhs
ಒಬ್ಬ ವಿಜೇತ
10 CARS
MARUTHI ESPRESSO CAR
Worth ₹ 4.25 Lakhs
1ನೇ ಬಹುಮಾನ
ವಿಜಯದಶಮಿ ಸೇಲ್
100 BIKES
HONDA BIKE
Worth ₹ 75,000
2ನೇ ಬಹುಮಾನ
1,000 LED TV's
40" LED TV
Worth ₹ 29,990
3ನೇ ಬಹುಮಾನ
10,000 Gifts
SURPRIZE Gifts
Worth ₹ 999
4ನೇ ಬಹುಮಾನ
ಪ್ರತಿ ₹ 3,500/- ಖರೀದಿಯೊಂದಿಗೆ ಪಡೆಯಿರಿ ಲಕ್ಕಿ ಡ್ರಾ ಕೂಪನ್ ಹಾಗೂ ಗೆಲ್ಲಿರಿ ₹ 5.68 ಕೋಟಿವರೆಗಿನ ಬಹುಮಾನಗಳು
FESTIVAL FINANCE MELA
INSTANT CASH BACK UPTO ₹ 25,000/- ON CREDIT CARD & DEBIT CARD EMI
LOWEST DOWNPAYMENT JUST PAY ₹ 1/-
& TAKE HOME YOUR FAVOURITE LED TV, WASHING MACHINE, REFRIGERATOR & PAY BALANCE IN EASY EMI
GET CASH VOUCHER UPTO ₹ 12,500/-* ON BAJAJ FINSERV FINANCE PURCHASE
1 EMI FREE* UPTO ₹ 20,000/- ON PAPER FINANCE
LG SONY SAMSUNG
EMI CARD EASY FINANCE
BAJAJ FINSERV IDFC FIRST Bank
• Pre-approved Loan up to 4 Lakhs
• Repay easily • No documentation • Pre-approved offers
• Nil foreclosure charges
JUST SHOW AADHAAR CARD
For easy finance offers & take home your favourite products
UPTO 36 MONTHS LONG TENURE EMI
0% INTEREST FREE FINANCE
BAJAJ FINSERV IDFC FIRST Bank HDB HDFC BANK
LED TV + WASHING MACHINE + REFRIGERATOR COMBO* EASY EMI
DEBIT & CREDIT CARD EASY EMI
NO COST EMI ON CREDIT CARD TRANSACTIONS
SONY LG Haier SAMSUNG IFB Whirlpool Godrej Panasonic BPL Prestige Preethi Pigeon FABER
iPhone 15/15plus
Get 10 GRAM Silver Coin*
1 Kg GOLD LUCKY DRAW COUPON
Get MAGSAFE POWER BANK Worth ₹ 2999/- At 1499/-
vivo V29E
Get 5 GRAM Silver Coin* + Get TWS AT ₹ 699/- With Smart Phone
OPPO F23-5G
Get 5 GRAM Silver Coin* + Get Calling Smart Watch AT ₹ 999/- With Smart Phone
SAMSUNG A34
Get 5 GRAM Silver Coin* Get Sound Bar Worth ₹4999/- At ₹999/- With Smart Phone
Redmi 12C
Get 3 GRAM Silver Coin* + Get Bluetooth AT ₹199/- With Smart Phone
ONEPLUS 11R
Get 5 GRAM Silver Coin + Get Bluetooth AT ₹ 199/- With Smart Phone
SAMSUNG vivo oppo mi realme TECNO ONEPLUS ProCare boAt ZEBRONICS pebble Hapi Pola
ಚನ್ನಪಟ್ಟಣ PH : 9036593446 / 9036593447
ಶಿರಸಿ PH : 9591997260, 9731306569
ಕೋಲಾರ 9731306635/9731306574 08152-467397
ಬೆಳಗಾವಿ 0831 4215241 / 42, 9731306717 9731306713
ಬಳ್ಳಾರಿ Ph : 08392-242330 / 337, 9731306742 / 9731331684
ಚಿತ್ರದುರ್ಗ 08194-224224, 9686446883
ದಾವಣಗೆರೆ 08192-233626/27, 9731306633 / 6712
ಶಿವಮೊಗ್ಗ PH : 08182-402100 / 9731306698
ತಿಪಟೂರು Ph : 08134-250104/304, 9686680758 / 9731306552
ತುಮಕೂರು Ph : 0816-4021031, 9731306549 / 9591997270
ಕುಣಿಗಲ್ 08132 - 221901 / 221902 97313 06663
ಯಾದಗಿರಿ Ph : 08173/251779/759 8861002260
ಮಂಡ್ಯ 08232406100/08232406200 9513599861 / 7349609274
ಗೋಣಿಕೊಪ್ಪ 7702770314/7702770353
ಕೊಪ್ಪಳ 08539 221931/32, 9731306645
ಬೀದರ್ 08482-226800/01, 9513499863
ಕಲಬುರ್ಗಿ Ph 08472-227556, 9108023816
ಕೆ.ಆರ್. ನಗರ 08223295855/66 9731306715
ಚನ್ನರಾಯಪಟ್ಟಣ 08176253312 / 295256, 9513499855
ವಿರಾಜಪೇಟೆ 9963998352 08274-295542 /255542
ವಿಜಯಪುರ 9353907691 / 9606865996
ಸಿಂಧನೂರ್ 08535-222254, 9731306673 / 9731306672
ಕುಶಾಲನಗರ 9591997262/9591997263
ಚಿಕ್ಕಮಗಳೂರು Ph : 08262 - 239944 / 45, 9963998358, 9963998365
ಶಹಾಪೂರ 9513499858 08479-240565,244565
ತೊಕ್ಕೊಟ್ಟು 0824-2956565 9731306621
ಗೋಕಾಕ್ Ph 08332-295053 / 9731306721
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com
STREAMLINE

LG

ಪೈ ಇಂಟರ್‌ನ್ಯಾಶನಲ್

India ka Celebration

Life's Good.

FESTIVE EXCLUSIVE OFFERS

WIN LG DREAM HOME PACKAGE Every Day*

OLED TV • Side-by-Side Refrigerator • Front Load Washing Machine • Water Purifier • Microwave Oven

GRAND PRIZE AUDI Q3*

*Image source: Audi

To participate in these offers, send an SMS <"First Name" "Last Name" GTM Code> to 7835073507

HOME APPLIANCES OFFERS

FREE* GLASS BOWL KIT (On Select Models of Microwave Oven)

FREE* Maintenance worth ₹4200* (Part of 1st Year Package) (On Select Models of Water Purifier)

HOME ENTERTAINMENT OFFERS

3 YEAR* WARRANTY (With Select LG TVs)

FREE* LG SMART CAM Worth ₹9990 (With Select LG TVs)

Up to 26%* CASHBACK Max ₹26000* ON SELECT CREDIT / DEBIT CARDS

OLED CIRCLE An exclusive alliance. Get benefits up to ₹50000*

UP TO 30% OFF ON LG SOUNDBAR* (With Select LG TVs)

FIXED EMI Starting from ₹2999*

ADDITIONAL OFFERS

1* EMI Free / 0* Down Payment

*T&C apply.

THE KING OF SALE IS BACK

ಮೆಗಾ ಫೆಸ್ಟಿವಲ್ ಸೇಲ್

ಗೆಲ್ಲಿರಿ 8 ಕೋಟಿ ಮೌಲ್ಯದ ವರೆಗಿನ ಆಕರ್ಷಕ ಬಹುಮಾನಗಳು

ಗೆಲ್ಲಿರಿ 30 ಲಕ್ಷ ವರೆಗಿನ ಉಚಿತ ಶಾಪಿಂಗ್

ಗೆಲ್ಲಿರಿ 10 HYUNDAI AURA CARS

ಗೆಲ್ಲಿರಿ 10 HYUNDAI GRAND i10 NIOS CARS

Celebrate Diwali with irresistible offers from LG.

OLED C3 | 195(77) / 164(65) / 139(55)
- Self-LIT Pixels / α9 AI Processor 4K Gen6 / 120Hz
- Dolby Vision & Dolby Atmos
- NVIDIA G-Sync / AMD FreeSync / VRR / WiFi 6

Up to 20% CASHBACK ₹15000 — EMI: ₹3,999*

UHD-UR9050 | 190(75) / 164(65) / 139(55) 108(43)
- 4K Display / α5 AI Processor 4K Gen6
- Built-in Alexa / Apple Airplay & HomeKit / Works with Hey Google

Up to 10% CASHBACK ₹5000 — EMI: ₹2,999*

Nano 80 | 164(65) / 139(55)
- Real 4K NanoCell / α5 AI Processor 4K Gen5
- AI Brightness Control, Local Dimming
- Built-in Google Assistant & Alexa

Up to 10% CASHBACK ₹7500 — EMI: ₹2,999*

UHD-UR8040 | 190(75) / 177(70) / 164(65) 139(55) / 127(50) / 108(43)
- 4K Display / α5 AI Processor 4K Gen6
- Built-in Alexa / Apple Airplay & HomeKit / Works with Hey Google

Up to 10% CASHBACK ₹5000 — EMI: ₹3,999*

UHD-UR7790 | 108(43)
- 4K Display / α5 AI Processor 4K Gen6
- Built-in Alexa / Apple Airplay & HomeKit / Works with Hey Google

Up to 10% CASHBACK ₹3500 — EMI: ₹999*

Presenting Wi-Fi Convertible Powered by AI ThinQ

NOW, CONVERT FREEZER TO FRIDGE FROM ANYWHERE!

BUY 1 LG SIDE-BY-SIDE REFRIGERATOR GET 1 DOUBLE DOOR REFRIGERATOR Worth ₹29499/-*

GL-B257EPZX
- Side-By-Side
- AI ThinQ
- DoorCooling+™
- Hygiene Fresh+™
- Smart Diagnosis™
- Multi Air Flow
- Express Freeze
- Easy Ice Maker (Door Mounted)
- Multi Digital Sensor
- Smart Inverter Compressor™
- Colour: Shiny Steel

EMI: ₹4,999* — Up to 20% CASHBACK ₹20000 — Capacity: 655/650* Litres

GL-T342TPZY
- AI ThinQ™
- DoorCooling+™
- Convertible
- Digital Display
- Smart Inverter Compressor™
- Toughened Glass Shelves
- Lower Door Basket
- Auto Smart Connect™
- Rating: 3-Star*/2-Star^
- Colour: Shiny Steel

EMI: ₹2,999* — Up to 15% CASHBACK ₹7000 — Capacity: 343*/322^ Litres

GL-T262TESX*
- AI ThinQ™
- DoorCooling+™
- Convertible
- Digital Display
- Smart Inverter Compressor™
- Toughened Glass Shelves
- Lower Door Basket
- Auto Smart Connect™
- Rating: 3-Star
- Colour: Ebony Sheen

EMI: ₹1,999* — Up to 15% CASHBACK ₹7000 — Capacity: 246* Litres

NEW ARRIVAL

FHD1107STB 11 kg (Wash) 7 kg (Dry)
- AI DD®
- 6 Motion DD
- TurboWash 360°
- Steam+
- LG ThinQ™ (Wi-Fi)
- Smart Diagnosis
- 10-Year Warranty*
- RPM: Max. 1400
- Color: Black VCM

Up to 20% CASHBACK ₹12000 — EMI: ₹6,299*

FHP1411Z9B 11 kg
- AI DD®
- 6 Motion DD
- TurboWash 360°
- Steam+
- LG ThinQ™ (Wi-Fi)
- Smart Diagnosis
- 10-Year Warranty*
- RPM: Max. 1400
- Color: Platinum Silver

Up to 20% CASHBACK ₹12000 — EMI: ₹2,999*

FHV1409Z4M 9 kg
- AI DD®
- 6 Motion DD
- Steam™
- Smart Diagnosis
- 10-Year Warranty*
- RPM: Max. 1400
- Color: Middle Black

Up to 15% CASHBACK ₹9000 — EMI: ₹3,999*

THD10SWP 10 kg
- AI DD®
- 6 Motion DD
- Direct Drive Motor
- TurboWash™
- LG ThinQ™ (Wi-Fi)
- Smart Diagnosis
- Color: Middle Black

Up to 15% CASHBACK ₹4500 — EMI: ₹1,999*

T70AJMB1Z 7 kg
- Smart Inverter Motor
- Auto Tub Clean
- Jet Spray+
- TurboWash™
- Smart Diagnosis
- TurboDrum
- Soft Closing Door
- Color: Middle Black

Up to 5% CASHBACK ₹2500 — EMI: ₹1,750*

*T & C Apply.

PRODUCT & SERVICE RELATED ENQUIRIES +91 91084 44777

SERVICE/HELPLINE: 080-42 46 43 43 10AM TO 7PM

FOLLOW US!

FREE DELIVERY

FOR REFRIGERATORS, WASHING MACHINES, LED TV'S

Store Locator